ಪ್ರಚೋದನೆ

ಲಂಕೇಶ್

04 ಫೆಬ್ರವರಿ 2015 ಪುಟ 20 ರೂ. 15/-

ಗಾಂಧೀಜಿ ದೇಹಾಂತ್ಯ ನೆನಪು ಮತ್ತು ರೂಪಕ

ಮಠದ ಅಧಿಕಾರಿ ಮಗಳ ಸಂಸಾರ ಭಂಗ



ಅಕ್ರಮಗಳ ಆಗರ ಜಾನಪದ ವಿವಿ



ಶಿರಸಿಯಲ್ಲಿ ಸ್ವಾಹಾ ವೈದ್ಯರು

'ಕ್ಷೇತ್ರ'ದ ಭರ್ಜರಿ ಬಡವ


ಕವಿತಾ ರೈ ಜನ್ಮ ರಹಸ್ಯ





'ಮೋದಾನಿ' ಕೂಟದ ಅಭಿವೃದ್ಧಿ





ಮಾತೃಭಾಷಾ ಮಾಧ್ಯಮದ ಕುರಿತು ಸುಪ್ರೀಂಕೋರ್ಟ್ ಹೇಳಿರುವುದೇನು? -3

ಮಾತೃಭಾಷಾ ಮಾಧ್ಯಮದ ಪ್ರಶ್ನೆ: ಪರಿಹಾರ ಸಾಧ್ಯ


'ಮಗುವಿನ ಮಾತೃಭಾಷೆ ಯಾವುದೆಂದು ತೀರ್ಮಾನ ಮಾಡುವುದು ಪೋಷಕರು' ಎಂದು ಸುಪ್ರೀಂಕೋರ್ಟಿನ ಸಂವಿಧಾನ ಪೀಠವೇ ಹೇಳಿದ ಮೇಲೆ ಇನ್ನು ಮಾತೃಭಾಷಾ ಮಾಧ್ಯಮ ಜಾರಿಗೆ ಬರುವುದು ಸಾಧ್ಯವಿಲ್ಲ, ಆ ವಿಚಾರ ನಾವು ಮರೆತುಬಿಡುವುದು ಒಳಿತು ಎಂಬುದು ಕೆಲವರ ಅನಿಸಿಕೆಯಾಗಿದೆ. ಆ ರೀತಿಯ ಹೇಳಿಕೆಯನ್ನು ಬಹಿರಂಗವಾಗಿ ಹೇಳದಿರಬಹುದು; ಆದರೆ ಮನಸ್ಸಿನೊಳಗೆ ಅನೇಕರಿಗೆ ಈ ಅಭಿಪ್ರಾಯವಿದೆ. ಅಂಥವರಲ್ಲಿ ಕೆಲವರು, 'ಇದು ಬದಲಾಗುವುದು ಅಸಾಧ್ಯದ ಮಾತು; ಆದರೂ, ನಾವೂ ಹೋರಾಟ ಮುಂದುವರೆಸಬೇಕು' ಎನ್ನುತ್ತಾರೆ. ವಾಸ್ತವದಲ್ಲಿ ಸುಪ್ರೀಂಕೋರ್ಟ್ ತೀರ್ಪು ಬರುವ ಮುನ್ನವೂ ಬಹಳಷ್ಟು ಮಂದಿ ಇದೇ ಅಭಿಪ್ರಾಯವನ್ನು ಹೊಂದಿದ್ದರು. ಆಗ ಅದೊಂದು ಕಾನೂನಾಗಿರಲಿಲ್ಲ ಅಷ್ಟೇ (ಈ ದೇಶದಲ್ಲಿ ಎರಡು ಬಗೆಯ ಕಾನೂನುಗಳಿರುತ್ತವೆ. ಸಂವಿಧಾನವನ್ನು ಜಾರಿ ಮಾಡಲೆಂದು ಶಾಸಕಾಂಗ ರೂಪಿಸುವ ಕಾನೂನು ಮತ್ತು ಸುಪ್ರೀಂಕೋರ್ಟಿನ ತೀರ್ಪೇ ಕಾನೂನೆಂದು ಪರಿಗಣಿತವಾಗುವುದು ಇನ್ನೊಂದು ಬಗೆಯ ಕಾನೂನು).

ಅಂದರೆ, 'ನಮ್ಮ ನಿಲುವಿಗೆ ವ್ಯತಿರಿಕ್ತವಾಗಿ ಸುಪ್ರೀಂ ಕೋರ್ಟಿನ ತೀರ್ಪು ಬಂದಿದೆ. ಹಾಗಾಗಿ ಇದು ಬದಲಾಗುವ ಸಂಗತಿಯಲ್ಲ; ಬಹಿರಂಗವಾಗಿ ಹೋರಾಟ ಮುಂದುವರೆಸುವ ನಿಲುವನ್ನು ತೆಗೆದುಕೊಳ್ಳುವುದು ಸರಿಯಾದುದಾದ್ದರಿಂದ ಅದೇ ನಿಲುವನ್ನು ಮುಂದಿಡೋಣ. ಆದರೆ, ತಮ್ಮ ಮನೆ ಮಕ್ಕಳನ್ನು ಖಾಸಗಿ ಇಂಗ್ಲಿಷ್ ಮಾಧ್ಯಮದ ಶಾಲೆಗೇ ಕಳಿಸೋಣ' ಎಂಬ ಧೋರಣೆಯನ್ನು ಹೆಚ್ಚಿನವರು ಹೊಂದಿದ್ದಾರೆ.

ಇದಲ್ಲದೇ ಇನ್ನೂ ಒಂದು ನಿಲುವಿರುವ ಜನರಿದ್ದಾರೆ. ಅವರ ಪ್ರಕಾರ ಇದು ಕನ್ನಡಾಭಿಮಾನದ ಪ್ರಶ್ನೆ. ಕನ್ನಡ ಉಳಿಯಬೇಕೆಂದರೆ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಇರಬೇಕಾದ್ದು ಅಗತ್ಯ. ಆದ್ದರಿಂದ ಅವರು ಮಾತೃಭಾಷಾ ಮಾಧ್ಯಮದ ಪರ. ಇಂತಹವರಲ್ಲಿ ಕೆಲವರು ತಮ್ಮ ಭಾಷಾಭಿಮಾನದ ಕಾರಣಕ್ಕೆ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗೆ ಕಳಿಸುತ್ತಾರೆ. ಅವರ ಪ್ರಕಾರ ಅವರು ತಮ್ಮ ಮಕ್ಕಳ ಭವಿಷ್ಯವನ್ನೂ ತ್ಯಾಗ ಮಾಡಿ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗೆ ಕಳಿಸುತ್ತಿದ್ದಾರೆ!

ಇವೆರಡೂ ನಿಲುವುಗಳಲ್ಲಿ ಸಮಸ್ಯೆಯಿದೆ. ಮಾತೃಭಾಷಾ ಮಾಧ್ಯಮವೆಂಬುದು ಭಾಷೆಯ, ಸಂಸ್ಕೃತಿಯ ಉಳಿವಿನ ಪ್ರಶ್ನೆ ಮಾತ್ರವಲ್ಲ, ಅದು ವೈಜ್ಞಾನಿಕವಾದ ಕಲಿಕಾ ವಿಧಾನ. ಯಾವ ಭಾಷೆಯು ಮಗುವಿಗೆ ಸಲೀಸಾಗಿರುತ್ತದೋ, ಆ ಭಾಷೆಯ ಮೂಲಕ ಕಲಿಯುವುದೂ ಸಲೀಸಾಗಿರುತ್ತದೆ. ಕನಿಷ್ಠ ಆ ಭಾಷೆಯಲ್ಲಿ ಕಲಿಕೆಯನ್ನು ಆರಂಭಿಸುವುದು ಸೂಕ್ತವಾಗಿರುತ್ತದೆ. ಇತರ ಭಾಷೆಗಳನ್ನು ಕಲಿಯಲೂ ಸಹ ಇದೇ ಸರಿಯಾದ ವಿಧಾನ. ಅಂದರೆ ಇಂಗ್ಲಿಷ್ ಅಥವಾ ಇನ್ನಾವುದೇ ಭಾಷೆಯನ್ನು ಚೆನ್ನಾಗಿ ಕಲಿಯಬೇಕೆಂದರೆ, ಮೊದಲು ಮಗುವು ತನಗೆ ಸಲೀಸಾಗಿರುವ ಭಾಷೆಯಲ್ಲಿ ಕಲಿತು, ಅದರ ಮೂಲಕ ಇನ್ನೊಂದು ಭಾಷೆಯನ್ನೂ ಚೆನ್ನಾಗಿ ಕಲಿಯಬಲ್ಲುದು. ಇದು ವೈಜ್ಞಾನಿಕವಾದ ಸತ್ಯವಾಗಿರುವುದರಿಂದ, ತಮ್ಮ ಮಗುವಿಗೂ ಅದೇ ಸತ್ಯವಾಗಿರುವುದರಿಂದ ತಮ್ಮ ಮಕ್ಕಳನ್ನೂ ಅದರ ಮಾತೃಭಾಷೆಯಲ್ಲೇ ಶಿಕ್ಷಣ ಕೊಡಿಸುವುದು ಸರಿಯಾದದ್ದು ಎಂಬ ಅಭಿಪ್ರಾಯಕ್ಕೆ ಬರುವುದು ಸೂಕ್ತವಾದದ್ದು. ಇಲ್ಲದಿದ್ದರೆ ತಮ್ಮ ಭಾಷಾಭಿಮಾನದ ಕಾರಣಕ್ಕೆ ಅಥವಾ ತಾವು ಭಾಗವಹಿಸುತ್ತಿರುವ ಹೋರಾಟದ ಕಾರಣಕ್ಕೆ ಮಗುವನ್ನು ಕನ್ನಡ ಮಾಧ್ಯಮ ಶಾಲೆಗೆ ಕಳಿಸುತ್ತೇನೆ ಎಂದು ಹೊರಡುವುದರಿಂದ ಅಷ್ಟು ಪ್ರಯೋಜನವಿಲ್ಲ.

ಇದಲ್ಲದೇ ಇನ್ನೂ ಒಂದೆರಡು ಎಡಬಿಡಂಗಿ ನಿಲುವುಗಳು ಚಾಲ್ತಿಯಲ್ಲಿವೆ. ಸಮಾಜ ಶಾಸ್ತ್ರವನ್ನು ಕನ್ನಡದಲ್ಲಿ ಕಲಿಸುವುದು, ವಿಜ್ಞಾನ ಹಾಗೂ ಗಣಿತವನ್ನು ಇಂಗ್ಲಿಷ್‌ನಲ್ಲಿ ಕಲಿಸುವುದು! ಇದ್ಯಾಕೆ? ಕನ್ನಡವನ್ನು ಉಳಿಸುವುದಕ್ಕೆ! ಮತ್ತು ಮಗುವಿನ ಭವಿಷ್ಯವನ್ನು ಹಸನಾಗಿಸುವುದಕ್ಕೆ!!



ಇದರಿಂದ ಕನ್ನಡವೂ ಉಳಿಯುವುದಿಲ್ಲ ಮತ್ತು ಮಗುವಿನ ಭವಿಷ್ಯವೂ ಹಸನಾಗುವುದಿಲ್ಲ. ಇದರಿಂದ ಇಂಗ್ಲಿಷಿನ ಪರಿಸರ ಅಷ್ಟಾಗಿರದ ಹಿನ್ನೆಲೆಯ ಮಗು ಗಣಿತ ಹಾಗೂ ವಿಜ್ಞಾನವನ್ನು ಕಲಿಯುವುದರಿಂದ ವಂಚಿತವಾಗುತ್ತದೆ ಅಷ್ಟೇ.

ಎನ್‌ಸಿಇಆರ್‌ಟಿ ವಿಜ್ಞಾನ, ಗಣಿತ ಮತ್ತು ಇಂಗ್ಲಿಷನ್ನು ಕಲಿಯುವ ಅತ್ಯುತ್ತಮ ವಿಧಾನ ಯಾವುದೆಂದು ಪರಿಶೀಲಿಸಲು ನೇಮಿಸಿದ ತಜ್ಞ ಸಮಿತಿಗಳು ಈ ಅಂಶವನ್ನು ಸ್ಪಷ್ಟಪಡಿಸಿವೆ. ವಿಜ್ಞಾನವನ್ನು, ಗಣಿತವನ್ನು ಮತ್ತು ಇಂಗ್ಲಿಷನ್ನೂ ಅತ್ಯುತ್ತಮವಾಗಿ ಕಲಿಯಲು ಇರುವ ವಿಧಾನ, ಮಗುವಿನ ಮಾತೃಭಾಷೆಯಲ್ಲಿ ಕಲಿಸುವುದೇ ಆಗಿದೆ. ಇದು ವೈಜ್ಞಾನಿಕವಾದದ್ದು ಮತ್ತು ಮಾತೃಭಾಷಾ ಮಾಧ್ಯಮವು ಜಾರಿಗೆ ಬರಲು ನಾವು ತೆಗೆದುಕೊಳ್ಳಬೇಕಾದ ಸರಿಯಾದ ನಿಲುವು ಹಾಗೂ ಹೊಂದಬೇಕಾದ ಧೋರಣೆ ಇದೇ ಆಗಿರಬೇಕಿದೆ.

ಇದಲ್ಲದೇ, ಕನ್ನಡವನ್ನು ಉಳಿಸಲೆಂದು ಅಥವಾ ಒಂದು ಭಾಷೆ ಮತ್ತು ಅದರ ಜೊತೆಗಿನ ಸಂಸ್ಕೃತಿಯನ್ನು ಉಳಿಸಲೆಂದು ಕನ್ನಡ ಮಾಧ್ಯಮ ಶಾಲೆಗಳಿರಬೇಕು ಎಂದು ಹೇಳುವುದು ಭಾಷಾಭಿಮಾನದ ನಿಲುವಾಗುತ್ತದೆಯೇ ಹೊರತು, ಆದರಿಂದ ಕನ್ನಡ ಶಾಲೆಗಳನ್ನೂ ಉಳಿಸಲು ಸಾಧ್ಯವಿಲ್ಲ; ಕನ್ನಡವನ್ನೂ ಉಳಿಸಲು ಸಾಧ್ಯವಿಲ್ಲ.

ಈ ಹಂತದಲ್ಲೇ ಮಾತೃಭಾಷಾ ಮಾಧ್ಯಮ ಮತ್ತು ಕನ್ನಡ ಮಾಧ್ಯಮದ ನಡುವಿನ ವ್ಯತ್ಯಾಸವನ್ನು ತಿಳಿಯುವುದು ಅಗತ್ಯ. ಮಾತೃಭಾಷೆ ಎಂದರೇನು ಎಂಬ ಕುರಿತು ಭಾಷಾತಜ್ಞರಲ್ಲಿ ಗೊಂದಲವಿಲ್ಲ. ಮೇಲೆ ಹೇಳಿರುವಂತೆ ಮಗುವಿಗೆ ಯಾವ ಭಾಷೆ ಸಲೀಸೋ, ಯಾವುದು ಸುಲಭ ಸಹಜವೋ ಆ ಭಾಷೆಯೇ ಮಾತೃಭಾಷೆ. ಅಂದರೆ ಆದರ ಮನೆಯಲ್ಲಿ ಮಾತನಾಡುವ ಭಾಷೆ. 'ತಾಯಿ ತಾನೇ ಮೊದಲ ಗುರುವು' ಇತ್ಯಾದಿ ಕಾರಣಗಳಿಂದ ಅದು ಮಾತೃಭಾಷೆ - **mother tongue** - ಎಂದಾಗಿರಬಹುದು. ಆದರೆ ಮನೆಯ ನಂತರ, ಮಗುವಿನ ತಕ್ಷಣದ ಪರಿಸರವೆಂದರೆ, ಆ ಮನೆಯ ಸುತ್ತ ಆಡುತ್ತಿರುವ ಭಾಷೆಯಾಗಿರುತ್ತದೆ. ಇದು ಒಟ್ಟಾರೆ ಆ ಭಾಷಾವಾರು ಪ್ರಾಂತದಲ್ಲಿ ಬಹುಸಂಖ್ಯಾತರು ಆಡುತ್ತಿರುವ ಭಾಷೆಗಿಂತ ಭಿನ್ನವಾದುದಾಗಿರಬಹುದು. ಅಂದರೆ ಕರ್ನಾಟಕದಲ್ಲಿ ಅದು ಉರ್ದು, ತೆಲುಗು, ತಮಿಳು, ತುಳು, ಕೊಡವ, ಬ್ಯಾರಿ, ಲಂಬಾಣಿ ಮುಂತಾದ ಭಾಷೆಗಳಾಗಿರಬಹುದು.

ಇನ್ನೂ 'ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಅದು ಇಂದು ಯಾವುದನ್ನು 'ಅಧಿಕೃತ ಕನ್ನಡ' ಎಂದು ಪರಿಗಣಿಸಲಾಗುತ್ತಿದೆಯೋ ಆ ರೀತಿಯ ಕನ್ನಡವನ್ನು ಹೊರತುಪಡಿಸಿದ ಇತರ ಪ್ರಾಂತೀಯ, ಜನಾಂಗಿಕ ಕನ್ನಡವೂ ಆಗಿರಬಹುದು. ಜಾತಿಯಿಂದ ಜಾತಿಗೂ ಆಡುವ ಭಾಷೆ ಭಿನ್ನವಾಗಿರುತ್ತದೆ. ಪ್ರತಿಯೊಂದು ಸಮುದಾಯವೂ ತನ್ನ ಹಿನ್ನೆಲೆಯ ಜ್ಞಾನಸಂಪತ್ತನ್ನು ತನ್ನ ಭಾಷಾ ಸಂಪತ್ತಿನೊಳಗೂ ಇಟ್ಟುಕೊಂಡಿರುತ್ತದಾದ್ದರಿಂದ ಈ ಭಿನ್ನತೆ ಸಹಜವೇ. ಆದರೆ ಇಂತಹ 'ಭಿನ್ನತೆ'ಗಳನ್ನು ವೈಭವೀಕರಿಸುತ್ತಾ, ಅವೆಲ್ಲಕ್ಕೂ ನಿಮ್ಮ ಕಲ್ಪನೆಯ ಶಿಕ್ಷಣ ಕ್ರಮದಲ್ಲಿ ಏನು ಸ್ಥಾನ? ಎಂಬ ಪ್ರಶ್ನೆಗಳನ್ನೆಸೆಯುವ ಒಂದು ಪಂಗಡವಿದೆ. ಈ ಪ್ರಶ್ನೆ ಮತ್ತು ಚರ್ಚೆ ಏತಕ್ಕಾಗಿ ಎಂಬ ಪ್ರಶ್ನೆ ಮೊದಲು ಹಾಕಿಕೊಳ್ಳಬೇಕು. ಒಂದು ವೇಳೆ ಆ ಪ್ರಶ್ನೆ ಮತ್ತು ಚರ್ಚೆಗಳು ಸಮಾಜವನ್ನು ಹಾಗೂ ಶಿಕ್ಷಣಕ್ರಮವನ್ನು ಭಿನ್ನ ಭಾಷಿಕ ನೆಲೆಗಳ ದೃಷ್ಟಿಯಿಂದ ಪ್ರಜಾತಾಂತ್ರೀಕರಣಗೊಳಿಸುವುದೇ ಆದಲ್ಲಿ ಅವು ಮುಖ್ಯವಾದವುಗಳಾಗಿವೆ.. ಅವು, ಇಂದು ಅತ್ಯಂತ ಅಸಮಾನವಾಗಿರುವ ಶಿಕ್ಷಣಕ್ರಮವನ್ನು ಈಗಿರುವುದಕ್ಕಿಂತಲೂ ಪ್ರಜಾತಾಂತ್ರೀಕರಣಗೊಳಿಸುವ ಪ್ರಕ್ರಿಯೆಯನ್ನು ಬುಡಮೇಲು ಮಾಡಲೆಂದು ಬಳಸುವ ವಾದಗಳಾಗಿದ್ದರೆ ಅದರ ಬಗ್ಗೆ ನಾವು ಎಚ್ಚರದಿಂದಿರಬೇಕು.

ಎರಡನೆಯದಾಗಿ, ಇಂದು ಈ ನೆಲದಲ್ಲಿ ಜಾರಿಯಲ್ಲಿರುವ ಸಂವಿಧಾನದ ಪ್ರಕಾರ ಭಿನ್ನ ಭಾಷೆಗಳೆಂದು (ಕೇವಲ 8ನೇ ಷೆಡ್ಯೂಲ್ ಬಗ್ಗೆ ಹೇಳುತ್ತಿಲ್ಲ, ಒಂದೇ ಭಾಷೆಯ ಭಿನ್ನ ಡಯಲೆಕ್ಟ್‌ಗಳನ್ನು ಬಿಟ್ಟುಳಿದಂತೆ ಭಿನ್ನವಾಗಿರುವ ಭಾಷೆಗಳು ಎಂಬರ್ಥದಲ್ಲಿ) ಗುರುತಿಸಲ್ಪಟ್ಟಿರುವವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಮತ್ತು ಸರ್ಕಾರವು ಪ್ರತ್ಯೇಕ ಮಾಧ್ಯಮ, ಶಿಕ್ಷಕರು ಮತ್ತು ಶಾಲೆಯನ್ನು ಒದಗಿಸಲು ಇಂದು ಹಾಕಿಕೊಳ್ಳಬೇಕಾದ ಮಾನದಂಡಗಳನ್ನು ಪಟ್ಟಿ ಮಾಡಿಕೊಳ್ಳಬೇಕು. (ಇದಕ್ಕೆ 1949ರ ಪ್ರಾಂತೀಯ ಶಿಕ್ಷಣ ಸಚಿವರ ಸಮ್ಮೇಳನದಲ್ಲಿ ಒಂದೆರಡು ಮಾನದಂಡಗಳನ್ನು ಹಾಕಿಕೊಳ್ಳಲಾಗಿದೆ. ಅದನ್ನು 57 ವರ್ಷಗಳ ನಂತರ ಎಷ್ಟು ಹಿಗ್ಗಿಸಬಹುದೋ ಅಷ್ಟು ಹಿಗ್ಗಿಸಿ ಮಾನದಂಡಗಳನ್ನು ನಿಗದಿಪಡಿಸಿಕೊಳ್ಳಬಹುದು). ಜಾರಿ ಮಾಡಬೇಕಾದಾಗ ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡೇ ಜಾರಿ ಮಾಡಬೇಕು. ಆದರೆ, ಈಗಿನಿಂದಲೇ ಈ ಚರ್ಚೆಯನ್ನು ಬಗೆಹರಿಸಿಕೊಳ್ಳಬೇಕೆಂದು ಪಟ್ಟು ಹಿಡಿಯುತ್ತಾ ಸಣ್ಣಪುಟ್ಟ ಭಾಷೆಗಳಿರಲಿ, ಕೋಟ್ಯಾಂತರ ಜನರು ಆಡುವ ಭಾಷೆಗಳೇ ಹಿಂದಕ್ಕೆ ಬೀಳಲು ಅವಕಾಶ ಮಾಡಿಕೊಡಬಾರದು.

ಈ ವಾದಸರಣಿಯ ಇನ್ನೊಂದು ತುದಿಯಲ್ಲಿರುವವರು 'ರಾಜ್ಯ ಭಾಷೆ'ಯ ಪ್ರತಿಪಾದಕರು. ಕರ್ನಾಟಕದಲ್ಲೂ ಈ ಧೋರಣೆ ಇದೆ. 'ರಾಜ್ಯ ಭಾಷೆ'ಯ ಹೆಸರಿನಲ್ಲಿ ಶಿಕ್ಷಣ ಮಾಧ್ಯಮವನ್ನು ಹೇರುವುದು ಪ್ರಜಾತಾಂತ್ರಿಕವೂ ಅಲ್ಲ; ಸಂವಿಧಾನವು ಅದನ್ನು ಎತ್ತಿಹಿಡಿಯುವುದೂ ಇಲ್ಲ. ಎಲ್ಲಿಯವರೆಗೆ ರಾಜ್ಯಭಾಷೆಯೇ (ಕರ್ನಾಟಕದ ಮಟ್ಟಿಗೆ ಕನ್ನಡ) ಅಧಿಕೃತ ಶಿಕ್ಷಣ ಮಾಧ್ಯಮವಾಗಲಿ ಎಂಬ ಕೂಗು ನಡೆಯುತ್ತಿರುತ್ತದೋ, ಅಲ್ಲಿಯವರೆಗೆ ಮಾತೃಭಾಷಾ ಮಾಧ್ಯಮದ ವಿಚಾರ ಮುಂದಕ್ಕೆ ಹೋಗದೇ, ಇಂಗ್ಲಿಷ್ ಮಾಧ್ಯಮ ಶಾಲೆಗಳು ಮೇಲುಗೈ ಸಾಧಿಸಿ ಕನ್ನಡವು ಮೂಲೆಗುಂಪಾಗುವುದು ನಡೆಯುತ್ತಲೇ ಇರುತ್ತದೆ ಎಂಬುದನ್ನು ಅಂಥವರು ಗಮನಿಸಬೇಕಿದೆ.

ಇಷ್ಟು ಹೇಳಿದ ಮೇಲೆ, ಸುಪ್ರೀಂಕೋರ್ಟಿನ ಸಂವಿಧಾನ ಪೀಠದ ತೀರ್ಪಿಗೆ ಪ್ರತಿಯಾಗಿ ಮಾಡಬಹುದೇನು ಎಂಬುದನ್ನು ಚರ್ಚಿಸಬೇಕಿದೆ.

ಅ) ಇದಕ್ಕೆ ಕಾನೂನಾತ್ಮಕವಾಗಿ ಕಾಣುವ ಮೊದಲನೇ ಪರಿಹಾರ, ಸುಪ್ರೀಂಕೋರ್ಟಿನ ತೀರ್ಪನ್ನು ಅಲ್ಲೇ ಪುನರ್‌ವಿಮರ್ಶೆ ಮಾಡಲು (ಅದರ ನಂತರದ ಕ್ರಮವಾಗಿ 'ಕ್ಯುರೇಟಿವ್ ಪಿಟಿಷನ್' ಹಾಕುವುದು) ಕೋರುವುದು. ಸುಪ್ರೀಂಕೋರ್ಟ್‌ನ ಧೋರಣೆ ಏನಿದೆ ಎಂದು ಗೊತ್ತಿರುವುದರಿಂದ, ಇದು ಕೇವಲ ಔಪಚಾರಿಕವಾಗಿ ಮುಗಿಸಿಕೊಳ್ಳಬೇಕಾದ ಹೆಜ್ಜೆ ಮಾತ್ರವೇ ಆಗಿದೆ, ಆದರೆ ಟಿ.ಎಂ.ಎ.ಪೈ ಮೊಕದ್ದಮೆಯಲ್ಲಿ ಶಿಕ್ಷಣವನ್ನು ಲಾಭ ತರುವ ವೃತ್ತಿ (ಕಲಂ 19-1-ಜಿ ಭಾಗವಾಗಿ ಶಿಕ್ಷಣವನ್ನೂ ತಂದಿರುವುದು) ಎಂದು ನಿರ್ವಚಿಸಿರುವುದನ್ನು ಸತತವಾಗಿ



ಪ್ರಶ್ನಿಸುವ ಕೆಲಸವಂತೂ ಬಾಕಿ ಉಳಿದಿದೆ. ಅದನ್ನೂ ಇದರ ಭಾಗವಾಗಿ ಕೈಗೆತ್ತಿಕೊಳ್ಳುವ ಅಗತ್ಯವಿದೆ.

ಆ) ಒಂದು ಮಹತ್ತರವಾದ ಕ್ರಮವಾಗಿ ಕರ್ನಾಟಕ ಸರ್ಕಾರವು ಇನ್ನೊಂದು ಕೆಲಸವನ್ನು ಮಾಡಬಹುದಾಗಿದೆ. ಇದೇ ತೀರ್ಪಿನಲ್ಲಿ ಸರ್ಕಾರೀ ಶಾಲೆಗಳಲ್ಲಿ ಸರ್ಕಾರವು ಬಯಸಿದ ಮಾಧ್ಯಮವನ್ನು ಜಾರಿ ಮಾಡುವ ಅವಕಾಶ ನೀಡಲಾಗಿದೆ. ಹಾಗಾಗಿ, ಸಂವಿಧಾನದ ಕಲಂ 19 (6)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಬಳಸಿ, ಶುಲ್ಕ ಸಂಗ್ರಹಿಸುವ ಎಲ್ಲಾ ಖಾಸಗೀ ಶಾಲೆಗಳನ್ನೂ ರಾಷ್ಟ್ರೀಕರಣ ಮಾಡಬೇಕು. ಕರ್ನಾಟಕದಲ್ಲಿ ಇಂದು ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದ ದಿವಂಗತ ಅಧಿನಾಯಕಿ ಶ್ರೀಮತಿ ಇಂದಿರಾ ಗಾಂಧಿಯವರು ಇದೇ ಅಧಿಕಾರವನ್ನು ಬಳಸಿಯೇ ಬ್ಯಾಂಕ್ ರಾಷ್ಟ್ರೀಕರಣವನ್ನು ಮಾಡಿದ್ದರು. ಒಂದು ವಾಣಿಜ್ಯ ಉದ್ದೇಶದ ಕ್ಷೇತ್ರದಲ್ಲಿ ರಾಷ್ಟ್ರೀಕರಣ ಸಾಧ್ಯವಾಗಬಹುದಾದರೆ, ರಾಷ್ಟ್ರ ನಿರ್ಮಾಣದ ಉದ್ದೇಶದ ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಕರಣ ಮಾಡಲು ಹಿಂಜರಿಯಬೇಕಿಲ್ಲ. ಸಂವಿಧಾನದ ಪ್ರಕಾರವೂ ಕಲಂ 19 (6), 19 (1)(ಜಿ)ಯಲ್ಲಿ ನೀಡಲಾಗಿರುವ ಹಕ್ಕನ್ನು ಮೊಟಕುಗೊಳಿಸುವ ಮೇಲುಗೈಯನ್ನು ಹೊಂದಿದೆ.

ಇ) ಇಂಗ್ಲಿಷ್ ಕಲಿಯಲು ಇರುವ ಅತ್ಯುತ್ತಮ ವಿಧಾನ ಅದನ್ನು ಮಾತೃಭಾಷೆಯ ಮೂಲಕ ಕಲಿಯುವುದೇ ಆಗಿದೆ ಎಂಬುದನ್ನು ಭಾಷಾತಜ್ಞರು ಹೇಳುತ್ತಿರುವಾಗ, ಅದನ್ನು ಸಾಬೀತುಪಡಿಸುವ ಹೊಣೆಗಾರಿಕೆಯೂ ಇದೆ. ಅಂದರೆ ನಮ್ಮ ಎಲ್ಲಾ ಸರ್ಕಾರೀ ಶಾಲೆಗಳಲ್ಲೂ ಮಾತೃಭಾಷಾ ಮಾಧ್ಯಮವನ್ನು ಜಾರಿ ಮಾಡಿ, ಆ ಶಾಲೆಗಳ ಗುಣಮಟ್ಟವು ಅತ್ಯುತ್ತಮವಾಗಿರುವಂತೆ ನೋಡಿಕೊಂಡು, ಅಲ್ಲಿ ಇಂಗ್ಲಿಷನ್ನೂ ಒಂದು ಭಾಷೆಯನ್ನಾಗಿ ನಿಜವಾದ ಅರ್ಥದಲ್ಲಿ ಅತ್ಯುತ್ತಮವಾಗಿ ಕಲಿಯುವ ಏರ್ಪಾಡನ್ನು ಸರ್ಕಾರವು ಮಾಡಬೇಕು. ಅಂದರೆ ಕೇಂದ್ರೀಯ ವಿದ್ಯಾಲಯಗಳಿಗೆ ನಿಗದಿಯಾಗಿರುವ ಮಾನದಂಡದ ಮಟ್ಟಕ್ಕೆ (ಅಗತ್ಯ ಬಿದ್ದರೆ ಇನ್ನೂ ಮೇಲ್ಮಟ್ಟಕ್ಕೆ) ನಮ್ಮ ಎಲ್ಲಾ ಸರ್ಕಾರೀ ಶಾಲೆಗಳನ್ನೂ ತೆಗೆದುಕೊಂಡು ಹೋಗಬೇಕು.

ಮೊದಲು, ತರಗತಿಗೊಬ್ಬರು ಶಿಕ್ಷಕರು ಇರುವಂತೆ ಮತ್ತು 6ನೇ ತರಗತಿಯಿಂದ ಮುಂದಕ್ಕೆ ವಿಷಯಕ್ಕೊಬ್ಬರು ಶಿಕ್ಷಕರಿರುವಂತೆ ನೋಡಿಕೊಳ್ಳಬೇಕು. ಶಿಕ್ಷಕರಿಗೆ ಶೈಕ್ಷಣಿಕೇತರ ಕೆಲಸಗಳ ಹೊರೆಯಿಂದ ಸಂಪೂರ್ಣವಾಗಿ ಬಿಡುಗಡೆಗೊಳಿಸಬೇಕು. ಇಂಗ್ಲಿಷ್, ವಿಜ್ಞಾನ ಹಾಗೂ ಗಣಿತ ಬೋಧನೆಯನ್ನೂ, ಸಮಾಜ ವಿಜ್ಞಾನದ ಬೋಧನೆಯನ್ನೂ ಅತ್ಯುತ್ತಮವಾಗಿ ಮಾಡಲು ಬೇಕಾದ ತರಬೇತಿ ಹಾಗೂ ಅನುಕೂಲಗಳನ್ನು ಕಲ್ಪಿಸಬೇಕು. ಈ ಶಾಲೆಗಳಿಂದ ಹೊರಬರುವ ಮಕ್ಕಳು ರಾಷ್ಟ್ರ ನಿರ್ಮಾಣಕ್ಕೆ ಬೇಕಾದ ವ್ಯಕ್ತಿತ್ವವನ್ನೂ, ತರಬೇತಿಯನ್ನೂ ಹೊಂದಿರುವಂತೆ ಸಿದ್ಧರಾಗುತ್ತಾರೆ ಮತ್ತು ಯಾವ ಖಾಸಗಿ ಶಾಲೆಗಳೂ ಈ ಶಾಲೆಗಳೊಂದಿಗೆ ಸ್ಪರ್ಧಿಸುವುದು ಕಷ್ಟವಾಗುತ್ತದೆ.

ಈ) ನಮ್ಮ ಒಟ್ಟಾರೆ ಅಭಿವೃದ್ಧಿ ಮಾದರಿಯಲ್ಲೇ ಇರುವ ಸಮಸ್ಯೆಯು ಕನ್ನಡವನ್ನು ದುರ್ಬಲಗೊಳಿಸುತ್ತದೆ ಎಂಬುದನ್ನೂ ಮನಗಾಣಬೇಕು. ಇವೆಲ್ಲವೂ ಒಂದಕ್ಕೊಂದು ಸಂಬಂಧವಿರುವ ಅಂಶಗಳಾಗಿದ್ದು, ಆ ನಿಟ್ಟಿನಲ್ಲಿ ನಡೆಯುವ ಚಳವಳಿಗಳು ಸರ್ಕಾರವನ್ನೂ, ಸಮಾಜವನ್ನೂ ಎಚ್ಚರಿಸಬಲ್ಲವು. ಅಂದರೆ, ಸಮಾನ ಶಿಕ್ಷಣ ನೀತಿಗಾಗಿ, ಸಮಾನ ಶಾಲಾನೀತಿಗಾಗಿ ನಡೆಯುವ ಚಳವಳಿಗಳು ಸಮಾಜದಲ್ಲಿ ಸಮಾನತೆಯನ್ನು ತರುವ ಚಳವಳಿಗಳೊಂದಿಗೆ ಬೆಸೆದುಕೊಳ್ಳಬೇಕು; ಪರಸ್ಪರ ಬಲವರ್ಧನೆಗೆ ಕೆಲಸ ಮಾಡಬೇಕು.

ಇದಲ್ಲದೇ, ಇನ್ನಾವ ಅಡ್ಡ ಮಾರ್ಗಗಳೂ ಶಿಕ್ಷಣವನ್ನೂ ಉಳಿಸುವುದಿಲ್ಲ; ಮಾತೃಭಾಷೆಯನ್ನೂ ಉಳಿಸುವುದಿಲ್ಲ; ಕನ್ನಡವನ್ನೂ ಉಳಿಸುವುದಿಲ್ಲ. ಈ ನಿಟ್ಟಿನಲ್ಲಿ ಕೆಲಸ ಮಾಡಲು ಮುಂದಾಗುವುದು ಈ ಸಾಹಿತ್ಯ ಸಮ್ಮೇಳನದಿಂದಲೇ ಆರಂಭವಾಗಬೇಕು. ಇಲ್ಲದಿದ್ದರೆ ದೇವನೂರ ಮಹಾದೇವರು ಎತ್ತಿರುವ ಪ್ರಶ್ನೆಗಳಿಗೆ ಸಾಹಿತ್ಯ ಪರಿಷತ್ತು, ಸಮ್ಮೇಳನ ಮತ್ತು ಕನ್ನಡದ ಪ್ರಜ್ಞಾವಂತರು ಸ್ಪಂದಿಸಿದಂತಾಗುವುದಿಲ್ಲ. ●

ಲಂಕೇಶ್

ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...

ವಾರ್ಷಿಕ ಚಂದಾ ವಿವರ

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ: ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.

ಹೆಚ್ಚಿನ ಮಾಹಿತಿಗಾಗಿ: 9880302817/080-26676427

ಮಂಡೂರಿನಲ್ಲಿ ಒಂದು ಸಂಭ್ರಮ



• ಗೌರಿ ಲಂಕೇಶ್
editorlankesh@gmail.com


ಕಂಡಹಾಗೆ

ಕಳೆದ ಭಾನುವಾರ ಮಂಡೂರಿನಲ್ಲಿ ಹಬ್ಬದ ವಾತಾವರಣ. ಮಂಡೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳ ಮಹಿಳೆಯರು ಬೆಳಗ್ಗೆಯೇ ತಮ್ಮ ಮನೆಕೆಲಸಗಳನ್ನು ಮುಗಿಸಿ, ಮಟಾದ ಸೀರೆ ತೊಟ್ಟು, ಕೂದಲಲ್ಲಿ ಹೂಮುಡಿದು ಹಾಜರಾಗಿದ್ದರು. ಯುವಕರು ಉತ್ಸಾಹದಿಂದ ಓಡಾಡುತ್ತಿದ್ದರು. ಮಕ್ಕಳು ಅಲ್ಲಲ್ಲಿ ಆಟದಲ್ಲಿ ಮುಳುಗಿದ್ದರು. ಹತ್ತಾರು ವೃದ್ಧರೂ ಕಾರ್ಯಕ್ರಮ ಶುರುವಾಗುವುದನ್ನೇ ಕಾಯುತ್ತಾ ಕೂತಿದ್ದರು.

ಅಲ್ಲಿನ ಜನರಲ್ಲಿ ಹಬ್ಬದ ಹುಮ್ಮಸ್ಸು ಇದ್ದಿದ್ದಕ್ಕೆ ಕಾರಣವೂ ಇತ್ತು. ಕಳೆದ ವರ್ಷ ಅವರೆಲ್ಲ ಜೊತೆಗೂಡಿ ನಡೆಸಿದ ಹೋರಾಟ ಯಶಸ್ವಿಯಾಗಿತ್ತು. ಅವರೆಲ್ಲರಿಗೆ ನೈತಿಕ ಬೆಂಬಲ ನೀಡಿದ್ದಲ್ಲದೆ ಅವರ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಮತ್ತು ಆಮ್ ಆದ್ಮಿ ಪಕ್ಷದ ನಾಯಕ ರವಿಕೃಷ್ಣ ರೆಡ್ಡಿ ಅವರಿಗೆ ಸನ್ಮಾನಿಸುವ ಮೂಲಕ ತಮ್ಮ ಧನ್ಯವಾದಗಳನ್ನು ವ್ಯಕ್ತಪಡಿಸಲು ಮಂಡೂರಿನ ಜನ ತೆಗೆದುಕೊಂಡು ಹೋದರು.

ಅಷ್ಟು ಹೊತ್ತಿಗೆ ರವಿಕೃಷ್ಣ ರೆಡ್ಡಿ ಕೂಡ ಮಂಡೂರು ಹೋರಾಟಗಾರರ ಜೊತೆ ಸೇರಿದ್ದರು. ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ದೊರೆಸ್ವಾಮಿಯವರ ಮಾರ್ಗದರ್ಶನದಲ್ಲಿ ಜೂನ್ 1 ರಿಂದ ಸರಣಿ ಉಪವಾಸ ಪ್ರಾರಂಭಿಸಲು ನಿರ್ಧರಿಸಿದರು. ದೊರೆಸ್ವಾಮಿಯವರಿಗೆ 96 ವರ್ಷ ವಯಸ್ಸಾಗಿದ್ದರೂ ಪ್ರತಿದಿನ ತಮ್ಮ ಮನೆಯಿಂದ ಸುಮಾರು 40 ಕಿಲೋಮೀಟರ್ ದೂರವಿರುವ ಮಂಡೂರಿಗೆ ಹೋಗಿ ಅಲ್ಲಿನ ಜನರ ಪ್ರತಿಭಟನೆಯಲ್ಲಿ ಭಾಗಿಯಾಗುತ್ತಿದ್ದರು. ಇಷ್ಟೆಲ್ಲ ಆಗುತ್ತಿದ್ದರೂ ಸರ್ಕಾರ "ಸಮಸ್ಯೆ ಬಗೆಹರಿಸುವುದಕ್ಕೆ ಆರು ತಿಂಗಳ ಸಮಯ ಕೊಡಿ" ಎನ್ನುತ್ತಿತ್ತೆ ಹೊರತು ಅದಕ್ಕಿಂತ ಹೆಚ್ಚಿನದ್ದೇನನ್ನೂ ಮಾಡಲು ಮುಂದಾಗಲಿಲ್ಲ.

ಆಗ ದೊರೆಸ್ವಾಮಿಯವರು "ಬಂಧನಕ್ಕೆ ಒಳಗಾದರೂ ಪರವಾಗಿಲ್ಲ, ನೀವೆಷ್ಟು ಶಾಪಗ್ರಸ್ತರು ಎಂಬುದು ಅಧಿಕಾರಿಗಳಿಗೆ ಅರ್ಥವಾಗಬೇಕು. ನಿಮ್ಮಲ್ಲಿ ಎಷ್ಟು ಜನ





ಅಚ್ಚರಿ ಮೂಡಿಸಿತು. ಅದಕ್ಕೆ ಸಿದ್ದರಾಮಯ್ಯನವರು ಮಾತುಕೊಟ್ಟಿದ್ದಂತೆ ಕಸದ ರಾಶಿಯ ಮೇಲೆ ಮಣ್ಣಿನ ಹೊದಿಕೆ ಹಾಕಿಸಿದ್ದೇ ಕಾರಣವಾಗಿದೆ. ಅಷ್ಟರಮಟ್ಟಿಗೆ ಮಂಡೂರು ತನಗೆ ತಾಗಿದ್ದ ಶಾಪದಿಂದ ಮುಕ್ತಿ ಪಡೆದಿದೆ.

'ರಾಕ್‌ಸ್ಟಾರ್' ದೊರೆಸ್ವಾಮಿ ಪತ್ನಿ ಸಮೇತ ಆಗಮಿಸುತ್ತಿದ್ದಂತೆ ಅವರ ಕಾಲಿಗೆ ಬೀಳುವುದು, ಜೊತೆ ನಿಂತು ಫೋಟೋ ತೆಗೆಸಿಕೊಳ್ಳುವುದು ಎಲ್ಲವೂ ಶುರುವಾಯಿತು! ರವಿಯವರನ್ನೂ ಹತ್ತಾರು ಜನ ಅಪ್ಪಿಕೊಂಡು ಪ್ರೀತಿಯಿಂದ ಸ್ವಾಗತಿಸಿದರು.

ಕಾರ್ಯಕ್ರಮಕ್ಕೂ ಮುಂಚೆ ದೊರೆಸ್ವಾಮಿ ಮತ್ತು ರವಿಯವರನ್ನು ಊರತುಂಬ ಮೆರವಣಿಗೆ ಮಾಡುವ ಯೋಜನೆಯನ್ನೂ ಹಾಕಿಕೊಂಡಿದ್ದರು. "ಸಿಂಪಲ್ ಆಗಿ ಮಾಡ್ರಯ್ಯಾ ಅಂದ್ರೆ, ದೊಡ್ಡ ಪ್ಲಾನ್ ಹಾಕಿಕೊಂಡಿದ್ದೀರಲ್ಲ, ನಿಮ್ಮನ್ನು ತಡೆಯುವವರೇ ಇಲ್ಲ" ಎಂದು ದೊರೆಸ್ವಾಮಿಯವರು ದೂರಿದಾಗ, "ಬಿಡಿ ಸರ್, ಅವರಿಗೆ ಗೆದ್ದ ಸಂಭ್ರಮ" ಎಂದೆ.

ಸಂಖ್ಯೆಯಲ್ಲಿ ಹಾಜರಾಗಿದ್ದರು. ಹಲವರಿಂದ ಭಾಷಣಗಳು, ಸನ್ಮಾನ, ಪುಸ್ತಕ ಬಿಡುಗಡೆ ಎಲ್ಲವೂ ಸರಾಗವಾಗಿ ಮುಗಿದ ನಂತರ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ಊರಿನ ಜನ ಊಟದ ವ್ಯವಸ್ಥೆಯನ್ನು ಮಾಡಿದ್ದರು.

ಬೆಂಗಳೂರು ಎಂಬ ಬೃಹತ್ ನಗರದ ಪಾಪಿಷ್ಟ ನಿವಾಸಿಗಳು ತಮ್ಮ ಸೋಂಭೇರಿತನದಿಂದಾಗಿ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸದೆ ಇರುವುದರಿಂದ, ಪ್ಲಾಸ್ಟಿಕ್ ಬಳಕೆಯನ್ನು ಮುಂದುವರೆಸಿರುವುದರಿಂದ, ಭ್ರಷ್ಟ ರಾಜಕಾರಣಿಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿರುವುದರಿಂದ, ಅಧಿಕಾರಿಗಳು ಜನರ ಸಂಕಷ್ಟಗಳಿಗೆ ಸ್ಪಂದಿಸದಿರುವುದರಿಂದ ಮಂಡೂರು ಎಂಬ ಒಂದು ಪುಟ್ಟ ಹಳ್ಳಿ ಯಾವ ತಪ್ಪು ಮಾಡದಿದ್ದರೂ ಶಾಪಗ್ರಸ್ತವಾಗಿತ್ತು.

ಆದರೆ ಮಂಡೂರಿನ ಜನ ತಮ್ಮ ಸಂಘಟಿತ ಹೋರಾಟದಿಂದಲೇ ತಮ್ಮ ಊರಿಗೆ ಹಿಡಿದ ಶಾಪವನ್ನು ಹೋಗಲಾಡಿಸಿದ್ದಾರೆ. ಅವತ್ತು ಮಂಡೂರಿನ ಜನರ ಸಂಭ್ರಮದಲ್ಲಿ 'ಜನಶಕ್ತಿ' ಎಂತಹದ್ದು ಎಂಬುದು ಎದ್ದು ಕಾಣಿಸುತ್ತಿತ್ತು...

ಅಂದಿನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಎಲ್ಲರಿಗೂ ಗೊತ್ತಿರುವಂತೆ ಮಂಡೂರು ಹೋದ ವರ್ಷ ದೊಡ್ಡ ಸುದ್ದಿಯಾಗಿತ್ತು. ಕಳೆದ ಏಳು ವರ್ಷಗಳಿಂದ ಬೆಂಗಳೂರಿನ ಜನ ಪ್ರತಿದಿನ 'ಉತ್ಪಾದಿಸುವ' 4,500 ಟನ್ ಕಸವನ್ನು ನಗರಪಾಲಿಕೆಯ ಗುತ್ತಿಗೆದಾರರು ಮಂಡೂರಿಗೆ ಸಾಗಿಸಿ ಅಲ್ಲಿ ಬಿಸಾಡುತ್ತಿದ್ದರು. ನೋಡುನೋಡುತ್ತಿದ್ದಂತೆ ಅಲ್ಲಿನ 150 ಎಕರೆಗಳಲ್ಲಿ ಕಸದ ಬೆಟ್ಟಗಳೇ ನಿರ್ಮಾಣವಾದವು. 2013ರ ಹೊತ್ತಿಗೆ ಅಲ್ಲಿ ಒಟ್ಟು ಬಿಸಾಡಿದ್ದ ಕಸದ ರಾಶಿ 40 ಲಕ್ಷ ಟನ್‌ನಷ್ಟಾಯಿತು.

ಈ ಕಸದ ರಾಶಿಯಿಂದಾಗಿ ಎಲ್ಲೆಡೆ ಗಬ್ಬುನಾಥ. ವಾಯುಮಾಲಿನ್ಯದ ಜೊತೆಗೆ ಕುಡಿಯುವ ನೀರು ವಿಷಕಾರಿ ಆಯಿತು. ನಾಯಿ ಮತ್ತು ಸೊಳ್ಳೆಗಳ ಕಾಟ ದುರಂತರವಾಯಿತು. ಸೊಳ್ಳೆಗಳು ಕಾಯಿಲೆಗಳನ್ನು ಹಬ್ಬಿಸುವುದರಿಂದ ಸುತ್ತಮುತ್ತ ಹಳ್ಳಿಗಳ ಮಕ್ಕಳು ಅನಾರೋಗ್ಯಪೀಡಿತರಾದರು. ಹಿರಿಯರು ಶ್ವಾಸಕೋಶ ಸಮಸ್ಯೆಗಳಿಗೆ ಬಲಿಯಾಗಲಾರಂಭಿಸಿದರು. ಆದರೆ ಕಸ ವಿಲೇವಾರಿ ಮಾಡುತ್ತಿದ್ದ ಗುತ್ತಿಗೆದಾರರೊಂದಿಗೆ ರಾಜಕಾರಣಿಗಳು ಕೈಜೋಡಿಸಿದ್ದರಿಂದ ಮಂಡೂರಿನ ಜನತೆಯ ಗೋಳನ್ನು ಕೇಳುವವರೇ ಇಲ್ಲದಂತಾಗಿತ್ತು.

ದಿನನಿತ್ಯ ಅಲ್ಲಿನ ಜನರು ಅನುಭವಿಸುತ್ತಿದ್ದ ಕಷ್ಟಗಳು ಅಸಹನೀಯವಾದಾಗ ಅವರು ಅಧಿಕಾರಸ್ಥರನ್ನು ತಡತಾಕಲಾರಂಭಿಸಿದರು. ಆಗ ಶಾಸಕರಾಗಿದ್ದ ಬಿಜೆಪಿಯ ಲಿಂಬಾವಳಿ "ನಿಮ್ಮ ಸಮಸ್ಯೆ ಬಗೆಹರಿಸುತ್ತೇನೆ" ಎಂದರೆ ಹೊರತು ಆ ನಿಟ್ಟಿನಲ್ಲಿ ಏನನ್ನೂ ಮಾಡಲಿಲ್ಲ. ಇನ್ನು ನಗರಪಾಲಿಕೆಯ ಅಧಿಕಾರಿಗಳು "ಪರ್ಯಾಯ ವ್ಯವಸ್ಥೆಯನ್ನು ಮಾಡುವವರೆಗೂ ಸಹಕರಿಸಿ, ಸಮಯ ಕೊಡಿ" ಎನ್ನುತ್ತಿದ್ದರೇ ಹೊರತು ಅಲ್ಲಿ ಕಸದ ರಾಶಿ ಹಾಕುವುದನ್ನು ಮಾತ್ರ ನಿಲ್ಲಿಸಲಿಲ್ಲ, ಪರ್ಯಾಯವನ್ನೂ ಹುಡುಕಲಿಲ್ಲ.

ಕೊನೆಗೂ ಮಂಡೂರಿನ ಜನರ ತಾಳ್ಮೆಯ ಕಟ್ಟೆಯೊಡೆಯಿತು. ಯಾವ ರಾಜಕಾರಣಿಯನ್ನಾಗಲಿ, ನಗರಪಾಲಿಕೆಯ ಅಧಿಕಾರಿಯನ್ನಾಗಲಿ ನಂಬದೆ ಹೋರಾಟ ಮಾಡಲು ನಿರ್ಧರಿಸಿದರು. "ಇನ್ನು ಮುಂದೆ ಯಾವ ಕಾರಣಕ್ಕೂ ನಮ್ಮೂರಲ್ಲಿ ಕಸ ಹಾಕಲು ಬಿಡುವುದಿಲ್ಲ" ಎಂದು ಎದ್ದು ನಿಂತರು. ಆಗ ಅವರ ನೆರವಿಗೆ ಧಾವಿಸಿದ್ದು ದೊರೆಸ್ವಾಮಿಯವರು. ಕಸದ ಲಾರಿಗಳು ತಮ್ಮೂರನ್ನು ಪ್ರವೇಶಿಸದಂತೆ ಊರಿನ ಅಂಚಿನಲ್ಲೇ ಅಡ್ಡಗಟ್ಟಿ ನಿಂತರು. ಆಗ ಪೊಲೀಸರು ನಿಷೇಧಾಜ್ಞೆಯನ್ನು ಘೋಷಿಸಿ ಲಾರಿಗಳು ಮುಂದೆ ಸಾಗುವಂತೆ ನೋಡಿಕೊಂಡರು. ಲಾರಿಗಳು ಊರಿನ ಹತ್ತಿರ ಬಂದರೆ ತಾನೆ ಮುಂದೆ ಸಾಗುವುದು ಎಂದು ತೀರ್ಮಾನಿಸಿದ ಗ್ರಾಮಸ್ಥರು ಅವುಗಳನ್ನು ಹೈವೇಯಲ್ಲೇ ತಡೆಗಟ್ಟಲಾರಂಭಿಸಿದರು. ಅಲ್ಲಿಗೂ ಪೊಲೀಸರು ಬಂದಾಗ ತಮ್ಮ ಹೋರಾಟವನ್ನು ಕೆ.ಆರ್. ಪುರಂವರೆಗೂ

ಬಂಧನಕ್ಕೆ ಸಿದ್ಧರಿದ್ದೀರಿ? ಅವರೆಲ್ಲರ ಹೆಸರುಗಳನ್ನು ಪಟ್ಟಿ ಮಾಡಿ" ಎಂದು ಸೂಚಿಸಿದರು. ನೂರಕ್ಕೂ ಹೆಚ್ಚು ಜನರು ಸಿದ್ಧರಿದ್ದರು. ಆದರೆ ಅಚ್ಚರಿಯ ಸಂಗತಿ ಯಾವುದೆಂದರೆ ಮಂಡೂರಿನ ಮಹಿಳೆಯರೂ ಆ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿದ್ದರು.

ಪರಿಸ್ಥಿತಿ ಬಿಗಡಾಯಿಸಿದಾಗ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಈ ಸಮಸ್ಯೆಯನ್ನು ಬಗೆಹರಿಸಲು ಮುಂದಾದರು. ಅವರು ಕರೆದ ಸಭೆಗೆ ಮಂಡೂರಿನ ನೂರಾರು ಜನ ಹಾಜರಾದರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದರಲ್ಲದೆ ತಮ್ಮ ಚಿಕ್ಕಪುಟ್ಟ ಮಕ್ಕಳನ್ನೂ ಕರೆತಂದಿದ್ದರು. ಆ ಸಭೆಯಲ್ಲಿ ಅಧಿಕಾರಿಗಳು ಮತ್ತದೆ ಅಸಹಾಯಕತೆ ವ್ಯಕ್ತಪಡಿಸಿ ಮತ್ತೆ ಕಾಲಾವಕಾಶವನ್ನು ಕೋರಿದರು.

ತಮ್ಮ ಬದುಕೇ ನರಕವಾಗಿದ್ದರೂ ಮುಖ್ಯಮಂತ್ರಿ ಕರೆದಿದ್ದ ಸಭೆಯಲ್ಲೂ ತಮಗೆ ಪರಿಹಾರ ಸಿಗದಿದ್ದಾಗ ಮಹಿಳೆಯರೆಲ್ಲ ಕಣ್ಣೀರಿಟ್ಟರು. ದೊರೆಸ್ವಾಮಿಯವರು ಹೇಳುವಂತೆ "ಆ ಕ್ಷಣ ಸಿದ್ದರಾಮಯ್ಯನವರಿಗೆ ಇಲ್ಲಿನ ಜನರ ಕಷ್ಟಗಳು ಅರ್ಥವಾಯಿತು. ಮಹಿಳೆಯರು ಕಣ್ಣೀರು ಹಾಕುವಂತೆ ಮಾಡಿರುವುದು ಸರಿಯಲ್ಲ, ಇದನ್ನು ಬಗೆಹರಿಸಬೇಕೆಂದು ಅವರು ನಿರ್ಧರಿಸಿದರು. 2014ರ ನವೆಂಬರ್ ತಿಂಗಳ ನಂತರ ಮಂಡೂರಿನಲ್ಲಿ ಕಸವನ್ನು ಹಾಕುವುದಿಲ್ಲ ಎಂದು ಅವತ್ತು ಸಿದ್ದರಾಮಯ್ಯ ಮಾತು ಕೊಟ್ಟರು. ಅದರಂತೆ ನಡೆದುಕೊಂಡಿದ್ದಾರೆ."

ಶಾಪಗ್ರಸ್ತವಾಗಿದ್ದ ಮಂಡೂರಿನ ಜನ ನಡೆಸಿದ ಹೋರಾಟ ಕುರಿತು ದೊರೆಸ್ವಾಮಿಯವರು ಒಂದು ಪುಟ್ಟ ಪುಸ್ತಿಕೆಯನ್ನು ಬರೆದಿದ್ದರು. ಒಂದೆರಡು ತಿಂಗಳ ಹಿಂದೆ ಅವರು "ಗೌರಿ, ಇದನ್ನು ನೀನು ಪ್ರಕಟಿಸುತ್ತೀಯೇನಮ್ಮ?" ಎಂದು ಕೇಳಿದಾಗ ನಾನು ಕೂಡಲೇ ಒಪ್ಪಿಕೊಂಡೆ. ಪುಸ್ತಕ ಪ್ರೆಸ್‌ನಿಂದ ಸಿದ್ಧವಾಗಿ ಬಂದಾಗ ಅದನ್ನು ಎಲ್ಲಿ ಬಿಡುಗಡೆ ಮಾಡುವುದು ಎಂಬುದರ ಬಗ್ಗೆ ಚರ್ಚೆ ನಡೆಯಿತು. ನಾನು "ಕಾರ್ಪೊರೇಷನ್ ಕಟ್ಟಡದ ಮುಂದೆಯೇ ಮಾಡಿದರೆ ಹೇಗೆ?" ಎಂದೆ. ಅದಕ್ಕೆ ದೊರೆಸ್ವಾಮಿಯವರು "ಮಂಡೂರಿನ ಜನರ ಅಭಿಪ್ರಾಯ ಕೇಳುತ್ತೇನೆ ಇರು" ಎಂದರು. ಮಂಡೂರಿನ ಹೋರಾಟದ ಮುಂಚೂಣಿಯಲ್ಲಿದ್ದವರನ್ನು ದೊರೆಸ್ವಾಮಿಯವರು ಕೇಳಿದಾಗ ಅವರೆಲ್ಲ "ನಮ್ಮೂರಲ್ಲೇ ಪುಸ್ತಕವನ್ನು ಬಿಡುಗಡೆ ಮಾಡೋಣ" ಎಂದರು.

ಅದರಂತೆ ಕಳೆದ ಭಾನುವಾರ ಮಂಡೂರಿನಲ್ಲೇ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮಂಡೂರಿಗೆ ಅದು ನನ್ನ ಮೊದಲ ಭೇಟಿ. ಊರು ಹತ್ತಿರವಾಗುತ್ತಿದ್ದಂತೆ ಗಬ್ಬು ವಾಸನೆ ಮೂಗಿಗೆ ಬಡಿಯುತ್ತದೆ ಎಂದೇ ನಂಬಿದ್ದ ನನಗೆ ಮಂಡೂರು ತಲುಪಿದರೂ ವಾಸನೆ ಇಲ್ಲದಿದ್ದದ್ದು

ಒಂದು ತೆರೆದ ವಾಹನದಲ್ಲಿ ಮೆರವಣಿಗೆ ಶುರುವಾಯಿತು. ಊರಿನ ಸೋಮೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆಯೂ ನಡೆಯಿತು. ಹಲವು ಕಡೆ ಪಟಾಕಿಗಳನ್ನೂ ಸಿಡಿಸಿದರು. "ಇದರಿಂದ ವಾಯುಮಾಲಿನ್ಯ ಆಗಲ್ಲವೇ?" ಎಂದು ಯಾರೋ ತಮಾಷೆ ಮಾಡಿದಾಗ ಗ್ರಾಮಸ್ಥರೊಬ್ಬರು "ಅಯ್ಯೋ, ವಾಯುಮಾಲಿನ್ಯ ನಮ್ಮ ಬದುಕಿನ ಅಂಗವೇ ಆಗಿಹೋಗಿತ್ತು. ಅದಕ್ಕೆ ಹೋಲಿಸಿದರೆ ಇದು ಏನೇನೂ ಅಲ್ಲ" ಎಂದು ನಗೆ ಬೀರಿದರು.

ಮಂಡೂರು ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ಮಹಿಳೆಯರೇ ಕಾರ್ಯಕ್ರಮಕ್ಕೂ ದೊಡ್ಡ

ಲಂಕೇಶ್ ಪ್ರಕಾಶನ

ಈ ದೇಶದ ಸ್ವಾತಂತ್ರ್ಯ ಮತ್ತು ಸೌಹಾರ್ದಕ್ಕಾಗಿ
ಹುತಾತ್ಮರಾದ ಮಹಾತ್ಮ ಗಾಂಧಿ ನೆನಪಲ್ಲಿ

ಸೌಹಾರ್ದ ದಿನಾಚರಣೆ
ಅಂಗವಾಗಿ ಪುಸ್ತಕಗಳ ಬಿಡುಗಡೆ

ದಿನೇಶ್ ಅಮೀನ್ ಮಟ್ಟು ಅವರಿಂದ
ಎ.ಕೆ. ಸುಬ್ಬಯ್ಯ ಅವರು ಬರೆದಿರುವ
'ಆರ್‌ಎಸ್‌ಎಸ್ ಅಂತರಂಗ' ಪುಸ್ತಕದ ಇಂಗ್ಲಿಷ್ ಅವತರಣಿಕೆ
'HIDDEN FACE OF RSS' ಪುಸ್ತಕ ಬಿಡುಗಡೆ
ಬಂಜಗೆರೆ ಜಯಪ್ರಕಾಶ್ ಅವರಿಂದ
ಎಚ್.ಎಸ್. ದೊರೆಸ್ವಾಮಿ
ಅವರು ಬರೆದಿರುವ 'ನೆನಪಿನ ಸುರುಳಿ ತೆರೆದಾಗ' ಪುಸ್ತಕ ಬಿಡುಗಡೆ

ಉಪಸ್ಥಿತಿ: ಎಚ್.ಎಸ್. ದೊರೆಸ್ವಾಮಿ, ಎ.ಕೆ. ಸುಬ್ಬಯ್ಯ ಮತ್ತು ಗೌರಿ ಲಂಕೇಶ್

ದಿನಾಂಕ: ಜನವರಿ 30, ಶುಕ್ರವಾರ, 2015 ಸಮಯ: ಸಂಜೆ 5.00 ಗಂಟೆ
ಸ್ಥಳ: ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ಎಲ್ಲರಿಗೂ ಸ್ವಾಗತ



ಕವಿತಾ ರೈ 'ಜನ್ಮ'ರಹಸ್ಯ

ಕನ್ನಡ ಸಾಹಿತ್ಯಲೋಕದ ಯುವಪೀಳಿಗೆ ಎತ್ತ ಸಾಗುತ್ತಿದೆ ಎಂಬೊಂದು ಚರ್ಚೆಯನ್ನು ಹುಟ್ಟುಹಾಕಲೇಬೇಕಾದ ಪ್ರಕರಣ ಇದು. ಯಾಕೆಂದರೆ ಅಕ್ಷರಸಂತೆಯೊಳಗೆ ಇಂತಹ ಸಂದಿಗ್ಧತೆಯನ್ನು ಸೃಷ್ಟಿ ಮಾಡಿರುವುದು ಕರ್ನಾಟಕ ಮುಕ್ತ ವಿವಿಯ ಸಹಾಯಕ ಪ್ರಾಧ್ಯಾಪಕಿ ಮತ್ತು ಕವಯಿತ್ರಿ ಕವಿತಾ ರೈ. ಒಂದು ಪ್ರಶಸ್ತಿಗಾಗಿ ಆಕೆ ನೀಡಿರುವ 'ಜನ್ಮ ಪ್ರಮಾಣ ಪತ್ರ' ಈ ರಾದ್ಧಾಂತದ ಕೇಂದ್ರ ಬಿಂದು.

2014ರ ನವೆಂಬರ್ 16ನೇ ತಾರೀಖು ಕನ್ನಡ ಸಾಹಿತ್ಯ ಪರಿಷತ್ತು ಪ್ರತೀ ವರ್ಷ ನೀಡುವಂತೆ ಆ ವರ್ಷದ 'ಶ್ರೀ ವಿಜಯ ಪ್ರಶಸ್ತಿ'ಯನ್ನು ಘೋಷಿಸಿತ್ತು. ಕಸಾಪದ ಹಾಲಿ ಅಧ್ಯಕ್ಷ ಪುಂಡಲೀಕ ಹಾಲಂಬಿಯವರ ನೇತೃತ್ವದ ಆಯ್ಕೆ ಮಂಡಳಿ ಈ ಬಾರಿ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಕವಿತಾ ರೈ ಅವರನ್ನು. ಘೋಷಣೆಯಾದ ಹತ್ತೇ ದಿನದಲ್ಲಿ, ಅಂದರೆ ನವೆಂಬರ್ 26ರಂದು ನಡೆದ ಸಮಾರಂಭದಲ್ಲಿ, ಒಂದು ಲಕ್ಷ ಮೊತ್ತದ ಆ ಪ್ರಶಸ್ತಿಯನ್ನು ಕವಿತಾ ರೈಗೆ ನೀಡಿ ಸನ್ಮಾನವನ್ನೂ ಮಾಡಲಾಗಿತ್ತು. ಇಷ್ಟೇ ಆಗಿದ್ದಿದ್ದರೆ ನೂರಾರು ಪ್ರಶಸ್ತಿ ಪ್ರದಾನಗಳಂತೆ ಅದನ್ನೂ ಸ್ಮರಿಸಿ ಮರೆತುಬಿಡಬಹುದಿತ್ತು. ಆದರೆ ತದನಂತರದಲ್ಲಿ ಬೆಳಕಿಗೆ ಬಂದ ವಿದ್ಯಮಾನಗಳು ಕವಿತಾ ರೈರ ಪ್ರಾಮಾಣಿಕತೆಯನ್ನು ಮಾತ್ರವಲ್ಲ, ಪ್ರಶಸ್ತಿಯ ಘನತೆಯನ್ನೆ ಮೂರು ಕಾಸಿಗೆ ಹರಾಜು ಹಾಕುವಂತವಾಗಿದ್ದವು. ಏಕೆಂದರೆ, ಪ್ರಶಸ್ತಿಯನ್ನು 'ಗಿಟ್ಟಿಸಿ'ಕೊಳ್ಳಲು ಕವಿತಾ ರೈ ತಮ್ಮ ಜನ್ಮ ದಿನಾಂಕವನ್ನೇ ತಿದ್ದಿದ ಫೋರ್ಜರಿ ಪ್ರಮಾಣಪತ್ರವನ್ನು ಕಸಾಪಕ್ಕೆ ಸಲ್ಲಿಸಿದ್ದರು.


ಅಸಲಿಗೆ ಇವತ್ತಿನ ದಿನ ಪ್ರಶಸ್ತಿಗಳು ಲಾಬಿ, ಮರ್ಜಿಗಳಿಗೆ ಬಿಕರಿಯಾಗುತ್ತಿರೋದು ರಹಸ್ಯವೇನೂ ಅಲ್ಲ. ಆದರೆ ಪ್ರಶಸ್ತಿಗಾಗಿ ಜನ್ಮ ದಿನಾಂಕವನ್ನೇ ತಿದ್ದುವ, ಆ ಮೂಲಕ ಅತ್ತ ಪ್ರಶಸ್ತಿಗೂ ಇತ್ತ ತನ್ನ ಕೆಲಸಕ್ಕೂ ಗಂಡಾಂತರ ತಂದುಕೊಂಡಿರುವುದು ಇದೇ ಮೊದಲಿರಬೇಕು!

ಇದು ಫೋರ್ಜರಿ ಪ್ರಕರಣ

ಶ್ರೀ ವಿಜಯ ಪ್ರಶಸ್ತಿಯನ್ನು ಕಸಾಪ ಆರಂಭಿಸಿದ್ದೇ ಯುವ ಸಾಹಿತಿಗಳನ್ನು ಪ್ರೋತ್ಸಾಹಿಸುವುದಕ್ಕೆಂದು. ಹಾಗಾಗಿ ಸಾಹಿತ್ಯ ಕೃಷಿ ಅಥವಾ ಸಾಹಿತ್ಯಿಕ ಸಂಶೋಧನೆಗಳಲ್ಲಿ ಗಮನಾರ್ಹ ಸಾಧನೆ ಮಾಡಿರಬೇಕೆನ್ನುವ ಅರ್ಹತೆಯ ಜೊತೆಗೆ ಪ್ರಶಸ್ತಿಯನ್ನು ಪಡೆಯಲು 40 ವರ್ಷ ಮೀರಿರಬಾರದು ಎನ್ನುವ ಕಟ್ಟಳೆಯೂ ಅದಕ್ಕಿದೆ. ಕವಿತಾ ರೈಗೆ ಅಡ್ಡಿಯಾದದ್ದೇ ಈ ನಿಬಂಧನೆ. ಯಾಕೆಂದರೆ ಅವರು ಹುಟ್ಟಿದ್ದು 15 ಅಕ್ಟೋಬರ್ 1969ರಲ್ಲಿ. ಅವರ ಎಸ್ಎಸ್ಎಲ್‌ಸಿ ಅಂಕಪಟ್ಟಿ ಮತ್ತು ಕರ್ನಾಟಕ ಮುಕ್ತ ವಿವಿ ಹುದ್ದೆಗೆ ತಮ್ಮದೇ ಕೈಬರಹದಲ್ಲಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಗಳು ಇದನ್ನು ಸಾರಿಸಾರಿ ಹೇಳುತ್ತವೆ. ಅಂದರೆ ಪ್ರಶಸ್ತಿ ಘೋಷಿಸುವ ವೇಳೆಗೆ ಅವರಿಗೆ 45 ವರ್ಷ ತಲುಪಿಯಾಗಿತ್ತು.

ಆದರೆ ಹೇಗಾದರೂ ಮಾಡಿ ಪ್ರಶಸ್ತಿಯನ್ನು ಗಿಟ್ಟಿಸಿಕೊಳ್ಳಲೇಬೇಕು ಎಂಬ ಹಠಕ್ಕೆ ಬಿದ್ದ ಕವಿತಾ ರೈ ತಮ್ಮ ಜನ್ಮ ದಿನಾಂಕವನ್ನು 1969ಕ್ಕೆ ಬದಲಾಗಿ 15 ಅಕ್ಟೋಬರ್ 1974 ಎಂದು ಕಸಾಪಕ್ಕೆ ಅರ್ಜಿ ಗುಜರಾಯಿಸಿದ್ದರು. ಪ್ರಶಸ್ತಿಗೋಸ್ಕರ ಅವರು ಐದು ವರ್ಷ 'ಚಿಕ್ಕವ'ರಾದರು. (ಇದು ಬಯಲಾದ ಮೇಲೆ ಅದಕ್ಕಿಂತಲೂ ತುಂಬಾ ಸಣ್ಣವರಾಗಿದ್ದಾರೆ ಎನ್ನುವುದು ಬೇರೆ ಮಾತು ಬಿಡಿ). ಅಲ್ಲಿಗೆ ಪ್ರಶಸ್ತಿ ಪಡೆಯಲು ವಯಸ್ಸು ಅಡ್ಡಿಯಾಗದಂತೆ ಮಾಡಿಕೊಂಡಿದ್ದರು.

ಕೇವಲ ಬಾಯಿ ಮಾತಿನಲ್ಲೊ ಅಥವಾ ಅರ್ಜಿಯಲ್ಲೋ ಹಾಗೆ ನಮೂದಿಸಿದ್ದಿದ್ದರೆ ಪ್ರಮಾದವಶಾತ್ ಅಂತ ತಳ್ಳಿ ಹಾಕಬಹುದಿತ್ತೇನೊ. ಆದರೆ 1974ರಲ್ಲೇ ತಾನು ಹುಟ್ಟಿದ್ದು ಎಂಬುದನ್ನು ಸಾಬೀತುಪಡಿಸುವ ಎಸ್ಎಸ್ಎಲ್‌ಸಿ ಅಂಕಪಟ್ಟಿಯೊಂದನ್ನೂ ಅವರು ಕಸಾಪಕ್ಕೆ ಸಲ್ಲಿಸಿದ್ದರು. ಅದನ್ನು ನಂಬಿಕೊಂಡೇ ಹಾಲಂಬಿ ನೇತೃತ್ವದ ಆಯ್ಕೆ ಮಂಡಳಿ ಕವಿತಾ ರೈಗೆ ಪ್ರಶಸ್ತಿ ನೀಡಲು ತೀರ್ಮಾನಿಸಿದ್ದು.



ಒಟ್ಟಾರೆ ಉದ್ದೇಶಪೂರ್ವಕವಾಗಿಯೇ ಸುಳ್ಳು ಅಂಕಪಟ್ಟಿ ನೀಡಿರುವುದು ಖಾತ್ರಿಯಾಗುತ್ತದೆ.

ಸಮರ್ಥನೆಗಳೂ ಸುಳ್ಳಾದವು!

ವಿಷಯ ಬಯಲಾಗಿ ಸಾಹಿತ್ಯಿಕ ವಲಯದಲ್ಲಿ ಟೀಕೆಗಳು ತಮ್ಮತ್ತ ನುಗ್ಗಿ ಬರುತ್ತಿದ್ದಂತೆಯೇ ಕವಿತಾ ರೈ ಒಂದಷ್ಟು ನೆಪಗಳನ್ನು ನೀಡಲಾರಂಭಿಸಿದರು. ಹಲವೆಡೆ ಅವರೇ ಹೇಳಿಕೊಂಡಿರುವಂತೆ ಅವರ ನಿಜವಾದ ಜನ್ಮ ದಿನಾಂಕ 1974 ಅಕ್ಟೋಬರ್ 15 ಆಗಿದ್ದು ಹೆತ್ತವರ ಪ್ರಮಾದದಿಂದ 1969 ಎಂದು ಶಾಲೆಯಲ್ಲಿ ದಾಖಲಾಗಿತ್ತಂತೆ. ಆಮೇಲೆ ಕವಿತಾ ಅವರೇ 2000ರಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷಾ ಮಂಡಳಿಗೆ ಅರ್ಜಿ ಹಾಕಿ ತಮ್ಮ ಜನ್ಮ ದಿನಾಂಕವನ್ನು 15.10.1974 ಎಂದು ತಿದ್ದುಪಡಿ ಮಾಡಿಕೊಂಡಿದ್ದರಂತೆ. ಇಲ್ಲಿ ಸಮಸ್ಯೆ ಶುರುವಾಗುವುದೇ ಐದು ವರ್ಷಗಳ ವ್ಯತ್ಯಾಸದಿಂದ.

ಇರಲಿ, ಕವಿತಾ 1974ರಲ್ಲಿ ಜನಿಸಿದ್ದು ಎಂದೇ ಲೆಕ್ಕಾಚಾರಕ್ಕೆ ಇಟ್ಟುಕೊಂಡು ನೋಡೋಣ. ಆಕೆಯ ತಂದೆ ಬಿ.ಎಸ್.ರಂಗನಾಥ ರೈ ಅವರು ತಮ್ಮ ಮಗಳು ಕವಿತಾಳನ್ನು ನಿಯಮದ ಪ್ರಕಾರ 1980ರಲ್ಲಿ - ಅಂದರೆ ಕವಿತಾಳಿಗೆ ಆರು ವರ್ಷ ತುಂಬಿದ ನಂತರ - ಮೊದಲನೆ ತರಗತಿಗೆ ಸೇರಿಸಿರಬೇಕು. ಆಗ ತಂದೆಗೆ ತಮ್ಮ ಮಗಳಿಗೆ ಆರು ವರ್ಷ ವಯಸ್ಸಾಗಿದೆಯೋ (1974ರಲ್ಲಿ ಜನಿಸಿದ್ದರೆ) ಅಥವಾ ಹನ್ನೊಂದು ವರ್ಷ ವಯಸ್ಸಾಗಿದೆಯೋ (1969ರಲ್ಲಿ ಜನಿಸಿದ್ದರೆ) ಎಂದು ಗೊತ್ತಾಗಲಿಲ್ಲವೇ? ಇದು ನಡೆದದ್ದು ಯಾವುದೋ ಕಾಲದಲ್ಲಲ್ಲ, ಬದಲಿಗೆ ಕವಿತಾರ ಪ್ರಕಾರವೇ 1980ರಲ್ಲಿ. ಇದನ್ನು ನಂಬಲಾದೀತೆ?

ಹಾಗೆಯೇ ಕವಿತಾ ಹೇಳುವ ಪ್ರಕಾರ ಆಕೆ 2000ರಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷಾ ಮಂಡಳಿಗೆ ಅರ್ಜಿ ಹಾಕಿ ತಮ್ಮ ಜನ್ಮ ದಿನಾಂಕವನ್ನು ತಿದ್ದುಪಡಿ ಮಾಡಿಸಿದ್ದರಂತೆ.

ಅದೂ ನಿಜವೇ ಎಂದು ಇಲ್ಲಿ ಲೆಕ್ಕಾಚಾರಕ್ಕೆ ಇಟ್ಟುಕೊಳ್ಳೋಣ. ಇವರು 2000ರಲ್ಲೇ ತಿದ್ದುಪಡಿ ಮಾಡಿಸಿದ್ದರೆ ಮುಕ್ತ ವಿವಿಯಲ್ಲಿ ಹುದ್ದೆ ಗಿಟ್ಟಿಸಿಕೊಳ್ಳಲು 2012ರಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ಯಾಕೆ ತಮ್ಮ ಜನ್ಮ ದಿನಾಂಕವನ್ನು ಸ್ವತಃ ಕವಿತಾರೇ 1969 ಎಂದು ದಾಖಲಿಸಿದ್ದಾರೆ? ಯಾಕೆಂದರೆ ತಾನು ನಿಜವಾಗಲೂ ಕಸಾಪಕ್ಕೆ ಹೇಳಿದಂತೆ 1974ರಲ್ಲಿ ಜನಿಸಿದ್ದರೆ 2012ರಲ್ಲಿ ವಿವಿಯಲ್ಲಿ ಕೆಲಸ ಗಿಟ್ಟಿಸಲು ತನಗೆ ನಿಯಮಗಳ ಪ್ರಕಾರ ಅಗತ್ಯವಾದಷ್ಟು ಬೋಧನಾ ಅನುಭವ ಇಲ್ಲವೆಂಬ ಕಾರಣವೇ?

ಇಲ್ಲಿ ಹಲವೆರಡು ಮುಖ್ಯ ಅಂಶಗಳನ್ನು ಗಮನಿಸಬೇಕಿದೆ.

ಈ ವಿವಾದ ಭುಗಿಲೆದ್ದ ನಂತರ ಕವಿತಾ ರೈ ಅವರು ಹಾಲಂಬಿ ಅವರಿಗೆ ತಮ್ಮ 'ಸರಿಯಾದ ಜನ್ಮದಿನಾಂಕ ಇರುವ ದಾಖಲೆ' ಎಂದು ಎಸ್ಎಸ್ಎಲ್‌ಸಿ ಅಂಕಪಟ್ಟಿಯನ್ನು ಸಲ್ಲಿಸಿದ್ದಾರೆ. 'ಅಸಲಿ' ಮತ್ತು 'ನಕಲಿ' ದಾಖಲೆಗಳನ್ನು ಅಕ್ಕಪಕ್ಕ ಇಟ್ಟು ಗಮನಿಸಿದಾಗ ಜನ್ಮ ದಿನಾಂಕ ಮತ್ತು ಹತ್ತನೆ ತರಗತಿಯಿಂದ ತೇರ್ಗಡೆಯಾದ ವರ್ಷ ಇವೆರಡನ್ನು ಹೊರತುಪಡಿಸಿದರೆ ಮಿಕ್ಕೆಲ್ಲವೂ - ಪಡೆದ ಅಂಕಗಳು, ಅಧಿಕಾರಿಗಳ ಸಹಿ, ಕೈಬರಹದಲ್ಲಿ ಲಗತ್ತಿಸಿರುವ ದಿನಾಂಕದ ರೀತಿ, ಇತ್ಯಾದಿ - ಒಂದೇ ತರಹ ಇವೆ.

ಕವಿತಾ ಹೇಳುವಂತೆ ಅವರು 'ಸರಿಯಾದ' ದಾಖಲೆಯನ್ನು 2000ರಲ್ಲಿ ಪಡೆದಿದ್ದರೆ 1986ರಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿದ್ದ ಅಧಿಕಾರಿಗಳೇ 2000ದಲ್ಲೂ ಅದೇ ರೀತಿ ಸಹಿ ಹಾಕಲು ಅದೇ ಹುದ್ದೆಯಲ್ಲಿ ಕೂತಿದ್ದರೆ?! ಇದನ್ನು ಯಾರಾದರು ನಂಬುತ್ತಾರೆಯೇ?

ಕವಿತಾ ಅವರ ನಿಜ ಜನ್ಮ ದಿನಾಂಕವನ್ನು ಅರಿಯಲು ಸಿ.ಮೋಹನ್ ಎಂಬ ಮೈಸೂರಿನ ವಕೀಲರು ಮಾಹಿತಿ ಹಕ್ಕು ಕಾಯಿದೆ ಪ್ರಕಾರ ಕಳೆದ ವರ್ಷ ಅರ್ಜಿ ಹಾಕಿದ್ದರು. ಆ ಅರ್ಜಿಗೆ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಮೈಸೂರು ವಿಭಾಗೀಯ ಕಾರ್ಯದರ್ಶಿ ಸಿ. ಚಾಮೇಗೌಡರು ನೀಡಿರುವ ಉತ್ತರ ಕವಿತಾರ ಸುಳ್ಳನ್ನು ಸಾರಿ ಹೇಳುತ್ತದೆ.

ಡಿಸೆಂಬರ್ 29, 2014ರಲ್ಲಿ ವಿಭಾಗೀಯ ಕಾರ್ಯದರ್ಶಿಗಳು ನೀಡಿರುವ ಉತ್ತರದ ಪ್ರಕಾರ ಕವಿತಾ ರೈ ಕಸಾಪಕ್ಕೆ ಸಲ್ಲಿಸಿದ್ದ ಎಸ್ಎಸ್ಎಲ್‌ಸಿ ಅಂಕಪಟ್ಟಿಯಲ್ಲಿದ್ದ ನೋಂದಣಿ ಸಂಖ್ಯೆ 223372ಗೆ ಸಂಬಂಧಿಸಿದ ವಿದ್ಯಾರ್ಥಿಯ ಜನ್ಮ ದಿನಾಂಕವನ್ನು ತಿದ್ದುಪಡಿ ಮಾಡಲಾಗಿಲ್ಲವಂತೆ. ಅಷ್ಟೇ ಅಲ್ಲ, 'ಮಾರ್ಚ್- 1988ನೇ ಸಾಲಿನಲ್ಲಿ ನೋಂದಣಿ ಸಂಖ್ಯೆ 223372ರಂತೆ ಎಸ್ಎಸ್ಎಲ್‌ಸಿ ಪರೀಕ್ಷೆ ತೇರ್ಗಡೆ ಹೊಂದಿರುವ ಬಗ್ಗೆ ಕಚೇರಿ ಸಂಪುಟದಲ್ಲಿ ಪರಿಶೀಲಿಸಲಾಗಿ ಸದರಿ ನೋಂದಣಿ ಸಂಖ್ಯೆ ನಮೂದಾಗಿರುವುದಿಲ್ಲ' ಎಂದಿದ್ದಾರೆ. ಇದರ ಅರ್ಥ ಕವಿತಾ ಹೇಳುವಂತೆ ಅವರ ನೋಂದಣಿ ಸಂಖ್ಯೆ 223372 ಸರಿಯಾಗಿದ್ದರೆ ಅವರು 1988ರಲ್ಲಿ ಪರೀಕ್ಷೆಯನ್ನೇ ತೆಗೆದುಕೊಂಡಿಲ್ಲ ಮಾತ್ರವಲ್ಲ ಅವರು ಹುಟ್ಟಿದ್ದು 1974ರಲ್ಲಿ ಎಂಬುದೂ ಸುಳ್ಳಾಗುತ್ತದೆ.


ಅಲ್ಲಿಗೆ ಪ್ರಶಸ್ತಿ ಪಡೆಯಲಿಕ್ಕೋಸ್ಕರ ಕವಿತಾ ರೈ ಅವರೇ ಅಂಕಪಟ್ಟಿಯನ್ನು ತಿದ್ದಿದ ಅನುಮಾನ ದಟ್ಟವಾಗುತ್ತದೆ. ಇದು ಅಪ್ಪಟ ಫೋರ್ಜರಿ ಕ್ರಿಮಿನಲ್ ಪ್ರಕರಣ. ಅವರ ವೃತ್ತಿ ಬದುಕಿಗೇ ಕಂಟಕವಾಗುವ ಸಾಧ್ಯತೆಯೂ ಇಲ್ಲದಿಲ್ಲ. ತಮ್ಮ ಬರಹಗಳ ಮೂಲಕ ಮತ್ತು ದಲಿತನನ್ನು ಮದುವೆಯಾಗುವ ಮೂಲಕ ಪ್ರಗತಿಪರ ವಲಯದಲ್ಲಿ ಭರವಸೆ ಮೂಡಿಸಿದ್ದ ಕವಿತಾ ರೈ ಸಾಹಿತ್ಯಿಕ ವಲಯದಲ್ಲಿ ವಿಶ್ವಾಸಾರ್ಹ, ಆಪ್ತ ಎಂದೇಳಿಕೊಳ್ಳುವಂತಹ ವರ್ಚಸ್ಸನ್ನೇನೂ ಉಳಿಸಿಕೊಂಡಿಲ್ಲ.

ಒಂದು ಪ್ರಶಸ್ತಿಗಾಗಿ ಕವಿತಾ ಹೇಳಿರುವ ಸುಳ್ಳು ಈಗ ಅವರನ್ನು ನಿಜವಾಗಿ ಬಿಕ್ಕಟ್ಟಿಗೆ ಸಿಲುಕಿಸಿದೆ. ಅವರು ಹುಟ್ಟಿದ್ದು 1974ರಲ್ಲಿ ಎಂಬುದೇ ನಿಜವಾದರೆ ಅವರು ಪ್ರಶಸ್ತಿಗೆ ಅರ್ಹರು; ಆದರೆ ವಿವಿಯಲ್ಲಿ ಕೆಲಸ ಪಡೆಯಲು ಸಲ್ಲಿಸಿದ್ದ ಅರ್ಜಿಯಲ್ಲಿ ಸುಳ್ಳು ಹೇಳಿದ್ದರಿಂದ ಅವರು ಆ ಹುದ್ದೆಗೇ ಅನರ್ಹರು ಎಂದಾಗುತ್ತದೆ. ಜೊತೆಗೆ ಅವರು ಇಷ್ಟು ವರ್ಷಗಳ ಕಾಲ ಪಡೆದ ಸಂಬಳವನ್ನು ವಾಪಸ್ ಕೊಡಬೇಕಾಗುತ್ತದೆ ಮತ್ತು ಅದಕ್ಕಿಂತ ಮುಖ್ಯವಾಗಿ ಆ ಕೆಲಸವನ್ನೇ ಕಳೆದುಕೊಳ್ಳುವ ಪರಿಸ್ಥಿತಿಯೂ ಎದುರಾಗುತ್ತದೆ.

ಇಲ್ಲ, ಅವರು ಹುಟ್ಟಿದ್ದು 1969ರಲ್ಲಿ ಎಂಬುದೇ ನಿಜವಾದರೆ ಇತ್ತ ಹುದ್ದೆಗೆ ಅರ್ಹರು ಆದರೆ ಪ್ರಶಸ್ತಿಗೆ ಅನರ್ಹರು ಎಂದಾಗುತ್ತದೆ. ಆಗ ಆಕೆ ಪರಿಷತ್ತಿಗೆ ವಾಪಸ್ಸು ಕೊಡಬೇಕಾದ ಮೊತ್ತ ಕೇವಲ ಒಂದು ಲಕ್ಷ ರೂಪಾಯಿ ಮಾತ್ರ.

ಕವಿತಾ ರೈ ಅವರ ಈ 'ಜನ್ಮ ರಹಸ್ಯ'ವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾತ್ರವಲ್ಲ ಮುಕ್ತ ವಿವಿಯೂ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ವಿವಿಯ ವೈಸ್ ಚಾನ್ಸಲರ್ ಕೃಷ್ಣನ್ ಮತ್ತು ಕಸಾಪ ಅಧ್ಯಕ್ಷ ಹಾಲಂಬಿ ಅವರಿಂದ ಇಂತಹ ದಿಟ್ಟ ನಡೆಯೊಂದನ್ನು ನಿರೀಕ್ಷಿಸಬಹುದೆ....?


●ಗಿರೀಶ್ ತಾಳಿಕಟ್ಟೆ



Karnataka Secondary Education Examination Board

CERTIFICATE


ಮೂಲ ಅಂಕಪಟ್ಟಿ



Karnataka Secondary Education Examination Board


CERTIFICATE

ತಿದ್ದುಪಡಿ ಮಾಡಿದ ಅಂಕಪಟ್ಟಿ



ಕರ್ನಾಟಕ ಸರ್ಕಾರ

ಸತ್ಯ ಬಯಲಿಗೆಳೆದ ಶಿಕ್ಷಣ ಇಲಾಖೆಯ ದಾಖಲಾತಿ



KARNATAKA STATE OPEN UNIVERSITY

Brief Bio-Data

Post Applied for: Associate Professor in Kannada

1 Name (In Block Letters): DR. KAVITHA RAI

2 Communication Address (In Block Letters) Phone No.: "ARKA" SHARADA NAGARA MADOORU, KOTEKAR POST MANGALORE, KARNATAKA 575022

3 Date of Birth: 15 10 1969


ಹುದ್ದೆಗೆ ಅರ್ಜಿ ಸಲ್ಲಿಸುವಾಗ ರೈ ನಮೂದಿಸಿದ ಜನ್ಮದಿನಾಂಕ

ಶಿರಸಿ: ಸ್ವಾಹಾ ಶೂರರ ಸುಪರ್ದಿಯಲ್ಲಿ ಸರ್ಕಾರಿ ಆಸ್ಪತ್ರೆ!!

ಉತ್ತರ ಕನ್ನಡದ ವಾಣಿಜ್ಯ ನಗರಿ ಶಿರಸಿ ಯದ್ವಾತದ್ವಾ ಬೆಳೆಯುತ್ತಿದೆ. ಈ ಬದಲಾವಣೆ-ಬೆಳವಣಿಗೆ ಭರದಲ್ಲಿ ಬಗೆಬಗೆಯ ಬೆದರಿಕೆ-ಸುಲಿಗೆ ಮಾಫಿಯಾ ಹುಟ್ಟಿಕೊಂಡು ಅಮಾಯಕರ ಜೀವ ಹಿಂಡುತ್ತಿವೆ. ಲ್ಯಾಂಡ್ ಲಫಡಾದಿಂದ ತೊಗಲೋದ್ಯಮದ ತಂಟೆಯ ತನಕ ಇಲ್ಲಿ ಇಲ್ಲವೆಂಬ ಅನಿಷ್ಟವೇ ಇಲ್ಲ! ಸರ್ಕಾರಿ ಕಚೇರಿ- ಆಸ್ಪತ್ರೆಗಳಂತೂ ಲೇವಾದೇವಿ ಕೇಂದ್ರಗಳಂತಾಗಿ ಹೋಗಿವೆ. ಸ್ಥಳೀಯ ಶಾಸಕಾಗ್ರೇಸ ವಿಶ್ವೇಶ್ವರ ಹೆಗಡೆ ಕಾಗೇರಿ ಎಂಬ ಸ್ವಯಂಘೋಷಿತ ಸೀನಿಯರ್ ಸೇವಾದುರಂಧರ ಮಂತ್ರಿಯಾಗಿದ್ದಾಗ ಬಿಡುಬೀಸಾದ ದೋ ನಂಬರ್ ದಂಧೆಗಳು ಈಗ ಗಂಡಾಂತರ ಕಾಲದಾಗಿದೆ!!

ಶಿರಸಿಯ ಸರ್ಕಾರಿ ಆಸ್ಪತ್ರೆ ಇದೆಯಲ್ಲ ಅದು, ಸ್ಥಳೀಯ ಸಕಲ ಸರ್ಕಾರಿ ಕಚೇರಿಯ ಕಾರ್ಯವೈಖರಿಗೆ ದೃಷ್ಟಿ ಬೊಟ್ಟಿನಂತಿದೆ! ಪಂಡಿತ ಸಾರ್ವಜನಿಕ ಆಸ್ಪತ್ರೆ ಎಂಬ ಹೆಸರಿನ ಸದ್ರಿ ಸರ್ಕಾರಿ ಆಸ್ಪತ್ರೆ ಶುದ್ಧ ಲೇವಾದೇವಿ ಅಡ್ಡೆ; ಪ್ರತಿ ವಾರ್ಡ್-ರೂಮ್‌ಗಳಲ್ಲಿ ಬಿಳಿ ಬಟ್ಟೆಯ ರಕ್ಕಸರ ನಯನಾಜೂಕಿನ ಸುಲಿಗೆ ಹಗಲಿರುಳೂ ಚಾಲೂ ಇರುತ್ತದೆ. ಇಲ್ಲಿ ದುಡ್ಡಿಲ್ಲದೆ ಯಾವ ಚಿಕಿತ್ಸೆಯೂ ಸಿಗದು. ಖಚಿತವಾಗಿ ಹಣ ಸಿಗುತ್ತರೆಂದರಷ್ಟೇ ಪಂಡಿತ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ- ಶುಶ್ರೂಷೆ 'ಉಚಿತ'! ಹಣ ಕಂಡರಷ್ಟೇ ಇಲ್ಲಿಯ ಆರೇಳು ವೈದ್ಯರು ಸ್ಟೆಥಾಸ್ಕೋಪ್ ಕೈಗೆತ್ತಿ ಕಿವಿಗಿಟ್ಟುಕೊಳ್ಳುತ್ತಾರೆ; ದಾದಿಯರು 'ಕರುಣೆ'ಯಿಂದ ಕರ್ತವ್ಯ ನಿಭಾಯಿಸುತ್ತಾರೆ.

ಇಷ್ಟೆಲ್ಲ ಸುಲಿಗೆ-ಹಿಂಸೆ ನಿರ್ದಯವಾಗಿ ನಡೆದರೂ ಶಿರಸಿಯ ಸುತ್ತಲಿನ ಹಳ್ಳಿಯ ದೀನ-ದಲಿತರಿಗೆ ಬೇರೆ ಗತಿಯಿಲ್ಲ! ದಿನವೂ ಬಡಜನರ ಜಂಗುಳಿ ನೆರೆದಿರುತ್ತದೆ. ಜನ ಹೆಚ್ಚಾದಂತೆ ವೈದ್ಯರಿಗೆ-ದಾದಿಯರಿಗೆ ಹಬ್ಬ. ಎಷ್ಟು ವ್ಯವಸ್ಥಿತವಾಗಿ ಭ್ರಷ್ಟಾಚಾರ ಸದ್ರಿ ಆಸ್ಪತ್ರೆಯಲ್ಲಿ ನಡೆಯುತ್ತಿದೆಯೆಂದರೆ, ಅಮಾಯಕ ಆಶಾ ಕಾರ್ಯಕರ್ತೆಯರಿಗೆ ದಿಕ್ಕು ತಪ್ಪಿಸಿರುವ ವೈದ್ಯರು ಅವರನ್ನೇ ಏಜೆಂಟರಾಗಿ ನೇಮಿಸಿಕೊಂಡಿದ್ದಾರೆ. ಸುಸಜ್ಜಿತ ವಾರ್ಡ್-ಸೌಕರ್ಯಗಳಿರುವ ಈ ಆಸ್ಪತ್ರೆಗೆ ಸರ್ಕಾರದಿಂದ ವರ್ಷಂಪ್ರತಿ ಕೋಟಿ-ಕೋಟಿ ರೂ. ಹರಿದುಬರುತ್ತಿದೆ. ಬ್ಲಡ್ ಬ್ಯಾಂಕ್


ಕಾಗೇರಿ

ದೆ. ಒಳ್ಳೆಯ ಕಟ್ಟಡವಿದೆ. ಆದರೆ ಬಡವರಿಗೆ ಸೇವೆ-ಚಿಕಿತ್ಸೆ ಮಾತ್ರ ಭಾರೀ ದುಬಾರಿ!! ಸಾಕಷ್ಟು ಔಷಧಿ, ಬ್ಯಾಂಡೇಜ್, ಇಂಜೆಕ್ಷನ್‌ಗೆ ಬೇಕಾದ ಸಾಮಗ್ರಿ ಇದ್ದರೂ ರೋಗಿಗಳಿಗೆ ಹೊರಗಿಂದ ಇವೆಲ್ಲಾ ತರುವಂತೆ ವೈದ್ಯರು ಚೀಟಿ ಬರೆದು ಅಟ್ಟುವ ಪರಿಪಾಠ ಪಂಡಿತ್ ಆಸ್ಪತ್ರೆಯಲ್ಲಿ ಬಹಳಾಯ್ತಿನಿಂದಲೂ ನಡೆದುಬಂದಿದೆ.

ಒಂದಿಬ್ಬರು ಶಸ್ತ್ರಚಿಕಿತ್ಸಾ ತಜ್ಞರು, ಎರಡ್ಮೂರು ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರು, ಒಬ್ಬ ಎಲುಬು-ಕೀಲು ತಜ್ಞ, ಅರವಳಿಕೆ ತಜ್ಞ... ಹೀಗೆ ಆರೆಂಟು ವೈದ್ಯರ ದಂಡವೇ ಶಿರಸಿ ಸರ್ಕಾರಿ ಆಸ್ಪತ್ರೆಯಲ್ಲಿದೆ. ಇವರಲ್ಲಿ ಹೆರಿಗೆ ತಜ್ಞ ಡಾಕ್ಟರ್‌ಗಳಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡ್! ಏಕೆಂದರೆ ಶಿರಸಿಯ ಹಳ್ಳಿಗಳ ಬಡ ಗರ್ಭಿಣಿಯರಷ್ಟೇ ಅಲ್ಲ, ಸುತ್ತಲಿನ ಸೊರಬ, ಯಲ್ಲಾಪುರ, ಮುಂಡಗೋಡ, ಸಿದ್ದಾಪುರ ಭಾಗದವರೂ ಈ ಆಸ್ಪತ್ರೆಯನ್ನೇ ನೆಚ್ಚಿಕೊಂಡಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ ಹೆರಿಗೆಗೆ ಹೆಂಗಸರು ಬರುವುದರಿಂದ ಹೆರಿಗೆ ತಜ್ಞ ವೈದ್ಯರ ನಡುವೆ ವ್ಯಾವಹಾರಿಕ ಪೈಪೋಟಿಯೂ ಜೋರಾಗಿ ನಡೆಯುತ್ತಿದೆ. ಪ್ರಸೂತಿ ತಜ್ಞರಾದ ಡಾ. ರಾಮಾ ಹೆಗಡೆ, ಡಾ. ಮಹೇಶ್ ಹೆಗಡೆ ಮತ್ತು ವಿನಾಯಕ ಭಟ್‌ರ ಜಿದ್ದಾಜಿದ್ದಿಯಿಂದ ಇಲ್ಲಿ ದಾಖಲಾಗುವ ಗರ್ಭಿಣಿಯರ ಹಣವಷ್ಟೇ ಅಲ್ಲ ಜೀವವೂ ಗಂಡಾಂತರಕ್ಕೆ ಸಿಲುಕಿಬಿಟ್ಟಿದೆ.


ಸುಮಾರು ಒಂದೂವರೆ ದಶಕದಿಂದ ಶಿರಸಿ ಆಸ್ಪತ್ರೆಯಲ್ಲೇ ಗೂಟ ಜಡಿದು ಕೂತಿರುವ ಮುಖ್ಯ ವೈದ್ಯಾಧಿಕಾರಿ ಡಾ. ರಾಮಾ ಹೆಗಡೆ ಒಂದು ಕಾಲದಲ್ಲಿ ಏಕಮೇವಾದ್ವಿತೀಯ ಸುಲಿಗೆ ಶೂರನಾಗಿದ್ದ. ಯಾವಾಗ ಡಾ. ಮಹೇಶ್ ಹೆಗಡೆ ಮತ್ತು ಡಾ. ವಿನಾಯಕ ಭಟ್ ವಕ್ಕರಿಸಿದರೋ ಆಗ ನಿಧಾನಕ್ಕೆ ರಾಮಾ ಹೆಗಡೆಯ ಮಾರ್ಕೆಟ್ ಕಡಿಮೆಯಾಯ್ತು. ಆಗಾತನ ದರ್ಪ-ದೇಣಿಗೆ ದಾಹವೂ ಕಡಿಮೆ ಆಯ್ತು. ದುಡ್ಡು ಮಾಡಿದಂತೆಯೇ ಆಸ್ಪತ್ರೆಯನ್ನೂ ನಿಭಾಯಿಸಿಕೊಂಡು ಹೋಗುವ ದಕ್ಷತೆ ಆತನಲ್ಲಿತ್ತು. ಅಧಿಕಾರಸ್ಥ ಪುಢಾರಿಗಳಿಗೂ ಮಸ್ಕಾ ಹೊಡೆಯುವ ಕಲೆ ಕರಗತವಾಗಿತ್ತು. ಹೀಗಾಗಿ ಆತ ಶಿರಸಿಯಲ್ಲಿ ಕಾಯಂ ಆಗಿ ಉಳಿದುಬಿಟ್ಟರು. ಈಗಾತ ಅದೆಂಥ ಕಷ್ಟಕ್ಕೆ ಸಿಲುಕಿದ್ದಾನೆಂದರೆ ಭರ್ಜರಿ ಕಮಾಯಿ ಇರುವ ವೈದ್ಯರನ್ನು ಶಿಸ್ತಿಗೆ-ಪ್ರಾಮಾಣಿಕತೆಗೆ ಒಳಪಡಿಸಲು ಪ್ರಯತ್ನಿಸಿದಂತೆಲ್ಲ ಆತನ ಪೂರ್ವಾಶ್ರಮದ ಚರಿತ್ರೆಯನ್ನು ಸಹೋದ್ಯೋಗಿಗಳು ನೆನಪಿಸಿ ಕೈಕಟ್ಟಿ ಹಾಕುತ್ತಾರೆ.


ಈ ರಾಮಾ ಹೆಗಡೆಗಿಂತಲೂ ಡಾ. ವಿನಾಯಕ ಭಟ್ಟ ಚಾಲಾಕಿ. ಬೆಣ್ಣೆಯಲ್ಲಿನ ಕೂದಲು ತೆಗೆದಂತೆ ಮಾತಾಡುವ ಈತನಿಗೆ ಗಿರಾಕಿಗಳು ದಂಡುದಂಡಾಗಿ ಬಂದು ಮುತ್ತುತ್ತಾರೆ. ವೈದ್ಯಕೀಯದ ಎಥಿಕ್ಸ್ ಮುದ್ದೆ ಮಾಡಿ ಕಸದಬುಟ್ಟಿಗೆ ಅದ್ಯಾವಾಗಲೋ ಎಸೆದಿರುವ ಭಟ್ಟ ಅಸಹಾಯಕ ಬಸುರಿ-ಬಾಣಂತಿಯರ ಪರಿವಾರದ ಭಯ-ಮುಗ್ಧತೆ ಹಣವಾಗಿ ಪರಿವರ್ತಿಸಿ ಜೇಬಿಗಿಳಿಸಬಲ್ಲ ಜಾಣ! ಆರಂಭದಲ್ಲಿ ಅಂದರೆ ಡಾ. ರಾಮಾ ಹೆಗಡೆಯ ಹಣದಾಸೆ ಅತಿಯಾಗಿದ್ದಾಗ, ಈ ಭಟ್ಟ ಜನಾನುರಾಗಿಯಾಗಿ ತೋರಿಸಿ ಈಗಾತ ಗುರು ರಾಮಾ ಹೆಗಡೆಯನ್ನೇ ಮೀರಿಸುವ ಧನಪಿಶಾಚಿಯಾಗಿ ಬದಲಾಗಿದ್ದಾನೆ. ಪಕ್ಕದ ಯಲ್ಲಾಪುರದ ಪ್ರಸಿದ್ಧ ವೈದ್ಯರೊಬ್ಬರ ಕುಲಕಂಠೀರವನಾದ ಭಟ್ಟನಿಗೆ ಶಿರಸಿಯಲ್ಲಿ ಖಾಸಗಿ ಆಸ್ಪತ್ರೆ ಕನಸು ಬಿದ್ದಂದಿನಿಂದ ಹೊರಗೆ ಬರುವ ಹೆಂಗಸರ ಸುಲಿಗೆ ಅತಿಯಾಗಿ ಹೋಯ್ತು.

ದುಡ್ಡಿನ ದುರಾಸೆಗೆ ಬಿದ್ದಿರುವ ಭಟ್ಟ ಗಿರಾಕಿಗಳ ಹಿಡಿವ ಹಠದಿಂದ ರಾತ್ರಿ 8ರ ತನಕವೂ ಆಸ್ಪತ್ರೆಯಲ್ಲಿ ಲಭ್ಯವಿರುತ್ತಾನೆ. ಇದಕ್ಕಾತ 'ಸೇವೆ'ಯ ಬಣ್ಣ ಬಳಿದು ಅಮಾಯಕರಿಗೆ ಮೋಸ ಮಾಡುತ್ತಿದ್ದಾನೆ. ಉಳಿದ್ಯಾವ ವೈದ್ಯರೂ ಸಿಗದಿದ್ದಾಗ ರೋಗಿಗಳ ಕೈಗೆಟುಕುವ ಭಟ್ಟನ ಒಳ ಉದ್ದೇಶ ನೊಂದವರಿಗೆ ಅರ್ಥವೇ ಆಗುವುದಿಲ್ಲ. ಆಗವರು ಕೇಳಿದಷ್ಟು ಕಾಣಿಕೆ ಭಟ್ಟರಿಗೆ ಕೊಟ್ಟು ಜೀವ ಉಳಿಸಿಕೊಳ್ಳುವ ನಿರ್ಧಾರಕ್ಕೆ ಬರ್ತಾರೆ. ಈತನಿಗೆ ಪಕ್ಕದ ಯಲ್ಲಾಪುರದಿಂದಲೂ ಬಸುರಿ ಗಿರಾಕಿಗಳನ್ನು ವೈದ್ಯನಾದ ಅಪ್ಪ ಕಳಿಸಿಕೊಡುತ್ತಾನೆ. ಶಿರಸಿ ಆಸ್ಪತ್ರೆಗೆ ಬರುವ ಹೆಚ್ಚಿನ ಗರ್ಭಿಣಿಯರ ಹೆರಿಗೆ ಕೇಸ್ ನಿಭಾಯಿಸುವುದು ಇದೇ ಭಟ್ಟ!! ಅಂಥ ಗಿರಾಕಿಗಳಿಂದ ಸಿಗುವ ಇನಾಮ್ ದೊಡ್ಡದು.

ಒಂದು ಹೆರಿಗೆಗೆ ಕನಿಷ್ಠ ಮೂರು ಸಾವಿರ ಈತ ಚಾರ್ಜ್ ಮಾಡ್ತಾನೆ. ನಾರ್ಮಲ್ ಡಿಲೆವರಿ ಆದರೂ ಅಡಗೋಲಜ್ಜಿ ಕತೆ ಕಟ್ಟಿ ಹಣ ಪೀಕಿಸುತ್ತಾನೆ. "..... ನಿಮ್ಮ ಕೇಸು ಡೇಂಜರ್ ಇತ್ತು.... ನಾನೇಳಿದ್ದಕ್ಕೆ ಅಡ್ಮಿಟ್ ಮಾಡಿಕಂಡಿದ್ದಾರೆ..... ಕಷ್ಟ ಪಟ್ಟಿದ್ದೇನೆ... ತಾಯಿಗೆ ಇಲ್ಲ ಶಿಶುಗೆ ತೊಂದರೆ ಇತ್ತು...." ಎಂದೆಲ್ಲ ಬಂಡಲ್ ಬಿಡ್ತಾನೆ. ಹಳ್ಳಿಯ ಪಾಪದ ಮಂದಿ "ಬದುಕಿದೆಯಾ ಬಡ ಜೀವವೇ" ಎಂದು ಕೇಳಿದಷ್ಟು ಕೊಟ್ಟು ದೋಕಳಿಕ್ ಆಗ್ತಾರೆ. ಹೀಗೆ ದುಡ್ಡು ಹೊಡೆಯಲು ಆತ ತರತರದ ತಂತ್ರ ಅಳವಡಿಸಿಕೊಂಡಿದ್ದಾನೆ. ಗ್ರಾಮೀಣ ಬಡ ಗರ್ಭಿಣಿಯರಿಗೆ ಸರ್ಕಾರಿ ಸೌಲಭ್ಯ-ಆರೋಗ್ಯದ ಕಾಳಜಿ ಬಗ್ಗೆ ತಿಳಿವಳಿಕೆ ನೀಡಿ ಸುಲಲಿತ ಹೆರಿಗೆ ನಡೆಯುವಂತೆ ನೋಡಿಕೊಳ್ಳುವ ಆಶಾ ಕಾರ್ಯಕರ್ತೆಯ ಮೂಲಕವೇ ಈತ ಲಂಚ ಸಂಗ್ರಹಿಸುತ್ತಾನೆ. ಹಳ್ಳಿಗಾಡಿನ ಗರ್ಭಿಣಿಯರ ಹೆರಿಗೆ ಮುಗಿದಾಗ ಅವರಿಂದ ಹಣ ಕೊಡಿಸುವಂತೆ ಆಶಾ ಕಾರ್ಯಕರ್ತೆಯರಿಗೆ ಆರ್ಡರ್ ಮಾಡಿ ಸತಾಯಿಸುತ್ತಾನೆ. ಕೆಲವರು ಹೆದರಿ ಕೊಡಿಸ್ತಾರೆ; ಕೆಲವರು ಬಡವರಿಂದ ಕಲೆಕ್ಷನ್ ಮಾಡಲಾಗದೆ ಬೈಸಿಕೊಳ್ಳುತ್ತಾರೆ.

ಡಾ. ವಿನಾಯಕ ಭಟ್‌ಗೆ ಸಹಜ ಹೆರಿಗೆ ಕೇಸ್‌ಗಳೆಂದರೆ ಒಂಥರಾ ಅಲರ್ಜಿ. ಇದರಲ್ಲಿ ಗಿಟ್ಟುವುದು ಕಮ್ಮಿ. ಅದೇ ಸಿಜೇರಿಯನ್ ಕೇಸಾದರೆ ಜೀವ ಭಯ ಮೂಡಿಸಿ ಬ್ಲಾಕ್‌ಮೇಲ್‌ಗೆ ಅನುಕೂಲ ಜಾಸ್ತಿ. ಹೀಗಾಗಿ ಶಿರಸಿ ಆಸ್ಪತ್ರೆಯಲ್ಲಿ ಸಹಜ ಹೆರಿಗೆಗಿಂತ ಸಿಜೇರಿಯನ್ ಡೆಲಿವರಿ ಅನುಪಾತ ಹೆಚ್ಚು!! ಈ ಸಿಜೇರಿಯನ್‌ನಲ್ಲಿ ವೈದ್ಯರ ಫೀಸೇ 4 ಸಾವಿರ. ಸಿಜೇರಿಯನ್‌ಗೆ ಬೇಕಾಗುವ ಅನಸ್ತೇಷಿಯಾ, ಮದ್ದು, ಸಿರಿಂಜ್ ಎಂದೆಲ್ಲ ಸರಿಸುಮಾರು ಒಂದೂವರೆ ಸಾವಿರದ ಚೀಟಿ 'ವೈದ್ಯೋ ನಾರಾಯಣ ಹರಿ' ಬರೆದುಕೊಡುತ್ತಾನೆ! ಅಲ್ಲಿಗೆ ಸರ್ಕಾರಿ ನಿಯಮದಂತೆ-ಸೌಲತ್ತಿನಂತೆ ಸಂಪೂರ್ಣ ಉಚಿತವಾಗಿ ನಡೆಯಬೇಕಿದ್ದ ಹೆರಿಗೆ ಚಿಕಿತ್ಸೆಗೆ ಬಡವರು ಒಟ್ಟೂ ಹತ್ತು ಸಾವಿರ ತೆರಲೇಬೇಕು! ಇದರಲ್ಲಿ ಅರವಳಿಕೆ ಇಂಜೆಕ್ಷನ್ ಕೊಡುವ ಡಾ. ಉಡುಪನಿಗೆ 1 ಸಾವಿರ ನಿಕ್ಕಿ!


ಯು.ಟಿ. ಖಾದರ್



ಸರ್ಕಾರ ಬಿಪಿಎಲ್ ಪಡಿತರ ಕಾರ್ಡ್‌ದಾರರಿಗೆ ಪುಕ್ಕಟೆ ಚಿಕಿತ್ಸೆ ಸರ್ಕಾರಿ ಕಚೇರಿಯಲ್ಲಿ ನಡೆಯುತ್ತದೆಂದು ಹೇಳುತ್ತಿದೆ. ಆದರೆ ಶಿರಸಿ ಆಸ್ಪತ್ರೆಯಲ್ಲಿ ಇದು ಸುಳ್ಳೇಸುಳ್ಳು ಸ್ಲೋಗನ್‌ನಂತಾಗಿದೆ! ಈ ಆಸ್ಪತ್ರೆಯಲ್ಲಿ ಹೆರಿಗೆ ಡಾಕ್ಟರ್‌ಗಳಷ್ಟೇ ಅಲ್ಲ ಎಲ್ಲರೂ ಹೊರಗಿನಿಂದಲೇ ರೋಗಿ ಬಂಧುಗಳಿಂದ ಮದ್ದು ಇನ್ನಿತರ ಸಾಮಗ್ರಿ ತರಿಸಿ ಹೇಯ್ದ್ ಸೇವೆ ನೀಡುತ್ತಾರೆ. ಕೇಳಿದರೆ ಸರ್ಕಾರದಿಂದ ಯಾವ ಸರಬರಾಜೂ ಇಲ್ಲವೆಂದು ಗದರುತ್ತಾರೆ. ಬಡವರಿಗೆಂದು ಜಾರಿಗೆ ತಂದಿರುವ "ಸಂಪೂರ್ಣ ಸುರಕ್ಷಾ" ಎಂಬ ಯೋಜನೆಯೂ ಈತನ ಸುಲಿಗೆಗೆ ಬಳಕೆಯಾಗುತ್ತಿದೆ. ಸಂಪೂರ್ಣ ಸುರಕ್ಷಾ ಕಾರ್ಡ್ ಹೆರಿಗೆಗೆಂದು ಬಂದ ಹೆಂಗಸಿನ ಪರಿವಾರಕ್ಕಿದೆಯಾ ಎಂದು ಈ ಡಾಕ್ಟರ್ ಸಾಹೇಬ ಪತ್ತೆ ಹಚ್ಚುತ್ತಾನೆ. ಅಂಥ ಚಾನ್ಸ್ ಏನಾದರೂ ಇದ್ದರೆ ಅದರ ಲಾಭ ಈ ಸರ್ಕಾರಿ ಆಸ್ಪತ್ರೆಯಲ್ಲಿ ಸಿಗಲಾರದು; ಖಾಸಗಿ ಆಸ್ಪತ್ರೆಯಲ್ಲಿ ಕೆಲವು ಸಂಪೂರ್ಣ ಸುರಕ್ಷಾ ಯೋಜನೆಗೆ ಟ್ಯಾಗ್ ಮಾಡಲಾಗಿದೆ ಅಲ್ಲಿಗೆ ಹೋಗೋಣ ಅಂತಾನೆ. ತನಗೆ ಕಮಿಷನ್ ಭರ್ಪೂರ್ ಕೊಡುವ ರೋಟರಿ ಆಸ್ಪತ್ರೆ ಅಥವಾ ಮಹಾಲಕ್ಷ್ಮೀ ಆಸ್ಪತ್ರೆಯಲ್ಲಿ ಗರ್ಭಿಣಿಯನ್ನು ದಾಖಲು ಮಾಡಿಸ್ತಾನೆ.

ಈ ಡಾ. ಭಟ್ಟ ಅದೆಷ್ಟು ಪ್ರಸಿದ್ಧ ಜನಾಕರ್ಷಕ ವೈದ್ಯನೋ ಅಷ್ಟೇ ಕುಪ್ರಸಿದ್ಧ ಆತನ ಭಾನ್ಗಡಿ ಪ್ರಕರಣಗಳು. ದುಡ್ಡು ಮಾಡುವ ಹಪಾಹಪಿಯಲ್ಲಿ ಈತ ಮಾಡಿದ ಎಡವಟ್ಟುಗಳು ಒಂದೆರಡಲ್ಲ. ಈತನ ಗಡಿಬಿಡಿ, ಉದಾಸೀನತೆಯಿಂದ ಅನೇಕ ಜೀವಗಳು ಸಂಕಷ್ಟಕ್ಕೆ ಸಿಲುಕಿ ಒದ್ದಾಡಿದ್ದೂ ಇದೆ. ಕೆಲವು ತಿಂಗಳ ಹಿಂದೆ ಕುಂಬ್ರಿ ಮರಾಠಿ ಬುಡಕಟ್ಟಿನ ಗರ್ಭಿಣಿ ಹೆಂಗಸೊಬ್ಬಳು ಈತನ ನಿರ್ಲಕ್ಷ್ಯದಿಂದ ಅತಿಯಾದ ರಕ್ತ ಸ್ರಾವವಾಗಿ ಸಾವು ಕಂಡಿದ್ದಳು. ಆಗ ಆಕೆಯ ಹೆಣ ಆಸ್ಪತ್ರೆ ಅವರಣದಲ್ಲಿಟ್ಟು ಪ್ರತಿಭಟನೆ ಮಾಡಲಾಗಿತ್ತು. ಇಂಥ ಅನೇಕ ಪ್ರತಿಭಟನೆಗಳು ಸದ್ರಿ ಆಸ್ಪತ್ರೆ ಅಂಗಳದಲ್ಲಿ ಡಾ. ಭಟ್ ವಿರುದ್ಧ ಆಗಿದ್ದವೆ. ಆದರೂ ಆರೋಗ್ಯ ಇಲಾಖೆಯ ಪ್ರಭೃತಿಗಳು ಇದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಎಲ್ಲಾ ಕುರುಡು ಕಾಂಚಾಣದ ಮಹಿಮೆ.

ಕೆಲವು ತಿಂಗಳ ಹಿಂದೆ ದೊಡ್ಡ ಎಡವಟ್ಟು ಈ 'ಸಿಜೇರಿಯನ್ ಶೂರ' ಮಾಡಿದ್ದು ಸುದ್ದಿಯಾಗಿತ್ತು. ದುಡ್ಡು ಬಾಚುವ ಅವಸರದಲ್ಲಿ ದಿನದ 24 ಗಂಟೆಯೂ ಕೆಲಸ ಮಾಡುವ-ಗಿರಾಕಿಗಳಿಗೆ ನಿದ್ದೆ ಬಿಟ್ಟು ಬಲೆ ಬೀಸುವ ಡಾ. ಭಟ್ಟ ಒಂದೇ ದಿನ ಬರೋಬ್ಬರಿ ಒಂಭತ್ತು ಸಿಜೇರಿಯನ್ ಮಾಡಿದ್ದ. ಮಾಡಿದವನೇ ಮರುದಿನವೇ ನಾಪತ್ತೆಯಾಗಿ ಬಿಟ್ಟ. ಇತ್ತ ಇಬ್ಬರು ಬಾಣಂತಿಯರಿಗೆ ಒಂದೇ ಸಮನೆ ಬ್ಲೀಡಿಂಗ್ ಆಗತೊಡಗಿದೆ! ಆ ಹೆಂಗಸರ ಸಂಬಂಧಿಕರು-ಆಸ್ಪತ್ರೆಯ ದಾದಿ- ಇತರ ಡಾಕ್ಟರ್‌ಗಳು ಕಂಗಾಲಾಗಿದ್ದಾರೆ. ಸಿಜೇರಿಯನ್ ಮಾಡಿ ಕಾಸು ಕಿಸೆಗಿಳಿಸಿದ ವಿನಾಯಕ ಡಾಕ್ಟರ್ ಮಾತ್ರ ಪತ್ತೆಯೇ ಇಲ್ಲ. ಸಿಜೇರಿಯನ್ ಮಾಡಿ ಅಕ್ರಮ ಫೀ ಪಡೆದಿದ್ದ ಈ ವೈದ್ಯನಿಗೆ ಆ ರೋಗಿಗಳ ಕಾಳಜಿ ವಹಿಸಬೇಕೆಂಬ ಕನಿಷ್ಟ ಕಳಕಳಿಯೂ ಇಲ್ಲದ್ದು ಕ್ರೂರತನದ ಪರಮಾವಧಿಯೇ ಸರಿ. ನಂತರ ಮುಖ್ಯ ವೈದ್ಯಾಧಿಕಾರಿ ಓಡೋಡಿ ಬಂದು ಆಗಬಹುದಾಗಿದ್ದ ಅನಾಹುತ ತಪ್ಪಿಸಿದ್ದಾರೆ.

ಈ ಕರ್ಮಕಾಂಡದ ಬಗ್ಗೆ ಆರೋಗ್ಯ ಇಲಾಖೆಗೆ ದೂರು ಹೋಗಿದೆ. ಈಗ ಗಿರಾಕಿ ಇಲ್ಲದೆ ಮೆತ್ತಗಾಗಿರುವ ಮುಖ್ಯ ವೈದ್ಯಾಧಿಕಾರಿ ಡಾ. ರಾಮಾ ಹೆಗಡೆ ಸಿಜರಿನ್ ಸರದಾರ ಡಾ. ಭಟ್‌ಗೆ ಅಂಕುಶ ಇಡಲು ಹಲವು ವಿಫಲ ಪ್ರಯತ್ನವೂ ಮಾಡಿದ್ದಾರೆ. ಇದು ಅವರಿಬ್ಬರ ನಡುವಿನ ಧನ ದಾಹದ-ಕೀರ್ತಿ ಕಲಹದ ಪರಿಣಾಮವೇ ಹೊರತು ಬಡರೋಗಿಗಳ ಮೇಲಿನ ಕಾಳಜಿಯೇನಲ್ಲ. ಆದರೆ ಡಿಎಚ್‌ಓ ಡಾ. ಅಶೋಕ್ ಕುಮಾರ್ ಶಿರಸಿ ಆಸ್ಪತ್ರೆಯ ಅವಾಂತರ-ಅನ್ಯಾಚಾರ-ಅಕ್ರಮ ಕಂಡೂಕಾಣದಂತಿರುವುದು ಅನೇಕ ಅನುಮಾನ ಮೂಡಿಸಿದೆ. ಚಡ್ಡಿ ಶಾಸಕ ಕಾಗೇರಿಗಂತೂ ಜನಿವಾರ ಬಂಧು ಡಾಕ್ಟರ್‌ಗಳ 'ಸೇವಾ ವಿಧಾನ'ದಲ್ಲಿ ಯಾವ ತಪ್ಪೂ ಕಾಣಿಸುತ್ತಿಲ್ಲ. ಬಡವರ ಪರ ನೀತಿ-ಧೋರಣೆ ಹೊಂದಿರುವ ಆರೋಗ್ಯಮಂತ್ರಿ ಯು.ಟಿ. ಖಾದರ್ ಸಾಹೇಬರಾದರೂ ಶಿರಸಿ ಆಸ್ಪತ್ರೆಯತ್ತ ಹೆಚ್ಚಿನ ಮೇಲೆ ತಲೆ ಹಾಕುತ್ತಾರೆಯೇ? ಅಸಹಾಯಕ-ಅಮಾಯಕ ಹಳ್ಳಿಗರಿಗೆ ಆಗುತ್ತಿರುವ ಸುಲಿಗೆ-ಶೋಷಣೆ ತಪ್ಪಿಸುವರಾ?

● ನಹುಷ



ಜಾನಪದ ವಿವಿ ಅಕ್ರಮಗಳ ವಿಶ್ವರೂಪ

ಕರ್ನಾಟಕದಲ್ಲಿ ಜಾನಪದ ವಿಶ್ವವಿದ್ಯಾಲಯವೊಂದು ಜಗತ್ತಿನಲ್ಲಿಯೇ ಮೊದಲ ವಿವಿ ಎನ್ನುವ ಹೆಗ್ಗಳಿಕೆಯೊಂದಿಗೆ ಆರಂಭವಾಯಿತು. ಇದಕ್ಕೆ ಮೈಸೂರು ವಿವಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಪ್ರೊ.ಅಂಬಳಿಕೆ ಹಿರಿಯಣ್ಣ ಅವರನ್ನು 2011 ಜುಲೈ 27 ರಂದು ಪ್ರಥಮ ಕುಲಪತಿಯನ್ನಾಗಿ ಸರಕಾರ ನೇಮಿಸಿತು. ಇಲ್ಲಿಗೆ ಮೂರು ವರ್ಷದಿಂದ ಜಾನಪದ ವಿವಿ ತನ್ನ ಕೆಲಸ ಕಾರ್ಯಗಳನ್ನು ಆರಂಭಿಸಿದೆ. ಈಚೆಗೆ ಜಾನಪದ ವಿಶ್ವವಿದ್ಯಾಲಯ ಹಗರಣಗಳ ವಿಷಯಕ್ಕೆ ಮಾಧ್ಯಮಗಳಲ್ಲಿ ಹೆಚ್ಚು ಸುದ್ದಿಯಾಗುತ್ತಿದೆ. ಈ ಸುದ್ದಿಯ ಮೇಲೊಂದು ಪತ್ರಿಕೆಯ ವಿಶ್ಲೇಷಣಾತ್ಮಕ ವರದಿ ಇಲ್ಲಿದೆ.

ಪತ್ರಿಕೆಗೆ ಲಭ್ಯವಾದ ಅಧಿಕೃತ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ವಿಶ್ವವಿದ್ಯಾಲಯ ಮಾಡಿರುವ ಅಕ್ರಮ ನಿಯಮ ಉಲ್ಲಂಘನೆಗಳ ದೊಡ್ಡ ಪಟ್ಟಿಯೇ ಸಿದ್ಧವಾಗುತ್ತದೆ. ಭ್ರಷ್ಟಾಚಾರದ ವಿಶ್ವರೂಪವೊಂದು ಬಯಲಾಗುತ್ತದೆ. ಅಕ್ರಮ ನಿಯಮಬಾಹಿರ ಚಟುವಟಿಕೆಗಳು ಎಗ್ಗಿಲ್ಲದೆ ನಡೆದಿರುವುದು ಕಂಡುಬರುತ್ತದೆ. ಇದು ಆರಂಭದಲ್ಲಿಯೇ ಜಾನಪದ ವಿಶ್ವವಿದ್ಯಾಲಯದ ಕೆಟ್ಟ ಬೆಳವಣಿಗೆಯ ಮುನ್ಸೂಚನೆಯಾಗಿ ಕಾಣುತ್ತಿದೆ.


ತಾತ್ಕಾಲಿಕ ಆಯ್ಕೆಯಲ್ಲಿಯೇ ಅಕ್ರಮ


ಕುಲಪತಿಗಳು ವಿವಿಯಲ್ಲಿ ಈಗಾಗಲೆ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೆ ಮಾನವೀಯತೆಯ ನೆಲೆಯಲ್ಲಿ ಆಯ್ಕೆ ಮಾಡುತ್ತಿದ್ದೆವು ಎಂದಿದ್ದಾರೆ. ಆದರೆ ತಾತ್ಕಾಲಿಕವಾಗಿ ಆಯ್ಕೆಯಾದ ಬೋಧಕ ಬೋಧಕೇತರ ಸಿಬ್ಬಂದಿಗಳ ಆಯ್ಕೆ ಪ್ರಕ್ರಿಯೆಯಲ್ಲಿಯೂ ವ್ಯಾಪಕ ದೋಷಗಳು ಕಾಣುತ್ತವೆ. ತಮಗೆ ಬೇಕಾದವರನ್ನು ತಾತ್ಕಾಲಿಕವಾಗಿ ತುಂಬಿಕೊಂಡು, ಅವರನ್ನು ಕಾಯಂ ಆಯ್ಕೆ ಮಾಡಿಕೊಳ್ಳಲು ವ್ಯವಸ್ಥಿತವಾಗಿ ಸಿದ್ಧತೆ ಮಾಡಿಕೊಂಡಿರುವುದು ನಿಚ್ಚಳವಾಗಿ ಕಾಣುತ್ತಿದೆ. ಕೆಲವು ತಾತ್ಕಾಲಿಕ ಉದ್ಯೋಗಿಗಳು ಯಾವಾಗ ವಿವಿ ಪ್ರವೇಶಿಸಿದರು ಎನ್ನುವುದು ನಿಗೂಢವಾಗಿಯೇ ಇದೆ. ಇವರೆಲ್ಲರ ಆಯ್ಕೆ ಪ್ರಕ್ರಿಯೆಯ ಬಗ್ಗೆ ಸರಕಾರ ಕೂಲಂಕಷವಾಗಿ ಪರಿಶೀಲನೆ ಮಾಡಿದರೆ ತಾತ್ಕಾಲಿಕ ಹುದ್ದೆಗಳಲ್ಲಿ ನಡೆದಿರಬಹುದಾದ ಅನ್ಯಾಯ ಅಕ್ರಮಗಳು ದೊಡ್ಡದಾಗಿ ಕಾಣುವ ಸಾಧ್ಯತೆ ಇದೆ.

ಜಾನಪದ ವಿವಿಯಲ್ಲಿ ಮೊದಲ ಬಾರಿಗೆ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಆಯ್ಕೆಯ ಸಂದರ್ಶನದಲ್ಲಿ ಸಂದರ್ಶಕರು ಅಂಕ ನೀಡಿದ ದಾಖಲೆಯೊಂದು ಲಭ್ಯವಾಗಿದೆ. ಈ ಸಂದರ್ಶನ 22 ಅಕ್ಟೋಬರ್ 2012 ರಲ್ಲಿ ನಡೆದಿದೆ. ಇದರಲ್ಲಿ ಆಗಿನ ರಿಜಿಸ್ಟ್ರಾರ್ ಸಿ.ಎ.ಸೋಮಶೇಖರ್, ಪ್ರೊ. ಸಣ್ಣರಾಮ, ಸ.ಚಿ.ರಮೇಶ್, ಕೆ. ಪ್ರೇಮಕುಮಾರ್ ಸಂದರ್ಶಕರಿಗೆ ಅಂಕ ನೀಡಿ ಸಹಿ ಮಾಡಿದ್ದಾರೆ. ಸಂದರ್ಶನಕ್ಕೆ ಒಟ್ಟು 35 ಜನರು ಆಯ್ಕೆಯಾಗಿದ್ದಾರೆ. ಇದರಲ್ಲಿ 29 ಅಭ್ಯರ್ಥಿಗಳು ಹಾಜರಾಗಿದ್ದಾರೆ. ಈ ಸಂದರ್ಶನದಲ್ಲಿ ಒಬ್ಬ ಅಭ್ಯರ್ಥಿಗೆ 400 ಅಂಕಕ್ಕೆ ಸಂದರ್ಶನ ನಡೆದಿದೆ. ಇಂಥದ್ದೊಂದು ನಿಯಮ ಎಲ್ಲಿದೆ ಎಂದು ಕುಲಪತಿಗಳೇ ಹೇಳಬೇಕು. ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ಸಂದರ್ಶನಕ್ಕೆ 12.5 ಅಂಕ ನೀಡಬೇಕೆಂದಿದೆ. ಆದರೆ ಈ ಸಂದರ್ಶನದಲ್ಲಿ ಒಬ್ಬೊಬ್ಬರು ನೂರು ಅಂಕಕ್ಕೆ ತಮಗೆ ಇಚ್ಛಾನುಸಾರ ಅಂಕ ನೀಡಿದ್ದಾರೆ.

ಆದರ ಕೆಲವು ಸ್ಯಾಂಪಲ್ ನೋಡಿದರೆ ಎಂತಹವರೂ ಗಾಬರಿಪಡಬೇಕಾಗಿದೆ. ಶ್ವೇತ ಎನ್ನುವ ಅಭ್ಯರ್ಥಿ ಈ ಸಂದರ್ಶನದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಆಯ್ಕೆಯಾಗಿದ್ದರು. ಇವರ ಆಯ್ಕೆಯು ಒಂದು ಪವಾಡದಂತೆ ನಡೆದಿದೆ. ದಾಖಲೆಯಲ್ಲಿರುವಂತೆ ಇವರ ಆಂತರಿಕ ಅಂಗಳು 31.4 ರಷ್ಟಿದೆ. ಯಾವುದೇ ಲೇಖನ, ಪುಸ್ತಕ ಪ್ರಕಟವಾಗಿಲ್ಲ, ಪಿಹೆಚ್.ಡಿ, ಬೋಧನ ಅನುಭವವಿಲ್ಲ, ಇಲ್ಲಿ ಅಭ್ಯರ್ಥಿಯ ಜಾನಪದ ಎಂ.ಎ ಪದವಿಗೆ ಕನ್ನಡ ಸೆಟ್/ನೆಟ್‌ನ್ನು ಪರಿಗಣಿಸಲಾಗಿದೆ. ಯು.ಜಿ.ಸಿ ನಿಯಮದ ಪ್ರಕಾರ ಕನ್ನಡ ಮತ್ತು ಜಾನಪದ ಎರಡು ಬೇರೆ ಬೇರೆ ವಿಷಯಗಳು, ಪ್ರತ್ಯೇಕ ನೆಟ್ ಪರೀಕ್ಷೆಗಳೂ ಇವೆ. ಇದು ಸ್ಪಷ್ಟವಿರುವಾಗ ಶ್ವೇತ ಅವರ ಜಾನಪದ ಎಂ.ಎ ಗೆ ಕನ್ನಡ ನೆಟ್/ಸೆಟ್‌ನ್ನು ಅರ್ಹತೆಯನ್ನಾಗಿ ಪರಿಗಣಿಸಲು ಯಾವ ನಿಯಮವಿದೆ ಎಂದು ಸಂದರ್ಶಕರು ಹೇಳಬೇಕಾಗಿದೆ. ಇಷ್ಟಾಗಿಯೂ ಸಂದರ್ಶಕರು 400 ಕ್ಕೆ ನೀಡಿದ ಅಂಕ 301. ಆಗ ಒಟ್ಟು 332.4 ಅಂಕ ನೀಡಿ ಶ್ವೇತ ಅವರನ್ನು ಆಯ್ಕೆ ಮಾಡಿದ್ದಾರೆ.

ಮತ್ತೊಬ್ಬ ಅಭ್ಯರ್ಥಿ ಡಾ.ಜಿ.ಅರುಣಕುಮಾರ್ (ಅರುಣ್ ಜೋಳದಕೂಡ್ಲಿಗಿ) ಎನ್ನುವ ಅಭ್ಯರ್ಥಿಯು ಜಾನಪದ ಎಂ.ಎ, ಜಾನಪದದಲ್ಲಿ ನೆಟ್ ಆಗಿದ್ದೂ, ಪಿಹೆಚ್.ಡಿ ಮುಗಿದಿದೆ, ಪ.ಪಂಗಡಕ್ಕೆ ಸೇರಿದ್ದು, 21 ಲೇಖನಗಳು, 4 ಪುಸ್ತಕಗಳು ಪ್ರಕಟವಾಗಿವೆ. ಇವರ ಆಂತರಿಕ ಅಂಕ 79.79 ರಷ್ಟಿದೆ. ಇವರಿಗೆ ಸಂದರ್ಶಕರು 400 ಕ್ಕೆ 186 ಅಂಕ ನೀಡಿದ್ದಾರೆ. ಆಗ ಒಟ್ಟು 265 ಅಂಕಗಳಾಗಿವೆ. ಹೀಗಾಗಿ ಈ ಅಭ್ಯರ್ಥಿ







ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಯಾಗದೆ ಹೊರಗೆ ಉಳಿಯುತ್ತಾರೆ. ಶ್ವೇತಾಗೆ ಪ್ರೇಮಕುಮಾರ್ ಅವರು 82 ಅಂಕ ನೀಡಿ ಅರುಣ್‌ಗೆ 52 ಅಂಕ ನೀಡಿದ್ದಾರೆ. ಸ.ಚಿ.ರಮೇಶ್ ಅವರು ಶ್ವೇತಾಗೆ 80 ಅರುಣ್‌ಗೆ 35 ಅಂಕ ನೀಡುತ್ತಾರೆ. ಇದನ್ನು ನೋಡಿದರೆ ಶ್ವೇತ ಅವರನ್ನು ಆಯ್ಕೆ ಮಾಡಿರುವಲ್ಲಿ ವಿವಿ ಮಾಡಿರುವ ಅಕ್ರಮವೇನೆಂದು ಸ್ಪಷ್ಟವಾಗುತ್ತದೆ. ಇಲ್ಲಿ ಜಿ.ಅರುಣ್‌ಕುಮಾರ್ ಅವರನ್ನು ಉದ್ದೇಶಪೂರ್ವಕವಾಗಿ ಹೊರಗಿಡಲು ಈ ದುಷ್ಟಕೂಟ ಮಾಡಿರುವ ಕಸರತ್ತು ಎಂತದ್ದೆಂದು ಈ ದಾಖಲೆ ಸ್ಪಷ್ಟವಾಗಿ ತೋರಿಸುತ್ತಿದೆ. ಇದೇ ಮಾಹಿತಿಯಲ್ಲಿ ಡಾ.ಸ.ಚಿ.ರಮೇಶ್ ಅವರ ಪರಮಾಪ್ತ ಡಾ.ಚಂದ್ರಪ್ಪ ಎಸ್. ಎಂಬುವವರ ಒಟ್ಟು ಅಂಕ 259.33 ಆಗುತ್ತದೆ. ಆದರೆ ದಾಖಲೆಯಲ್ಲಿ ನಮೂದಾದ ಒಟ್ಟು ಅಂಕ 321.33. ಇದೇನು ತಪ್ಪಾದ ಲೆಕ್ಕವೋ ಅಥವಾ ಮಾಹಿತಿ ಹಕ್ಕಿನಡಿ ನೀಡಿದ ತಪ್ಪು ದಾಖಲೆಯೋ? ಈ ದಾಖಲೆಯಲ್ಲಿಯೇ ಇಂತಹ ನಿಯಮ ಬಾಹಿರ ಲೆಕ್ಕಾಚಾರಗಳಿವೆ.

ಹೀಗೆ ತಾತ್ಕಾಲಿಕ ಆಯ್ಕೆಯಲ್ಲಿಯೇ ತಮಗೆ ಬೇಕಾದವರನ್ನು ಒಳಗೆ ಸೇರಿಸಿಕೊಳ್ಳಲು ಮಾಡಿರುವ ಅಕ್ರಮಗಳನ್ನು ಬಯಲು ಮಾಡಿದರೆ ಪುಟಗಟ್ಟಲೆ ಬರೆಯಬಹುದಾಗಿದೆ. ತಾತ್ಕಾಲಿಕ ಆಯ್ಕೆಯ ಅಧಿಸೂಚನೆ, ಸಿಂಡಿಕೇಟ್ ನಡಾವಳಿ, ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟವಾದ ದಿನಾಂಕ, ಸಂದರ್ಶಕರು ನೀಡಿದ ಅಂಕಪಟ್ಟಿ, ಆಯ್ಕೆಯಾದವರ ದಾಖಲಾತಿಗಳನ್ನು ಸರಕಾರ ತನಿಖೆಗೆ ಒಳಪಡಿಸಿದರೆ ಅಥವಾ ಅನ್ಯಾಯಕ್ಕೊಳಗಾದ ಅಭ್ಯರ್ಥಿಗಳು ಮಾಹಿತಿ ಹಕ್ಕಿನಡಿ ದಾಖಲೆಗಳನ್ನು ಪಡೆದರೆ ಮೇಲೆ ವಿವರಿಸಿದಂತೆ ಹತ್ತಾರು ಅಕ್ರಮಗಳು ಬಯಲಾಗುವುದರಲ್ಲಿ ಯಾವುದೇ ಸಂಶಯವಿಲ್ಲ, ಹೀಗಿದ್ದೂ ತಾತ್ಕಾಲಿಕವಾಗಿ ಕೆಲಸ ಮಾಡುವ ಅನೇಕರನ್ನು ನಿಯಮಬಾಹಿರವಾಗಿ ಕಾಯಂ ನೇಮಕಾತಿ ಮಾಡಿಕೊಳ್ಳಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇದನ್ನು ನೋಡಿದರೆ ಇದರ ಹಿಂದೆ ದೊಡ್ಡ ಮಟ್ಟದಲ್ಲಿ ಅವ್ಯವಹಾರ ನಡೆದಿರುವುದು ತಿಳಿಯುತ್ತದೆ.

ಕುಲಪತಿಗಳ ನಿಯಮಬಾಹಿರ ಹೇಳಿಕೆ

ಪ್ರೊ.ಅಂಬಳಿಕೆ ಹಿರಿಯಣ್ಣ ಅವರನ್ನು ಕೆಲವರು ಸಜ್ಜನರು, ಪ್ರಾಮಾಣಿಕರು ಎಂದು ಹೇಳುತ್ತಾರೆ. ಆದರೆ ಜಾನಪದ ವಿವಿಯಲ್ಲಿ ನಡೆದ ಹಗರಣಗಳನ್ನು ನೋಡುತ್ತಿದ್ದರೆ ಇವರ ಸಜ್ಜನಿಕೆ- ಪ್ರಾಮಾಣಿಕತೆ ಯಾವ ಬಗೆಯದು ಎಂದು ಅರಿವಾಗುತ್ತದೆ. ಮೇಲೆ ವಿವರಿಸಿದಂತೆ ಶ್ವೇತ ಅವರ ಆಯ್ಕೆಯ, ಅಕ್ರಮ ಸ್ಪಷ್ಟವಾಗಿದ್ದರೂ, ಹಿರಿಯಣ್ಣ ಅವರು ಪತ್ರಿಕೆಯೊಂದಕ್ಕೆ 'ಕುಲಸಚಿವರ ನೇತೃತ್ವದಲ್ಲಿ ಈ ನೇಮಕಾತಿ ನಡೆದಿತ್ತು, ತಾತ್ಕಾಲಿಕ ಹುದ್ದೆ ಆದ್ದರಿಂದ ನಾನು ಹೆಚ್ಚಿನ ಗಮನ ನೀಡಿರಲಿಲ್ಲ, ಶ್ವೇತ ಒಬ್ಬ ಉತ್ತಮ ಕಲಾವಿದರು, ನಾಟ್ಯದಲ್ಲೂ ಪರಿಣಿತರು, ಉತ್ತಮ ಬೋಧನಾ ಕೌಶಲ್ಯವೂ ಅವರಿಗೆ ಇದೆ. ಹೀಗಾಗಿ ಸಂದರ್ಶಕರು ಸಾಮೂಹಿಕವಾಗಿ ಅವರ ಆಯ್ಕೆಗೆ ನಿರ್ಧರಿಸಿರಬಹುದು. ಸಂದರ್ಶನಕ್ಕೆ 400 ಅಂಕ ನಿಗದಿಪಡಿಸಿದ್ದ ಕುರಿತು ನನಗೆ ಮಾಹಿತಿ ಇಲ್ಲ' ಎಂದಿದ್ದಾರೆ. ಇದು ವಿವಿಯ ಕುಲಪತಿಗಳೊಬ್ಬರು ನೀಡುವ ಹೇಳಿಕೆಯೆ? ಇಷ್ಟು ಬೇಜವಾಬ್ದಾರಿ ಹೇಳಿಕೆ ನೀಡುವುದು ಕುಲಪತಿ ಹುದ್ದೆಗೆ ಗೌರವವೆ? ಶ್ವೇತ ಅವರನ್ನು ಕಾನೂನುಬಾಹಿರವಾಗಿ ಆಯ್ಕೆ ಮಾಡಿದ್ದರೂ ಅದನ್ನು ಕುಲಪತಿಗಳು ಸಮರ್ಥನೆ ಮಾಡಿಕೊಂಡಿರುವುದು ನೀಚತನದ್ದು.

ಶ್ವೇತ ಕಲಾವಿದೆಯಾಗಿದ್ದರೆ, ನೃತ್ಯಪಟುವಾಗಿದ್ದರೆ ಕಲೆಯನ್ನು ಗೌರವಿಸಿ ವಿವಿಯಲ್ಲಿ ಒಂದು ಕಾರ್ಯಕ್ರಮ ಕೊಡಿಸಲಿ, ಆದರೆ ಪಾಠ ಮಾಡಬೇಕಾದ ಉಪನ್ಯಾಸಕ ಹುದ್ದೆಯ ಆಯ್ಕೆಯ ಪ್ರಕ್ರಿಯೆಯಲ್ಲಿ ಶ್ವೇತ ಅವರು ನೃತ್ಯ ಮಾಡುವ ಕಾರಣಕ್ಕೆ ಆಯ್ಕೆ ಮಾಡಲು ಯುಜಿಸಿಯಲ್ಲಿ ಯಾವ ನಿಯಮವಿದೆ? ಅಷ್ಟಕ್ಕೂ ವಿವಿಯೇನು ರಾಜಾಸ್ಥಾನವೆ ನೃತ್ಯಪಟುವೊಬ್ಬರನ್ನು ಆಯ್ಕೆ ಮಾಡಿಕೊಂಡು ಸಮರ್ಥಿಸಿಕೊಳ್ಳಲು? ಕುಲಪತಿಗಳು ಸಂದರ್ಶನಕ್ಕೆ 400 ಅಂಕ ನಿಗದಿಯಾದದ್ದರ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದಿದ್ದಾರೆ. ಹಾಗಾದರೆ ವಿವಿಯ ಉನ್ನತಾಧಿಕಾರ ಕುಲಪತಿಗಳಿಗಲ್ಲದೆ ಬೇರೆ ಯಾರಿಗಿದೆ? ಪ್ರತಿಯೊಂದನ್ನು ಅಂತಿಮವಾಗಿ ಪರಿಶೀಲಿಸಿ ಒಪ್ಪಿಗೆ ಕೊಡುವುದು ಕುಲಪತಿಯಲ್ಲವೆ? ಹೀಗಿದ್ದು ತಮಗೆ ಮಾಹಿತಿ ಇಲ್ಲ ಎನ್ನುವ ಮಾತೆ ಅನುಮಾನಕ್ಕೆ ಎಡೆಮಾಡುವಂತಿದೆ ಅಥವಾ ಈಗ ನಡೆದಿರುವ ನಿಯಮಬಾಹಿರ ನಡೆಗಳೆಲ್ಲವೂ ಕುಲಪತಿಗಳ ಗಮನಕ್ಕೆ ಬರದೆ ನಡೆದವುಗಳೇ? ಇದು ನಿಜವಾದಲ್ಲಿ ಕುಲಪತಿಗಳನ್ನು ನಿಯಂತ್ರಿಸುವ ವಿವಿಯೊಳಗಿನ ಶಕ್ತಿಗಳು ಯಾವುವು ಎನ್ನುವ ಪ್ರಶ್ನೆಯೂ ಕಾಡುತ್ತದೆ. ಈ ಮಾತು ಕಾನೂನುಬಾಹಿರ ಎನ್ನುವುದು ಸ್ಪಷ್ಟವಾಗುತ್ತದೆ.

ಮಾಧ್ಯಮಕ್ಕೆ ನೀಡಿದ ಮತ್ತೊಂದು ಕುಲಪತಿಗಳ ಮಾತು 'ಮೂರು ವರ್ಷಗಳ ಕೂಸಾಗಿರುವ ಜಾನಪದ ವಿವಿಯು ಮೇಲ್ಮಟ್ಟಕ್ಕೆ ಬೆಳೆಯಬೇಕಿದೆ. ಇಂತಹ ಸಂದರ್ಭದಲ್ಲಿ ಹೀಗೆ ಆರೋಪ ಮಾಡಿರುವ ಒಬ್ಬ ವ್ಯಕ್ತಿ ಆಯ್ಕೆಯಾಗಿದ್ದಾರೆ, ಆದರೂ ಹೀಗೇಕೆ ಮಾಹಿತಿ ಕೊಟ್ಟರು ಎನ್ನುವುದು ಅರ್ಥವಾಗುತ್ತಿಲ್ಲ' ಎನ್ನುತ್ತಾರೆ. ಸದ್ಯಕ್ಕೆ ಕೆಲವು ಹುದ್ದೆಗಳಿಗೆ ಸಂದರ್ಶನ ನಡೆದದ್ದು ಬಿಟ್ಟರೆ ಬೇರೆ ಪ್ರಕ್ರಿಯೆಗಳು ನಡೆದಿಲ್ಲ. ಸಂದರ್ಶನದ ನಂತರ ಅಂತಿಮ ಆಯ್ಕೆ ಪಟ್ಟಿ ಸಿದ್ಧಪಡಿಸಿ ಇದಕ್ಕೆ ಸಿಂಡಿಕೇಟ್ ಒಪ್ಪಿಗೆ ಪಡೆದು, ಅಂತಿಮವಾಗಿ ಸರಕಾರದ ಅನುಮತಿ ನೀಡಿದ ಮೇಲೆ, ಆಯ್ಕೆಯಾದವರ ಪಟ್ಟಿ ಸಾರ್ವಜನಿಕವಾಗುತ್ತದೆ. ಆದರೆ ಇದಾವುದೂ ನಡೆಯದೆ ಕುಲಪತಿಗಳು ಏಕಪಕ್ಷೀಯವಾಗಿ 'ಒಬ್ಬ ವ್ಯಕ್ತಿ ಆಯ್ಕೆಯಾಗಿದ್ದಾರೆ' ಎಂದು ಹೇಳುವುದು ಹೇಗೆ ಸಾಧ್ಯ? ಹೀಗೆ ಹೇಳುತ್ತಾರೆಂದರೆ ಸಂದರ್ಶನವಾದ ಎಲ್ಲಾ ಹುದ್ದೆಗಳ ಆಯ್ಕೆಯನ್ನೂ ಕುಲಪತಿಗಳು ಅಂತಿಮಗೊಳಿಸಿದ್ದಾರೆಂದು ಅರ್ಥವೆ? ಹಾಗಿದ್ದಲ್ಲಿ ಮೊದಲೆ ನಿರ್ಧರಿಸಿದ ಆಯ್ಕೆಗಳಲ್ಲಿ ಭ್ರಷ್ಟಾಚಾರ ನಡೆದಿಲ್ಲ ಎಂದು ಹೇಳುವುದಾದರೂ ಹೇಗೆ? ಇಲ್ಲಿ ಕುಲಪತಿಗಳ ಮಾತೇ ಆಯ್ಕೆ ಪ್ರಕ್ರಿಯೆಯ ಬಗ್ಗೆ ಅನುಮಾನಗಳನ್ನು ದಟ್ಟಗೊಳಿಸುತ್ತದೆ.

ಸಂದರ್ಶನಕರಲ್ಲಿ ವಿವಿ ಘೋಷಿತ ಡೀನ್

ಸಂದರ್ಶನದಲ್ಲಿ ಡಾ.ಕೆ.ಪ್ರೇಮಕುಮಾರ್ ಇದ್ದಾರೆ. ಇವರು ಕನ್ನಡ ವಿಶ್ವವಿದ್ಯಾಲಯದಿಂದ ನಿಯೋಜನೆ ಮೇರೆಗೆ ಜಾನಪದ ವಿಶ್ವವಿದ್ಯಾಲಯದಲ್ಲಿ ಹಿರಿಯ ಸಂಶೋಧನ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಆತನಕ ಜಾನಪದ ಕುರಿತಂತೆ ಒಂದು ಲೇಖನವನ್ನೂ ಬರೆಯದ ಪ್ರೇಮಕುಮಾರ್ ಅವರನ್ನು ಜಾನಪದ ಕುರಿತ ಸಂಶೋಧನಾ ಯೋಜನೆಗಳ ನಿರ್ವಹಣೆಗೆ ಅದೇಗೆ ಇವರನ್ನು ಹಿರಿಯ ಅಧಿಕಾರಿಯನ್ನಾಗಿ ಮಾಡಿದರೋ ಕುಲಪತಿಗಳೇ ಹೇಳಬೇಕು. ಹೀಗೆ ಸಂಶೋಧನೆಯ ಅನುಭವದಲ್ಲಿ ಜೀರೋ ಆಗಿರುವ ಇವರು ಅದು ಹೇಗೆ ದೂರದೃಷ್ಟಿಯುಳ್ಳ ಸಂಶೋಧನಾ ಯೋಜನೆಗಳನ್ನು ರೂಪಿಸುತ್ತಾರೆ? ಇವರ ಆಯ್ಕೆಯಾದ ಹೊತ್ತಲ್ಲೆ ಇದರ ವಿರುದ್ಧ ಕರ್ನಾಟಕದ ಜಾನಪದ ವಿದ್ವಾಂಸರು ಧ್ವನಿ ಎತ್ತಬೇಕಾಗಿತ್ತು. ಆದರೆ ಯಾವೊಬ್ಬ ಜಾನಪದ ವಿದ್ವಾಂಸರೂ ಪ್ರೇಮಕುಮಾರ್ ಆಯ್ಕೆಯ ವಿರುದ್ಧ ಧ್ವನಿ ಎತ್ತಲಿಲ್ಲ.

ಇದರ ಪರಿಣಾಮ ಪ್ರೇಮಕುಮಾರ್ ಅವರು ಜಾನಪದ ಭಾಷಾಂತರ ಕೇಂದ್ರದ ನಿರ್ದೇಶಕರಾಗುತ್ತಾರೆ. ಅಂತೆಯೇ ಒಂದು ದಿನದ ಬೋಧನ/ಸಂಶೋಧನ ಅನುಭವವಿಲ್ಲದ ಇವರು ಪ್ರೊಫೆಸರ್ ಕೂಡ ಆಗುತ್ತಾರೆ. ಮುಂದುವರಿದು ಮುಖ್ಯಸ್ಥರಾಗುತ್ತಾರೆ, ಸಾಮಾನ್ಯ ಜಾನಪದ ವಿಜ್ಞಾನದ ಡೀನ್ ಆಗಿದ್ದಾರೆ. ಆದರೆ ಸಾಮಾನ್ಯ ಜಾನಪದದಲ್ಲಿ ಜಾನಪದ ವಿಜ್ಞಾನ, ಜಾನಪದ ಸಾಹಿತ್ಯ ಎನ್ನುವ ಎರಡು ವಿಷಯಗಳಿವೆ. ಆದರೆ ಪ್ರೇಮಕುಮಾರ್ ಈ ಯಾವ ವಿಷಯದಲ್ಲಿ ಪ್ರೊಫೆಸರ್? ಎನ್ನುವುದು ನಿಗೂಢವಾಗಿಯೇ ಉಳಿದಿದೆ. ಹಿಂದಿ ಎಂ.ಎ ಮಾಡಿರುವ ಇವರು ಈ ಎರಡೂ ವಿಷಯಕ್ಕೂ ಪ್ರೊಫೆಸರ್ ಆಗಲು ಬರುವಂತಿಲ್ಲ, ಹಾಗಾದರೆ ಜನರಲ್ ಫೋಕ್ ಲೋರ್ ಫ್ಯಾಕಲ್ಟಿಯ ಡೀನ್ ಹೇಗೆ ಆದರು? ಇಷ್ಟೇ ಅಲ್ಲದೆ ಡೀನ್ ಆದಕಾರಣ ಇವರು ಸಿಂಡಿಕೇಟ್ ಸದಸ್ಯರೂ ಆಗುತ್ತಾರೆ. ಇಷ್ಟೆಲ್ಲಾ ನಡೆದಿರುವುದು



...ೂರು ವರ್ಷಗಳ ಅವಧಿಯಲ್ಲಿ ಎಂದರೆ ನೀವು ...ಬಲೇಬೇಕು.

ಈ ಆಯ್ಕೆಗಳಿಗೆ ಸರಕಾರ ಅನುಮೋದನೆಯನ್ನೆ ನೀಡಿಲ್ಲ, ...ಲ್ಲಾ ಕುಲಪತಿಗಳ ಸಮ್ಮುಖದಲ್ಲಿ ವಿವಿಯ ಆವರಣದಲ್ಲಿ ...ದ ಅನುಮೋದನೆಗಳು ಮಾತ್ರ. ಇಷ್ಟಾಗಿಯೂ ...ದರ್ಶನ ಕಮಿಟಿಯಲ್ಲಿ ಪ್ರೇಮಕುಮಾರ್ ಕುಳಿತಿದ್ದಾರೆ. ...ಪಿ ಈ ಒಟ್ಟಾರೆ ಬೋಧಕ/ಬೋಧಕೇತರ ಸಿಬ್ಬಂದಿಯ ...ಯ್ಕೆಯ ವಿಷಯದಲ್ಲಿ ವಿವಿ ಕೈಗೊಂಡ ದೊಡ್ಡ ಅಪರಾಧ. ...ಕಾರ ಅನುಮೋದಿಸದ ಪ್ರೊಫೆಸರ್/ಡೀನ್/ಸಿಂಡಿಕೇಟ್ ...ಸ್ಯರು ಆಯ್ಕೆ ಕಮಿಟಿಗೆ ಹೇಗೆ ಬರುತ್ತಾರೆ? ಯಾವ ...ು.ಜಿ.ಸಿ ನಿಯಮದಲ್ಲಿ ಇದನ್ನು ಹೇಳುತ್ತದೆ? ಮತ್ತೆ ...ತ್ತೆ ಪ್ರಾಮಾಣಿಕತೆ/ಪಾರದರ್ಶಕತೆ ಬಗ್ಗೆ ಮಾತನಾಡುವ ...ಬಳಿಕೆ ಹಿರಿಯಣ್ಣ ಅವರು ಈ ಪ್ರಕ್ರಿಯೆಯ ಬಗ್ಗೆ ...ನವಾಗಿದ್ದಾರೆ ಯಾಕೆ? ಇದೊಂದೇ ಕಾರಣದಿಂದಲೇ ...ೀ ಆಯ್ಕೆ ಪ್ರಕ್ರಿಯೆಯೇ ಅಸಿಂಧುವಾಗುತ್ತದೆ.

ತರಾತುರಿ ಗೊಂದಲದ ಪರೀಕ್ಷೆ

...ಬೋಧಕೇತರ ಸಿಬ್ಬಂದಿ ಆಯ್ಕೆಗೆ ಜಾನಪದ ...ವಿದ್ಯಾಲಯವು 14.09.2014 ರಂದು ಲಿಖಿತ ಪರೀಕ್ಷೆ ...ಸಿತು. ಈ ಪರೀಕ್ಷೆ ಎಷ್ಟು ತರಾತುರಿಯಲ್ಲಿ ನಡೆಯಿತು ...ದರೆ ಇದು ಜಾನಪದ ವಿವಿಯ ಅವ್ಯವಸ್ಥೆ-ಭ್ರಷ್ಟಾಚಾರಕ್ಕೆ ...ತಿ ಹಿಡಿಯುವಂತಿದೆ. ಅಂತೆಯೇ ಈ ನಿಯಮಬಾಹಿರ ...ೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ಆಯ್ಕೆಯನ್ನು ...ಡಿದ್ದಾದಲ್ಲಿ ಅದು ನಿಸ್ಸಂಶಯವಾಗಿ ಕಾನೂನುಬಾಹಿರ ...ಯ್ಕೆಯೇ ಆಗಿರುತ್ತದೆ.

...ಸರ್ಕಾರದ ಆದೇಶ ಸಂಖ್ಯೆ:ಇಡಿ 251 ಯುಎನ್‌ಇ ...11, ಬೆಂಗಳೂರು, ದಿನಾಂಕ:16.04.2013. (ii) ...ರ್ಕಾರದ ಪತ್ರ ಸಂಖ್ಯೆ: ಇಡಿ 96 ಯುಆರ್‌ಸಿ 2012, ...ಾಂಕ:03.05.2013. (iii) ಸಿಂಡಿಕೇಟ್ ನಿರ್ಣಯ ...ಖ್ಯೆ: 2, ದಿನಾಂಕ:28.05.2013. ಈ ಉಲ್ಲೇಖದ ...ೀಧಕೇತರ ಹುದ್ದೆಗಳ ಅಧಿಸೂಚನೆಯಲ್ಲಿ ಆಡಳಿತ ...ಾಗದ ಹುದ್ದೆಗಳನ್ನು ಸಂದರ್ಶನದ ಮೂಲಕ ನೇರ ...ಯ್ಕೆ ಮಾಡುವುದಾಗಿ ತಿಳಿಸಿದೆ. ಆದರೆ ಮರು ...ಸೂಚನೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ...ುಮೋದನೆ ಸಂಖ್ಯೆ: ಬೋಧಕೇತರ/ಇಡಿ 153 ...ಎನ್‌ಇ, 2014, ದಿನಾಂಕ:23.04.2014, ಮಾನ್ಯ ...ಪತಿಯವರ ಅನುಮೋದನೆ ಕಂಡಿಕೆ ಸಂಖ್ಯೆ: 36, ...ಾಂಕ:29.04.2014 ರಲ್ಲಿ ಆಯ್ಕೆ ವಿಧಾನಕ್ಕೆ ...ಂಧಿಸಿದಂತೆ ಕ್ರಸಂ. 10 ರಿಂದ 15 ರವರಗಿನ ...ದ್ದೆಗಳ ಅಂದರೆ, ಸಹಾಯಕ ಕುಲಸಚಿವ, ಅಧೀಕ್ಷಕರು, ...ಮ ದರ್ಜೆ ಸಹಾಯಕರು, ಲೆಕ್ಕ ಸಹಾಯಕರು, ಕಿರಿಯ ...ಯಕರ, ಡಿ.ಟಿ.ಪಿ ಆಪರೇಟರ್ ಹುದ್ದೆಗಳಿಗೆ ಪ್ರವೇಶ ...ೀಕ್ಷೆ ನಡೆಸಲಾಗುವುದು ಎಂದು ಮಾತ್ರ ಹೇಳಲಾಗಿದೆ. ...ಪರೀಕ್ಷೆ ನಡೆಸುವುದಾಗಿ ತಿಳಿಸಿದ ಅಧಿಸೂಚನೆ ...ಂದಿಗೇ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ...ರ್ಥಿಗಳಿಗೆ ತಿಳಿಸಬೇಕಾಗುತ್ತದೆ. ಆದರೆ ಪ್ರವೇಶ ಪರೀಕ್ಷೆಗೆ ...ಂಧಿಸಿದಂತೆ ಯಾವುದೇ ಮಾಹಿತಿ ಅಧಿಸೂಚನೆಯಲ್ಲಿ ... ಹಾಗಾದಲ್ಲಿ ಉದ್ಯೋಗಾಕಾಂಕ್ಷಿಗಳು ಯಾವ ...ಯಲ್ಲಿ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಬೇಕು? ಅದೇನು ...ಕ ಪರೀಕ್ಷೆಯೋ? ಮಾನಸಿಕ ಪರೀಕ್ಷೆಯೋ? ಲಿಖಿತ ...ಕ್ಷೆಯೋ? ಮೌಖಿಕ ಪರೀಕ್ಷೆಯೋ? ಯಾವುದೂ ಅಧಿಸೂಚನೆಯಲ್ಲಿ ತಿಳಿಯುವುದಿಲ್ಲ, ಅಷ್ಟಾಗಿಯೂ ...ತ ಪರೀಕ್ಷೆ ಎಂದು ಅಭ್ಯರ್ಥಿಗಳು ಭಾವಿಸಿ ...ದಾಗಲೂ, ಯಾವ ಪಠ್ಯಕ್ರಮವನ್ನು ಅನುಸರಿಸಬೇಕು? ...ದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಪರೀಕ್ಷೆಯ ...ಯ, ಅಂಕ, ಪಠ್ಯಕ್ರಮ, ಮಾದರಿ ಪ್ರಶ್ನೆ ಪತ್ರಿಕೆಯನ್ನು ...ಕ್ಷೆಗೆ ಕನಿಷ್ಠ ಎರಡು ತಿಂಗಳು ಮೊದಲೆ ಕೊಡುವುದು ...ಮ. ಸರಕಾರದ ವೃಂದ ನೇಮಕಾತಿಯಲ್ಲಿ ಈ ...ಮವನ್ನು ಕಡ್ಡಾಯವಾಗಿ ಪಾಲಿಸಲಾಗುತ್ತದೆ. ಆದರೆ ...ಪದ ವಿಶ್ವವಿದ್ಯಾನಿಲಯ ಈ ನಿಯಮವನ್ನು ಉಲ್ಲಂಘಿಸಿ ...ಕ್ಕೆ ಮಾಹಿತಿಗಳನ್ನು ಗೌಪ್ಯವಾಗಿಟ್ಟ ಹಿನ್ನೆಲೆ ಯಾವುದು? ...ದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನಡೆಯದ ...ಕ್ಷೆಯೂ ನಿಯಮಬಾಹಿರವಾಗಿದೆ.

...ಮರು ಅಧಿಸೂಚನೆಯಲ್ಲಿ ಮೊದಲ ಅಧಿಸೂಚನೆಯ ಅನ್ವಯ ಅರ್ಜಿ ಸಲ್ಲಿಸುವವರು ಮರು ಅರ್ಜಿ ಸಲ್ಲಿಸುವ ಹಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ಮರು ಅಧಿಸೂಚನೆಯಲ್ಲಿ ಹೊಸದಾಗಿ ಸೇರ್ಪಡೆಯಾದ ಕ್ರಸಂ.10 ರಿಂದ 15 ರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದವರಿಗೆ ಪ್ರವೇಶ ಪರೀಕ್ಷೆ ಇರುವ ಬಗ್ಗೆ ಯಾವುದೇ ಮಾಹಿತಿಯನ್ನು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಾಗಲಿ, ವೈಯಕ್ತಿಕವಾಗಿ ಅರ್ಹ ಅಭ್ಯರ್ಥಿಗಳಿಗೆ ಪತ್ರದ ಮೂಲಕವಾಗಲಿ ಮಾಹಿತಿಯು ರವಾನೆಯಾಗಿಲ್ಲ. ಈ ಕ್ರಮ ಒಟ್ಟಾರೆ ಉದ್ಯೋಗ ಆಯ್ಕೆ ಪ್ರಕ್ರಿಯೆಯು ಪಾರದರ್ಶಕವಾಗಿಲ್ಲ ಎನ್ನುವುದನ್ನು ಎತ್ತಿ ತೋರಿಸುತ್ತದೆ. ಅಂತೆಯೇ ವಿಶ್ವವಿದ್ಯಾಲಯ ಅಭ್ಯರ್ಥಿಗಳ ಬದುಕಿನಲ್ಲಿ ಆಟವಾಡುವಂತೆ ಕಾಣುತ್ತಿದೆ.

ಕ್ರಸಂ.10 ರಿಂದ 15 ರ ಹುದ್ದೆಗಳ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ.ಡಿ.ಬಿ.ನಾಯಕ ಅವರು ಅಧಿಕೃತ ಪ್ರಕಟಣೆಯಲ್ಲಿ 05.09.2014 ರಂದು ವಿವಿಯ ಅಂತರ್ಜಾಲ ತಾಣದಲ್ಲಿ ಪ್ರಕಟಿಸಿ ಪರೀಕ್ಷೆ 14.09.2014 ರಂದು ಇರುವುದಾಗಿ ತಿಳಿಸಿದೆ. ಅಂದರೆ ಕುಲಸಚಿವರ ಅಧಿಕೃತ ಪ್ರಕಟಣೆಯ ದಿನಾಂಕದಿಂದ ಪರೀಕ್ಷಾ ದಿನಾಂಕಕ್ಕೆ ಇರುವ ಅಂತರ ಕೇವಲ 9 ದಿನಗಳು ಮಾತ್ರ. ನೋಂದಣಿ ಅಂಚೆ ಮೂಲಕ ಪರೀಕ್ಷೆಯ ಪ್ರವೇಶ ಪತ್ರ ತಲುಪಲು ಅಭ್ಯರ್ಥಿಗೆ ಕನಿಷ್ಠ ಮೂರರಿಂದ ನಾಲ್ಕು ದಿನಗಳು ಬೇಕಾಗುತ್ತದೆ. ಅಂದರೆ ಅಭ್ಯರ್ಥಿಗೆ ಪರೀಕ್ಷೆ ತಯಾರಿಗೆ ಉಳಿದದ್ದು ಕೇವಲ ನಾಲ್ಕರಿಂದ ಐದು ದಿನಗಳು ಮಾತ್ರ. ಕುಲಸಚಿವರ ಪರೀಕ್ಷೆಯ ಅಧಿಕೃತ ಪ್ರಕಟಣೆಯ ನಂತರ 9 ದಿನದಲ್ಲಿ ಪರೀಕ್ಷೆ ನಡೆಯುವುದಾಗಿ ತಿಳಿಸಲಾಗಿದೆ. ಇಷ್ಟು ತರಾತುರಿಯಲ್ಲಿ ಪರೀಕ್ಷೆ ನಡೆಸುವುದರ ಹಿಂದಿರುವ ಉದ್ದೇಶವಾದರೂ ಏನು? ಇದು ಆಯ್ಕೆ ಪ್ರಕ್ರಿಯೆಯ ಬಗ್ಗೆ ಅನುಮಾನಗಳನ್ನು ಹುಟ್ಟಿಸುತ್ತಿದೆ.

ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ ಪರೀಕ್ಷಾ ಮಂಡಳಿ ಮತ್ತು ಪರೀಕ್ಷಾ ಪಠ್ಯಕ್ರಮ ಸಮಿತಿಯನ್ನು ರಚಿಸಬೇಕಾಗುತ್ತದೆ. ಮತ್ತು ಅದನ್ನು ಅಂತರ್ಜಾಲದಲ್ಲಿ ಎಲ್ಲರಿಗೂ ಲಭ್ಯವಾಗುವಂತೆ ಪಾರದರ್ಶಕತೆಯನ್ನು ತೋರಬೇಕಾಗುತ್ತದೆ. ಕಾಲೇಜು ಶಿಕ್ಷಣ ಇಲಾಖೆಯು ಈ ನಿಯಮವನ್ನು ಚಾಚೂತಪ್ಪದೆ ಪಾಲಿಸುತ್ತಿದೆ. ಆದರೆ ಜಾನಪದ ವಿಶ್ವವಿದ್ಯಾನಿಲಯವು ಪರೀಕ್ಷಾ ಮಂಡಳಿಯ ಬಗೆಗಾಗಲಿ, ಪಠ್ಯಕ್ರಮ ಸಮಿತಿಯನ್ನಾಗಲಿ ಮಾಡಿದಂತಿಲ್ಲ. ಕಾರಣ ಇದರ ಯಾವುದೇ ಮಾಹಿತಿ ವಿವಿಯ ಅಂತರ್ಜಾಲ ತಾಣದಲ್ಲಿ ಲಭ್ಯವಿಲ್ಲ. ಉನ್ನತ ಶಿಕ್ಷಣ ಸಚಿವಾಲಯವು ಬೋಧಕೇತರ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ 23 ಏಪ್ರಿಲ್ 14 ರಂದು ರವಾನಿಸಿದ ಅನುಮೋದನೆಯಲ್ಲಿ ಲಿಖಿತ ಪರೀಕ್ಷೆಯ ಕುರಿತು ಸ್ಪಷ್ಟವಾದ ಉಲ್ಲೇಖವೇ ಇಲ್ಲ. ಇದು ಇಡೀ ಪರೀಕ್ಷಾ ಕ್ರಮದ ಬಗ್ಗೆಯೇ ಅನುಮಾನ ಮೂಡುವಂತೆ ಮಾಡಿದೆ. ಪರೀಕ್ಷೆ ಬರೆಯಬೇಕಾದ ಅಭ್ಯರ್ಥಿಗಳಿಗೆ ನೀಡಿದ ಪ್ರವೇಶ ಪತ್ರದಲ್ಲಿ 'ಸದರಿ ಪರೀಕ್ಷೆಯಲ್ಲಿ ಪಡೆಯುವ ಅಂಕಗಳನ್ನು ಎಲ್ಲ ಹುದ್ದೆಗಳಿಗೂ ಪರಿಗಣಿಸಿ ಆಯಾ ಹುದ್ದೆಯ ಆದ್ಯತಾ ಪಟ್ಟಿ ಸಿದ್ಧಪಡಿಸಲಾಗುತ್ತದೆ' ಎಂದಿದೆ. ಆದರೆ ಈ ಬಗೆಯ ಯಾವುದೇ ಆದ್ಯತಾ ಪಟ್ಟಿಯನ್ನು ಸಿದ್ಧಪಡಿಸದೆ ಪರೀಕ್ಷೆಗೆ ಹಾಜರಾದ ಎಲ್ಲರನ್ನೂ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ.

ಹೀಗೆ ಎಲ್ಲರನ್ನೂ ಸಂದರ್ಶನಕ್ಕೆ ಆಯ್ಕೆ ಮಾಡುವುದಾಗಿದ್ದರೆ ಪರೀಕ್ಷೆ ನಡೆಸುವ ಅಗತ್ಯವಾದರೂ ಏನಿತ್ತು? ಪರೀಕ್ಷೆಯ ಅಂಕಪಟ್ಟಿಯನ್ನು ಯಾಕೆ ಸಂದರ್ಶನ ನಡೆದರೂ ಬಹಿರಂಗಪಡಿಸಿಲ್ಲ, ಪರೀಕ್ಷೆಗೂ ಮುಂಚೆ ಪರೀಕ್ಷೆಯಲ್ಲಿ ಪಡೆದ ಅಂಕ ಮತ್ತು ಸಂದರ್ಶನದಲ್ಲಿ ಪಡೆದ ಅಂಕವನ್ನು ಒಟ್ಟಾಗಿಸಿ ಆಯ್ಕೆ ಮಾಡಲಾಗುವುದು ಎಂದು ಎಲ್ಲಿಯೂ ಹೇಳಿಲ್ಲ, ಹೀಗೆ ಈ ಇಡೀ ಪರೀಕ್ಷೆಯ ನಿಯಮಾವಳಿಗಳೆ ಬೇಕಾಬಿಟ್ಟಿಯಾಗಿವೆ. ತಮಗೆ ಬೇಕಾದವರಿಗೆ ಹೆಚ್ಚಿನ ಅಂಕ ನೀಡಿ ಆಯ್ಕೆ ಮಾಡುವ ಹುನ್ನಾರಕ್ಕೆ ಇಡೀ ಈ ಪರೀಕ್ಷೆಯನ್ನು ದಾಳವನ್ನಾಗಿ ಬಳಸಿಕೊಳ್ಳಲಾಗಿದೆ. ಪರೀಕ್ಷೆಗೆ ಸಂಬಂಧಿಸಿದ ಈ ಎಲ್ಲಾ ಮಾಹಿತಿ ಜಾನಪದ ವಿಶ್ವವಿದ್ಯಾಲಯ ವೆಬ್‌ಸೈಟಿನಲ್ಲಿ ಅಪ್‌ಲೋಡ್ ಮಾಡಿದ ಮಾಹಿತಿಯನ್ನು ಆಧರಿಸಿದೆ.

ಇಷ್ಟಾಗಿಯೂ ಕುಲಪತಿಗಳು ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿದೆ ಎಂದು ಹೇಳಿಕೆ ನೀಡುತ್ತಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ.

ಅಧಿಸೂಚನೆ ದುರ್ಬಳಕೆ

ಜಾನಪದ ಅಧ್ಯಯನಕ್ಕೆಂದೇ ಆರಂಭವಾದ ವಿಶ್ವವಿದ್ಯಾಲಯವಿದು. ಆದರೆ ಬೋಧಕ ಸಿಬ್ಬಂದಿ ಆಯ್ಕೆಯಲ್ಲಿ ಅಧಿಸೂಚನೆಯನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಜಾನಪದ ವಿಜ್ಞಾನ/ಸಾಹಿತ್ಯ ವಿಭಾಗದ ಅಧ್ಯಾಪಕ ಹುದ್ದೆಗಳಿಗೆ ಜಾನಪದ ಎಂ.ಎ ಜತೆ, ಕನ್ನಡ, ಹಿಂದಿ, ಇಂಗ್ಲಿಷ್, ಮಾನವಶಾಸ್ತ್ರ ಸಮಾಜಶಾಸ್ತ್ರವನ್ನು ಸಮಾನಾಂತರವಾಗಿ ಪರಿಗಣಿಸಲಾಗಿದೆ. ಆಗ ಇದರ ವಿರುದ್ಧ ಜಾನಪದ ವಿದ್ವಾಂಸರು/ವಿದ್ಯಾರ್ಥಿಗಳು ಧ್ವನಿ ಎತ್ತಿದ್ದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಯು.ಜಿ.ಸಿಯ ಬೋಧಕ/ಬೋಧಕೇತರ ಹುದ್ದೆಗಳ ಕನಿಷ್ಠ ಅರ್ಹತಾ ಕಾಯ್ದೆ 2010 ರ ಪ್ರಕಾರ ಆಯಾ ವಿಷಯದ ಬೋಧನೆಗೆ ಆಯಾ ವಿಷಯದಲ್ಲಿ (concerned/allied/relevant) ಸ್ನಾತಕೋತ್ತರ ಪದವಿ ಪಡೆದವರನ್ನು ಪರಿಗಣಿಸಬೇಕಾಗಿ ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ಈ ಬಗ್ಗೆ ಕುಲಪತಿಗಳು ಜಾನಪದ ಒಂದು ಅಂತರ್ ಶಿಸ್ತೀಯ ಅಧ್ಯಯನವಾದ್ದರಿಂದ ಬೇರೆ ಬೇರೆ ಎಂ.ಎ.ಗಳನ್ನು ಸಮಾನಾಂತರ ಎಂದು ಪರಿಗಣಿಸಿರುವುದಾಗಿಯೂ ಜಾನಪದ ಪದವಿಗೆ ಆದ್ಯತೆ ಕೊಡುವುದಾಗಿಯೂ ಹೇಳಿಕೆ ನೀಡಿದ್ದರು.

ಜಾನಪದ ಅಧ್ಯಯನ ಒಂದು ಅಂತರ್ ಶಿಸ್ತೀಯ ಅಧ್ಯಯನ ಎನ್ನುವುದನ್ನು ಎಲ್ಲರೂ ಒಪ್ಪಲೇಬೇಕಾದ ಸಂಗತಿ. ಹಾಗಾಗಿ ಜಾನಪದ ವಿವಿಯಲ್ಲಿ 'ಜಾನಪದ ಅಂತರ್ ಶಿಸ್ತೀಯ ಅಧ್ಯಯನ ಕೇಂದ್ರ'ವನ್ನು ತೆರೆದು ಅಲ್ಲಿ ಯಾವುದೇ ಶಿಸ್ತಿಯ ಅಧ್ಯಾಪಕರನ್ನು ನೇಮಿಸುವುದು ನ್ಯಾಯವಾಗಿದೆ. ಈ ನೆಲೆಯಲ್ಲಿ ವಿಶ್ವವಿದ್ಯಾಲಯ ಗಂಭೀರವಾಗಿ ಆಲೋಚಿಸಬೇಕಾಗಿದೆ. ಆದರೆ ಜಾನಪದ ವಿಜ್ಞಾನ/ಸಾಹಿತ್ಯ/ಕಲೆ ವಿಷಯ ಬೋಧನೆಗೆ ಇತರೆ ಎಂ.ಎ.ಗಳನ್ನು ಸಮನಾಗಿ ಪರಿಗಣಿಸುವುದು ಯಾವ ನ್ಯಾಯ? ಜಾನಪದವನ್ನೆ ಆಳವಾಗಿ ಅಧ್ಯಯನ ಮಾಡಿದ ಎಂ.ಎ ವಿದ್ಯಾರ್ಥಿಗಳು ಮಾತ್ರ ಇದಕ್ಕೆ ಅರ್ಹರು. ಆದರೆ ತಮಗೆ ಬೇಕಾದವರನ್ನು ಸೇರಿಸಿಕೊಳ್ಳಲು ಅಧಿಸೂಚನೆಯಲ್ಲಿಯೇ ಅವಕಾಶ ಮಾಡಿಕೊಂಡಿರುವ ಬಗ್ಗೆ ಆರೋಪಗಳು ಕೇಳಿಬಂದಿದ್ದವು. ಹೀಗೆ ಅಧಿಸೂಚನೆಯನ್ನು ದುರ್ಬಳಕೆ ಮಾಡಿಕೊಂಡ ಆರೋಪವೂ ಜಾನಪದ ವಿವಿಯ ಮೇಲಿದೆ.

ಸರ್ಕಾರದ ಉತ್ತಮ ನಿರ್ಧಾರ

ಜಾನಪದ ವಿಶ್ವವಿದ್ಯಾಲಯದ ವಿಷಯದಲ್ಲಿ ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಸಚಿವಾಲಯವು ಉತ್ತಮ ನಿರ್ಧಾರವನ್ನು ಕೈಗೊಂಡಿದೆ. ಪತ್ರಿಕೆಗೆ ಸಿಕ್ಕ ಆದೇಶ ಪತ್ರವನ್ನು ಶಿಕ್ಷಣ ಇಲಾಖೆಯ (ವಿಶ್ವವಿದ್ಯಾಲಯಗಳು) ಅಧೀನ ಕಾರ್ಯದರ್ಶಿಗಳಾದ ಕೆ.ಎಲ್.ಸುಬ್ರಮಣ್ಯ ಅವರು 31 ಡಿಸೆಂಬರ್ 2014 ರಂದು ಈ ಆದೇಶವನ್ನು ಹೊರಡಿಸಿದ್ದಾರೆ. ಇದರಲ್ಲಿ ಮೂರು ಮುಖ್ಯ ದೋಷಗಳನ್ನು ತೋರಿಸಿದ್ದಾರೆ. 371(ಜೆ) ಮೀಸಲಾತಿಯನ್ನು ಅನುಸರಿಸಿಲ್ಲ, ಬೋಧಕೇತರ ಸಿಬ್ಬಂದಿಯ ಆಯ್ಕೆ ಮಾನದಂಡದಲ್ಲಿ ದೋಷವಿದೆ, ಮೀಸಲಾತಿ ಹಂಚಿಕೆಯ ವಿಷಯದಲ್ಲಿ ಸಮಾಜ ಕಲ್ಯಾಣ ಇಲಾಖೆ; ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆಯಿಂದ ಅನುಮೋದನೆ ಪಡೆದಿರುವ ಬಗ್ಗೆ ಯಾವುದೇ ದಾಖಲೆ ಒದಗಿಸಿಲ್ಲ, ಸಂದರ್ಶನದಲ್ಲಿ ಗರಿಷ್ಠ 12.5 ಅಂಕಗಳನ್ನು ನೀಡಬೇಕಾದ ನಿಯಮವನ್ನು ಪಾಲಿಸಿಲ್ಲ ಎಂದು ಹೇಳುತ್ತಾ ಈ ಸಂಗತಿಗಳಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಳ್ಳದ ಬಗ್ಗೆ ಸರಕಾರ ಉಲ್ಲೇಖಿಸಿದೆ.

ಈ ಕಾರಣಗಳನ್ನು ಮುಂದು ಮಾಡಿ ಈ ಹಿಂದೆ ಬೋಧಕ/ಬೋಧಕೇತರ ಹುದ್ದೆಗಳ ಆಯ್ಕೆಗೆ ನೀಡಿದ ಅನುಮತಿಯನ್ನು ವಾಪಾಸ್ ಪಡೆಯುವಂತೆ ಆದೇಶಿಸಲಾಗಿದೆ. ಅಂತೆಯೇ ಮರು ಪ್ರಸ್ತಾವ ಸಲ್ಲಿಸಿದಲ್ಲಿ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡುವ ಬಗ್ಗೆ ಸರಕಾರವು ಪರಿಶೀಲಿಸಲಾಗುವುದು ಎಂದು ಸ್ಪಷ್ಟವಾಗಿ ನಮೂದಿಸಿದೆ. ಈ ನಿರ್ಧಾರ ವಿವಿಯ ಕುಲಪತಿಗಳನ್ನೊಳಗೊಂಡಂತೆ ಎಲ್ಲರನ್ನೂ ನಿದ್ಗೆಡಿಸಿದೆ. ಈ ಆದೇಶವನ್ನು ಮೀರಿಯೂ ಹೇಗಾದರೂ ಮಾಡಿ ಸಂದರ್ಶನ ಆದವರಿಗೆ ನೇಮಕಾತಿ ಆದೇಶ ಕೊಡುವಂತೆ ಮಾಡಲು ಶತಾಯಗತಾಯ ಪ್ರಯತ್ನ ನಡೆದಿದೆ. ಇದಕ್ಕೆ ಸರಕಾರ ಮಣಿಯಬಾರದು. ಹಾಗೆ ಮಣಿದರೆ ಈಗಾಗಲೆ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಬೆಂಬಲಿಸಿದಂತಾಗಿ ಸರಕಾರಕ್ಕೆ ದೊಡ್ಡ ಮಟ್ಟದಲ್ಲಿ ಕಳಂಕ ಅಂಟುವ ಸಾಧ್ಯತೆ ಇದೆ. ಅಷ್ಟಕ್ಕೂ ಸ್ಪಷ್ಟವಾಗಿ ಅಧಿಸೂಚನೆಯನ್ನೇ ವಾಪಾಸ್ ಪಡೆದ ಮೇಲೆ ಈಗ ಸಂದರ್ಶನ ನಡೆದವರಿಗೆ ನೇಮಕಾತಿ ಆದೇಶ ಕೊಡುವುದು ಕೂಡ ಕಾನೂನುಬಾಹಿರವಾಗುತ್ತದೆ. ಅಂತಹ ಕೆಲಸಕ್ಕೆ ಸರ್ಕಾರ ಮುಂದಾಗುವುದಿಲ್ಲ ಎನ್ನುವುದು ಪತ್ರಿಕೆಯ ನಂಬಿಕೆ.

ಸರ್ವಾಧಿಕಾರಿ ಧೋರಣೆ

ಸರಕಾರ ಅಧಿಸೂಚನೆ ಹಿಂಪಡೆದ ಪತ್ರದಲ್ಲಿ ಒಂದು ಮುಖ್ಯ ಸಂಗತಿಯನ್ನು ಉಲ್ಲೇಖಿಸಲಾಗಿದೆ. ಅದೇನೆಂದರೆ ಉನ್ನತ ಶಿಕ್ಷಣ ಸಚಿವಾಲಯವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಪಾಲಿಸದಿರುವುದು ಕಂಡುಬಂದಿದೆ ಎಂದು ಹೇಳಲಾಗಿದೆ. ಅಂದರೆ ಸರಕಾರದ ಆದೇಶಗಳನ್ನು ಪಾಲಿಸಿಲ್ಲ ಎಂದು ಸರಕಾರವೆ ಜಾನಪದ ವಿವಿಗೆ ನೇರವಾಗಿ ಹೇಳಿದಾಗ, ಅದು ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಅರ್ಥವಲ್ಲವೆ? ಕುಲಪತಿಗಳು ಹೇಳುವ ಹಾಗೆ ಪಾರದರ್ಶಕತೆ ಇದ್ದರೆ ಸರಕಾರದ ಆದೇಶಗಳನ್ನು ಪಾಲಿಸದಿರಲು ಕಾರಣವೇನು? ಹಾಗಾದರೆ ಸರಕಾರದ ಆದೇಶವನ್ನು ಪಾಲಿಸದಿರಲು ಕುಲಪತಿಗಳೇನು ಸರ್ವಾಧಿಕಾರಿಗಳೆ? ಅಥವಾ ಉನ್ನತ ಶಿಕ್ಷಣ ಸಚಿವಾಲಯದ ಆದೇಶಗಳಿಗಿಂತಲೂ ಕುಲಪತಿಗಳು ಅತೀತರೆ? ಇಂತಹ ಹಲವು ಪ್ರಶ್ನೆಗಳನ್ನು ಈ ಆದೇಶ ಹುಟ್ಟಿಸುತ್ತಿದೆ.

ಇನ್ನು ಜಾನಪದ ವಿಶ್ವವಿದ್ಯಾಲಯದ ಈ ಎಲ್ಲಾ ಅಕ್ರಮಗಳ ಮೂಲ ಡಾ.ಪ್ರೇಮಕುಮಾರ್ ಮತ್ತು ಡಾ. ಸ.ಚಿ. ರಮೇಶ್ ಎನ್ನುವುದು ಗುಟ್ಟಾಗಿರುವ ಸಂಗತಿಯೇನೂ ಅಲ್ಲ. ಇವರಿಬ್ಬರು ಇಡೀ ವಿಶ್ವವಿದ್ಯಾಲಯವನ್ನು ತಮ್ಮ ಹದ್ದುಬಸ್ತಿನಲ್ಲಿಟ್ಟಿದ್ದಾರೆ ಎನ್ನುವುದು ಕೆಲವು ಜಾನಪದ ವಿದ್ವಾಂಸರ ಅಭಿಪ್ರಾಯ. ಅಂತೆಯೇ ಇವರ ಸರ್ವಾಧಿಕಾರಿ ಧೋರಣೆ ಹೇಗಿದೆ ಎಂದರೆ, ಸ್ವತಃ ಕುಲಪತಿಗಳಾದ ಅಂಬಳಿಕೆ ಹಿರಿಯಣ್ಣನವರೂ ಇವರನ್ನು ನಿಯಂತ್ರಿಸಲು ಅಶಕ್ತರಾಗಿದ್ದಾರೆ ಎನ್ನುವ ಮಾತುಗಳಿವೆ. ಈ ಇಬ್ಬರೂ ಜಾನಪದ ವಿವಿಯಲ್ಲಿ ಇರುವಷ್ಟು ದಿನಗಳ ಕಾಲ ಅಕ್ರಮಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ ಎನ್ನುವುದು ಜನಾಭಿಪ್ರಾಯ.

ಸರಕಾರ ತನಿಖೆ ಮಾಡಲಿ

ಇಷ್ಟೆಲ್ಲಾ ನಿಯಮಬಾಹಿರ ಕೃತ್ಯಗಳು ನಡೆದಿರುವುದರಿಂದ ಜಗತ್ತಿನ ಮೊದಲ ಜಾನಪದ ವಿಶ್ವವಿದ್ಯಾಲಯದ ಗೌರವಕ್ಕೆ ಚ್ಯುತಿ ಬಂದಿದೆ. ಈ ಎಲ್ಲಾ ನಿಯಮಬಾಹಿರ ಕೃತ್ಯಗಳ ಬಗ್ಗೆ ಸರಕಾರ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಕಾಗಿದೆ. ಇದಲ್ಲದೆ ಕಾಮಗಾರಿ, ಪುಸ್ತಕ ಪ್ರಕಟಣೆ, ಯೋಜನೆಗಳ ನಿರ್ವಹಣೆ ಮುಂತಾದವುಗಳಲ್ಲಿಯೂ ಅಕ್ರಮ-ಭ್ರಷ್ಟಾಚಾರ ನಡೆದಿರಬಹುದಾದ ಸಾಧ್ಯತೆಗಳಿವೆ. ಈ ಎಲ್ಲವುಗಳ ಬಗ್ಗೆ ಮಾಹಿತಿ ಹಕ್ಕಿನಡಿ ದಾಖಲೆಗಳನ್ನು ಪಡೆದಲ್ಲಿ ಅದರ ಒಳಸುಳಿವುಗಳು ಪತ್ತೆಯಾಗಲಿವೆ. ಈ ಬಗ್ಗೆ ಜಾನಪದ ವಿವಿ ಉಳಿಯಬೇಕೆಂಬ ಕಾಳಜಿ ಉಳ್ಳವರು ಈ ವಿಷಯವನ್ನು ಕೈಗೆತ್ತಿಕೊಳ್ಳುವ ಅಗತ್ಯವಿದೆ.

ಜಾನಪದ ವಿಶ್ವವಿದ್ಯಾಲಯವು ತನ್ನ ವಿಶ್ವ ಗುಣಮಟ್ಟ ಸಂಶೋಧನೆಗಳನ್ನು ಕೈಗೊಂಡು ಜಗತ್ತಿನ ಗಮನ ಸೆಳೆಯಬೇಕಾಗಿದೆ. ವಿಶ್ವದ ಜಾನಪದ ಅಧ್ಯಯನ ಕೇಂದ್ರಗಳ ಜತೆ ಸಂಪರ್ಕ ಸಾಧಿಸಿ ಮಹತ್ವದ ಯೋಜನೆಗಳನ್ನು ರೂಪಿಸಬೇಕಿದೆ. ಕರ್ನಾಟಕದ ಜಾನಪದವನ್ನು ವಿಶ್ವಜಾನಪದದ ನೆಲೆಯಲ್ಲಿ ಚರ್ಚೆಯಾಗುವಂತೆ ದೊಡ್ಡ ಮಟ್ಟದ ಅಕಾಡೆಮಿಕ್ ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ. ಅಂತಹ ವಿಶ್ವವಿದ್ಯಾಲಯವೊಂದು ಆರಂಭದ ಘಟ್ಟದಲ್ಲಿಯೇ ಹೀಗೆ ಬೇಡದ ವಿಷಯಗಳಿಗೆ ಸುದ್ದಿಯಾಗುತ್ತಿರುವುದು ವಿಷಾದನೀಯ ಸಂಗತಿ. ಮಾನ್ಯ ರಾಜ್ಯಪಾಲರು, ಉನ್ನತ ಶಿಕ್ಷಣ ಸಚಿವಾಲಯ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಜಾನಪದ ವಿಶ್ವವಿದ್ಯಾಲಯದ ಘನತೆಯನ್ನು ಕಾಪಾಡಬೇಕಾಗಿದೆ.

● ವರದಿಗಾರ

ಮೋದಿ-ಅದಾನಿ ಕೂಟದ ಅಭಿವೃದ್ಧಿ

ಮೋದಿ ಪ್ರಧಾನಿಯಾಗಿಬಿಟ್ಟರೆ ಏನೇನೋ ಪವಾಡ ಆಗಿಬಿಡುತ್ತೆ ಎಂಬಂತೆ ಈ ದೇಶದ ಹಾದಿಬೀದಿ ತುಂಬಾ ಪ್ರಚಾರ ನಡೆದಿದ್ದು ಇನ್ನೂ ನಮ್ಮ ನೆನಪಿನಿಂದ ಮಾಸಿಲ್ಲ. ಆದರೆ ಮೋದಿ ಪ್ರಧಾನಿಯಾಗಿ ಇನ್ನೇನು ಎಂಟು ತಿಂಗಳಾಯಿತು. ಆದರೆ ಜನಸಾಮಾನ್ಯರ ಪಾಲಿಗೆ ಅಂಥಾ ಯಾವ ಚಮತ್ಕಾರಗಳೂ ನಡೆದಿಲ್ಲ. ಆದರೆ ಈ ದೇಶದ ಕೆಲವು ವಿಶೇಷ ವ್ಯಕ್ತಿಗಳ ಪಾಲಿಗೆ ಅಂಥಾ ಪವಾಡಗಳು ಸಂಭವಿಸಿವೆ. ಅವರೇ ಮೋದಿಯನ್ನು ಪ್ರಧಾನಿ ಪಟ್ಟಕ್ಕೇರಿಸಲು ಕೋಟ್ಯಾಂತರ ಹಣ ಸುರಿದಿದ್ದ ಕಾರ್ಪೋರೇಟ್ ಧಣಿಗಳು. ಅವರಲ್ಲಿ ಅದಾನಿ ಅಗ್ರಗಣ್ಯ.

ಗುಜರಾತ್ ಮೂಲದ ಉದ್ಯಮಿ ಗೌತಮ್ ಅದಾನಿ ಕಾರ್ಪೋರೇಟ್ ಧಣಿಗಳಲ್ಲಿ ಮೋದಿಗೆ ಅತ್ಯಂತ ಆಪ್ತ ಗೆಳೆಯ. ಅಂಬಾನಿ ಮಕ್ಕಳು, ಎಸ್ಸಾರ್ ಸಮೂಹದ ರುಯ್ಯಾ ಸೋದರರು, ಕೊಟಕ್ ಬ್ಯಾಂಕಿನ ಉದಯ್ ಕೊಟಕ್, ಫಾರ್ಮಸೂಟಕಲ್ ದೈತ್ಯ ಸೈರಸ್ ಭಾಯಿ ಪೂನಾವಾಲಾ ಇತ್ಯಾದಿಗಳಿಗೆ ಏನಿದ್ದರೂ ಅದಾನಿಯ ನಂತರದ ಸ್ಥಾನವಷ್ಟೆ.

ಮೋದಿ-ಅದಾನಿ ಕೂಟ ಕಳೆದ ದಶಕದಲ್ಲಿ ಗುಜರಾತ್‌ನಲ್ಲಿ ನಡೆಸಿರುವ ಕಾನೂನುಬಾಹಿರ ಅವ್ಯವಹಾರಗಳಿಗೆ ತತ್ಸಮಾನವಾದ ಹಗರಣಗಳು ಬೇರೊಂದು ಸಿಗಲಿಕ್ಕಿಲ್ಲ. ಈಗ ಹೇಳಿಕೇಳಿ ಅದಾನಿ ಮಿತ್ರ ಮೋದಿಯೇ ಪ್ರಧಾನಿ. ಹೀಗಾಗಿ ಈ ಕೂಟದ ಸಾರ್ವಜನಿಕ ಲೂಟಿಗೆ ಹೇಳೋರು ಕೇಳೋರೇ ಇಲ್ಲ. ಮೋದಿ-ಅದಾನಿ ಕೂಟದ ಡೀಲಿಂಗ್‌ನ ಇತ್ತೀಚಿನ ಒಂದು ಡೀಲ್ ನಮ್ಮನ್ನು ದಂಗುಬಡಿಸುತ್ತದೆ.

ಪ್ರಧಾನಿ ಮೋದಿ ವ್ಯವಹಾರಿಕ ಸಂಬಂಧಗಳನ್ನು ಕುದುರಿಸಲು ಕಾರ್ಪೋರೇಟ್ ಧಣಿಗಳೊಂದಿಗೆ ವಿದೇಶಗಳನ್ನು ಸುತ್ತಾಡಿ ಬಂದಿದ್ದು, ಇದನ್ನೇ ಒಂದು ಸಾಧನೆ ಎಂಬಂತೆ ಮಾಧ್ಯಮಗಳು ಸುದ್ದಿ ಮಾಡಿದ್ದೂ ತಿಳಿದ ಸಂಗತಿ. ಇಂಥಾ ವಿದೇಶ ಪ್ರವಾಸಗಳ ನಡುವೆ ಆಸ್ಟ್ರೇಲಿಯಾ ಪ್ರವಾಸ ಮೋದಿಯ ಪಾಲಿಗೆ ಅತ್ಯಂತ ವಿಶೇಷವಾದದ್ದು. ಯಾಕೆ ಗೊತ್ತೆ? ಮೋದಿಯ ಪರಮಾಪ್ತ ಅದಾನಿಗೆ ಸಂಬಂಧಿಸಿದ ಭಾರೀ ಡೀಲ್ ಸದ್ದುಗದ್ದಲವಿಲ್ಲದೆ ಮುಗಿದದ್ದು ಇಲ್ಲೇ. ಅದು ಬರೋಬ್ಬರಿ ಒಂದು ಬಲಿಯನ್ ಡಾಲರ್, ಅರ್ಥಾತ್ 6,300 ಕೋಟಿಗಳ ಡೀಲ್!

ಮೋದಿ ಆಸ್ಟ್ರೇಲಿಯಾಗೆ ಹೋಗಿ ಯಾವುದೋ ವ್ಯಾಪಾರ ಅಥವಾ ವಾಣಿಜ್ಯದ ಡೀಲ್ ಮಾಡಿದ್ದರೆ ನಾವು ಅಷ್ಟು ತಲೆ ಕೆಡಿಸಿಕೊಳ್ಳುವ ಕಾರಣವಿರಲಿಲ್ಲ. ಆದರೆ ಮೋದಿ ಸಾರ್ವಜನಿಕರ ಹಣವನ್ನು ನೇರವಾಗಿ ತನ್ನ ಗೆಳೆಯ ಅದಾನಿಯ ಬಾಯಿಗೆ ಹಾಕುವ ಜನದ್ರೋಹಿ ಡೀಲ್ ಮಾಡಿಬಿಟ್ಟಿರುವುದರಿಂದ ನಾವೆಲ್ಲ ತಲೆಕೆಡಿಸಿಕೊಳ್ಳಲೇಬೇಕು. ಈ ಡೀಲ್ ನಡೆದದ್ದು ಆಸ್ಟ್ರೇಲಿಯಾದ ಬ್ರಿಸ್ಬೇನ್ ನಗರದಲ್ಲಿ, ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ನಡೆದ ಒಂದು ಬ್ರೇಕ್‌ಫಾಸ್ಟ್ ಮೀಟಿಂಗ್‌ನಲ್ಲಿ. ಅಂದು ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಚೇರ್ಮನ್ ಅರುಂಧತಿ ಭಟ್ಟಾಚಾರ್ಯ ಮತ್ತು ಗೌತಮ್ ಅದಾನಿ 6,300 ಕೋಟಿ ಮೌಲ್ಯದ ಈ ಡೀಲ್‌ಗೆ ಸಹಿ ಮಾಡಿದ್ದಾರೆ. ಈ ಡೀಲ್‌ಗೆ ಸಾಲದ ಒಡಂಬಡಿಕೆ ಎಂಬ ಹೆಸರಿಡಲಾಗಿದೆ.

ಬ್ಯಾಂಕುಗಳು ಸಾಲ ಕೊಟ್ಟರೆ ಬಡ್ಡಿ ಸಮೇತ ವಸೂಲಿ ಮಾಡುತ್ತಾರೆ ಬಿಡಿ, ನಮಗ್ಯಾಕೆ ಚಿಂತೆ ಎನ್ನಬೇಡಿ. ಇದು ಆ ನಮೂನೆಯ ಸಾಲವಲ್ಲ, ಸಾರ್ವಜನಿಕರ ಹಣಕ್ಕೆ ಉಂಡೆ ನಾಮ ತಿಕ್ಕುವ ಸಾಲ. ಇದರ ಒಳಮರ್ಮ ತಿಳಿಯಲು ಒಂದಿಷ್ಟು ವಿವರಗಳನ್ನು ನೋಡೋಣ.

ಉಷ್ಣ ವಿದ್ಯುತ್‌ಸ್ಥಾವರಗಳಿಗೆ ಅಪಾರ ಪ್ರಮಾಣದ ಕಲ್ಲಿದ್ದಲಿನ ಬೇಡಿಕೆಯಿರುವ ಹಿನ್ನೆಲೆಯಲ್ಲಿ ಅದಾನಿ ಗ್ರೂಪ್ ಕಂಪನಿ ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನಲ್ಲಿ ಒಂದು ಬೃಹತ್ ಕಲ್ಲಿದ್ದಲು ಗಣಿಗಾರಿಕೆಯ ಗುತ್ತಿಗೆಯನ್ನು 3-4 ವರ್ಷಗಳ ಹಿಂದೆಯೇ ಕೈಗೆತ್ತಿಕೊಂಡಿದೆ. ಆ ಗಣಿಯಲ್ಲಿ ತೆಗೆಯುವ ಕಲ್ಲಿದ್ದಲನ್ನು, ಭಾರತವನ್ನೂ ಒಳಗೊಂಡಂತೆ ವಿವಿಧ ದೇಶಗಳಿಗೆ ರಫ್ತು ಮಾಡಲು ಯೋಜನೆ ರೂಪಿಸಿದೆ. ಗಣಿ ಪ್ರದೇಶದಿಂದ ಅಬಾಟ್ ಪಾಯಿಂಟ್ ಎಂಬ ಬಂದರು ಪ್ರದೇಶಕ್ಕೆ ಸಂಪರ್ಕ ಕಲ್ಪಿಸಲು 188 ಕಿ.ಮೀ ಉದ್ದದ ರೈಲ್ವೇ ಯೋಜನೆಯನ್ನು ಅದಾನಿ ಕಂಪನಿ ಕೈಗೊಂಡಿದೆ. ಈಗಾಗಲೇ ಸಾವಿರಾರು ಕೋಟಿ ಹಣವನ್ನು ಈ ಯೋಜನೆಗೆ ಅದಾನಿ ಸುರಿದಿದ್ದಾನೆ.

ಕಲ್ಲಿದ್ದಲಿನ ಬೆಲೆ ಹೀಗೇ ಏರುತ್ತಲೇ ಹೋಗಿ ಬಂಪರ್ ಲಾಭ ಗಳಿಸಬಹುದೆಂಬುದು ಅದಾನಿಯ ಲೆಕ್ಕಾಚಾರವಾಗಿತ್ತು, ಆದರೆ ಆಗಿದ್ದೇ ಬೇರೆ. ಕಳೆದ ಒಂದು ವರ್ಷದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಲ್ಲಿದ್ದಲಿನ ಬೆಲೆಯಲ್ಲಿ ಭಾರೀ ಕುಸಿತ ಉಂಟಾಗಿ ಹಿಂದಿನ ಅರ್ಧಬೆಲೆಗೆ ಇಳಿದಿದೆ. ಇದರ ಜೊತೆಗೆ ಗಣಿಗಾರಿಕೆಯಿಂದ ಉಂಟಾಗುವ ಪರಿಸರ ಸಂಬಂಧಿ ಸಮಸ್ಯೆಗಳನ್ನು ಸರಿಪಡಿಸಲು ದುಬಾರಿ ಮೊತ್ತ ವ್ಯಯಿಸಬೇಕಾದ ಅನಿವಾರ್ಯತೆ ಬಂದಿದೆ. ಮಾತ್ರವಲ್ಲದೆ, ಕೋರ್ಟ್‌ಗಳ ಆದೇಶದಿಂದ ಯಾವ ಘಳಿಗೆಯಲ್ಲಿ ಬೇಕಾದರೂ ಗಣಿ ಸ್ಥಗಿತಗೊಳ್ಳಬಹುದು. ಇಂಥಾ ಹಿನ್ನೆಲೆಯಲ್ಲಿ ಈ ಯೋಜನೆಗೆ ಹಣಕಾಸು ಒದಗಿಸುತ್ತಾರೆಂದು ಭಾವಿಸಲಾಗಿದ್ದ ಹಲವು ಅಂತರರಾಷ್ಟ್ರೀಯ ಬ್ಯಾಂಕುಗಳು ಈ ಯೋಜನೆ ಲಾಭದಾಯಕವಲ್ಲ ಎಂಬ ತೀರ್ಮಾನಕ್ಕೆ ಬಂದು ಸಾಲ ಕೊಡಲು ನಿರಾಕರಿಸಿದವು. ಸಿಟಿ ಬ್ಯಾಂಕ್, ಎಚ್‌ಎಸ್‌ಬಿಸಿ, ಡ್ಯೂಯಿಷ್ ಬ್ಯಾಂಕ್, ರಾಯಲ್ ಬ್ಯಾಂಕ್ ಆಫ್ ಸ್ಕಾಟ್‌ಲ್ಯಾಂಡ್, ಬರ್ಕ್‌ಲೇಸ್ ಬ್ಯಾಂಕ್ ಮುಂತಾದ ಬ್ಯಾಂಕುಗಳ ಮುಂದೆ ಸಾಲ ಪಡೆಯಲು ಅಡ್ಡಾಡಿದ್ದ ಅದಾನಿ ಬರಿಗೈಯಲ್ಲಿ ಮರಳಿದ್ದ.

ಈ ಅಂತಾರಾಷ್ಟ್ರೀಯ ಬ್ಯಾಂಕುಗಳು ಸಾಲ ನೀಡಲು ನಿರಾಕರಿಸಲು ಸದರಿ ಗಣಿ ಯೋಜನೆ ಲಾಭದಾಯಕವಲ್ಲ ಎಂಬುದೊಂದೇ ಕಾರಣವಲ್ಲ, ಅದಕ್ಕೆ ಮತ್ತೊಂದು ಪ್ರಮುಖ ಕಾರಣವೂ ಇತ್ತು. ಈಗಾಗಲೇ ಅದಾನಿ ಗ್ರೂಪ್ಸ್ ಕಂಪನಿ ವಿವಿಧ ಸಂಸ್ಥೆಗಳಿಂದ ಮಾಡಿರುವ ಸಾಲ ಅಗಾಧವಾಗಿ ಬೆಳೆದಿದ್ದು, ಇದೀಗ ಅದಾನಿಯ ಸಾಲ 81,000 ಕೋಟಿಗಳನ್ನು ದಾಟಿದೆ. ಮಾತ್ರವಲ್ಲ; ಹೊಸ ಹೊಸ ಯೋಜನೆಗಳಿಗೆ ವಿಸ್ತರಿಸಲು ಗೌತಮ್ ಅದಾನಿಗೆ ಆಸಕ್ತಿ ಇದೆಯೇ ವಿನಃ ಸಾಲ ಮರುಪಾವತಿಯ ವಿಷಯದಲ್ಲಿ ಅಷ್ಟಾಗಿ ಆಸಕ್ತಿ ಇಲ್ಲ. ಅದಾನಿ ಈಗಾಗಲೇ ಹಲವು ಬ್ಯಾಂಕುಗಳಿಗೆ ಸುಸ್ತಿದಾರನಾಗಿದ್ದಾನೆ.

ಹೀಗೆ ಇಕ್ಕಟ್ಟಿನಲ್ಲಿದ್ದ ಅದಾನಿಯ ಆಸ್ಟ್ರೇಲಿಯಾ ಗಣಿ ಉದ್ಯಮಕ್ಕೆ, ಸಾರ್ವಜನಿಕ ಹಣವನ್ನು ಹರಿಸಲು ಮೋದಿ-ಅದಾನಿ ಕೂಟ ಸ್ಕೆಚ್ ಹಾಕಿಬಿಟ್ಟಿದೆ. ಇದರ ಭಾಗವಾಗಿಯೇ ಮೋದಿಯ ಆಸ್ಟ್ರೇಲಿಯಾ ಪ್ರವಾಸ ಪ್ಲಾನ್ ಆಯ್ತು. ಪ್ರಧಾನಿ ಪಟ್ಟದಲ್ಲಿರುವ ಮೋದಿ ತನ್ನ ಜೊತೆಗೆ ಭಾರತೀಯ ಸ್ಟೇಟ್ ಬ್ಯಾಂಕ್‌ನ ಚೇರ್ಮನ್ ಅರುಂಧತಿ ಭಟ್ಟಾಚಾರ್ಯರನ್ನು ಕರೆದೊಯ್ದ. ಆಸ್ಟ್ರೇಲಿಯಾ ಪ್ರವಾಸದ ಉಸ್ತುವಾರಿ ವಹಿಸಿಕೊಂಡಿದ್ದ ಅದಾನಿಯೇ ಒಂದು ಬ್ರೇಕ್‌ಫಾಸ್ಟ್ ಮೀಟಿಂಗ್ ವ್ಯವಸ್ಥೆ ಮಾಡಿದ್ದ. ಅಲ್ಲಿ ಎಸ್‌ಬಿಐ ಮತ್ತು ಅದಾನಿ ಸಮೂಹದ ನಡುವೆ ಎಂ.ಒ.ಯು ಒಂದಕ್ಕೆ ಸಹಿ ಹಾಕಲಾಯಿತು. ಆ ಮೂಲಕ ಬರಕತ್ತಾಗುವ ಯಾವ ಭರವಸೆಯೂ ಇಲ್ಲದ ಅದಾನಿ ಗಣಿ ಯೋಜನೆಗೆ ಬರೋಬ್ಬರಿ 6300 ಕೋಟಿಗಳಷ್ಟು ಸಾರ್ವಜನಿಕ ಹಣವನ್ನು ಧಾರೆಯೆರೆದಂತಾಯ್ತು. ಭಾರತೀಯ ಬ್ಯಾಂಕೊಂದು ವಿದೇಶಿ ಯೋಜನೆಯೊಂದಕ್ಕೆ ಇಷ್ಟೊಂದು ಭಾರೀ ಪ್ರಮಾಣದ ಸಾಲ ನೀಡಿ ಇತಿಹಾಸ ಸೃಷ್ಟಿಸಲು ಮೋದಿ ಕೈಚಳಕವೇ ಕಾರಣ ಎಂಬುದು ಈಗ ಗುಟ್ಟಿನ ವಿಚಾರವೇನಲ್ಲ.

ಹೋಗಲಿ, ಆ ಎಂ.ಒ.ಯು.ನಲ್ಲಿ ಏನಿದೆಯೆಂಬುದು ಯಾರಿಗೂ ಗೊತ್ತಿಲ್ಲ; ಎಲ್ಲಾ ನಿಗೂಢ. ಎಸ್‌ಬಿಐ ಅಧಿಕಾರಿಗಳಾಗಲಿ, ಅದಾನಿ ಕಂಪನಿಯವರಾಗಲಿ ಆ ಒಪ್ಪಂದ ಪತ್ರ ತೋರಿಸಲು ತಯಾರಿಲ್ಲ. ಆದರಲ್ಲಿ ಅಂಥಾ ಗುಟ್ಟಾದ ವ್ಯವಹಾರ ಏನಿದೆ ಎಂಬುದು ಅದಾನಿ ಮತ್ತು ಮೋದಿಗೆ ಮಾತ್ರ ಗೊತ್ತು.

ಇಲ್ಲಿ ಇನ್ನೊಂದು ವಿಷಯವನ್ನು ಸ್ಪಷ್ಟಪಡಿಸುವುದು ಒಳ್ಳೆಯದು. ಆಸ್ಟ್ರೇಲಿಯಾದ ಗಣಿ ವ್ಯವಹಾರಕ್ಕಿಳಿದು ಅದಾನಿ ಬರಿಗೈಯಾಗಿದ್ದಾನೆ ಎಂದುಕೊಳ್ಳುವಂತಿಲ್ಲ. ಇದೇ ಅವಧಿಯಲ್ಲಿ ಅದಾನಿ ಕಂಪನಿಯ ವ್ಯವಹಾರಗಳನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಇದೇ ಆಗಸ್ಟ್‌ನಲ್ಲಿ ಕರ್ನಾಟಕದ ಉಡುಪಿ ಬಳಿಯಲ್ಲಿ ನೆಲೆಗೊಂಡಿದ್ದ ಲ್ಯಾಂಕೋ ಪವರ್ ಕಂಪನಿಯನ್ನು ಅದಾನಿ 6,000 ಕೋಟಿಗಳಿಗೆ ಕೊಂಡುಕೊಂಡಿದ್ದಾನೆ. ಅದಾದ ಎರಡೇ ತಿಂಗಳಲ್ಲಿ, ಅಂದರೆ ನವೆಂಬರ್‌ನಲ್ಲಿ ಈ ಮೋದಿ ಮಿತ್ರ ಛತ್ತೀಸ್‌ಘಡದಲ್ಲಿ ಥಾಪರ್ ಮಾಲಿಕತ್ವದ ಕೊರ್ಬಾ ವೆಸ್ಟ್ ಪವರ್ ಕಂಪನಿಯನ್ನು 4,200 ಕೋಟಿಗಳಿಗೆ ಕೊಂಡುಕೊಂಡಿದ್ದಾನೆ. ಇವುಗಳಲ್ಲದೆ ಮಹಾರಾಷ್ಟ್ರದ ತಿರೋಡದಲ್ಲಿ 660 ಮೆವಾ ಸಾಮರ್ಥ್ಯದ ಮತ್ತೊಂದು ಸ್ಥಾವರ ಇನ್ನೇನು ಕಾರ್ಯಾಚರಣೆ ಪ್ರಾರಂಭಿಸಲಿದೆ. 12,550 ಕೋಟಿ ರೂ.ಗಳ ಭಾರೀ ಹೂಡಿಕೆಯೊಂದಿಗೆ ಒರಿಸ್ಸಾದಲ್ಲಿ ಒಂದು ಉಷ್ಣ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲಾಗುತ್ತಿದೆ. 5,500 ಕೋಟಿಗಳ ಹೆಚ್ಚುವರಿ ಹೂಡಿಕೆ ಮಾಡಿ ಧರ್ಮ ಪೋರ್ಟ್‌ಅನ್ನು ವಿಸ್ತರಿಸುವ ಯೋಜನೆ ಹಮ್ಮಿಕೊಂಡಿದೆ. ದೇಶಾದ್ಯಂತ ಹೈಟೆಕ್ ಆಸ್ಪತ್ರೆಗಳ ಸರಪಳಿ ನಿರ್ಮಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ.

ಇದೇ ಜನವರಿ 12ರಂದು ವೈಬ್ರೆಂಟ್ ಗುಜರಾತ್ ಸಮಾವೇಶದಲ್ಲಿ 20,000 ಕೋಟಿಗಳನ್ನು ಗುಜರಾತ್‌ನಲ್ಲಿ ಹೂಡಿಕೆ ಮಾಡುವುದಾಗಿ ಅದಾನಿ ಘೋಷಿಸಿದ್ದಾನೆ. ಹೀಗೆ ಮೋದಿ ಪ್ರಧಾನಿ ಪಟ್ಟಕ್ಕೇರಿದ್ದೇ ತಡ, ದೇಶ ವಿದೇಶಗಳಲ್ಲಿ ಅದಾನಿಯ ಹೂಡಿಕೆ ಸಾವಿರಾರು ಕೋಟಿಗಳ ಲೆಕ್ಕದಲ್ಲಿ ನಡೆಯುತ್ತಲೇ ಇದೆ.

ಹೀಗೆ ಹತ್ತಾರು ಸಾವಿರ ಕೋಟಿ ಬಂಡವಾಳವನ್ನು ತೊಡಗಿಸಿ ಹೊಸಹೊಸ ಕಂಪನಿಗಳನ್ನು ಕೊಂಡುಕೊಳ್ಳುತ್ತಿರುವ ಅದಾನಿ ಸಾರ್ವಜನಿಕ ಬ್ಯಾಂಕ್‌ನಿಂದ 6,300 ಕೋಟಿಯ ಆಸ್ಟ್ರೇಲಿಯಾ ಡೀಲಿಂಗ್‌ನ ಒಳಮರ್ಮವೇನು? ಅಂಥಾ ಜರೂರತ್ತಾದರೂ ಏನಿತ್ತು? ತನ್ನ ಕಂಪನಿಯ ಸಂಭಾವ್ಯ ನಷ್ಟವನ್ನು ಸರ್ಕಾರಕ್ಕೆ ವರ್ಗಾಯಿಸಿ, ಸಾರ್ವಜನಿಕ ಹಣವನ್ನು ಕಬಳಿಕೆ ಮಾಡಲು ಮೋದಿಯ ಬೆಂಬಲದೊಂದಿಗೆ ಖದೀಮ ಅದಾನಿ ಹೂಡಿರುವ ವಿನೂತನ ಷಡ್ಯಂತ್ರ ಇದು. ಇನ್ನು ಕೆಲವೇ ವರ್ಷಗಳಲ್ಲಿ ಈ ಹಣ ವಸೂಲಾಗದ ಸಾಲ(ಎನ್‌ಪಿಎ)ದ ಪಟ್ಟಿಗೆ ಸೇರಿ ಗುಳುಂ ಆಗುವುದು ಕಟ್ಟಿಟ್ಟ ಬುತ್ತಿ.

ಮೋದಿ ಆಸ್ಟ್ರೇಲಿಯಕ್ಕೆ ಹೋಗಿದ್ದರ ಮುಖ್ಯ ಉದ್ದೇಶವೇ ಬಿಲಿಯನ್ ಡಾಲರ್ ಡೀಲಿಂಗ್ ಎಂಬ ಮಾತು ಉದ್ಯಮ ವಲಯದಲ್ಲಿ ವ್ಯಾಪಕವಾಗಿದೆ. ಮೋದಿ-ಅದಾನಿ ಜೋಡಿ ಬರೀ ಆಸ್ಟ್ರೇಲಿಯಾ ವ್ಯವಹಾರಕ್ಕಷ್ಟೇ ಸೀಮಿತಗೊಂಡಿಲ್ಲ. ಅಮೆರಿಕಾ, ಜಪಾನ್ ಇತ್ಯಾದಿ ಪ್ರವಾಸಗಳಲ್ಲೂ ಅದಾನಿ ಕಾಯಂ ಸದಸ್ಯನಾಗಿದ್ದ. ಎಲ್ಲೆಲ್ಲಿ ಎಂತೆಂಥ ಡೀಲಿಂಗ್ ನಡೆದಿದೆ ಎಂಬುದು ಬೆಳಕಿಗೆ ಬರಬೇಕಷ್ಟೆ.

ಅಂಬಾನಿಗಳನ್ನು ಬೀಟ್ ಮಾಡಿ ಮುನ್ನುಗ್ಗುತ್ತಿರುವ ಅದಾನಿಯನ್ನು ಕಂಡು ಅಂಬಾನಿ ಮಕ್ಕಳಿಗೆ ಹೊಟ್ಟೆಯಲ್ಲಿ ಬೆಂಕಿ ಸುರಿದಂತಾಗಿದೆಯಂತೆ! ಅಂಬಾನಿ ಒಡೆತನದ ಮಾಧ್ಯಮಗಳಲ್ಲಿ ಆಗೊಂದು ಈಗೊಂದು ಅದಾನಿ ಹಗರಣದ ವರದಿಗಳು ಪ್ರಕಟವಾಗಲು ಇದೇ ಕಾರಣ ಎಂದು ಕೆಲವು ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ.

ಅದಾನಿಯ ಕಹಾನಿ

ಇಷ್ಟೊಂದು ಪ್ರಭಾವಿ ಉದ್ಯಮಿಯಾಗಿರುವ ಅದಾನಿಯ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿಯಿಲ್ಲ. ಹೆಚ್ಚಿನ ಜನರು ಆತನ ಹೆಸರನ್ನೂ ಕೇಳಿಲ್ಲ. ಅದಾನಿ ಬಗ್ಗೆ ಇತ್ತೀಚೆಗಷ್ಟೆ ಅಲ್ಲೊಂದು ಇಲ್ಲೊಂದು ಸುದ್ದಿಗಳು ಹೊರಬರುತ್ತಿವೆ. ಇಂಥಾ ಅದಾನಿ ಭಾರತದ ಅಗ್ರಸಾಲಿನ ಉದ್ದಿಮೆಪತಿಯಾಗಿ ಬೆಳೆದಿದ್ದಕ್ಕೂ ಯಾರೂ ಕೇಳಿರದಿದ್ದ ನರೇಂದ್ರ ಮೋದಿಯೆಂಬ ಆರೆಸ್ಸೆಸ್ಸಿಗನೊಬ್ಬ ಗುಜರಾತ್‌ನ ಮುಖ್ಯಮಂತ್ರಿ ಸ್ಥಾನಕ್ಕೇರಿ, ಇದೀಗ ಪ್ರಧಾನಿ ಗದ್ದುಗೆಗೇರಿರುವುದಕ್ಕೂ ನೇರಾನೇರ ಸಂಬಂಧವಿದೆ. ಪರಸ್ಪರರ ಬೆಳವಣಿಗೆ ಪ್ರತ್ಯೇಕಿಸಲಾಗದಂತೆ ಒಂದಕ್ಕೊಂದು ಹೆಣೆದುಕೊಂಡಿದೆ.

ಅದಾನಿಯ ಹಿನ್ನೆಲೆಯನ್ನು ಕೆದಕುತ್ತಾ ಹೋದಂತೆ ಹಲವು ಕುತೂಹಲಕಾರಿ ಸತ್ಯಗಳು ಹೊರಬೀಳುತ್ತವೆ. ಬರಿಗೈ ದಾಸಯ್ಯನಾಗಿದ್ದ ಅದಾನಿ ತನ್ನ 18ನೇ ವಯಸ್ಸಿನಲ್ಲಿ ಕಾಲೇಜು ತೊರೆದು ನೌಕರಿ ಹುಡುಕಿ ಮುಂಬೈಗೆ ಬಂದವನು. ಅಲ್ಲಿ ವಜ್ರದ ವ್ಯಾಪಾರಿಯೊಬ್ಬರ ಬಳಿ ಕೆಲಸಕ್ಕೆ ಸೇರಿಕೊಂಡ. ಕೆಲ ವರ್ಷಗಳ ನಂತರ ಗುಜರಾತ್‌ಗೆ ಮರಳಿ ತನ್ನ ಅಣ್ಣನ ಜೊತೆಗೂಡಿ ಪ್ಲಾಸ್ಟಿಕ್ ಕಚ್ಚಾವಸ್ತುವಿನ ವ್ಯಾಪಾರ ನಡೆಸಿದ. ಹೀಗೆ ಅಧಿಕಾರಿಗಳ, ರಾಜಕಾರಣಿಗಳ ಸಖ್ಯ ಬೆಳೆಸಿಕೊಂಡ ಅದಾನಿ ತನ್ನ ಕಂಪನಿ ಪ್ರಾರಂಭಿಸಿದ್ದು 1988ರಲ್ಲಿ, ಅಂದರೆ ಕೇವಲ 26 ವರ್ಷಗಳ ಹಿಂದೆಯಷ್ಟೆ.

ಅದಾನಿಗೂ ಮೋದಿಗೂ ನಡುವಿನ ಬಾಂಧವ್ಯ ಗಟ್ಟಿಗೊಂಡಿದ್ದಕ್ಕೂ, 2002ರ ಗುಜರಾತ್ ಹತ್ಯಾಕಾಂಡಕ್ಕೂ ನೇರಾನೇರ ಸಂಬಂಧವಿದೆ. ಕೋಮು ಹತ್ಯಾಕಾಂಡಗಳಿಂದಾಗಿ



ಮೋದಿ-ಅದಾನಿ ಎಸ್‌ಬಿಐ ಚೇರ್ಮನ್‌ನೊಂದಿಗೆ...



ಅದಾನಿ ಪಾಲಿಗೆ ಮೋದಿಯೇ ದಾನಿ!

ಅದಾನಿ ಪೋರ್ಟ್ ಅಂಡ್ ಸ್ಪೆಷಲ್ ಎಕನಾಮಿಕ್ ಜೋನ್(ಎಪಿಎಸ್‌ಇಜೆಡ್)ಗೆ ಕಚ್ ಜಿಲ್ಲೆಯಲ್ಲಿ 15,946 ಎಕರೆ ಭೂಮಿಯನ್ನು 1 ರೂ.ನಿಂದ ಗರಿಷ್ಠ 32 ರೂ. ಬೆಲೆಗೆ ಒದಗಿಸಲಾಗಿದೆ. ಅಂದರೆ ಎಕರೆಯೊಂದಕ್ಕೆ 4,046 ರೂ.ಗಳಿಂದ ಗರಿಷ್ಠ 20 ಸಾವಿರ ರೂ.ಗಳಿಗೆ. ಯಾವುದೋ ಪುರಾತನ ಕಾಲದ ಬೆಲೆ ಎಂದುಕೊಂಡೀರಿ. ಈ ಡೀಲ್ ನಡೆದದ್ದು 2007 -08ರ ಅವಧಿಯಲ್ಲಿ!

ಆದರೆ ಇದೇ ಅವಧಿಯಲ್ಲಿ ಬೇರೆ ಬೇರೆ ಕಂಪನಿಗಳು ತಮಗೆ ಮಂಜೂರಾದ ಭೂಮಿಗೆ ಸರ್ಕಾರಕ್ಕೆ ಪಾವತಿ ಮಾಡಿರುವ ದರದ ಪಟ್ಟಿ ಇಲ್ಲಿದೆ ನೋಡಿ.

1) ಟಾಟಾ ಮೋಟಾರ್ಸ್ - 1,100 ಎಕರೆ - 900 ರೂ/ಚದರ ಮೀಟರ್‌ಗೆ
2) ಮಾರುತಿ ಸುಜುಕಿ - 700 ಎಕರೆ - 670 ರೂ
3) ಫೋರ್ಡ್ ಇಂಡಿಯಾ - 460 ಎಕರೆ - 1,100 ರೂ
4) ಟಾರೆಂಟ್ ಪವರ್ - 6000 ರೂ
5) ರಹೇಜಾ ಕಾರ್ಪೋರೇಷನ್ - 470 ರೂ
6) ಟಿಸಿಎಸ್ - 1100 ರೂ

ಅದಾನಿ ಕಂಪನಿಗೆ 'ಮೋದಾನಿ' ಕಂಪನಿಯೆಂಬ ಅಡ್ಡ ಹೆಸರು ಸೂಕ್ತವೋ ಅಲ್ಲವೋ ನೀವೇ ಹೇಳಿ.

ಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುಜರಾತ್‌ನ ರ್ಯಾದೆ ಹರಾಜಾಗಿತ್ತು, ಈ ಹತ್ಯಾಕಾಂಡಗಳ ಕೇಂದ್ರ ಬಿಂದುವಾಗಿ ಮೋದಿ ವಿಲನ್ ಸ್ಥಾನದಲ್ಲಿ ನಿಂತಿದ್ದ. ಗ್ರಸಾಲಿನ ಬಂಡವಾಳಿಗರಾದ ಟಾಟಾ, ಬಿರ್ಲಾ, ಬಾನಿಗಳು ಗುಜರಾತ್‌ನ ಅಂದಿನ ಮುಖ್ಯಮಂತ್ರಿ ಶುಭಾಯಿ ಪಟೇಲ್ ಸಖ್ಯದಲ್ಲಿದ್ದರು.

ಅಗ್ರಸಾಲಿನ ಉದ್ಯಮಿಗಳಿಗೆ ಮೋದಿಯ ನಡೆಯನ್ನು ಕಿಸುವುದು ಅನಿವಾರ್ಯವಾಗಿತ್ತು, ಹಲವು ಉದ್ಯಮಿಗಳು ನ್ನ ಸರ್ಕಾರದೊಂದಿಗೆ ಅಂತರವನ್ನು ಕಾಯ್ದುಕೊಳ್ಳ ಡಗಿದ್ದರು. ಇಂಥಾ ಸಂದರ್ಭದಲ್ಲಿ ಮೋದಿಯ ಜೊತೆ ಕೋಡಿಸಿದವರು ನಿರ್ಮಾ ಕಂಪನಿಯ ಮಾಲಿಕ ಕರ್ಸನ್ ಯಿ ಪಟೇಲ್ ಮತ್ತು ಇದೇ ಗೌತಮ್ ಅದಾನಿ ತ್ರ!

ಮೋದಿಯ ಪರವಾಗಿ ಲಾಬಿ ನಡೆಸಿದ ಅದಾನಿ ವಾರು ಉದ್ಯಮಿಗಳ ಮನವೊಲಿಸಿದ. ವೈಬ್ರೆಂಟ್ ಸರಾತ್ ಸಮಾವೇಶದಲ್ಲಿ ಉದ್ಯಮಿಗಳನ್ನು ಸೆಳೆಯುವ ಂಟನಂತೆ ಕೆಲಸ ಮಾಡಿದ್ದ.

ಚರಿತ್ರೆಯ ಇಂಥಾ ಕರಾಳ ಕಾಲಘಟ್ಟದಲ್ಲಿ ಮೋದಿ-ಾನಿ ಕೂಟ ಜೊತೆಯಾಯಿತು. ದಿನೇದಿನೇ ಗುಜರಾತ್‌ನ ಸಕೀಯದಲ್ಲಿ ಮೋದಿ ಗಟ್ಟಿಯಾಗಿ ನೆಲೆಯೂರು ಂತೆಲ್ಲಾ ಅದಾನಿ ಗ್ರೂಪ್ ಕಂಪನಿ ಸಾವಿರಾರು ಕೋಟಿ ವನ್ನೂ, ಸಾವಿರಾರು ಎಕರೆ ಭೂಮಿಯನ್ನೂ ಕಬಳಿಸುತ್ತಾ ದು ದೈತ್ಯಾಕಾರಕ್ಕೆ ಬೆಳೆದುನಿಂತಿದೆ. ಮೋದಿಯ ಾಶೀರ್ವಾದದೊಂದಿಗೆ ನಡೆದ ಈ ಬೆಳವಣಿಗೆಯ ದಿಯಲ್ಲಿ ಸಾರ್ವಜನಿಕ ಸಂಪತ್ತಿನ ಹಗಲು ೋಡೆಯಿದೆ. ಸರ್ಕಾರಿ ಬೊಕ್ಕಸಕ್ಕೆ ರಾಜಾರೋಷವಾಗಿ ಕೊರೆಯಲಾಗಿದೆ.

ಕೆಲವೊಂದು ಉದಾಹರಣೆಗಳನ್ನಷ್ಟೇ ನೋಡೋಣ. ಅದಾನಿ ಗ್ರೂಪ್‌ನ ಒಡೆತನದಲ್ಲಿ ಈಗ ಎರಡು ಲಕ್ಷ ರೆಗಳಿಗೂ ಅಧಿಕ ಭೂಮಿಯಿದೆ. ಅದರಲ್ಲಿ ಮೋದಿ ರ್ಕಾರ 45,000 ಎಕರೆಗಳಷ್ಟು ಸರ್ಕಾರಿ ಭೂಮಿಯನ್ನು ಎರೆದಿದೆಯೆಂದರೆ ಮೋದಿಗೂ ಅದಾನಿಗೂ ಇರುವ ವನ್ನು ಸುಲಭವಾಗಿ ಊಹಿಸಬಹುದು. ಭೂಮಿ ತನದಲ್ಲಿ ಬಹುಶಃ ಈ ಮೋದಿ ಮಿತ್ರನೇ ಈ ದೇಶದಲ್ಲಿ ಗಣ್ಯ! ಅದಾನಿ ಭೂಮಿ ಪಡೆದುಕೊಂಡಿದ್ದು ಎಷ್ಟು ಗೆ ಗೊತ್ತೆ? ಒಂದು ಚದರ ಮೀಟರ್‌ಗೆ 1 ರೂ.ನಿಂದ ದು ಗರಿಷ್ಠ 32 ರೂಗಳಿಗೆ!! (ವಿವರಗಳಿಗೆ ಬಾಕ್ಸ್ ೋಡಿ)

ಅದಾನಿ ಕಂಪನಿಗಳಲ್ಲಿ ಮುಂಡ್ರಾ ಪೋರ್ಟ್ ುಖವಾದುದು. ಮುಂಡ್ರಾ ಬಂದರು ಮೊದಲಿಗೆ ್ಕಾರಿ ಒಡೆತನದಲ್ಲಿತ್ತು, ಉದಾರೀಕರಣ ನೀತಿಯನ್ನು ಸಿಕೊಂಡ ಅದಾನಿ 1993ರಲ್ಲಿ ಈ ಬಂದರನ್ನು ತನ್ನ ಗೆ ತೆಗೆದುಕೊಂಡ. ಅಂದಿನಿಂದಲೂ ಈ ಮುಂಡ್ರಾ ಪೋರ್ಟ್ ವಿಸ್ತರಿಸುತ್ತಲೇ ಇದೆ. ಹೊಸಹೊಸ ವಿವಾದಗಳನ್ನು ಟ್ಟುಹಾಕುತ್ತಲೇ ಇದೆ.

ಮುಂಡ್ರಾ ಬಂದರಿಗೆ ಹೊಂದಿಕೊಂಡಂತೆ ಒಂದು ಶೇಷ ಆರ್ಥಿಕ ವಲಯ(ಎಸ್‌ಇಜೆಡ್)ವನ್ನು ಅದಾನಿ ಿಸಿದ್ದಾನೆ. ಅದಾನಿ ಪೋರ್ಟ್ಸ್ ಅಂಡ್ ಸ್ಪೆಷಲ್ ಾಮಿಕ್ ಜೋನ್ (ಎಪಿಎಸ್‌ಇಜೆಡ್) ಎಂಬ ಹೆಸರಿನಲ್ಲಿ 37,000 ಎಕರೆ ವಿಸ್ತೀರ್ಣವನ್ನು ವ್ಯಾಪಿಸಿದೆ. ಅದರಲ್ಲಿ ್ಧದಷ್ಟು ಭೂಮಿಯನ್ನು ಘೋಷಿತ ಉದ್ದೇಶಗಳಿಗೆ ಕೆ ಮಾಡದೆ ಅದಾನಿ ತನ್ನ ಕಬ್ಜಾದಲ್ಲಿಟ್ಟುಕೊಂಡಿದ್ದಾನೆ. ಈ ಬಂದರು ದೇಶದಲ್ಲೇ ಅತ್ಯಂತ ದೊಡ್ಡ ಖಾಸಗಿ ದರು ಎನಿಸಿಕೊಂಡಿದೆ.

ಈ ಎಪಿಎಸ್‌ಇಜೆಡ್ ಯೋಜನೆಗೆ ಸ್ವಾಧೀನಪಡಿಸಿ ಡಿದ್ದು ಅತ್ಯಂತ ಫಲವತ್ತಾದ ಭೂಮಿಯನ್ನು. ಇದು ಿ, ಸಪೋಟ, ಖರ್ಜೂರ, ಮಾವು ಮುಂತಾದ ಳಿಂದ ಕೂಡಿದ್ದ ಸಮೃದ್ಧ ಪ್ರದೇಶ. ಜೊತೆಗೆ ಸಾವಿರಾರು ೆ ಗೋಮಾಳಗಳನ್ನು ಗುಳುಂ ಮಾಡಲಾಗಿದೆ.

2011ರಲ್ಲಿ ಮುಂಡ್ರಾ ಎಸ್‌ಇಜೆಡ್ ವಿರುದ್ಧ ಸ್ಥಳೀಯ ರು ಗುಜರಾತ್ ಹೈಕೋರ್ಟ್‌ನಲ್ಲಿ ಪಿಐಎಲ್ ಲಿಸಿದರು. ಇಂಥಾ ಅಕ್ರಮಗಳನ್ನು ಕಂಡ ಹೈಕೋರ್ಟ್ ಎಸ್‌ಇಜೆಡ್ ಕಾನೂನುಬಾಹಿರವಾದದ್ದು ಎಂದು ೋಷಿಸಿ, ಈ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದ್ದ ಕಂಪನಿಗಳಿಗೆ ಎಲ್ಲ ಚಟುವಟಿಕೆಗಳನ್ನು ಕೂಡಲೇ ನಿಲ್ಲಿಸುವಂತೆ ೇಶ ನೀಡಿತ್ತು, ಇಷ್ಟು ಭಾರೀ ಗಾತ್ರದ ಎಸ್‌ಇಜೆಡ್ ಸಲು ಕೇಂದ್ರ ಪರಿಸರ ಇಲಾಖೆಯ ಅನುಮತಿ ಯುವುದು ಕಡ್ಡಾಯವಾಗಿತ್ತು, ಆದರೆ ಮೋದಿ ಮತ್ತು ಿ ಕೂಟ ಇಂಥ ಯಾವ ಕಾನೂನಿಗೂ ಕವಡೆ ತ್ತು ಕೊಟ್ಟಿರಲಿಲ್ಲ.

ಇದಾದ ನಂತರ ಅದಾನಿ ಅನಿವಾರ್ಯವಾಗಿ ಕೇಂದ್ರ ಸರ ಇಲಾಖೆಯ ಅನುಮತಿ ಪಡೆದುಕೊಳ್ಳಲು ಿಸಿದ. ಈ ಎಸ್‌ಇಜೆಡ್ ಅವ್ಯವಹಾರದ ಕಡತ ಕೇಂದ್ರ ಪರಿಸರ ಮಂತ್ರಿ ಜಯಂತಿ ನಟರಾಜನ್ ಮುಂದೆ



ಪಟ್ಟಕ್ಕೇರಿದ 'ಮೋದಾನಿ' ಕಂಪನಿ

ಷೇರು ಮಾರುಕಟ್ಟೆಯ ವ್ಯವಹಾರದಲ್ಲಿ ನಿರತರಾಗಿರುವವರು ಕಂಪನಿ ಮಾಲಿಕರ ಒಳ ವ್ಯವಹಾರಗಳ ಮರ್ಮವನ್ನು ಚೆನ್ನಾಗಿಯೇ ಅರಿತಿರುತ್ತಾರೆ. ಅಧಿಕಾರ ಕೇಂದ್ರಗಳೊಂದಿಗೆ ಮಾಲಿಕರ ಸಂಬಂಧವನ್ನು ಪರಿಗಣನೆಗೆ ತೆಗೆದುಕೊಂಡೇ ಹೂಡಿಕೆ ಮಾಡುತ್ತಾರೆ.

ಕಳೆದ ಸೆಪ್ಟೆಂಬರ್ 13ರಂದು ಮೋದಿಯೇ ಬಿಜೆಪಿಯ ಪ್ರಧಾನಿ ಅಭ್ಯರ್ಥಿಯೆಂದು ಘೋಷಣೆಯಾಯ್ತು ನೋಡಿ. ಆ ಕ್ಷಣದಿಂದಲೇ ಅದಾನಿಯ ಅದೃಷ್ಟ ಖುಲಾಯಿಸಿಬಿಟ್ಟಿತ್ತು. ಮೋದಿ-ಅದಾನಿ ಸಖ್ಯದ ಮರ್ಮವನ್ನು ಅರಿತಿದ್ದ ಷೇರು ಹೂಡಿಕೆದಾರರು ಅದಾನಿ ಕಂಪನಿಯ ಷೇರುಗಳನ್ನು ಕೊಳ್ಳಲು ಮುಗಿಬಿದ್ದರು.

2013ರ ಸೆಪ್ಟೆಂಬರ್ ತಿಂಗಳಲ್ಲಿ 140 ರೂಪಾಯಿಯಲ್ಲಿದ್ದ ಅದಾನಿ ಷೇರು ಮೌಲ್ಯ ಏಪ್ರಿಲ್ 22ರ ವೇಳೆಗೆ ಮೂರು ಪಟ್ಟು ಏರಿಕೆ ಕಂಡು 432 ರೂಪಾಯಿಗೇರಿತು. ಚುನಾವಣಾ ಫಲಿತಾಂಶ ಘೋಷಣೆಯಾಗುತ್ತಿದ್ದಂತೆ ಮತ್ತಷ್ಟು ಗಗನಮುಖಿಯಾಗಿ ಏರಿ 525 ರೂಪಾಯಿಗೆ ಏರಿಬಿಟ್ಟಿದೆ. ಮೋದಿ ಪಟ್ಟಕ್ಕೇರುವ ಮುಂಚೆಯೇ ಅಂದರೆ ಮೇ 19ರಂದು 540.50 ರೂಗೆ ಏರಿಬಿಟ್ಟಿತು.

ಬ್ಲೂಮ್‌ಬರ್ಗ್ ಬಿಲಿಯನೇರ್ ಇಂಡೆಕ್ಸ್ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಸೆಪ್ಟೆಂಬರ್ 13ರಂದು 1.9 ಬಿಲಿಯನ್ ಡಾಲರ್ ಅಥವಾ 11,400 ಕೋಟಿಗಳಷ್ಟಿದ್ದ (ಇದೆಲ್ಲ ಅಧಿಕೃತ ಲೆಕ್ಕಗಳಷ್ಟೆ) ಅದಾನಿಯ ಮೌಲ್ಯ ಚುನಾವಣಾ ಫಲಿತಾಂಶ ಹೊರಬಿದ್ದ ಮೇ 16ರ ಸಂಜೆಯ ವೇಳೆಗೆ 7.8 ಬಿಲಿಯನ್ ಡಾಲರ್‌ಗಳಿಗೆ, ಅಂದರೆ 46,800 ಕೋಟಿಗಳಿಗೆ ಏರಿಕೆ ಕಂಡಿದೆ. ಅಂದರೆ ಕೇವಲ 8 ತಿಂಗಳಲ್ಲಿ 4 ಪಟ್ಟು ಅಧಿಕ ಅಭಿವೃದ್ಧಿ. ಸುಮಾರು 35,000 ಕೋಟಿಗಳ ಹಠಾತ್ ಲಾಭ!

ಮೋದಿ ಮುಖ್ಯಮಂತ್ರಿಯಾದ ನಂತರದ 12 ವರ್ಷಗಳಲ್ಲಿ 'ಮೋದಾನಿ' ಕಂಪನಿಯ ಆಸ್ತಿ ಪಾಸ್ತಿ ಎಷ್ಟು ಪಟ್ಟು ಏರಿಕೆ ಆಗಿರಬಹುದು? ಅದು ನಮ್ಮ ಊಹೆಗೂ ನಿಲುಕುವುದಿಲ್ಲ, ಅಧಿಕೃತ ಲೆಕ್ಕಗಳ ಪ್ರಕಾರವೇ ಮೋದಿ ಅವಧಿಯಲ್ಲಿ ಅದಾನಿ ಆಸ್ತಿ 85 ಪಟ್ಟು ಹೆಚ್ಚಳ ಕಂಡಿದೆ!

ಇದನ್ನು 'ಮೋದಾನಿ' ಅಭಿವೃದ್ಧಿ ಮಾದರಿ ಎನ್ನಬಹುದಲ್ಲವೆ?

ಬಂತು. ನಾನಾ ಅಕ್ರಮಗಳಿಂದ ಕೂಡಿದ್ದ ಈ ಯೋಜನೆಗೆ ಜಯಂತಿ ನಟರಾಜನ್ ಅನುಮತಿ ಕೊಡಲಿಲ್ಲ. ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಮೋದಿ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದಿದ್ದ. ಪರಿಸರ ಇಲಾಖೆಯ ದಂಡ ಶುಲ್ಕವನ್ನು ಜಯಂತಿ ಟ್ಯಾಕ್ಸ್ ಎಂದು ಲೇವಡಿ ಮಾಡಿದ್ದು ಮಾಧ್ಯಮಗಳಿಗೆ ಆಹಾರವಾಗಿತ್ತು. ಆದರೆ ಅದಾನಿಯ ಪರವಾಗಿ ಮೋದಿ ಬ್ಯಾಟಿಂಗ್ ಮಾಡುತ್ತಿದ್ದಾರೆ ಎಂಬ ಸುದ್ದಿ ಉದ್ಯಮವಲಯದಲ್ಲಿ ಜನಜನಿತವಾಗಿತ್ತು. ಜೊತೆಜೊತೆಗೆ ಜಯಂತಿ ನಟರಾಜನ್ ಅಭಿವೃದ್ಧಿ ವಿರೋಧಿಯೆಂದು ಕಾರ್ಪೊರೇಟ್ ಮೀಡಿಯಾಗಳು ದಾಳಿ ಮಾಡಿದ್ದವು. ನಂತರದ ಕಾರ್ಪೊರೇಟ್ ಲಾಬಿಯ ಪರಿಣಾಮವಾಗಿ ಜಯಂತಿ ನಟರಾಜನ್ ಪರಿಸರ ಇಲಾಖೆಯಿಂದ ಎತ್ತಂಗಡಿ ಆಗಿದ್ದು ಬೇರೆಯದೇ ಕತೆ.

ಮೋದಿ ಸರ್ಕಾರ ಅದಾನಿ ಕಂಪನಿಗೆ ಪೆಟ್ರೋಲಿಯಂ ಸರಬರಾಜು ಮಾಡಿದ ವಿಶಿಷ್ಟ ಕತೆ ಕೇಳಿ. ಗುಜರಾತ್ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಗುಜರಾತ್ ಸ್ಟೇಟ್ ಪೆಟ್ರೋಲಿಯಂ ಕಾರ್ಪೊರೇಷನ್(ಜಿಎಸ್‌ಪಿಸಿ)ನಿಂದ 2006ರಿಂದ 2009ರವರೆಗೆ ಅದಾನಿ ಎನರ್ಜಿ ಮತ್ತು ಎಸ್ಸಾರ್ ಸ್ಟೀಲ್ಸ್ ಕಂಪನಿಗಳಿಗೆ ಪೆಟ್ರೋಲಿಯಂ ಉತ್ಪನ್ನಗಳನ್ನು ಸರಬರಾಜು ಮಾಡಲಾಗಿತ್ತು. ಅದು ಯಾವ ಬೆಲೆಗೆ ಅಂತೀರಿ? ಸರ್ಕಾರ ಕೊಂಡುಕೊಂಡ ಬೆಲೆಗಿಂತ ಕಡಿಮೆ ಬೆಲೆಗೆ! ಸಿಎಜಿ ವರದಿ ಈ ಭ್ರಷ್ಟಾಚಾರ ಹಗರಣವನ್ನು ಪತ್ತೆ ಹಚ್ಚಿ, ಈ ಬಗ್ಗೆ ಒಂದು ಪ್ರಕರಣ ದಾಖಲಾದ ನಂತರವಷ್ಟೇ ಈ ಅವ್ಯವಹಾರ ನಿಂತಿದ್ದು. ಗುಜರಾತ್ ಸರ್ಕಾರ ಒಟ್ಟು 16,706 ಕೋಟಿ ಮೊತ್ತದ ಸಾರ್ವಜನಿಕ ಹಣವನ್ನು ಹೀಗೆ ಖಾಸಗಿಯವರಿಗೆ ಪರಭಾರೆ ಮಾಡಿರುವುದಾಗಿ ಅಂದಿನ ಸಿಎಜಿ ವರದಿ ಉಲ್ಲೇಖಿಸಿತ್ತು.

2012ರ ಏಪ್ರಿಲ್‌ನಲ್ಲಿ ನಡೆದ ವಿಧಾನಸಭೆಯ ಅಧಿವೇಶನದಲ್ಲಿ ಈ ಸಿಎಜಿ ವರದಿಯನ್ನು ಮಂಡಿಸಬೇಕೆಂದು ವಿರೋಧ ಪಕ್ಷಗಳು ಪಟ್ಟುಹಿಡಿದವು. ಸರ್ಕಾರ ಎಂದಿನಂತೆ ತನ್ನ ಹಿಟ್ಲರ್ ಧೋರಣೆಯನ್ನು ಮುಂದುವರೆಸಿತು. ಅಧಿವೇಶನ ಮುಕ್ತಾಯಗೊಳ್ಳುವ ಕೊನೆಯ ದಿನ ಸಿಎಜಿ ವರದಿಯನ್ನು ಸದನದಲ್ಲಿ ಮಂಡಿಸಲಾಯ್ತು. ಅಸಲಿ ಸಂಗತಿಯೆಂದರೆ ಆ ದಿನ ಸದನದಲ್ಲಿ ವಿರೋಧ ಪಕ್ಷಗಳ ಯಾವೊಬ್ಬ ಸದಸ್ಯರೂ ಹಾಜರಿರಲಿಲ್ಲ! ಕಾರಣ ಏನೆಂದರೆ ಅದಕ್ಕೆ ಹಿಂದಿನ ದಿನವೇ ವಿರೋಧ ಪಕ್ಷದ ಎಲ್ಲ ಸದಸ್ಯರನ್ನು ಗದ್ದಲದ ಕಾರಣ ನೀಡಿ ಸದನದಿಂದ ಅಮಾನತ್ತು ಮಾಡಲಾಗಿತ್ತು!!

ಇದು ಮೋದಿ ಆಡಳಿತದ ವಿಶೇಷ ವೈಖರಿಗಳಲ್ಲೊಂದು. ಇದೇ ತಂತ್ರವನ್ನು ಈಗ ಮೋದಿ ಕೂಟ ಪಾರ್ಲಿಮೆಂಟಿನಲ್ಲೂ ಯಶಸ್ವಿಯಾಗಿ ಅಳವಡಿಸುತ್ತಿದೆ.

ಇನ್ನು ಅದಾನಿಯಿಂದ ಕೊಂಡುಕೊಳ್ಳುವ ಸರಕಿಗೆ ಮೋದಿ ಸರ್ಕಾರ ನಿಗದಿಪಡಿಸಿದ ಬೆಲೆ ನೋಡಿ. ಅದಾನಿ ಪವರ್ ಲಿಮಿಟೆಡ್ ಕಂಪನಿಯೊಂದಿಗೆ ವಿದ್ಯುತ್ ಖರೀದಿ ಒಪ್ಪಂದವೊಂದನ್ನು ಸುಮಾರು ಮೂರು ವರ್ಷಗಳ ಹಿಂದೆ ಮೋದಿ ಸರ್ಕಾರ ಮಾಡಿಕೊಂಡಿತ್ತು, ಅದರ ಪ್ರಕಾರ ಅದಾನಿಗೆ ಒಂದು ಯುನಿಟ್‌ಗೆ 2.89 ರೂಪಾಯಿ ಪಾವತಿಸಬೇಕು. ಆದರೆ ಇದೇ ಸಂದರ್ಭದಲ್ಲಿ ಕೋಸ್ಟಲ್ ಗುಜರಾತ್ ಪವರ್ ಪ್ರಾಜೆಕ್ಟ್ ಒಂದು ಯುನಿಟ್‌ಗೆ 2.26 ರೂ. ದರದಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿದೆ. ಅಂದರೆ ತನ್ನ ಮಿತ್ರ ಕಂಪನಿಗೆ ಪ್ರತಿ ಯುನಿಟ್‌ಗೆ 63 ಪೈಸೆಯನ್ನು ಬಿಟ್ಟಿಯಾಗಿ ಮೋದಿಯವರು ಪಾವತಿಸಿದ್ದಾರೆ. ಈ ಲೆಕ್ಕದ ಪ್ರಕಾರ ಅದಾನಿ 2011 ಮತ್ತು 2012ರಲ್ಲಿ ಕ್ರಮವಾಗಿ 441 ಕೋಟಿ ಮತ್ತು 906 ಕೋಟಿ, ಒಟ್ಟಾರೆ ಆ ಎರಡೇ ವರ್ಷಗಳಲ್ಲಿ 1347 ಕೋಟಿಗಳಷ್ಟು ಹಣ ಸರ್ಕಾರಿ ಬೊಕ್ಕಸದಿಂದ ಅದಾನಿಯ ತಿಜೋರಿಗೆ ಹರಿದಿದೆ. ಒಟ್ಟು 25 ವರ್ಷಗಳ ಅವಧಿಗೆ 23,625 ಕೋಟಿ ಹಣ ಹೆಚ್ಚುವರಿಯಾಗಿ ಅದಾನಿಗೆ ಸೇರಲಿದೆ ಎಂಬುದು ಅಂದಾಜು.

ಅಕ್ರಮಗಳ ಸರದಾರ

2014ರ ಜನವರಿಯಲ್ಲಿ ಬೆಳಕಿಗೆ ಬಂದ ಹಗರಣ ಅದಾನಿಯ ಮತ್ತೊಂದು ಮುಖವನ್ನು ಬಿಚ್ಚಿಡುತ್ತದೆ. ತನ್ನ ವಿದ್ಯುತ್ ಸ್ಥಾವರಗಳಿಗೆ ಬೇಕಾದ ಯಂತ್ರೋಪಕರಣಗಳನ್ನು ಅದಾನಿ ಗ್ರೂಪ್ ಚೀನಾದಿಂದ ನೇರವಾಗಿ ಆಮದು ಮಾಡಿಕೊಂಡಿತ್ತು. ಆದರೆ ದುಬೈನಲ್ಲಿರುವ ಕಂಪನಿಯೊಂದರಿಂದ ಖರೀದಿ ಮಾಡಿದಂತೆ ಹೆಚ್ಚಿನ ಮೊತ್ತದ ಖೊಟ್ಟಿ ಬಿಲ್ ತಯಾರಿಸಿತ್ತು. ದುಬೈನಲ್ಲಿರುವ ಈ ಕಂಪನಿ ಗೌತಮ್ ಅದಾನಿಯ ಅಣ್ಣ ವಿನೋದ್ ಶಾಂತಿಲಾಲ್ ಅದಾನಿಯ ಮಾಲಿಕತ್ವದಲ್ಲಿದೆ. ಈ ಅಕ್ರಮದಿಂದ ಸುಮಾರು 2,322 ಕೋಟಿಗಳನ್ನು ಕಳ್ಳಮಾರ್ಗದಲ್ಲಿ ಅದಾನಿ ಲಪಟಾಯಿಸಿದ್ದಾನೆಂದು ತನಿಖಾ ವರದಿಗಳು ಅಂದಾಜು ಮಾಡಿದ್ದವು. ಈ ಮೂಲಕ ಒಂದುಕಡೆ ಕಂಪನಿಯಲ್ಲಿ ಹೂಡಿಕೆ ಮಾಡಿರುವ ಷೇರುದಾರರಿಗೆ ಟೋಪಿ ಇಟ್ಟರೆ, ಮತ್ತೊಂದು ಕಡೆ ತೆರಿಗೆ ಪಾವತಿಸದೆ ಅದಾನಿ ಕೂಟ ಸರ್ಕಾರಕ್ಕೆ ವಂಚಿಸಿತ್ತು.

2010ರ ಫೆಬ್ರವರಿಯ ಮತ್ತೊಂದು ಪ್ರಕರಣದಲ್ಲಿ ಅದಾನಿ ಗ್ರೂಪ್‌ನ ಎಂಡಿ ಹಾಗೂ ಗೌತಮ್ ಅದಾನಿಯ ಸ್ವಂತ ತಮ್ಮ ರಾಜೇಶ್ ಅದಾನಿಯನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದರು. ಗೋವಾ ಬಂದರಿನ ಮೂಲಕ ಪೆಟ್ರೋಲಿಯಂ ಉತ್ಪನ್ನ ಹಾಗು ಮತ್ತಿತರ ಸರಕುಗಳನ್ನು ಆಮದು ಮಾಡಿಕೊಂಡಿದ್ದ ಕಂಪನಿ ಸರ್ಕಾರಕ್ಕೆ ತೆರಿಗೆ ಕಟ್ಟದೆ ವಂಚಿಸಿತ್ತು. ದಂಡ ಪಾವತಿಸಿದ ನಂತರ ಅದಾನಿ ಸೋದರ ಬಿಡುಗಡೆಯಾಗಿದ್ದ.

ಕರ್ನಾಟಕದ ಬಳ್ಳಾರಿ ಗಣಿ ಅವ್ಯವಹಾರವನ್ನು ತನಿಖೆ ನಡೆಸಿದ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ಅದಾನಿ ಕಂಪನಿ ಅಕ್ರಮವಾಗಿ ಅದಿರು ರಫ್ತು ಮಾಡಿರುವುದನ್ನು ಬಹಿರಂಗಪಡಿಸಿದ್ದಾರೆ. ಅಲ್ಲದೆ ಲಂಚದ ಹೊಳೆಯನ್ನೇ ಹರಿಸಿರುವ ಬಗ್ಗೆ ಹಲವು ಸಾಕ್ಷ್ಯಾಧಾರ ಒದಗಿಸಿದ್ದಾರೆ.


ಇಂಥಾ ಅದಾನಿಗೆ ಆಪ್ತರಕ್ಷಕನಾಗಿ ಮೋದಿ ಉದ್ದಕ್ಕೂ ಕೆಲಸ ಮಾಡಿರುವುದು ಈಗ ಗುಟ್ಟಿನ ಸಂಗತಿಯೇನಲ್ಲ. ಮೋದಿ-ಅದಾನಿ ಬಾಂಧವ್ಯ ಬರೀ ವ್ಯವಹಾರಕ್ಕೆ ಮಾತ್ರ ಸೀಮಿತವಾದುದಲ್ಲ, ಅದಾನಿ ಕುಟುಂಬಕ್ಕೆ ಮೋದಿ ಅತಿ ಹತ್ತಿರದ ಫ್ಯಾಮಿಲಿ ಫ್ರೆಂಡ್! ಕಳೆದ ವರ್ಷ ಗೋವಾದಲ್ಲಿ ಭಾರೀ ವಿಜೃಂಭಣೆಯಿಂದ ನಡೆದ ಅದಾನಿಯ ಮಗನ ಮದುವೆ ಸಮಾರಂಭದಲ್ಲಿ ಸಿಎಂ ಮೋದಿ ವಿಶೇಷ ವ್ಯಕ್ತಿಯಾಗಿದ್ದ. ಎಲ್ಲ ಅಧಿಕೃತ ಕಾರ್ಯಗಳನ್ನು ಬದಿಗಿಟ್ಟು ರಾತ್ರಿಹಗಲೂ ಸಮಾರಂಭದಲ್ಲಿ ಠಿಕಾಣಿ ಹೂಡಿದ್ದ ಸಿಎಂ ನಡವಳಿಕೆ ಬಗ್ಗೆ ಕೆಲವು ಮಾಧ್ಯಮಗಳಲ್ಲಿ ಟೀಕೆ ಕೂಡ ವ್ಯಕ್ತವಾಗಿತ್ತು.

ಇಂಥಾ ಅದಾನಿ ತನ್ನ ಮಿತ್ರ ಮೋದಿಯನ್ನು ಪ್ರಧಾನಿ ಮಾಡಲು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಆತ ಸುರಿದ ಹಣವೂ ಕೂಡ ಸಾವಿರ ಸಾವಿರ ಕೋಟಿಗಳು! ಇಡೀ ದೇಶಾದ್ಯಂತ ಸಾವಿರಾರು ಪ್ರಚಾರಸಭೆಗಳನ್ನು ನಡೆಸಿದ ಪ್ರಧಾನಿ ಅಭ್ಯರ್ಥಿ ಮೋದಿ ಪ್ರಯಾಣ ಮಾಡಿದ್ದು ಅದಾನಿ ಒಡೆತನದ ಖಾಸಗಿ ಜೆಟ್‌ಪ್ಲೇನ್‌ನಲ್ಲೇ!

ಮೋದಿ-ಅದಾನಿಯ ಇಂಥಾ ಬಾಂಧವ್ಯವನ್ನು ಕಂಡು ಕೆಲವರು ಅದಾನಿಯ ಕಂಪನಿಯನ್ನು 'ಮೋದಾನಿ' ಕಂಪನಿ ಎಂದು ಗೇಲಿ ಮಾಡುತ್ತಾರೆ. ಮೋದಿ ಪ್ರಧಾನಿಯಾಗುವುದರೊಂದಿಗೆ ಈ 'ಮೋದಾನಿ'ಯ ಬೆಳವಣಿಗೆಯ ಗ್ರಾಫ್ ರಾಕೆಟ್ ವೇಗದಲ್ಲಿ ಬೆಳೆಯುತ್ತಾ ಸಾಗಿದೆ.

ಒಳ್ಳೆಯ ದಿನಗಳು ಬರಲಿವೆ ಎಂಬ ಮಾತು ಈಗಲಾದರೂ ಅರ್ಥವಾಯಿತಾ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ



ಸಗಣಿ ಸ್ವಾಮಿ ಎಂಟ್ರಿ ಕೊಟ್ಟ ನೋಡಿ...!

ಮಠದ ಅಧಿಕಾರಿಯ ಮಗಳ ಸಂಸಾರ ಭಂಗ



ಗೋಮುಖ ರಾಘವೇಶ್ವರನ ಕಾಮತಂತ್ರಗಳು ಅನೇಕ. ಹೀನಾಯಕ ಮತ್ತು ಖತರುನಾಕ. ಪ್ರೇಮಲತಾ ಶಾಸ್ತ್ರಿ ರೇಪ್ ಕೇಸಿನಲ್ಲಿ ಜಡ್ಜುಗಳ ಮೇಲೆ ಜಡ್ಜುಗಳು ಹೆದರಿಕೊಂಡು ವಿಚಾರಣೆಗೆ ಹಿಂಜರಿಯುತ್ತಿದ್ದರೆ ಮತ್ತೊಂದೆಡೆ ಸಗಣಿ ಸ್ವಾಮಿಯ ಕನ್ಯಾ ಚಪಲಕ್ಕೆ ಬಲಿಯಾದ ಹವ್ಯಕ ಕುಟುಂಬಗಳ ದುರಂತ ಕತೆಗಳು ಒಂದೊಂದಾಗಿ ಬೀದಿಗೆ ಬೀಳುತ್ತಿವೆ.

ಇದು ರಾಘವೇಶ್ವರನಿಂದಾಗಿ ಮುರಿದುಹೋದ ಮತ್ತೊಂದು ಸಂಸಾರದ ವ್ಯಥೆಯ ಕತೆ. ಹವ್ಯಕ ಭಕ್ತಾದಿಗಳ ಕೌಟುಂಬಿಕ ಸಮಸ್ಯೆಗಳನ್ನೂ ಗೋಮಾತೆಯ ಸಗಣಿಯಷ್ಟೇ ಪೂಜ್ಯ ಪ್ರಾಶಸ್ತ್ಯವಾಗಿಸಿಕೊಂಡ ರಾಘುಸ್ವಾಮಿಯ ಕುತಂತ್ರದ ಫಲವಾಗಿ ತುಂಬು ಹವ್ಯಕ ಸಂಸಾರವೊಂದು ಸರ್ವನಾಶವಾಗಿದೆ. ಅದೂ ರಾಮಚಂದ್ರಾಪುರ ಮಠದ ಮುಖ್ಯ ಅಧಿಕಾರಿಗಳಲ್ಲಿ ಒಬ್ಬರಾದ ಭಟ್ಟ ಎಂಬುವವರ ಮಗಳ ದಾಂಪತ್ಯಕ್ಕೇ ರಾಘುಸ್ವಾಮಿ ಕೊಳ್ಳಿಯಿಟ್ಟಿದ್ದಾನೆ. ಸದ್ಯ ಗಿರಿನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ತರಹೇವಾರಿ ಐಪಿಸಿ ಸೆಕ್ಷನ್ನುಗಳ ಕೌಟುಂಬಿಕ ಹಿಂಸೆಯ ಪ್ರಕರಣದಲ್ಲಿ ದೂರುದಾರರು ಬೇರೆ ಯಾರೂ ಅಲ್ಲ; ಖುದ್ದು ರಾಘವೇಶ್ವರನ ಮಠದ ಪ್ರಮುಖ ಅಧಿಕಾರಿಯಾದ ಭಟ್ಟ ಎಂಬುವವರ ಮುದ್ದಿನ ಮಗಳು.

ತನ್ನ ಗಂಡ ಪ್ರತಿನಿತ್ಯ ತನಗೆ ಮನೆಯಲ್ಲಿ ಹಿಂಸೆ ನೀಡುತ್ತಾನೆ, ಆತ ನಪುಂಸಕ, ಪುರುಷತ್ವ ನ್ಯೂನತೆಯಿದ್ದೂ ಸುಳ್ಳು ಹೇಳಿ ತನ್ನನ್ನು ಮದುವೆಯಾಗಿ ವಂಚಿಸಿದ್ದಾನೆ, ಹೀಗಿದ್ದೂ ಆತ ಬೇರೆ ಹೆಂಗಸಿನ ಸಹವಾಸದಲ್ಲಿದ್ದಾನೆ, ಡೈವೋರ್ಸ್ ನೀಡುವಂತೆ ಎಷ್ಟೇ ಬೇಡಿಕೊಂಡರೂ ನೀಡದೆ ಮತ್ತೆ ಮತ್ತೆ ಹಿಂಸಿಸುತ್ತಾನೆ; ಇತ್ಯಾದಿಯಾಗಿ ರಾಮಚಂದ್ರಾಪುರ ಮಠದ ಅಧಿಕಾರಿ ಭಟ್ಟರ ಮಗಳು ತನ್ನ ಪತಿಯ ವಿರುದ್ಧ ಗಿರಿನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾಳೆ. ಕೊಟ್ಟ ದೂರಲ್ಲೇ ಅದರ ಮರ್ಮವೂ ಅಡಗಿದ್ದನ್ನು ಲೆಕ್ಕ ಹಾಕಿದ ಪೊಲೀಸರು ಹಕೀಕತ್ತು ಬೇರೆಯದೇ ಇರಬೇಕೆಂದು ಕಾಟಾಚಾರದ ಶಾಸ್ತ್ರ ಮುಗಿಸಿ ಕೈತೊಳೆದುಕೊಂಡಿದ್ದಾರೆ.

ಅನಂತರ ಡೈವೋರ್ಸ್ ಪ್ರಕರಣ ಬೆಂಗಳೂರಿನ ಫ್ಯಾಮಿಲಿ ಕೋರ್ಟಿಗೆ ಸ್ಥಳಾಂತರಗೊಂಡಿದೆ. ವಿಚ್ಛೇದನದ ಕೋರಿಕೆಯಲ್ಲಿ ಇಂಥದ್ದೇ ಕಾರಣಗಳಿವೆ. ಕಳೆದ ಒಂದು ವರ್ಷದಿಂದ ಎಳೆದೂ ಜಗ್ಗಿ ಮಾಡುತ್ತಲೇ ಬಂದ ರಾಮಚಂದ್ರಾಪುರ ಮಠದ ಭಟ್ಟರ ಮಗಳ ದಾಂಪತ್ಯ ತಾಪತ್ರಯವೀಗ ತನ್ನ ಅಂತಿಮ ಘಟ್ಟ ಅಂದರೆ ಪರಸ್ಪರ ಒಪ್ಪಿ ಪತಿಪತ್ನಿ ವಿಚ್ಛೇದನದ ಹಂತಕ್ಕೆ ಬಂದು ನಿಂತಿದೆ. ಸಣ್ಣಪುಟ್ಟ ಹಣಕಾಸಿನ ಬಟವಾಡೆಯ ವಿವಾದವೆಲ್ಲ ಇತ್ಯರ್ಥಗೊಂಡಿತೆಂದರೆ ಇನ್ನೊಂದು ತಿಂಗಳಲ್ಲಿ ಭಟ್ಟರ ಅಳಿಯನಿಗೂ ಮಗಳಿಗೂ ವಿಚ್ಛೇದನವಾಗಿ ಸಗಣಿ ಸ್ವಾಮಿಯ ಸಾಂಸಾರಿಕ ಪಂಚಾಯ್ತಿಯೊಂದು ಅಂತ್ಯಕಂಡಂತಾಗುತ್ತದೆ!

ಪ್ರೇಮಲತಾ ಶಾಸ್ತ್ರಿ ಅತ್ಯಾಚಾರ ಪ್ರಕರಣದ ಜೊತೆಜೊತೆಗೇ ಸದ್ದಿಲ್ಲದೆ ನಡೆದುಹೋದ ಮಠದ ಅಧಿಕಾರಿ ಮಗಳ ಸಾಂಸಾರಿಕ ವಿಘಟನೆಯ ವಿಲನ್ ರಾಘವೇಶ್ವರನೆ. ಯಾವುದೋ ಕಾರ್ಪೊರೇಟ್ ಕಂಪನಿಗಿರುವಂತೆ ರಾಮಚಂದ್ರಾಪುರ ಮಠದ ಆಸ್ತಿ, ಆಧ್ಯಾತ್ಮ, ಸ್ವಾಮಿಕಾರ್ಯವನ್ನೆಲ್ಲ ನಿಭಾಯಿಸಲೆಂದೇ ಹುದ್ದೆಗಳಿವೆ. ಬೆಂಗಳೂರಿನ ಗಿರಿನಗರ ಮಠದ ಆವರಣದಲ್ಲೇ ಆ ಪ್ರಮುಖ ಅಧಿಕಾರಿಯ ಕಚೇರಿಯೂ ಇದೆ. ಈ ಹಿಂದೆ ಕರ್ನಾಟಕ ಪೊಲೀಸ್ ಇಲಾಖಾ ಮುಖ್ಯಸ್ಥರಾಗಿದ್ದ ತಿಮ್ಮಪ್ಪ ಮಡಿಯಾಳರು ಮಠದ ಇದೇ ಹುದ್ದೆಯಲ್ಲಿದ್ದರು. ಸುದೀರ್ಘ ಕಾಲದವರೆಗೆ ಮಠವನ್ನು ಸಮರ್ಥವಾಗಿ ನಿಭಾಯಿಸಿದ ಮಡಿಯಾಳ್ ಕರ್ನಾಟಕ ಕಂಡ ಜನಾನುರಾಗಿ ಪೊಲೀಸ್ ಅಧಿಕಾರಿಗಳಲ್ಲೊಬ್ಬರು.

ಅದೇನಾಯಿತೋ ಇಲ್ಲಿಗೆ ಆರು ವರ್ಷದ ಹಿಂದೆ ಇದ್ದಕ್ಕಿದ್ದಂತೆ ಆ ಹುದ್ದೆಗೆ ಗುಡ್‌ಬೈ ಹೇಳಿದ ಮಡಿಯಾಳ್ ಕಾಲಕ್ರಮೇಣ ಮಠಕ್ಕೆ ಬರುವುದನ್ನೇ ನಿಲ್ಲಿಸಿಬಿಟ್ಟರು. ಬಹುಶಃ ಸ್ವಾಮಿಯ ಹಗ್ಗ ಕಡಿಯುವ ಚಾಳಿ ಮಡಿಯಾಳರ ಗಮನಕ್ಕೆ ಬಂದಿರಬೇಕು. ಹೀಗೆ ಮಡಿಯಾಳರಿಂದ ತೆರವಾದ ಮಠದ ಅಧಿಕಾರಿಯ ಸ್ಥಾನಕ್ಕೆ ಬಂದವರು ಭಟ್. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಹವ್ಯಕ ಕುಟುಂಬದ ಭಟ್ ಕೂಡ ಧೀಮಂತ ಪೊಲೀಸ್ ಅಧಿಕಾರಿಯಾಗಿದ್ದವರೆ. ಬೆಂಗಳೂರಿನ ಸಿಎಆರ್ ಅಂದರೆ ನಗರ ಮೀಸಲು ಪೊಲೀಸ್ ಪಡೆಯಲ್ಲಿ ಡಿಸಿಪಿಯಾಗಿ ನಿವೃತ್ತರಾದ ಭಟ್‌ರ ಒಬ್ಬಳೇ ಮಗಳು ಡಾ. ಗಾಯಿತ್ರಿ (ಹೆಸರು ಬದಲಿಸಿದೆ).

ಪತ್ನಿ ತೀರಿಕೊಂಡ ನಂತರ ಬದುಕಿನ ಉಳಿದ ಆಯುಸ್ಸನ್ನೆಲ್ಲ ಮಠದ ಸೇವೆಗೆಂದೇ ಮೀಸಲಿಡುತ್ತೇನೆಂದು ರಾಘುಸ್ವಾಮಿಯ ಪಾದಕ್ಕೆ ಶರಣು ಬಂದ ಭಟ್ಟರ ಮಗಳು ಗಾಯಿತ್ರಿಯನ್ನು ಸಾಗರ ಮೂಲದ ನೇತ್ರ ತಜ್ಞ ಡಾ. ವರುಣ್ ವಡಕೋಳಿಯವರಿಗೆ (ಹೆಸರು ಬದಲಿಸಿದೆ) ಕೊಟ್ಟು ಮದುವೆ ಮಾಡಲಾಗಿತ್ತು. ಬೆಂಗಳೂರಿನ ಹನುಮಂತನಗರದಲ್ಲಿ ಗಂಡಹೆಂಡತಿ ಸೇರಿಕೊಂಡೇ ನೇತ್ರ ಆಸ್ಪತ್ರೆ ನಡೆಸಿಕೊಂಡು ಪತಿ ಪತ್ನಿ ಮೊದಮೊದಲು ಅನ್ಯೋನ್ಯವಾಗೇ ಇದ್ದರು. ಮದುವೆಯಾಗಿ ಇವತ್ತಿಗೆ ಇಪ್ಪತ್ತು ವರ್ಷಗಳಾಗಿವೆ. ಇಬ್ಬರು ಮಕ್ಕಳಿದ್ದಾರೆ. ಬೆಂಗಳೂರಿನ ಶ್ರೀನಗರದಲ್ಲಿ ತಮ್ಮದೇ ಸ್ವಂತ ಮನೆ ಕಟ್ಟಿಕೊಂಡು ನೆಮ್ಮದಿಯಿಂದಿದ್ದ ಭಟ್ಟರ ಮಗಳು- ಅಳಿಯನ ಸಾಂಸಾರಿಕ ತಾಪತ್ರಯ ಶುರುವಾಗಿದ್ದೇ ತಂದೆ ಭಟ್ಟ ಮಠದ ಅಧಿಕಾರಿಯಾಗಿ ಕಾಲಿಟ್ಟ ಗಳಿಗೆಯಿಂದ!

ಗಾಯಿತ್ರಿ-ವರುಣ್ ಇಬ್ಬರೂ ಹವ್ಯಕರಾದರೂ ಸ್ವಭಾವದಲ್ಲಿ ಅಜಗಜಾಂತರ ವ್ಯತ್ಯಾಸವಿತ್ತು. ಗಾಯಿತ್ರಿಯದ್ದು ಬಿಂದಾಸ್ ಸ್ವಭಾವವಾದರೆ ಪತಿ ವರುಣ್ ಮೆದು ಮನಸ್ಸಿನ ಪಕ್ಕಾ ಮಲೆನಾಡು ಹವ್ಯಕ ಸಂಪ್ರದಾಯದ ಆಸಾಮಿ. ತಂದೆ ಮಠದ ಅಧಿಕಾರಿಯಾಗಿ ಬಂದ ಮೇಲಂತೂ ಸ್ವಾಮಿಗೆ ಹೆಚ್ಚು ಸನಿಹವಾದ ಡಾ. ಗಾಯಿತ್ರಿ ಕಾಲಕ್ರಮೇಣ ವರುಣ್‌ನನ್ನು ನಿರ್ಲಕ್ಷಿಸತೊಡಗಿದರು. ಅದು ಪತ್ನಿಯ ಆಧಿಪತ್ಯ ಮತ್ತು ದರ್ಪವಾಗಿ ಡಾ. ವರುಣ್ ಪಾಲಿಗೆ ಮುಳುವಾಯಿತು. ಇಬ್ಬರು ಮಕ್ಕಳ ತುಂಬು ಸಂಸಾರದಲ್ಲಿ ಮದುವೆಯಾಗಿ ಇಪ್ಪತ್ತು ವರ್ಷದ ನಂತರ ಒಂದರ ಮೇಲೊಂದು ಅವಘಡಗಳಾದವು. ತನ್ನನ್ನು ನಿರ್ಲಕ್ಷಿಸುತ್ತಿರುವ ಪತ್ನಿಗೆ ಬೇರೆ ಯಾರ ಮೇಲೆಯೋ ಆಕರ್ಷಣೆಯಾಗಿರಬೇಕೆಂಬ ಗುಮಾನಿ ಪತಿಗೆ. ಹಾಗೇ ಡಾ. ಗಾಯಿತ್ರಿಗೂ ಪತಿಯ ಮೇಲೆ ಅನುಮಾನ. ಆಸ್ಪತ್ರೆಯ ಯಾರೋ ನರ್ಸ್ ಮೇಲೆ ವರುಣ್ ಅನುರಕ್ತರಾಗಿರಬೇಕೆಂಬ ಊಹೆ. ಬರುಬರುತ್ತ ಕಂದರ ದೊಡ್ಡದಾಯಿತು. ಪ್ರತಿನಿತ್ಯ ಮನೆಯಲ್ಲಿ ಜಗಳ. ಸಣ್ಣಪುಟ್ಟದ್ದಕ್ಕೂ ಅನುಮಾನ. ಪತಿ ವರುಣ್ ಏನು ಮಾಡಿದರೂ ಪತ್ನಿಗೆ ಅಸಹ್ಯ. ಐದು ವರ್ಷಗಳ ಕಾಲ ನಡೆದ ಪತಿ-ಪತ್ನಿ ಕಲಹ ಇಲ್ಲಿಗೆ ವರ್ಷದ ಹಿಂದೆ ವಿಚ್ಛೇದನಕ್ಕೆ ತಿರುಗಿದೆ.

ಅದು ಯಾವ ಮಟ್ಟಕ್ಕೆಂದರೆ ಗಂಡನ ಆಸ್ಪತ್ರೆಗೆ ಬರುವುದನ್ನೇ ನಿಲ್ಲಿಸಿದ ಗಾಯಿತ್ರಿ ತಂದೆಯ ಬೆಂಬಲದಿಂದ ಜಯನಗರದಲ್ಲಿ ತನ್ನದೇ ಪ್ರತ್ಯೇಕ ಆಸ್ಪತ್ರೆಯೊಂದನ್ನು ಆರಂಭಿಸಿದ್ದಾರೆ. ಅಲ್ಲಿಗೆ ಪತಿಪತ್ನಿ ಪ್ರತ್ಯೇಕವಾಗುವುದು ಬಹುತೇಕ ಖಚಿತವಾಗುತ್ತಿದ್ದಂತೆ ಮಠದ ಅಧಿಕಾರಿ ಭಟ್ಟರಿಗೆ ಮಗಳ ಸಾಂಸಾರಿಕ ದುರಂತದ ಚಿಂತೆ ಕಾಡಿದೆ. ಮಠದ ಸ್ವಾಮೀಜಿ ಈ ನಿಟ್ಟಿನಲ್ಲಿ ಪಂಚಾಯ್ತಿಗೆ ನಿಂತರೆ ಕನಿಷ್ಠ ಅಳಿಯನಾದರೂ ಅನುಸರಿಸಿಕೊಂಡು ಹೋಗಬಹುದು ಎಂಬ ನಿರೀಕ್ಷೆಯಲ್ಲೇ ಸ್ವಾಮಿಯ ಕಾಲಿಗೆ ಬಿದ್ದು ಮಗಳ ದಾಂಪತ್ಯ ಸರಿಪಡಿಸಿಕೊಡುವಂತೆ ಬೇಡಿಕೊಂಡಿದ್ದಾರೆ.

ತೋಳನ ತಂತ್ರ

ಏಕೆಂದರೆ ಡಾ. ವರುಣ್ ಸಾಗರದ ಪ್ರತಿಷ್ಠಿತ ಹವ್ಯಕ ಕುಟುಂಬದಿಂದ ಬಂದಾತ. ತನ್ನ ಮನೆತನದ ಗೌರವಕ್ಕಾದರೂ ಡಾ. ವರುಣ್ ಪತ್ನಿ ಜೊತೆ ಹೊಂದಾಣಿಕೆ ಮಾಡಿಕೊಳ್ಳಬಹುದೆಂಬ ಲೆಕ್ಕಾಚಾರ ಭಟ್ಟರಿಗಿತ್ತು. ಮಗಳ ಸಾಂಸಾರಿಕ ಸಮಸ್ಯೆ ಕೇಳಿದ್ದೇ ಹಸಿದ ತೋಳದಂತೆ ಚುರುಕಾದ ಸಗಣಿ ಸ್ವಾಮಿ ಪತಿ-ಪತ್ನಿಯರಿಬ್ಬರನ್ನೂ ಕರೆಸಿಕೊಂಡು ಪಂಚಾಯ್ತಿ ಮಾಡಿದ್ದೇ ಮಾಡಿದ್ದು. ಮೊದಮೊದಲು ಗಂಡಹೆಂಡತಿಯರನ್ನು ಒಟ್ಟೊಟ್ಟಿಗೆ ಕರೆಸಿಕೊಳ್ಳುತ್ತಿದ್ದ



ಸ್ವಾಮೀಜಿ ಬರುಬರುತ್ತ ಪ್ರತ್ಯೇಕವಾಗಿ ಬೇರೆಬೇರೆ ಸಂದರ್ಭಗಳಲ್ಲಿ ಬೇರೆಬೇರೆಯಾಗಿ ಚೌಕಾಸಿಗಿಳಿದ. ಡಾ. ಗಾಯತ್ರಿಯನ್ನು ಕರೆಸಿಕೊಂಡು ಆಕೆಯ ಪತಿಯ ಖಾಸಗಿ ಸಂಗತಿಗಳನ್ನು ಬಾಯಿ ಬಿಡಿಸಿಕೊಂಡರೆ ಡಾ. ವರುಣ್‌ನನ್ನು ಕರೆಸಿಕೊಂಡು ಪತ್ನಿಯ ಬಗ್ಗೆ ಮಾಹಿತಿ ಪಡೆಯುತ್ತಿದ್ದ.

ಇಲ್ಲಿ ಸ್ವಾಮಿಯ ತಂತ್ರವೊಂದೇ. ಗಂಡನನ್ನು ಕರೆಸಿಕೊಂಡು ಪತ್ನಿಯ ಬಗ್ಗೆ ಆತನಿಗೆ ಇನ್ನಷ್ಟು ಅನುಮಾನ ಅಸಹ್ಯ ಹುಟ್ಟುವಂತೆ ಮಾಡುವುದು. ಪತ್ನಿಯನ್ನು ಪ್ರತ್ಯೇಕವಾಗಿ ಮಾತಾಡಿಸಿ ಆಕೆಯಲ್ಲಿ ಗಂಡನ ಬಗ್ಗೆ ಮತ್ತಷ್ಟು ತಾತ್ಸಾರ ಅನಾದರವನ್ನು ಹುಟ್ಟಿಹಾಕುವುದು. ಇದರ ಉದ್ದೇಶ ಪತಿ-ಪತ್ನಿ ಬೇರೆಯಾದರೆ ಸಹಜವಾಗೇ ಇಬ್ಬರೂ ತನಗೆ ಹತ್ತಿರವಾಗುತ್ತಾರೆ. ಮಠವನ್ನು ಮತ್ತಷ್ಟು ಅವಲಂಬಿಸುತ್ತಾರೆ. ತಾನು ಪರಿಹಾರಾರ್ಥ ಹೇಳಿದ ಹೋಮ-ಹವನ, ಪೂಜೆಗಳನ್ನು ಇಬ್ಬರೂ ಮಾಡಿಸುತ್ತಿದ್ದರೆ ಮುಂದೊಮ್ಮೆ ನಿರಾಶ್ರಿತಳಾದ ಪತ್ನಿಯನ್ನು ಶಾಶ್ವತವಾಗಿ ತನ್ನ ಅಂತಃಪುರದ ದಾಸಿಯನ್ನಾಗಿಸಿಕೊಳ್ಳುವುದು ಸ್ವಾಮಿಯ ಲೆಕ್ಕಾಚಾರ.

ಇಲ್ಲಿ ಪತಿ ಮತ್ತು ಪತ್ನಿಯ ನಡುವೆ ಯಾವುದೇ ಸಂಪರ್ಕವಿರದ ಹಾಗೆ ಸ್ವಾಮಿ ನೋಡಿಕೊಳ್ಳುತ್ತಾನೆ. ಇಬ್ಬರ ಮಧ್ಯೆ ಇನ್ನಷ್ಟು ಅನುಮಾನ ಅಂತರ ಹುಟ್ಟಿಹಾಕುತ್ತಾನೆ. ಇಬ್ಬರಿಂದಲೂ ಸೇವೆ ಮಾಡಿಸಿಕೊಳ್ಳುತ್ತಾನೆ. ಪ್ರೇಮಲತಾ-ದಿವಾಕರ್ ಶಾಸ್ತ್ರಿ ವಿಷಯದಲ್ಲಿ ಹೇಗೆ ಇಬ್ಬರನ್ನೂ ವ್ಯವಸ್ಥಿತವಾಗಿ ದೂರ ಮಾಡಿ ಕಾಲಕ್ರಮೇಣ ಪತ್ನಿಯನ್ನು ತನ್ನ ಅಂತಃಪುರಕ್ಕೆ ಸೇರಿಸಿಕೊಳ್ಳುವುದು ರಾಘವೇಶ್ವರನ ತಂತ್ರವಾಗಿತ್ತೋ ಈ ಪ್ರಕರಣದಲ್ಲೂ ಹಾಗೇ ಆಯಿತು. ಮಠ ಹೊಕ್ಕಿದ ಪತಿ ಪತ್ನಿ ಮತ್ತಷ್ಟು ದೂರವಾದರೇ ಹೊರತು ಒಂದಾಗಲೇ ಇಲ್ಲ. ಸತತ ಒಂದು ವರ್ಷ ಕಾಲ ಸ್ವಾಮಿಯ ಇಷ್ಟಾರ್ಥ ಪೂರೈಸಿದ ಡಾ. ವರುಣ್‌ಗೆ ಯಾವುದೋ ಸಂದರ್ಭದಲ್ಲಿ ಸ್ವಾಮಿಯ ಹುನ್ನಾರದ ವಾಸನೆ ಹತ್ತಿದೆ. ಕ್ರಮೇಣ ಮಠಕ್ಕೆ ಬರುವುದನ್ನೇ ನಿಲ್ಲಿಸಿದ್ದಾರೆ. ಆದರೆ ಆಸ್ಪತ್ರೆ ಮತ್ತು ಮನೆಯಿಂದ ವರುಣ್‌ರನ್ನು ಹೊರದಬ್ಬಬೇಕಲ್ಲ, ಅದಕ್ಕೆಂದು ಗಿರಿನಗರ ಪೊಲೀಸ್ ಠಾಣೆಯಲ್ಲಿ ಪತ್ನಿ ಗಾಯಿತ್ರಿಯಿಂದ ವರುಣ್ ವಿರುದ್ಧ ಖೊಟ್ಟಿ ಕಂಪ್ಲೇಂಟು ದಾಖಲಿಸಲಾಗಿದೆ.

ಡಾ. ವರುಣ್ ನಪುಂಸಕರೇ ಆಗಿದ್ದ ಪಕ್ಷದಲ್ಲಿ ಹೇಗೆ ಇಬ್ಬರು ಮಕ್ಕಳಾಗಲು ಸಾಧ್ಯವಿತ್ತು? 20 ವರ್ಷಗಳ ಕಾಲ ಒಟ್ಟೊಟ್ಟಿಗೇ ಇದ್ದೂ ಪತ್ನಿಯ ಪಾಲಿಗೆ ಗಂಡ ರಾತ್ರೋರಾತ್ರಿ ಲೈಂಗಿಕ ಶಕ್ತಿಹೀನನಾಗಲು ಹೇಗೆ ಸಾಧ್ಯ? ಹಾಗೊಮ್ಮೆ ಬೇರೆ ಹೆಂಗಸಿನ ಜೊತೆ ವರುಣ್‌ಗೆ ಸಂಬಂಧವಿದ್ದದ್ದೇ ಆಗಿದ್ದರೆ ನಪುಂಸಕನಾಗಿರಲು ಸಾಧ್ಯವಿಲ್ಲ. ಅಲ್ಲಿಗೆ ವರುಣ್ ವಿರುದ್ಧ ದಾಖಲಾಗಿದ್ದ ದೂರೇ ಕಪೋಲ ಕಲ್ಪಿತವಾಗಿತ್ತು. ವಿಚ್ಛೇದನಕ್ಕಾಗಿ ಕಾತರಿಸುತ್ತಿದ್ದ ಪತ್ನಿ ಗಾಯಿತ್ರಿ ಆತುರಕ್ಕೆ ಬಿದ್ದು ಖೊಟ್ಟಿ ಆರೋಪ ಮಾಡುತ್ತಿರುವುದನ್ನು ಸೂಕ್ಷ್ಮವಾಗೇ ಗಮನಿಸಿದ ಗಿರಿನಗರ ಪೊಲೀಸರು ಕಾಟಾಚಾರಕ್ಕೆ ದೂರು ಪಡೆದು ಸುಮ್ಮನಾದರು. ಮಠದ ಅಧಿಕಾರಿ ಭಟ್ಟರಿಗೂ ಇಷ್ಟೇ ಸಾಕಿತ್ತು.

ಇದಾದ ನಂತರ ಶ್ರೀನಗರದ ಮನೆಯಿಂದ ವರುಣ್‌ರನ್ನು ಹೊರದಬ್ಬಲು ರಾಘು ಸ್ವಾಮಿ ತನ್ನೆಲ್ಲಾ ಗೂಂಡಾ ಭಕ್ತರನ್ನು ಛೂಬಿಟ್ಟಿದ್ದ. ಮಠದ ಅಧಿಕಾರಿ ಭಟ್ಟರ ಜೊತೆ ಶ್ರೀನಗರದ ಮನೆಗೆ ನುಗ್ಗಿದ ರಾಘವೇಶ್ವರನ ಭಕ್ತರು ಅಕ್ಷರಶಃ ಎತ್ತಿ ಹೊರಕ್ಕೆಸೆದಂತೆ ವರುಣ್‌ರನ್ನು ಹೊರಕ್ಕೆ ಹಾಕಿದ್ದಾರೆ. ಅನಂತರ ರಾಘು ಭಕ್ತರ ಪಡೆ ಆಸ್ಪತ್ರೆಗೂ ನುಗ್ಗಿ ವರುಣ್‌ರನ್ನು ಹೊರದಬ್ಬಲು ಯತ್ನಿಸಿದೆ. ಅಷ್ಟರಲ್ಲಿ ಡಾ. ವರುಣ್ ಕುಟುಂಬದ ಹವ್ಯಕ ಹಿರೀಕರೊಬ್ಬರು ಸ್ವಾಮಿಯನ್ನು ಸಂಪರ್ಕಿಸಿ ಗಾಯಿತ್ರಿಗೆ ಡೈವೋರ್ಸ್ ಜೊತೆಗೆ ಆಸ್ತಿಯ ಅರ್ಧಪಾಲನ್ನೂ ಬಿಟ್ಟುಕೊಡಲು ಒಪ್ಪಿಕೊಂಡಿದ್ದಾರೆ. ಸ್ವಾಮಿಯ ಗೂಂಡಾಭಕ್ತರ ಕಾಟ, ಅಧಿಕಾರಿ ಭಟ್ಟರ ಪ್ರಭಾವ ಮತ್ತು ಸಗಣಿಸ್ವಾಮಿಯ ಕುತಂತ್ರದ ಮುಂದೆ ಏಗಲಾಗದೆ ವರುಣ್ ಪತ್ನಿಯಿಂದ ದೂರವಾಗಿದ್ದಲ್ಲದೆ ಆಸ್ತಿಯನ್ನೂ ಬಿಟ್ಟು ಕೊಟ್ಟಿದ್ದಾರೆ.

ಈಗ ಉಳಿದಿರುವುದು ಕಾಟಾಚಾರದ ಆಸ್ತಿ ವಿಭಜನೆ ಮತ್ತು ಕೌಟುಂಬಿಕ ನ್ಯಾಯಾಲಯದಲ್ಲಿ ಪರಸ್ಪರ ಒಪ್ಪಿತ ವಿಚ್ಛೇದನ ಮಾತ್ರ. ಬಹುಶಃ ಇನ್ನೊಂದು ತಿಂಗಳಲ್ಲಿ ಅಧಿಕೃತವಾಗಿ ವಿಚ್ಛೇದನ ಸಿಗಬಹುದು. ಆದರೆ ಮಠದ ಅಧಿಕಾರಿಯ ಮಗಳ ಸಂಸಾರಕ್ಕೇ ಸ್ವಾಮೀಜಿ ಕೊಳ್ಳಿಯಿಟ್ಟ ರೀತಿಯಿತ್ತಲ್ಲ ಅದು ಸಗಣಿ ಸ್ವಾಮಿಯ ಕಾಮತಂತ್ರವಲ್ಲದೇ ಬೇರೇನೂ ಆಗಿರಲಿಲ್ಲ. ತನ್ನನ್ನು ನಂಬಿ ಬಂದ ಭಕ್ತರ ಮಕ್ಕಳ ಸಂಸಾರವನ್ನೇ ಸರಿಪಡಿಸಲಾಗದ ಸ್ವಾಮೀಜಿ, ಇನ್ನು ಯಾರನ್ನು ತಾನೇ ಉದ್ಧಾರ ಮಾಡಿಯಾನು? ಪ್ರೇಮಲತಾ-ದಿವಾಕರ ಶಾಸ್ತ್ರಿ ಸಂಸಾರವನ್ನು ಮುರಿಯಲು ಏನು ತಂತ್ರ ಬಳಸಿದ್ದನೋ ಅಧಿಕಾರಿ ಭಟ್ಟರ ಮಗಳು-ಅಳಿಯನ ವಿಷಯದಲ್ಲೂ ಅದೇ ಬುದ್ಧಿ ತೋರಿಸಿದ್ದಾನೆ. ಸುದೈವವಶಾತ್ ಪ್ರೇಮಲತಾ ಮತ್ತು ಶಾಸ್ತ್ರಿ ಮತ್ತೆ ಒಂದಾದರೆ ಅಧಿಕಾರಿ ಭಟ್ಟರ ಮಗಳು-ಅಳಿಯರ ಸಂಸಾರ ದುರಂತ ಅಂತ್ಯ ಕಂಡಿದೆ. ಸ್ವಾಮಿ ಬಯಸಿದ್ದೂ ಭಕ್ತೆಯ ವಿಚ್ಛೇದನ ಈಗ ಸಿಕ್ಕಿದ್ದೂ ಆತನ ಪಾಲಿಗೆ ಮೃಷ್ಟಾನ್ನ!

ಸ್ವಾಮಿಯನ್ನು ನಂಬಿದ ತಪ್ಪಿಗೆ ಪಾಪ ಡಾ. ವರುಣ್ ಈಗ ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾರೆ.

● ರಾ. ಸೋಮನಾಥ್

ಕೆ.ಹೆಚ್.ಶ್ರೀನಿವಾಸ್ ಸಂಸಾರಕ್ಕೇ ಕೊಳಕೆರಚಿದ

ಕೆ.ಹೆಚ್. ಶ್ರೀನಿವಾಸ್ ಕರ್ನಾಟಕ ಕಂಡ ಸಜ್ಜನ ಮತ್ತು ವಿಚಾರವಂತ ರಾಜಕಾರಣಿಯೆಂಬುದರಲ್ಲಿ ಎರಡು ಮಾತಿಲ್ಲ. ರಾಘವೇಶ್ವರ ಸ್ವಾಮೀಜಿಯ ವಿರುದ್ಧ ಯಾವತ್ತು ರೇಪ್ ಕೇಸು ದಾಖಲಾಯಿತೋ ಆಗ ಶ್ರೀನಿವಾಸ್ ಸಹಜವಾಗೇ ಹವ್ಯಕ ಜನಾಂಗದ ನೈತಿಕ ಪ್ರಶ್ನೆಯೆತ್ತಿ ಪೀಠ ಬಿಟ್ಟು ಇಳಿಯುವಂತೆ ಗುಡುಗಿದರು. ಹೀಗೆ ಯಾರೆಲ್ಲ ತನ್ನ ವಿರುದ್ಧ ದನಿಯೆತ್ತುತ್ತಾರೋ ಅಂಥವರ ವಿರುದ್ಧ ಸ್ವಾಮಿ ಪ್ರಯೋಗಿಸುವುದು ಮತ್ತದೇ ಪತಿಪತ್ನಿ ವಿರಸದ ಸಾಂಸಾರಿಕ ವಿಕೃತಿಯನ್ನೇ!



ಸ್ವಾಮಿ ರಾಘು ಪ್ರಕಾರ ಕೆ.ಹೆಚ್. ಶ್ರೀನಿವಾಸ್ ವಿರುದ್ಧ ಅವರ ಪತ್ನಿಯೇ ತಿರುಗಿಬಿದ್ದಿದ್ದರಂತೆ. ತನಗೆ ಡೈವೋರ್ಸ್ ಕೊಡಿಸಿ ಎಂದು ಸ್ವಾಮಿಯ ಕಾಲಿಗೆ ಬಿದ್ದ ಶ್ರೀನಿವಾಸ್‌ರ ಪತ್ನಿಯನ್ನು ತಾನೇ ಸಮಾಧಾನ ಮಾಡಿ ಸಂಸಾರ ಒಂದು ಮಾಡಿದೆ ಎಂಬುದು ರಾಘವೇಶ್ವರನ ಕುಚೋದ್ಯ.

ತಮಾಷೆಯೆಂದರೆ ಕೆ.ಹೆಚ್. ಶ್ರೀನಿವಾಸ್‌ರಿಗೀಗ ವಯಸ್ಸು 73. ಮಕ್ಕಳ ಮದುವೆ ಮುಗಿಸಿ ಇನ್ನೇನು ಮೊಮ್ಮಕ್ಕಳ ಮದುವೆ ಮಾಡಬೇಕಾದ ವಯಸ್ಸಿನಲ್ಲಿ ಶ್ರೀನಿವಾಸ್ ಪತ್ನಿ ವಿಚ್ಛೇದನ ಕೋರಿ ಸ್ವಾಮಿಯ ಕಾಲಿಗೆ ಬೀಳುವುದುಂಟಾ? ಸುಳ್ಳು ಹೇಳುವುದಕ್ಕೂ ಒಂದು ಮಿತಿ ಬೇಡವೆ? ತನ್ನ ದುರಾಚಾರದ ವಿರುದ್ಧ ದನಿಯೆತ್ತಿದವರ ಖಾಸಗಿ ಬದುಕನ್ನೇ ಕೊಳಕು ಮಾಡಲು ಹೊರಟ ರಾಘವೇಶ್ವರನ ಕೊಳಕು ಮನಸ್ಸಿಗೆ ಮದ್ದುಂಟೆ?


ರಾಘು ಕ್ರಿಮಿನಲ್ ತಂತ್ರವೇ ಅಂಥಾದ್ದು....

ಮಠದ ಅಧಿಕಾರಿ ಭಟ್ಟ ಮತ್ತು ಕುಮಟಾದ ಉದ್ಯಮಿ ಎಂ.ಎನ್. ಭಟ್ ಮದುಗುಣಿಯವರ ಮುಂದೆ ದಿವಾಕರ್ ಶಾಸ್ತ್ರಿ ತಮ್ಮ ಪತ್ನಿ ಮೇಲಾದ ಅತ್ಯಾಚಾರದ ಬಗ್ಗೆ ಹೇಳಿಕೊಂಡಿದ್ದರು. ಮೊದಮೊದಲು ಸ್ವಾಮಿಯ ದುರಾಚಾರದ ಬಗ್ಗೆ ಅಸಹ್ಯ ಪಟ್ಟುಕೊಂಡೇ ವಿಚಾರಣೆಗಿಳಿದ ಅಧಿಕಾರಿ ಭಟ್ಟರು ಕ್ರಮೇಣ ಸ್ವಾಮಿಯ ಪರವಹಿಸಿ ಕಾರ್ಯಾಚರಣೆಗೆ ನಿಂತಿದ್ದಕ್ಕೆ ಕಾರಣವಾಗಿದ್ದು ಅವರ ಮಗಳ ದಾಂಪತ್ಯ ಪಜೀತಿ.

ಮಗಳು ಅಳಿಯನನ್ನು ಸ್ವಾಮೀಜಿ ಒಂದು ಮಾಡಿಸುತ್ತಾನೆಂದೇ ನಂಬಿದ್ದ ಭಟ್ಟರಿಗೆ ಅಳಿಯನೇ ಸರಿಯಿಲ್ಲ ಎಂಬ ಭಾವನೆ ಬಿತ್ತಿದ್ದೂ ರಾಘವೇಶ್ವರನೇ. ಸ್ವಾಮೀಜಿ ಭಟ್ಟರ ತಲೆಗೆ ಅಳಿಯನ ವಿರುದ್ಧ ಬಿತ್ತಿದ ವಿಷ ಬೀಜ ಅದೆಷ್ಟು ಕಟುವಾಗಿತ್ತೆಂದರೆ ಗಿರಿನಗರ ಪೊಲೀಸ್ ಠಾಣೆಯಲ್ಲಿ ತಮ್ಮ ಪೊಲೀಸ್ ಪವರ್ ಬಳಸಿ ಭಟ್ಟರು ನೀಡಿದ ಮತ್ತೊಂದು ದೂರಿನ ಪರಿಣಾಮವಾಗಿ 15 ದಿನಗಳ ಕಾಲ ಅಳಿಯ ವರುಣ್ ತಲೆ ಮರೆಸಿಕೊಳ್ಳಬೇಕಾಯಿತು. ದೂರು ದಾಖಲಾದ 15 ದಿನಗಳ ನಂತರವೇ ವರುಣ್ ಜಾಮೀನು ಗಿಟ್ಟಿಸಿ ನಿಟ್ಟುಸಿರಿಡುವ ಹೊತ್ತಿಗೆ ವಿಚ್ಛೇದನ ನೀಡದೇ ಬೇರೆ ವಿಧಿಯೇ ಇಲ್ಲವಾಗಿತ್ತು.

ರಾಘವೇಶ್ವರನ ಕ್ರಿಮಿನಲ್ ತಂತ್ರವೇ ಅಂಥಾದ್ದು!

ಕ್ಷೇತ್ರ'ದ ಭರ್ಜರಿ ಬಡವ!



ಕೆಲವು ಕಳ್ಳ ಖದೀಮರು, ಕಾಳಸಂತೆಯ ...ಲುಕೋರರು ಸರ್ಕಾರಕ್ಕೆ, ಸಾರ್ವಜನಿಕರಿಗೆ ವಂಚಿಸಿ ಆಸ್ತಿ ಲಪಟಾಯಿಸುವುದು ಮಾಮೂಲಿ ಸಂಗತಿ. ...ಾ ಹಗಲು ದರೋಡೆಗಳು ಇಂದಿನ ಕಾಲದಲ್ಲಿ ತೀರಾ ...ಮೂಲಿ ಎನಿಸಿಕೊಂಡುಬಿಟ್ಟಿವೆ. ಅಂತಹ ಪ್ರಕರಣಗಳ ...ಜನಸಾಮಾನ್ಯರು ಈಗೀಗ ಹೆಚ್ಚು ತಲೆಕೆಡಿಸಿಕೊಳ್ಳುವ ...ಜೆಗೂ ಹೋಗುವುದಿಲ್ಲ ಬಿಡಿ.

...ಆದರೆ ನಾವೆಲ್ಲರೂ ತಲೆಕೆಡಿಸಿಕೊಳ್ಳಲೇಬೇಕಾದ ...ಂದು ಪ್ರಕರಣ ಇದೀಗ ಬಟಾಬಯಲಾಗಿದೆ. ಇಂಥಾ ...ಿ ಪ್ರಕರಣದ ಕೇಂದ್ರ ವ್ಯಕ್ತಿಯ ಪೂರ್ವಾಪರ ಕೇಳಿದರೆ ...ಲೇ ಆಗಲಿ ಬೆಚ್ಚಿಬೀಳಲೇ ಬೇಕು.

...ಈತನೊಬ್ಬ ಆಗರ್ಭ ಶ್ರೀಮಂತ. ಅವರ ಕುಟುಂಬ ...ಬಯಿನ್ನಿಂದಲೂ ಅಕ್ರಮ ಹಾಗೂ ಸಕ್ರಮ ...ರ್ಗಗಳಿಂದ ಸಾವಿರಾರು ಎಕರೆ ಭೂಮಿಯ ಹಿಡುವಳಿ ...ಬದಿದೆ. ಮೆಡಿಕಲ್, ಇಂಜಿನಿಯರಿಂಗ್, ...ನೇಜ್‌ಮೆಂಟ್ ಕೋರ್ಸುಗಳನ್ನೂ ಒಳಗೊಂಡು ...ಟಕದ ವಿವಿಧ ಊರುಗಳಲ್ಲಿ ಹತ್ತಾರು ವಿದ್ಯಾ ಸಂಸ್ಥೆಗಳ ...ತಿಗಳಲ್ಲಿ ಈತನೂ ಒಬ್ಬ. ಅಷ್ಟು ಮಾತ್ರವಲ್ಲ, ಈತ ...ಟಕ ಬ್ಯಾಂಕ್‌ನ ಹಾಲಿ ಬೋರ್ಡ್ ಆಫ್ ...ರ್‌ಗಳಲ್ಲಿ ಒಬ್ಬ.

...ಇದಿಷ್ಟೇ ಅಲ್ಲ, ಈತ ಸ್ಟೋನ್ ಕ್ರಷರ್ಸ್, ಕಲ್ಲು ...ರಿಕೆ ಮುಂತಾದ ಭಾರೀ ಲಾಭದಾಯಕ ದಂಧೆಗಳಲ್ಲೂ ...ಾಕಿದ್ದಾನೆ.

...ಈತನ ತಂದೆ ಕೂಡ ಮಾಮೂಲಿ ವ್ಯಕ್ತಿಯಾಗಿರಲಿಲ್ಲ, ...ನ ಕಾಲದಲ್ಲೇ ತಮ್ಮ ಕ್ಷೇತ್ರವನ್ನು ಪ್ರತಿನಿಧಿಸಿ ...ಾಗಿದ್ದವರು.

...ಈ ಮಹಾ ವ್ಯಕ್ತಿಯ ಬಯೋಡಾಟ ಅಷ್ಟಕ್ಕೇ ...ಯುವುದಿಲ್ಲ, ಈತನ ಕಿರೀಟಕ್ಕೆ ಗರಿಯಂತೆ ಈ ...ನುಭಾವ ನೂರಾರು ಕೋಟಿ ಆದಾಯವಿರುವ ...ರ್ಮಿಕ ಟ್ರಸ್ಟ್ ಒಂದರಲ್ಲಿ ಟ್ರಸ್ಟೀ ಆಗಿದ್ದಾನೆ. ಅದೂ ...ಥಾ ಟ್ರಸ್ಟ್ ಅಲ್ಲ, ಶ್ರೀ ಕ್ಷೇತ್ರ ಧರ್ಮಸ್ಥಳ ...ಮಂಜುನಾಥೇಶ್ವರ ಟ್ರಸ್ಟ್!!

...ಈತನ ನಾಮಾಂಕಿತ ಶ್ರೀ ಹರ್ಷೇಂದ್ರ ಕುಮಾರ್ ...!! ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ದಕ್ಷಿಣ ಭಾರತದಲ್ಲೇ ಸತ್ಯ ನ್ಯಾಯ, ಧರ್ಮಕ್ಕೆ ಹೆಸರಾಗಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ದೇವಾಲಯದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರ ಖಾಸಾ ತಮ್ಮ!!

ಇಂಥಾ ಹಿನ್ನೆಲೆ ಹೊಂದಿರುವ ಈ ಮಹಾನುಭಾವ 1972ನೇ ಇಸವಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿದ ಒಂದು ದೃಢೀಕರಣ ಪತ್ರದ ಸಾರಾಂಶ ಹೀಗಿದೆ ನೋಡಿ. 'ನಾನು ಭೂರಹಿತ ಬಡವ, ನನ್ನ ವಾರ್ಷಿಕ ವರಮಾನ ರೂ.1200/- ಮಾತ್ರ'!! ಆಶ್ಚರ್ಯವೆನಿಸುತ್ತಿದೆಯೆ? ನಂಬಲು ಕಷ್ಟವೆನಿಸುತ್ತಿದೆಯೆ?

ಇಲ್ಲಾ, ನೀವು ನಂಬಲೇಬೇಕು. ಯಾಕೆಂದರೆ ಈ ಮಹಾಶಯ ರಾಜ್ಯ ಸರಕಾರದ ಕಂದಾಯ ಇಲಾಖೆಗೆ ನೀಡಿರುವ ಲಿಖಿತ ರೂಪದ ದೃಢಪತ್ರ 'ಪತ್ರಿಕೆ' ಕಚೇರಿ ತಲುಪಿದೆ. (ವಿವರಗಳಿಗೆ ದಾಖಲೆ ನೋಡಿ)

ತಾನು ಇಂಥಾ ಹೀನಸ್ಥಿತಿಯಲ್ಲಿದ್ದೇನೆ ಎಂದು ಘೋಷಿಸಿಕೊಳ್ಳುವಂಥಾ ದುಸ್ಥಿತಿಯಾದರೂ ಮಾನ್ಯ ಹರ್ಷೇಂದ್ರ ಹೆಗ್ಗಡೆಯವರಿಗೆ ಯಾಕೆ ಬಂದೊದಗಿತ್ತು? ನಮಗೆಲ್ಲಾ ತಿಳಿದಿರುವಂತೆ ಅವರಿಗೆ ಅಂಥಾ ದುಸ್ಥಿತಿ ಎಂದಿಗೂ ಬಂದಿರಲಿಲ್ಲ. ಮಸಲತ್ತೇನೆಂದರೆ ಧರ್ಮಸ್ಥಳ ಗ್ರಾಮದ ಆಯಕಟ್ಟಿನ ಜಾಗವೊಂದನ್ನು ಲಪಟಾಯಿಸಲು ಇಂಥಾ ನಯವಂಚಕ, ಹಸಿಹಸಿ ಸುಳ್ಳು ಘೋಷಣೆಯನ್ನು ಮಾಡಿದ್ದು. ಈ ಘೋಷಣೆಯ ಆಧಾರದಲ್ಲಿ ಧರ್ಮಸ್ಥಳ ಗ್ರಾಮದ ಸರ್ವೆ ನಂಬರ್ 61/1ಎಯಲ್ಲಿ 7.59 ಎಕರೆ ಸರಕಾರಿ ಭೂಮಿಯನ್ನು ದರ್ಖಾಸ್ತು ಆಗಿ ಕಂದಾಯ ಇಲಾಖೆಯಿಂದ ಮಂಜೂರು ಮಾಡಿಸಿಕೊಳ್ಳಲು ಅರ್ಜಿ ಗುಜರಾಯಿಸಿದ್ದಾರೆ.

ದ.ಕ ಜಿಲ್ಲಾ ವಿಶೇಷ ಸಹಾಯಕ ಕಮೀಷನರ್ ತಾ.31.03.1972 ರಂದು ಧರ್ಮಸ್ಥಳ ಗ್ರಾಮದ ಸರ್ವೆ ನಂಬ್ರ 61/1ಎ ನಲ್ಲಿ 7.59 ಎಕ್ರೆ ಸರಕಾರಿ ಸ್ಥಳವನ್ನು ಹರ್ಷೇಂದ್ರರಿಗೆ ಮಂಜೂರು ಮಾಡಿದ್ದಾರೆ ಹಾಗೂ ತಹಸೀಲ್ದಾರರು ಈ ಬಗ್ಗೆ ಸಾಗುವಳಿ ಚೀಟಿ ಕೊಡುವಂತೆ ಆದೇಶಿಸಿದ್ದಾರೆ.


ಈ ವ್ಯವಹಾರಕ್ಕೆ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರೂ ಸಾಕ್ಷಿಯಾಗಿದ್ದಾರೆಂದರೆ ಏನು ಹೇಳಬೇಕು? "ಸರ್ವೆ ನಂಬ್ರ 62ರ (ನಕ್ಷೆ ಪ್ರಕಾರ ಇದು ಹೆಗ್ಗಡೆಯವರ ಕದಿಂ ಭೂಮಿ) ಕುಮ್ಕಿ ಮತ್ತು ಸನಂ 61/1ನ್ನು ಅರ್ಜಿದಾರ ಹರ್ಷೇಂದ್ರ ಕುಮಾರ್ ಹೆಸರಲ್ಲಿ ದರ್ಖಾಸ್ತಿಗೆ ಕೊಡುವಲ್ಲಿ ನನ್ನ ಆಕ್ಷೇಪವಿರುವುದಿಲ್ಲ; ಮಾತ್ರವಲ್ಲ ಒಪ್ಪಿಗೆಯೂ ಇರುತ್ತದೆ" ಎಂದು ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳದ ಕಂದಾಯ ಅಧಿಕಾರಿ ಸಮ್ಮುಖದಲ್ಲಿ ಲಿಖಿತ ಹೇಳಿಕೆ ನೀಡಿದ್ದಾರೆ. (ಪ್ರತಿ ಜತೆಗಿದೆ)

ಹಾಗಾದರೆ ಹರ್ಷೇಂದ್ರ ಹೆಗ್ಗಡೆ 1972ರಲ್ಲಿ ಭೂರಹಿತರಾಗಿದ್ದರೆ? ಖಂಡಿತಾ ಇಲ್ಲ, ಅವರ ಅವಿಭಕ್ತ ಕುಟುಂಬದ ಒಡೆತನದಲ್ಲಿದ್ದ ಸಾವಿರಾರು ಎಕರೆ ಆಸ್ತಿಯಲ್ಲಿ ಅವರಿಗೂ ಪಾಲು ಇತ್ತು. 1974ರಲ್ಲಿ ಭೂಸುಧಾರಣ ಕಾಯ್ದೆ ಪ್ರಕಾರ ವೀರೇಂದ್ರ ಹೆಗ್ಗಡೆಯವರು ಬೆಳ್ತಂಗಡಿ ಭೂನ್ಯಾಯ ಮಂಡಳಿಗೆ ಸಲ್ಲಿಸಿದ ಘೋಷಣಾ ಪತ್ರದಲ್ಲಿ ಇದನ್ನು ಕಾಣಿಸಿದ್ದಾರೆ. ಈ ಘೋಷಣಾ ಪತ್ರದ ಬಗ್ಗೆ ಮುಖ್ಯಮಂತ್ರಿಯವರ ಆದೇಶದಂತೆ ತನಿಖೆ ನಡೆಯುತ್ತಿದ್ದು ಅದು ಯಾವ ತಿರುವು ತೆಗೆದುಕೊಳ್ಳುತ್ತದೆಯೆಂದು ಈಗಲೇ ಹೇಳಲಿಕ್ಕಾಗದು. ಆ ವಿಷಯ ಬೇರೆ.

1974ರಲ್ಲಿ ಮಾನ್ಯ ವೀರೇಂದ್ರ ಹೆಗ್ಗಡೆಯವರು ತಮ್ಮ ಕುಟುಂಬದ ಆಸ್ತಿಪಾಸ್ತಿಗಳನ್ನು ಘೋಷಿಸಿಕೊಂಡ ಘೋಷಣಾ ಪತ್ರದಲ್ಲಿ 54 ಎಕ್ರೆ 'ಡಿ' ತತ್ಸಮ ಭೂಮಿ ಹರ್ಷೇಂದ್ರರ ಪಾಲು ಎಂದು ತೋರಿಸಿದ್ದಾರೆ. ಹೀಗೆ ಪಿತ್ರಾರ್ಜಿತವಾಗಿ ಅಧಿಕೃತವಾಗಿ 54 ಎಕರೆ ಜಮೀನನ್ನು ಹೊಂದಿರುವ ಹರ್ಷೇಂದ್ರ ಹೆಗ್ಗಡೆ ತಾನು ಭೂರಹಿತ, ತನಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಇರಲಿಲ್ಲ ಎಂದು ಸುಳ್ಳು 'ದೃಢಪತ್ರಿಕೆ' ಸಲ್ಲಿಸಿದ್ದಾರೆ!

ಅಂದರೆ ಭೂರಹಿತ ಬಡ ಕೂಲಿಕಾರರಿಗೆ ಮಂಜೂರು ಮಾಡುವ ನಮೂನೆಯಲ್ಲಿ ದರ್ಖಾಸ್ತು ಭೂಮಿಯನ್ನು ಕಬಳಿಸಿದ್ದಾರೆ! ಸಂಬಂಧಿಸಿದ ಅಧಿಕಾರಿಗಳೆಲ್ಲರೂ ಈ ಅಕ್ರಮದಲ್ಲಿ ಮಾಮೂಲಿಯಂತೆ ಶಾಮೀಲಾಗಿ ಈ ಭೂಮಿಯನ್ನು ಹರ್ಷೇಂದ್ರ ಹೆಗ್ಗಡೆಯ ಬಾಯಿಗೆ ಹಾಕಿ ಕೃತಾರ್ಥರಾಗಿದ್ದಾರೆ.

ತಮ್ಮ ತುತ್ತಿನ ಚೀಲ ತುಂಬಿಸಿಕೊಳ್ಳಲು ದರ್ಖಾಸ್ತಿನಲ್ಲಿ ಒಂದೋ ಎರಡೋ ಎಕರೆ ಭೂಮಿ ಉಳುಮೆ ಮಾಡುತ್ತಾ, ಅದನ್ನು ಮಂಜೂರು ಮಾಡುವಂತೆ ಅರ್ಜಿ ಗುಜರಾಯಿಸಿ, ಹತ್ತಾರು ವರ್ಷಗಳಿಂದ ಕಚೇರಿಗಳಿಗೆ ಅಲೆದಾಡುತ್ತಿರುವ



ದೃಢಪತ್ರಿಕೆ

ಸಾವಿರಾರು ಬಡಪಾಯಿಗಳು ಎಲ್ಲೆಡೆ ಕಂಡುಬರುತ್ತಾರೆ. ಹೀಗಿರುವಾಗ ಶ್ರೀಮಂತ ಹರ್ಷೇಂದ್ರ ಹೆಗ್ಗಡೆಗೆ ಅಧಿಕೃತವಾಗಿ ಭೂಮಿ ಮಂಜೂರು ಮಾಡಿದ್ದರ ಹಿನ್ನೆಲೆ ಏನೆಂಬುದು ಓದುಗರ ಊಹೆಗೆ ಬಿಟ್ಟದ್ದು.

ಅದೆಲ್ಲ ಏನೇ ಇರಲಿ; ಈಗ ಸಂಬಂಧಿಸಿದ ಅಧಿಕಾರಿಗಳು ಮಾಡಬೇಕಾದ್ದಿಷ್ಟೆ. ಅಂದು ಹರ್ಷೇಂದ್ರ ಹೆಗ್ಗಡೆ ಕೊಟ್ಟಿದ್ದ ದೃಢೀಕರಣ ಪತ್ರದ ಕೊನೆಯ ಸಾಲುಗಳ ಒಕ್ಕಣೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.

ಆ ಒಕ್ಕಣೆ ಹೀಗಿದೆ. 'ಮೇಲ್ಕಾಣಿಸಿದ ವಿವರಗಳು ನನಗೆ ತಿಳಿದಂತೆ ಸರಿಯಾಗಿಯೂ, ಸತ್ಯವಾಗಿಯೂ ಇರುತ್ತವೆಂದು ಈ ಮೂಲಕ ದೃಢಪಡಿಸುತ್ತೇನೆ. ಮತ್ತು ಯಾವುದೇ ಸಮಯದಲ್ಲಿ ಅವುಗಳು ವಸ್ತುಸ್ಥಿತಿಗೆ ವಿರೋಧವಾಗಿರುವುದು ಕಂಡುಬಂದಲ್ಲಿ ನನ್ನ ಹೆಸರಿನಲ್ಲಿ ಕಾಯಂಗೊಳಿಸಬಹುದಾದ ದರ್ಖಾಸ್ತನ್ನು ರದ್ದುಗೊಳಿಸುವುದಕ್ಕೂ ಮತ್ತು ದರ್ಖಾಸ್ತು ಸ್ಥಳವನ್ನು ಅದರ ಮೇಲಿರುವ ಕೃತಾವಳಿಗಳೊಂದಿಗೆ ಯಾವುದೇ ಪರಿಹಾರವನ್ನು ಕೋರದೆ ಸರಕಾರದ ಸ್ವಾಧೀನ ಬಿಟ್ಟು ಕೊಡುವುದಕ್ಕೂ ಇದೇ ನನ್ನ ಒಪ್ಪಿಗೆಯಾಗಿರುತ್ತದೆ.'

ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ – ಈ ಮೂರು ಅಂಗಗಳಲ್ಲಿ ಯಾರು ಬೇಕಾದರೂ ಈ ವಿಷಯದಲ್ಲಿ ಕಾರ್ಯಪ್ರವೃತ್ತರಾಗಲು ಅವಕಾಶವಿದೆ. ಆದರೆ ಅಂಗೈ ಹುಣ್ಣನ್ನು ತೋರಿಸಬಲ್ಲಂಥ ಕನ್ನಡಿ ಸಿಗದಿರುವುದೇ ಇಂದಿನ ದುರಂತ.

ಇಲ್ಲಿ ಮತ್ತೊಂದು ಪ್ರಮುಖ ವಿಷಯವನ್ನು ಹೇಳಲೇಬೇಕು. ಅಪಾರ ಶ್ರದ್ಧಾಭಕ್ತಿಯ ಕೇಂದ್ರವಾಗಿರುವ ಶ್ರೀಕ್ಷೇತ್ರ ಧರ್ಮಸ್ಥಳದ ಹೆಸರಿಗೆ ಅಪಚಾರ ಎಸಗುವಂಥಾ ವರದಿಗಳು ಮೇಲಿಂದ ಮೇಲೆ ಬರುತ್ತಿರುವುದರಿಂದ ಮುಗ್ಧ ಭಕ್ತರ ಮನಸ್ಸಿನ ಮೇಲೆ ದುಷ್ಪರಿಣಾಮವನ್ನುಂಟುಮಾಡುತ್ತಿದೆ. ಅದರಲ್ಲೂ ಸದರಿ ಧಾರ್ಮಿಕ ಕೇಂದ್ರದ ಆಯಕಟ್ಟಿನ ಸ್ಥಾನದಲ್ಲಿರುವ ಮಹಾನುಭಾವರಿಂದಲೇ ಅಪಚಾರಗಳು ಸಂಭವಿಸುತ್ತಿರುವ ಸುದ್ದಿಗಳು ಭಕ್ತರ ಮನಸ್ಸಿಗೆ ಭಾರೀ ಆಘಾತವನ್ನೇ ಉಂಟುಮಾಡಿವೆ. ಇವೆಲ್ಲವನ್ನೂ ನಿವಾರಿಸಿ, ಮುಗ್ಧ ಭಕ್ತರ ಮನಸ್ಸಿಗೆ ಶಾಂತಿ– ನೆಮ್ಮದಿ ಒದಗಿಸಲು ಸಂಬಂಧಿಸಿದ ವ್ಯಕ್ತಿಗಳು ತಮ್ಮ ಅನಾಚಾರಗಳನ್ನು ಸರಿಪಡಿಸಿಕೊಂಡು, ತಮ್ಮ ತಪ್ಪುಗಳನ್ನು ಸಾರ್ವಜನಿಕರ ಮುಂದೆ ಒಪ್ಪಿಕೊಂಡು ಶ್ರೀಕ್ಷೇತ್ರದ ಘನತೆಯನ್ನು ಹೆಚ್ಚಿಸಲಿ ಎಂಬುದಷ್ಟೇ ಭಕ್ತಾದಿಗಳ ಮನವಿ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಗಣಿಧಣಿಗಳ ಜಾಡಿನಲ್ಲಿ

ಇಂಥಾ ಹರ್ಷೇಂದ್ರ ಹೆಗ್ಗಡೆಯ ಹೆಸರು ಕಲ್ಲುಗಣಿ ವ್ಯವಹಾರದಲ್ಲೂ ಕೇಳಿ ಬಂದಿರುವುದು ಅಷ್ಟೇನೂ ಸೋಜಿಗದ ಸಂಗತಿಯಲ್ಲ, ಈತನೇ ಸಾನಿಧ್ಯ ಸ್ಟೋನ್ ಕ್ರಷರ್ಸ್‌ನ ಮಾಲಿಕ ಎಂದು ವರದಿಯಾಗಿದೆ.

ಇಲ್ಲಿಗೆ 2-3 ವರ್ಷಗಳ ಹಿಂದೆ ಬೆಳ್ತಂಗಡಿ ತಾಲೂಕಿನ ಅಂಡಿಂಜೆ ಎಂಬ ಗ್ರಾಮದಲ್ಲಿ ಈತನ ಸ್ಟೋನ್ ಕ್ರಷರ್ ಇದೆ. ಈ ಕ್ರಷರ್‌ನ ಕಾರಣದಿಂದಾಗಿ ಪಕ್ಕದಲ್ಲೇ ವಾಸಿಸುವ ಸುಮಾರು 100 ಕುಟುಂಬಗಳಿಗೆ ಹಗಲು ರಾತ್ರಿ ಕಲ್ಲಿನ ಧೂಳು ಆವರಿಸಿ, ದಟ್ಟ ಮಂಜು ಕವಿದಂತಿರುತ್ತಿತ್ತು, ಸಹಿಸಲಸಾಧ್ಯವಾದ ಧೂಳಿನಿಂದಾಗಿ ಉಸಿರಾಟದ ತೊಂದರೆ, ಭಾರೀ ಶಬ್ದದ ಪರಿಣಾಮವಾಗಿ ಕಿವುಡು ಅಥವ ಅರೆ ಕಿವುಡು ಮುಂತಾದ ಸಮಸ್ಯೆಗಳು ಇಲ್ಲಿ ತಲೆದೋರಿದವು.

ಕಲ್ಲು ಗಣಿಗಾರಿಕೆಗೆ ಬಳಸಿದ ಸ್ಫೋಟದಿಂದಾಗಿ ಅಕ್ಕಪಕ್ಕದ ಮನೆಗಳ ಗೋಡೆಗಳು ಅದುರಿ ಬಿರುಕು ಬಿಟ್ಟ ಉದಾಹರಣೆಗಳಿವೆ. ಸ್ಫೋಟದಿಂದಾಗಿ ಕಲ್ಲುಗಳು ಎಲ್ಲಾ ದಿಕ್ಕಿನಲ್ಲೂ ಗಾಳಿಯಲ್ಲಿ ತೂರಿ ಬರುತ್ತಿದ್ದರಿಂದ ಸ್ಥಳೀಯ ಮಕ್ಕಳು ಶಾಲೆಗೆ ಹೋಗಲು ಭಯ ಪಡುವಂತಾಗಿತ್ತು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಗಳ ಎಲ್ಲ ನಿಯಮಾವಳಿಗಳನ್ನು ಗಾಳಿಗೆ ತೂರಲಾಗಿತ್ತು. ಆದರೆ ಕಡತಗಳಲ್ಲಿ ಮಾತ್ರ "ಎಲ್ಲವೂ ಸಕ್ರಮವಾಗಿದೆ" ಎಂಬ ವರದಿಗಳಿದ್ದವು. ಇಂಥಾ ವರದಿಗಳ ಕರಾಮತ್ತೇನೆಂಬುದನ್ನು ವಿವರಿಸುವ ಅಗತ್ಯವಿಲ್ಲ.

ರೋಸಿಹೋದ ಜನ ಅಂತಿಮವಾಗಿ ಮಾನವ ಹಕ್ಕು ಆಯೋಗಕ್ಕೆ ದೂರು ಕೊಟ್ಟರು. ಆಯೋಗದ ಸೂಚನೆಯಂತೆ ಸ್ಥಳ ಪರಿಶೀಲನೆಯ ಶಾಸ್ತ್ರ ಮುಗಿಸಿದ ಜಿಲ್ಲಾ ಪಂಚಾಯತ್ ಅಧಿಕಾರಿಗಳು ವಾಸದ ಮನೆಗಳು ಮತ್ತು ಗದ್ದೆಗಳು ಕ್ರಷರ್‌ನಿಂದ ತುಂಬಾ ದೂರ ಇರುವುದರಿಂದ ಯಾವುದೇ ತೊಂದರೆ ಇಲ್ಲ ಎಂದು ಮಾಮೂಲಿ ವರದಿ ಕೊಟ್ಟರು.

ಏನಾದರೇನಂತೆ? ಹರ್ಷೇಂದ್ರನ ಜೇಬಂತೂ ಭರ್ತಿಯಾಯಿತು. ಸಂಬಂಧಿಸಿದ ಅಧಿಕಾರಿಗಳಿಗೂ ಒಂದಷ್ಟು ನರಿಪಾಲು ಸಿಕ್ಕಿತು. ಆದರೆ ಅಮಾಯಕ ಜನರ ಗೋಳನ್ನು ಕೇಳುವವರು ಯಾರು?

...ರ್ಮಾಧಿಕಾರವೂ... ಬ್ರಿಟಿಷರ ಬಳುವಳಿಯೂ...???

...ಇತಿಹಾಸವನ್ನು ಕೆದಕಿದರೆ ನಂಬಲು ಕಷ್ಟಕರವಾದ ನಾನಾ ಸತ್ಯಗಳು ಹೊರಬೀಳುತ್ತವೆ. ಲಕ್ಷಾಂತರ ಭಕ್ತರ ಶ್ರದ್ಧಾ...ವಾದ ಧರ್ಮಸ್ಥಳ ಕ್ಷೇತ್ರದ ಅಧಿಕಾರ ಹಸ್ತಾಂತರದ ಬಗ್ಗೆಯೂ ಕುತೂಹಲಕಾರಿ ಅಂಶಗಳಿವೆ. 'ತುಳುನಾಡು' ... ಬಹಳ ಹಿಂದೆಯೇ ಪ್ರಕಟವಾದ ಕೃತಿಯೊಂದರಲ್ಲಿ ಈ ಬಗ್ಗೆ ವಿಭಿನ್ನವಾದ ಒಂದು ಅಂಶ ಪ್ರಸ್ತಾಪವಾಗಿದೆ. ಆ ... ಪುಟ 94ರಲ್ಲಿನ ಉಲ್ಲೇಖ ಹೀಗಿದೆ.

..."ಟಿಪ್ಪುವಿಗೆ ವಿರೋಧವಾಗಿ ಬ್ರಿಟಿಷರಿಗೆ ಸಹಾಯವಿತ್ತ ಕುಮಾರ ಹೆಗ್ಗಡೆ ಎಂಬವನಿಗೆ ಬ್ರಿಟಿಷರು ಇಲ್ಲಿಯ ...ತವನ್ನು ಬಿಟ್ಟಿದ್ದಾಗಿ ತಿಳಿದು ಬರುತ್ತದೆ. ಈ ಸ್ಥಳಕ್ಕೆ ಹಿಂದಿನ ಹೆಸರು ಕುಡುಮವೆಂದು. ಈ ಧರ್ಮಸ್ಥಳದ ...ಗರ ಒಂದು ಪಾಲಿಸಿದರು ಮಂಗಳೂರಿನ ಕದಳಿವನ ಅಂದರೆ ಈಗಿನ ಕದ್ರಿ ಎಂಬಲ್ಲಿ ನೆಲೆಸಿ ಇಲ್ಲಿ ...ಮಂಜುನಾಥೇಶ್ವರನನ್ನು ಪ್ರತಿಷ್ಠಾಪಿಸಿದರು ಎಂದು ಪ್ರತೀತಿ."

...ಂದಹಾಗೆ ಈ ಮೇಲಿನ 'ತುಳುನಾಡು' ಕೃತಿ ರಚನೆಕಾರ ಡಾ.ಪಾದೂರು ಗುರುರಾಜಭಟ್ ಎಂಬುವವರು. ಈ ...ನ್ನು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ ಪ್ರಕಟಿಸಿದೆ. ಕೃತಿಕಾರರ ಬಗ್ಗೆ ಈ ಟ್ರಸ್ಟ್‌ನವರೇ ಹೇಳಿರುವ ಸಾಲುಗಳನ್ನು ನೋಡಿ.

..."ಇವರು ತಂತ್ರಾಗಮ ಮತ್ತು ವೈದಿಕ ಪೌರೋಹಿತ್ಯಕ್ಕೆ ಕರಾವಳಿಯಲ್ಲೇ ಅತ್ಯಂತ ಸುಪ್ರಸಿದ್ಧವಾದ ಉಡುಪಿ ...ಿನ ಪಾದೂರು ಗ್ರಾಮದ ತಂತ್ರಿಗಳ ಕುಟುಂಬದಲ್ಲಿ ಜನಿಸಿದವರು. ಬನಾರಸ್ ವಿ.ವಿ.ದಿಂದ ಬಿ.ಎ ಮತ್ತು ... ಪದವಿ ಪಡೆದು, ಮೈಸೂರು ವಿ.ವಿ.ದ ಸುಪ್ರಸಿದ್ಧ ಇತಿಹಾಸಜ್ಞ ಪ್ರೊ. ಎಚ್. ಶೇಷಾದ್ರಿಯವರ ಮಾರ್ಗದರ್ಶನದಲ್ಲಿ ...ಿ.ಡಿ. ಪದವಿಯನ್ನು ಗಳಿಸಿದವರು. ... ತಮ್ಮ ಸಂಶೋಧನೆಯ ಮೂಲಕ, ಕರಾವಳಿಯ ಆದ್ಯಂತ ಸಂಶೋಧನೆಯ ... ದೊಡ್ಡ ಚಾವಡಿಯನ್ನೇ ಬಿಡಿಸಿಟ್ಟಿದ ಕೀರ್ತಿಗೆ ಪಾತ್ರರಾದರು. ಕರಾವಳಿಯ, ತುಳುನಾಡಿನ ಸಾಂಸ್ಕೃತಿಕ-ಧಾರ್ಮಿಕ ...ಸದ ಪ್ರವರ್ತಕರಲ್ಲಿ "ಡಾ.ಗುರುರಾಜ ಭಟ್ಟ" ಎಂಬ ಹೆಸರು ಢಾಳವಾಗಿ ಮೂಡಿಬರುವಂತೆ ಮಾಡಿದರು."

...ಇಂಥಾ ಕೃತಿಕಾರರು ಹೇಳುವಂತೆ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರ ಟಿಪ್ಪುವಿನ ವಿರುದ್ಧ ಬ್ರಿಟಿಷರಿಗೆ ... ಮಾಡಿದ್ದಕ್ಕಾಗಿ ಕುಮಾರ ಹೆಗ್ಗಡೆ ಎಂಬುವವನು ಧರ್ಮಸ್ಥಳದ ಅಧಿಕಾರ ಪಡೆದುಕೊಂಡನೆ? ಆ ನಂತರದ ... ಧರ್ಮಸ್ಥಳದ ಅಧಿಕಾರ ಆತನ ಕುಟುಂಬ ವರ್ಗದವರಿಗೆ ಅಥವಾ ಸ್ವಜಾತಿ ಬಂಧುಗಳಿಗೆ ಹಸ್ತಾಂತರವಾಗಿದೆಯೆ? ... ಪ್ರಶ್ನೆಗಳ ಬಗ್ಗೆ ಇತಿಹಾಸಕಾರರು ಸಮಗ್ರ ಅಧ್ಯಯನ ಕೈಗೊಳ್ಳಬೇಕಾದ ಜರೂರಿದೆ.

ಬಡವನ ಭರ್ಜರಿ ಬಯೋಡಾಟ

ಸರ್ಕಾರಿ ಆಸ್ತಿ ಕಬಳಿಸಲು ನಾನು ಬಡವ, ನಿರ್ಗತಿಕ ಎಂದು ಘೋಷಿಸಿಕೊಂಡ ಹರ್ಷೇಂದ್ರ ಕುಮಾರನ ಬಯೋಡಾಟದ ಕೆಲವು ಅಂಶಗಳನ್ನು ನೋಡಿ.

● ದೇಶಾದ್ಯಂತ ಸುಮಾರು 20 ರಾಜ್ಯಗಳಲ್ಲಿ 628 ಶಾಖೆಗಳನ್ನು ಹೊಂದಿರುವ ಕರ್ನಾಟಕ ಬ್ಯಾಂಕ್‌ನ ಬೋರ್ಡ್ ಆಫ್ ಡೈರೆಕ್ಟರ್ಸ್‌ನಲ್ಲಿ ಈ 'ಬಡವ'ನೂ ಒಬ್ಬ. ಈ ಹಿಂದೆ 1992ರಿಂದ 2000ವರೆಗೆ ಮತ್ತು 2008ರ ನಂತರ ಇದುವರೆಗೂ ಈ ಬ್ಯಾಂಕ್ ಡೈರೆಕ್ಟರ್ ಹುದ್ದೆಯಲ್ಲಿ ಮುಂದುವರೆಯುತ್ತಿದ್ದಾರೆ. ಬರೀ ಡೈರೆಕ್ಟರ್ ಮಾತ್ರವಲ್ಲ; ಇದೇ ಬ್ಯಾಂಕ್‌ನಲ್ಲಿ ಸಾವಿರಾರು ಶೇರುಗಳನ್ನೂ ಹೊಂದಿದ್ದಾನೆ.

● ತಮ್ಮದೇ ಕುಟುಂಬದ ಹಿಡಿತದಲ್ಲಿರುವ ಎಸ್‌ಡಿಎಂ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ಗಳಲ್ಲಿ ಈ 'ಬಡವ' ಕಾರ್ಯದರ್ಶಿ ಹುದ್ದೆ ನಿರ್ವಹಿಸುತ್ತಿದ್ದಾನೆ. ಈ ಸಂಸ್ಥೆಗಳಿಗೆ ಈತನ ಹಿರಿಯಣ್ಣ ವೀರೇಂದ್ರ ಹೆಗ್ಗಡೆ ಅಧ್ಯಕ್ಷರಾದರೆ ಮತ್ತೊಬ್ಬ ಸೋದರ ಸುರೇಂದ್ರ ಹೆಗ್ಗಡೆ ಉಪಾಧ್ಯಕ್ಷರಾಗಿದ್ದಾರೆ. ಮಂಗಳೂರು, ಉಡುಪಿ, ಮೈಸೂರು, ಹಾಸನ, ಧಾರವಾಡ ಮುಂತಾದೆಡೆಗಳಲ್ಲಿ ಇಂಜಿನಿಯರಿಂಗ್, ಮೆಡಿಕಲ್, ಮ್ಯಾನೇಜ್‌ಮೆಂಟ್ ಕೋರ್ಸ್‌ಗಳನ್ನೂ ಒಳಗೊಂಡು ಹತ್ತಾರು ಕಾಲೇಜುಗಳ ಒಡೆತನ ಈ ಸಂಸ್ಥೆಗಿದೆ.

● ನಾಡಿನಾದ್ಯಂತ ಲಕ್ಷಾಂತರ ಭಕ್ತರನ್ನು ಹೊಂದಿರುವ ಕ್ಷೇತ್ರದ ಒಡೆತನ ಹೊಂದಿರುವ ಕೌಟುಂಬಿಕ ಟ್ರಸ್ಟ್ 'ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಟ್ರಸ್ಟ್'ನ ಟ್ರಸ್ಟಿಗಳಲ್ಲಿ ಈ 'ಬಡವ'ನೂ ಇದ್ದಾನೆ.

● ನಾಡಿನಾದ್ಯಂತ ತನ್ನದೇ ಎಸ್‌ಕೆಡಿಆರ್‌ಡಿಪಿ ಮೂಲಕ ಸ್ವಸಹಾಯ ಗುಂಪುಗಳನ್ನು ರಚಿಸಿರುವ ಸಂಸ್ಥೆಯಲ್ಲೂ ಈ 'ಬಡವ'ನ ಅಧಿಕಾರ ಚಲಾವಣೆಯಾಗುತ್ತದೆ. ಬಡವರೇ ತುಂಬಿರುವ (ಬಡವರೆಂದರೆ ನಿಜವಾದ ಬಡವರು, ಹರ್ಷೇಂದ್ರನಂಥಾ ಖೊಟ್ಟಿಗಳಲ್ಲ) ಈ ಸ್ವಯಂಸೇವಾ ಸಂಸ್ಥೆಗಳ ಹೆಸರಿನಲ್ಲಿ, ಸರ್ಕಾರದಿಂದ ಕಡಿಮೆ ಬಡ್ಡಿಗೆ ಸಾಲ ಪಡೆದು ಸ್ವಸಹಾಯ ಗುಂಪುಗಳಿಂದ ಅಧಿಕ ಬಡ್ಡಿ ವಸೂಲಿ ಮಾಡುತ್ತಿರುವ ಆರೋಪ ಈ ಸಂಸ್ಥೆಯ ಮೇಲಿದೆ ಎಂಬುದನ್ನು ನಾವು ಮರೆಯುವಂತಿಲ್ಲ.

● ಕೆದಕುತ್ತಾ ಹೋದರೆ ಲಾಭದಾಯಕವೆಂದು ಕಂಡುಬರುವ ಅದೆಷ್ಟೋ ವ್ಯವಹಾರಗಳಲ್ಲಿ ಈ 'ಬಡವ' ತೊಡಗಿಸಿಕೊಂಡಿರುವ ಮಾಹಿತಿ ಸಿಗುತ್ತದೆ. ಹಾಗಾಗಿ ಈ ಪಟ್ಟಿ ...

ಬರಲಿದೆ ಐದು ಮಕ್ಕಳು ಪಡೆವ ಸುಲಭಾಸನ!

ಥೂತ್ತೇರಿ

▶ ಯಾಹೂ

ದಿಳ್ಳಿಟ್ಟು ದೇಶದ ಗಬ್ಬೆಟ್ಟು ರಾಜಕಾರಣದಲ್ಲಿ ಮತಿಗೆಟ್ಟ ಕೆಲಸಗಳೆಲ್ಲಾ ನಡೆಯುತ್ತಿವೆಯಲ್ಲಾ, ಮಹಾ ಮಾನವತಾವಾದಿ ಮಹಿಳೆ, ದಕ್ಷೆ, ದುರ್ಗೆ ಎಂದೆಲ್ಲಾ ಹೆಸರು ಮಾಡಿದ್ದ ಕಿರಣ್ ಬೇದಿ ಉಮಾ ಭಾರತಿಯಂತಾಗಲು ಚಡ್ಡಿ ತೊಟ್ಟ ಳಂತಲ್ಲಾ. ಈ ಬಗ್ಗೆ ಆಕೆಯ ಅಪ್ಪನಂತಿರುವ ಹಣ್ಣು ಹಜಾರೆ ಈ ಸೂಕ್ತ ಸಮಯದಲ್ಲಿ ಮೌನವೇ ಲೇಸೆಂದು ಸುಮ್ಮನಾದರಂತಲ್ಲಾ, ಹೀಗೆ ಕೇಡುಗಾಲಕ್ಕೆ ನಾಯಿ ಮೊಟ್ಟೆ ಇಟ್ಟಂತೆ ದೇಶದುದ್ದಗಲಕ್ಕೆ ಏನೇನೋ ಸಂಭವಿಸುತ್ತಿರುವಾಗ, ನಮ್ಮ ಕರ್ನಾಟಕದಲ್ಲಿ, ಸದ್ಯದಲ್ಲೇ ಗೊಮ್ಮಟಮುಖಿಯಾಗಿ ಹೊರಡಲಿರುವ ಸಿದ್ದಲಿಂಗಯ್ಯನ ಗುರುಗಳಾದ ಸಿಪಿಕೆ ಎಂಬ ಮಾಜಿ ಕುಂಟ ಸಿಂಗ್ರಿಗೌಡರು "ಭಗವದ್ಗೀತೆ ಭರತ ಖಂಡದ ಧರ್ಮಗ್ರಂಥವಾಗುವುದು ಸೂಕ್ತ" ಎಂದು ಮುಲುಕಿದ್ದಾರಂತಲ್ಲಾ.

ಸದರಿ ಕುಂಟ ಸಿಂಗ್ರಿಗೌಡರು, ಕುವೆಂಪುರವರ ಶಿಷ್ಯ ಎಂದು ಹೇಳಿಕೊಳ್ಳುವವರು. ಆ ಮಹಾಕವಿಯ ವಿಶ್ವಮಾನವ ಸಂದೇಶವೇ ಈ ದೇಶಕ್ಕೆ ಸೂಕ್ತ ಮಾರ್ಗದರ್ಶನ ನೀಡಬಲ್ಲದು ಎಂಬುದನ್ನು ಬಿಟ್ಟು, ವರ್ಣ ತಾರತಮ್ಯ ನೀತಿಯನ್ನು ಎತ್ತಿ ಹಿಡಿದು "ಸ್ವ ಧರ್ಮೆ ನಿಧನಂ ಶ್ರೇಯ" ಎಂದುಬಿಟ್ಟಿದ್ದಾರಲ್ಲಾ, ಸರಿ ಸ್ವಾಮಿ, ಸ್ವಧರ್ಮ ಎಂದರೆ ಜಾತಿ ಅಲ್ಲ ಎನ್ನುವುದಾದರೆ ಭಗವದ್ಗೀತೆ ಆರಾಧಕರೆಲ್ಲಾ ಜಾತಿಯನ್ನೇ ಆರಾಧಿಸಿಕೊಂಡು ಬಂದರಲ್ಲವೆ. ಸಿ.ಪಿ.ಕೆ ನಮ್ಮವನು ಎಂಬ ವಿಶೇಷ ಕಾಳಜಿ ನಲ್ಲೂರಣ್ಣನಿಗೆ ಕಾಡದಿದ್ದರೆ "ತಾವು ಬಿಜಾಪುರದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುತ್ತಿದ್ದಿರಾ. ಆಗಿ, ಅಲ್ಲಿಗೋಗಿ. ನಾನು ಬಿಜಾಪುರವನ್ನ ನೋಡೇ ಇರಲಿಲ್ಲ, ಇದೇ ಮೊದಲ ಬಾರಿ ಬಂದಿದ್ದೇನೆ" ಎಂದು ಹೇಳಿ ಕನ್ನಡ ಸಾಹಿತ್ಯ ಲೋಕ ಅವಮಾನದಿಂದ ಮುದುಡುವಂತೆ ಮಾಡಿ, ಈಗ ಗೀತೆ ಭರತಖಂಡ ಧರ್ಮಗ್ರಂಥವಾಗಬೇಕು ಎನ್ನುತ್ತೀರಲ್ಲ, ಭರತಖಂಡ ನಿಮಗೇನು ಗೊತ್ತು ಸ್ವಾಮಿ, ಥೂತ್ತೇರಿ!!

* * * *

ಮಡದಿಯನ್ನೇ ಬಿಟ್ಟು ಅಲೆಯುತ್ತಿದ್ದ ಮೋದಿ ಎಂಬ ಮಾಜಿ ಗೃಹಸ್ಥ ಪ್ರಧಾನಿಯಾದಂದಿನಿಂದ ಚಡ್ಡಿಗಳ ತಿಮಿರು ಮುಗಿಲು ಮುಟ್ಟಿದೆಯಂತಲ್ಲಾ, ಇತ್ತ ನಮ್ಮ ಕರ್ನಾಟಕದ ಬುದ್ಧಿಮಾಂದ್ಯ ಚಡ್ಡಿಗಳೆಲ್ಲಾ ಬೆಂಗಳೂರಿನ ಬಸವನಗುಡಿಯ ಹಾಳುಮನೆಯಲ್ಲಿ ಸೇರಿಕೊಂಡು, ಹಿಂದೂಗಳು ಎಂದರೆ ಹೇಗಿರಬೇಕು, ಬೆಳಗಾಗೆದ್ದು ಏನು ಮಾಡಬೇಕು, ಸಂಜೆ ಏನೇನು ಮಾಡಿ ಮಲಗಬೇಕೆಂದು ಬ್ರಹ್ಮಾಂಡ ಬೋಧನೆಯ ಹೊತ್ತಿಗೆಯನ್ನೇ ತರಲಿದ್ದಾರಂತಲ್ಲಾ, ಏಕೆಂದು ಕೇಳಿದರೆ "ನೋಡಿ, ಕ್ರಿಶ್ಚಿಯನ್ನರ ಜೀವನ ಕೈಪಿಡಿಯಾಗಿ ಬೈಬಲ್ಲಿದೆ. ಮುಸ್ಲಿಮರಿಗೆ ಕುರಾನಿದೆ. ಆದರೆ ನಮ್ಮ ಹಿಂದೂಗಳಿಗೆ ಯಾವುದೂ ಇಲ್ಲ, ಆದಕ್ಕೆ ಹಿಂದೂ ಹೇಗಿರಬೇಕು ಎಂದು ಹಿಂದೂ ಜೀವನಶೈಲಿ ಗ್ರಂಥ ತರುತ್ತಿದ್ದೇವೆ" ಎಂದವಂತಲ್ಲಾ. ಅವುಗಳು ತರುತ್ತಿರುವ ಹಿಂದೂಗಳು ಪಾಲಿಸಬೇಕಾದ ಪಾಲಿಸಿಗಳ ಸ್ಯಾಂಪಲ್ ಇಲ್ಲಿದೆ:

- * ಒಂದನೆಯದಾಗಿ ಬೆಳಗ್ಗೆ ಏಳಬೇಕು.. ಅಂಗೈ ನೋಡಿಕೊಂಡು 'ಕರಾಗ್ರೇವಸತೆ' ಹೇಳಿ, ದೇವರ ಮನೆಗೆ ಹೋಗಿ ಎಲೆಕ್ಟ್ರಿಕ್ ದೀಪ ಆರಿಸಿ, ಕೈಯಲ್ಲಿ ಹಿಂಡಿ ತೆಗೆದ ಎಣ್ಣೆ ದೀಪ ಹಚ್ಚಬೇಕು.
- * ಎರಡನೆಯದಾಗಿ ಮುಖ ತೊಳೆದು ತಾವೇ ತಯಾರಿಸಿಕೊಂಡ ಹಲ್ಲು ಪುಡಿಯಿಂದ ಹಲ್ಲು ಉಜ್ಜಿ ಮೂರು ಬಾರಿ ಬಾಯಿ ಮುಕ್ಕಳಿಸಬೇಕು.
- * ಮೂರನೆಯದಾಗಿ ಕಾಲುಭಾಗ ಹೊಟ್ಟೆ ಖಾಲಿ ಇರುವಷ್ಟು ತಿಂಡಿ ತಿನ್ನಬೇಕು. ನೀರು ಕುಡಿಯಬೇಕು. ಕಾಫಿ, ಟೀ ಅಭ್ಯಾಸವಿದ್ದರೆ ನಮ್ಮ ನಾಡಿನ ಗೋವಿನ ಹಾಲಿನಿಂದಲೇ ಮಾಡಿದ ಕಾಫಿ ಕುಡಿಯಬೇಕು.
- * ಅಡುಗೆ ಮನೆಯನ್ನು ಸ್ವಚ್ಛವಾಗಿಡಬೇಕು. ಸ್ನಾನದ ಮನೆ, ಶೌಚಾಲಯ ಬೇರೆ ಇರುವಂತೆ ನೋಡಿಕೊಳ್ಳಬೇಕು. ಆ ನೀರು ಬೇರೆ ಬೇರೆ ಹೋಗುವಂತೆ ಎಚ್ಚರ ವಹಿಸಬೇಕು.
- * ಐದನೆಯದಾಗಿ ದಿನವೂ ಸ್ನಾನ ಮಾಡಬೇಕು. ಸ್ನಾನದ ನಂತರ ಮಡಿ ಬಟ್ಟೆಯಲ್ಲಿ ಮೈ ಒರೆಸಿಕೊಂಡು, ಹಣೆಗೆ ನಮ್ಮ ಧರ್ಮಲಾಂಛನ ಬಣ್ಣದ ತಿಲಕವಿಡಬೇಕು.
- * ಟಿ.ವಿ. ನೋಡುವುದಾದರೆ ಧಾರ್ಮಿಕ ಪ್ರವಚನ, ವಾಸ್ತು ರಾಶಿ, ಬ್ರಹ್ಮಾಂಡ ಇತ್ಯಾದಿ ಕಾರ್ಯಕ್ರಮಗಳನ್ನು ಮಾತ್ರ ನೋಡಬೇಕು. ಆ ಅವಧಿಯಲ್ಲಿ ಉರಿದ ಕರಿದ ಅವಲಕ್ಕಿ ತಿನ್ನಬಹುದು. ಶುದ್ಧವಾದ ನೀರು ಕುಡಿಯಬಹುದು.
- * ಯಾರಿಂದಲಾದರೂ ಫೋನು ಬಂದರೆ 'ಜೈರಾಮ್' ಎಂದು ಹೇಳಬೇಕು. ಮಾತನಾಡಿ ಮುಗಿಸುವಾಗ 'ಹರಿ ಓಂ' ಎನ್ನಬೇಕು. ಸಂಜೆಯಾದರೆ ಕಡ್ಡಾಯವಾಗಿ ದೇವಸ್ಥಾನಕ್ಕೆ ಹೋಗಬೇಕು. ಮಕ್ಕಳ ಹುಟ್ಟು ಹಬ್ಬವನ್ನು ದೇವಸ್ಥಾನದಲ್ಲೇ ಮಾಡಿ ಪೂಜಾರಿಯ ಆಶೀರ್ವಾದ ಪಡೆಯತಕ್ಕದ್ದು.
- * ಮಕ್ಕಳಿಗೆ ದೀನದಯಾಳ, ಹರ್ಡೀಕರ, ಗೋಳ್ವಾಲ್ಕರ್, ವಾಜಪೇಯಿ, ಮೋದಿ, ಕಿರಣ್ ಬೇಡಿ, ಉಮಾಭಾರತಿ ಕತೆ ಹೇಳಬೇಕು. ಅವುಗಳು ಮುಸ್ಲಿಂ, ಕ್ರಿಶ್ಚಿಯನ್ ಮಕ್ಕಳ ಜೊತೆ ಆಟವಾಡದಂತೆ ನೋಡಿಕೊಳ್ಳಬೇಕು.
- * ಮಕ್ಕಳಿಗೆ ಸ್ವಾವಲಂಬನೆ ಕಲಿಸಬಾರದು, ಸಂಸ್ಕೃತ ಕಲಿಸಬೇಕು. ಹಿಂದೂಗಳ ಏಕತೆ ಬಗ್ಗೆ ಹೇಳುತ್ತಲೇ ಇರಬೇಕು. ರಾತ್ರಿ ಮಲಗುವಾಗ ಮಕ್ಕಳು ಬೇರೆ ಬೇರೆಯಾಗಿ ಮಲಗಬೇಕು.
- * ಈಗಾಗಲೇ ನಮ್ಮ ಧರ್ಮಗುರುಗಳು ಐದು ಮಕ್ಕಳನ್ನ ಮಾಡಿಕೊಳ್ಳಲು ಆದೇಶವಿತ್ತಿರುವುದರಿಂದ ಒಂದು ಮಗು ಇರುವವರು ಇನ್ನೂ ನಾಲ್ಕು ಮಕ್ಕಳನ್ನ ಮಾಡಬೇಕು. ಎರಡು ಮಕ್ಕಳಿರುವವರು ಇನ್ನೂ ಮೂರು ಮಕ್ಕಳನ್ನ ಮಾಡಬೇಕು. ಸುಸಂಸ್ಕೃತ ಹಿಂದೂಗಳಿಗೆ ಇದು ಕಷ್ಟಕರವಾದರೂ ಅನಿವಾರ್ಯ.
- * ಮಕ್ಕಳೆಲ್ಲಾ ಗಾಢ ನಿದ್ರೆಗೆ ತೆರಳಿದ ನಂತರ, ಪತಿಪತ್ನಿಯರು ಮಕ್ಕಳ ಸೃಷ್ಟಿಗೆ ತೊಡಗಬೇಕು. ಶಬ್ದ ಮಾಡಿ ಮಕ್ಕಳು ಎಚ್ಚರವಾಗದಂತೆ ಎಚ್ಚರ ವಹಿಸಬೇಕು.
- * ನೆನಪಿರಲಿ, ನಿಮ್ಮ ಕಾರ್ಯ ಸಂತಾನೋತ್ಪತ್ತಿಯ ಉದ್ದೇಶದಿಂದಲೇ ಇರಬೇಕು. ರಾಸಲೀಲೆ, ರತಿಕ್ರೀಡೆ, ಮನ್ಮಥ ಲೀಲೆಯಂತಿರಬಾರದು. ಸದ್ಯದಲ್ಲೇ ಸುಲಭವಾಗಿ ಮಕ್ಕಳನ್ನ ಪಡೆಯುವ ಆಸನಗಳನ್ನು ಸಂಘವೇ ಕಲಿಸಿ ಕೊಡುತ್ತದೆ. ಆಗ ಹೆಚ್ಚು ಶ್ರಮವಿಲ್ಲದೆ ಐದು ಮಕ್ಕಳನ್ನು ಪಡೆದು ಅನ್ಯಧರ್ಮೀಯರ ಸಂಖ್ಯೆ ಹತ್ತಿಕ್ಕಬಹುದು.
- * ಐದು ಮಕ್ಕಳನ್ನು ಪಡೆಯುವುದು ದೇಶಸೇವೆ ಎಂದು ಭಾವಿಸಬೇಕು. ಕೌರವರನ್ನು ಎದುರಿಸಲು ಕುಂತಿ ಪಟ್ಟ ಪಾಡು ನಮ್ಮವರಿಗೆ ಆದರ್ಶವಾಗಬೇಕು. ಹಾಗೆಂದು ಐವರು ಮಕ್ಕಳನ್ನು ಪಡೆಯಲು ಅನ್ಯರ ಸಹಾಯ ಕೋರುವುದು ಸರಿಯಲ್ಲ, ಕೋರಿದರೂ ಅದು ಕುಟುಂಬದ ಗುಟ್ಟಾಗಿ, ದೇಶರಕ್ಷಣೆಯ ಗುಟ್ಟಾಗಿ ಉಳಿಯಬೇಕು. ಈ ಬಗ್ಗೆ ನಮ್ಮ ಭೈರಪ್ಪನವರ ವಂಶವೃಕ್ಷ ಅಧ್ಯಯನ ಮಾಡುವುದೊಳಿತು.
- * ಐದು ಮಕ್ಕಳನ್ನು ಹೆತ್ತವರಿಗೆ ಮಾಸಾಶನ, ಹೆರಿಗೆ ಭತ್ಯೆ, ಸಿಜೇರಿಯನ್ ವೆಚ್ಚ ಫ್ರೀಯಾಗಿ ರಕ್ತದಾನ ಮಾಡಲು ಮೋದಿಯವರಿಂದಲೇ ಆದೇಶ ಹೊರಡಿಸಲಾಗುವುದು. ನಮ್ಮ ರಾಜವೈದ್ಯರು ಆನೆ ತಲೆ, ಸಿಂಹದ ತಲೆ, ಕರಡಿ ತಲೆ, ಟಗರಿನ ತಲೆಯನ್ನೆಲ್ಲಾ ತಂದು ಮನುಷ್ಯರಿಗೆ ಅಳವಡಿಸಿ ಪ್ಲಾಸ್ಟಿಕ್ ಸರ್ಜರಿಯ ಕ್ರಾಂತಿಯನ್ನೇ ಮಾಡಿದ್ದರಿಂದ ಸಶಕ್ತ ಗರ್ಭಕೋಶವನ್ನೇ ಮಹಿಳೆಯರಿಗೆ ಅಳವಡಿಸಿ, ಮಕ್ಕಳ ಸೃಷ್ಟಿಗೆ ಮೋದಿ ಸರಕಾರ ತಯಾರಾಗಿದೆ. ಆದ್ದರಿಂದ ಎಲ್ಲಾ ಭಾರತದ ಹಿಂದೂ ಮಹಿಳೆಯರು ಕುಂತಿ ಮಾತೆಯಾಗಲು ತಯಾರಾಗಬೇಕು ಎಂದು ಮಾತ್ರ ಹಿಂದೂ ನಡವಳಿಕೆ ಸೂಕ್ತಿಯಲ್ಲಿ ಹೇಳಿಲ್ಲವಂತಲ್ಲ.



ಚಡ್ಡಿಯೊಬ್ಬನಿಗೆ ತಲೆ ಕೆಟ್ಟರೆ ಎಲ್ಲರೂ ಸೇರಿ ಸರಿ ಮಾಡಬಹುದು. ಆದರೆ ಇಡೀ ಬಿಜೆಪಿಗೆ ತಲೆ ಕೆಟ್ಟರೆ ಗತಿಯೇನು? ಈ ಬಗ್ಗೆ ಬಸವನಗುಡಿ ಬ್ರಾಹ್ಮಣರು ಎಚ್ಚೆತ್ತುಕೊಂಡು ಮನೋವೈದ್ಯರನ್ನು ಭೇಟಿಯಾಗದಿದ್ದರೆ ನಮ್ಮ ನಾಡೇ ಹುಚ್ಚಾಸ್ಪತ್ರೆಯಾಗುತ್ತದಂತಲ್ಲಾ, ಥೂತ್ತೇರಿ!!!

ಲಂಕೇಶರ ನೆನಪಿನ ಅಂಗಳದಲ್ಲಿ...



ನಾನಾಗ ಕೆಎನ್ಎನ್ ಸುದ್ದಿ ಸಂಸ್ಥೆಯಲ್ಲಿ ವರದಿಗಾರನಾಗಿದ್ದೆ. 1999ರ ಏಪ್ರಿಲ್ ತಿಂಗಳಿರಬೇಕು. ಬಸವನಗುಡಿ ನ್ಯಾಷನಲ್ ಕಾಲೇಜಿನಲ್ಲಿ ಬಂಜಗೆರೆ ಜಯಪ್ರಕಾಶರ 'ನಾಳೆಗಾದರೂ ಸಿಕ್ಕೀತೆ ನಿನ್ನ ತಾವಿನ ಗುರುತು' ಕವನ ಸಂಕಲನ ಬಿಡುಗಡೆ ಕಾರ್ಯಕ್ರಮವಿತ್ತು. ವರದಿಗಾಗಿ ಹೋಗಿದ್ದ ನನಗೆ ಅಂದು ಮೊದಲ ಬಾರಿಗೆ ಲಂಕೇಶರನ್ನು ನೇರವಾಗಿ ನೋಡುವ ಅವಕಾಶ ಸಿಕ್ಕಿತ್ತು. ಕವನ ಸಂಕಲನ ಬಿಡುಗಡೆ ಕಾರ್ಯಕ್ರಮ ಮುಗಿದನಂತರ ಲಂಕೇಶರನ್ನು ಮಾತನಾಡಿಸುವ ಆಸೆ ನಮಗೆ, ಆದರೆ ಹೇಗೋ ಏನೋ ಎಂಬಂತೆ ಅಳುಕುತ್ತಲೆ ನಾವು ನಾಲ್ಕೈದು ಜನ ಅವರ ಮುಂದೆ ಹೋದೆವು. ಅವರ ಕೈ ಕುಲುಕಿ "ಸಾರ್ ಒಂದು ಫೋಟೋ" ಎಂದೆವು. ಅವರು "ಅದಕ್ಯಾಕೆ ಸಂಕೋಚ ಬನ್ರಯ್ಯಾ" ಎನ್ನುತ್ತಾ ಎದ್ದು ನಿಂತು ಫೋಟೋಗೆ ಪೋಸ್ ನೀಡಿದರು. ನನ್ನ ಪಕ್ಕದಲ್ಲಿದ್ದ ಪತ್ರಕರ್ತ ಮಂಜುನಾಥ ಹೆಗಲ ಮೇಲೆ ಕೈ ಹಾಕಿಕೊಂಡರು. ನಾನು ಮೆಲ್ಲನೆ ಲಂಕೇಶರ ಕೈಯನ್ನು ನೇವರಿಸಿ 'ಇಷ್ಟೆಲ್ಲಾ ಕತೆ, ಕವನ ಟೀಕೆ ಟಿಪ್ಪಣಿ ಬರೆದ ಕೈ ಇದಲ್ಲವೇ' ಎಂದು ಪುಳಕಿತನಾದೆ. ಪತ್ರಿಕಾ ಛಾಯಾಗ್ರಾಹಕರೊಬ್ಬರು ಕ್ಲಿಕ್ಕಿಸಿದ ಆ ಚಿತ್ರ ನನಗಿನ್ನೂ ಸಿಕ್ಕಿಲ್ಲವೆಂಬ ಬೇಸರವಿದೆ.

1999ರ ಜೂನ್ ತಿಂಗಳಲ್ಲಿ 'ಲಂಕೇಶ್ ಪತ್ರಿಕೆ'ಗೆ 20 ವರ್ಷದ ಹುಟ್ಟು ಹಬ್ಬದ ಸಂಭ್ರಮ. ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ 'ಕರ್ನಾಟಕದ ಕನಸುಗಳು' ಎಂಬ ಒಂದು ದಿನದ ಕಾರ್ಯಕ್ರಮವನ್ನು ಪತ್ರಿಕಾ ಬಳಗ ಆಯೋಜಿಸಿತ್ತು, ಅಂದು ಲಂಕೇಶರು ಮಾತನಾಡಿದ್ದು ಇಂದಿಗೂ ಚೆನ್ನಾಗಿ ನೆನಪಿನಲ್ಲಿದೆ. "ಕಲ್ಲನ್ನು ವಜ್ರ ಮಾಡುವ, ಬಿದಿರನ್ನು ಕೊಳಲು ಮಾಡುವ ಕಲಾಪೂರ್ಣತೆಯನ್ನು ಕ್ರಿಯಾಶೀಲತೆಯನ್ನು ರಾಜಕಾರಣಿಗಳು ಜನತೆಗೆ ಕೊಡಬೇಕಾಗಿದೆ" ಎಂದು ಹೇಳಿದ ಅವರು "ಪತ್ರಿಕೆ ನಡೆಸುವವರು ಸೂಕ್ಷ್ಮಮತಿಗಳಾಗಿರಬೇಕು. ಬಂಡವಾಳ ಶಾಹಿಗಳು ಪತ್ರಿಕೆ ನಡೆಸಿದರೆ ಸಮಾಜದ ಸ್ವಾಸ್ಥ್ಯ ಕೆಡುತ್ತದೆ" ಎಂದು ಎಚ್ಚರಿಸಿದ್ದರು.


ಮುಂದುವರೆದು ಮಾತನಾಡುತ್ತ ಲಂಕೇಶರು ಹೇಳಿದ್ದು ಹೀಗೆ: "ಈ ವರ್ಷದ ಸಮಾರಂಭವನ್ನು ಗ್ರ್ಯಾಂಡ್ ಆಗಿ ಮಾಡೋಣಾಂತ ನಮ್ಮ ಹುಡುಗ್ರು ಹೇಳಿದ್ರು, ಆದರೆ ನಾನೇ ಬೇಡವೆಂದೆ. ನೋಡೋಣ ಮುಂದಿನ ವರ್ಷ 21ನೇ ಸಮಾರಂಭವನ್ನು ಗ್ರ್ಯಾಂಡ್ ಆಗಿ ಆಚರಿಸೋಣ." ನಂತರ ಅವರು ನಗುತ್ತಾ "ಅಲ್ಲಿಯವರೆಗೆ ಬದುಕಿದ್ದರೆ" ಎಂದೂ ದನಿಗೂಡಿಸಿದ್ದರು. ಅವರು ಹೇಳಿದಂತೆ ಮುಂದಿನ ವರ್ಷದ 21ನೇ ಸಮಾರಂಭವನ್ನು ಅವರು ನೋಡಲಿಲ್ಲ, 25ನೆ ಜನವರಿ 2000ರಂದು ನಮ್ಮಲ್ಲಿ ಅವರ ನೆನಪುಗಳನ್ನು ಬಿಟ್ಟುಹೋದರು.

ನಾನು ಬಹಳ ವರ್ಷಗಳಿಂದ ಪತ್ರಿಕೆ ಓದುತ್ತಿದ್ದೆ, ಲಂಕೇಶರ ಅಂಕಣಗಳೆಂದರೆ ವಿಶೇಷ ಪ್ರೀತಿ. ಒಂದೆರಡು ಬಾರಿ ಕಣ್ಣಾಮುಚ್ಚಾಲೆಯಲ್ಲಿ ಪ್ರಶ್ನೆ ಕೇಳಿದ್ದೆ. ಅದನ್ನು ಬಿಟ್ಟರೆ ಲಂಕೇಶರಿಗೆ ನೇರವಾಗಿ ಪತ್ರವನ್ನೋ ಲೇಖನವನ್ನೋ ಬರೆದು ಕಳುಹಿಸುವ ಧೈರ್ಯ ನನಗಿರಲಿಲ್ಲ, ಆದರೆ, ಒಂದು ದಿನ ಗಟ್ಟಿ ಮನಸ್ಸು ಮಾಡಿದೆ. ಜನವರಿ 24, 2000ರಂದು ನಾನು ಲಂಕೇಶರಿಗೆ ಪತ್ರವೊಂದನ್ನು ಬರೆದಿದ್ದೆ, ಜೊತೆಗೆ ಕವನವೊಂದನ್ನು ಬರೆದು ಅದರಲ್ಲಿಟ್ಟು ಸಾಧ್ಯವಾದರೆ ಪ್ರಕಟಿಸಿ ಎಂದು ಬರೆದಿದ್ದೆ. ಆದರೆ ವಿಚಿತ್ರವೆಂದರೆ, ನನ್ನ ಪತ್ರ ಅಂಚೆ ಮೂಲಕ ತಲುಪುವ ಮುನ್ನವೇ ಲಂಕೇಶರು ಇನ್ನಿಲ್ಲವಾಗಿದ್ದರು.

ಲಂಕೇಶ್ ಎಂಬ ದೈತ್ಯ ಪ್ರತಿಭೆ ಕಣ್ಮರೆಯಾಗಿ ಒಂದೂವರೆ ದಶಕ ಕಳೆದಿದೆ. ಆದರೆ, ಲಂಕೇಶ್ ಇಂದಿಗೂ ನಮ್ಮ ಜೊತೆಯಲ್ಲೇ ಇದ್ದಾರೇನೋ ಅನ್ನಿಸುತ್ತದೆ. ಅದಕ್ಕೆ ಕಾರಣ ಅವರು ನಮ್ಮಲ್ಲಿ ಬಿಟ್ಟು ಹೋಗಿರುವ ಪ್ರಗತಿಪರ ವಿಚಾರಧಾರೆ ಹಾಗು ವೈಚಾರಿಕ ಪ್ರಜ್ಞೆ, ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಿಕ ಹಾಗು ರಾಜಕೀಯ ಪರಂಪರೆಗಳಲ್ಲಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ ಅನನ್ಯ ವ್ಯಕ್ತಿತ್ವ ಲಂಕೇಶರವರದ್ದು.

ಲಂಕೇಶ್ ನಿಧನರಾದಾಗ ನಮ್ಮಂತಹ ಮನಸ್ಸುಗಳಿಗೆ ನಿಜಕ್ಕೂ ಆಘಾತವಾಯಿತು. ಮಾರ್ಗದರ್ಶಕರೊಬ್ಬರನ್ನು ಕಳೆದುಕೊಂಡ ಭಾವನೆ ಉಂಟಾಗಿತ್ತು. ಆದರೆ, ಕೋಮುವಾದಿಗಳು ಹಾಲು ಕುಡಿದಷ್ಟು ಸಂತೋಷಪಟ್ಟರು. ಕಳೆದ 15 ವರ್ಷಗಳಲ್ಲಿ ರಾಜ್ಯದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ, 2000ನೆ ವರ್ಷದಲ್ಲಿ ಎಸ್.ಎಮ್. ಕೃಷ್ಣ ಮುಖ್ಯಮಂತ್ರಿಯಾಗಿದ್ದರು. ನಂತರ, ಧರ್ಮಸಿಂಗ್, ಕುಮಾರಸ್ವಾಮಿ, ಯಡಿಯೂರಪ್ಪ, ಸದಾನಂದಗೌಡ, ಜಗದೀಶ್ ಶೆಟ್ಟರ್. ಈಗ ಸಿದ್ದರಾಮಯ್ಯ ಗದ್ದುಗೆ ಏರಿದ್ದಾರೆ. ಈ ನಡುವೆ ಬಳ್ಳಾರಿಯ ರೆಡ್ಡಿಗಳು ಒಂದಿಷ್ಟು ಚಿಗುರಿ ಮತ್ತೆ ಮುದುರಿಕೊಂಡಿದ್ದನ್ನು ಕಂಡಿದ್ದೇವೆ. ಕೋಮುವಾದಿಗಳು ಜನರಿಗೆ ಮಂಕುಬೂದಿ ಎರಚಿ ಅಧಿಕಾರ ಅನುಭವಿಸಿದ್ದು ಜೈಲೂಟ ತಿಂದಿದ್ದನ್ನು ಕೂಡ ನೋಡಿದ್ದೇವೆ. ಸಾಂಸ್ಕೃತಿಕ, ಸಾಹಿತ್ಯಿಕ, ಮಾಧ್ಯಮಲೋಕದಲ್ಲಿ ಕೂಡ ಕೋಮುವಾದಿಗಳು ತಮ್ಮ ಪ್ರಭಾವ ಬೀರುತ್ತಿರುವುದನ್ನು ಅರಿತಿದ್ದೇವೆ. ದೇಶವನ್ನು ಅಮೆರಿಕಕ್ಕೆ ಒತ್ತೆ ಇಡಲು ಪ್ರಯತ್ನಿಸುತ್ತಿರುವ ರಾಜಕಾರಣಿಗಳು ನಮ್ಮ ಮುಂದಿದ್ದಾರೆ. ಈ ಸಂದರ್ಭದಲ್ಲಿ ಲಂಕೇಶರು ಬದುಕಿದ್ದಿದ್ದರೆ ಇದಕ್ಕೆಲ್ಲ ಹೇಗೆ ಪ್ರತಿಕ್ರಿಯಿಸುತ್ತಿದ್ದರೆಂಬುದನ್ನು ಕಲ್ಪಿಸಿಕೊಂಡರೆ ರೋಮಾಂಚನವಾಗುತ್ತದೆ.


● ಎನ್.ಎ. ರವೀಶ್, ಚಿತ್ರದುರ್ಗ



ಮಕ್ಕಳನ್ನು ಹೆತ್ತು ಹಿಂದೂ ಧರ್ಮ ಉಳಿಸಿ

ಹಿಂದೂಗಳ ಸಂಖ್ಯೆ ಕ್ಷೀಣಿಸುತ್ತಿಲ್ಲವಾದರೂ ಅಪೇಕ್ಷಿತ
ಟ್ಟದಲ್ಲಿ ಏರಿಕೆಯಾಗುತ್ತಿಲ್ಲದಿರುವುದು, ಅದೇ
ಮಯದಲ್ಲಿ ಸಾಬರ ಸಂಖ್ಯೆ ಯದ್ವಾತದ್ವಾ ಏರುತ್ತಿರುವುದು
ಂದೂತ್ವವಾದಿಗಳಿಗೆ ಆತಂಕ ಮೂಡಿಸುತ್ತಿದೆ. ನಮ್ಮ
ರ್ವಿಕರ ಕಾಲದಲ್ಲಿ ಹೀಗಿರಲಿಲ್ಲ, ಮಕ್ಕಳಿರಲವ್ವ ಮನೆ
ಂಬ ಎಂದು ಹೃದಯ ತುಂಬಿ ಆಶೀರ್ವದಿಸುತ್ತಿದ್ದರು.
ಂಪತಿಗಳೂ ಆಶೀರ್ವಾದ ಫಲಿಸುವಂತೆ ಶ್ರಮಿಸುತ್ತಿದ್ದರು.
ರಡೂ ಹಸ್ತಗಳ ಬೆರಳುಗಳನ್ನು ಬಳಸಿ ಎಣಿಸಬೇಕಾದ
ಖ್ಯೆ ಮಕ್ಕಳಿದ್ದರೆ ಅದನ್ನು ಪ್ರಕಟಿಸಲು ಹೆಮ್ಮೆಪಡುತ್ತಿದ್ದರು.
ಳು' ಎಂದರೆ 'ಇನ್ನೊಂದು ಆಗಲಿ. ಶ್ರೀಕೃಷ್ಣನಂತಹ
ತ್ರ ರತ್ನ ಜನಿಸುತ್ತೆ' ಎಂಬ ಉತ್ತೇಜನಕಾರಿ ಹಿತವಚನ
ನ್ನು ಹೇಳುವ ಮಹಾನುಭಾವರಿದ್ದರು. ಇಂತಹ ಪ್ರೇರೇತ
ರಿ ಮಾತುಗಳನ್ನು ಕೇಳಿದಾಗ 'ನಮ್ ಕೈಲೇನಿದೆ ಹೇಳಿ.
ನ್ನಿ ಅವನು ಕರುಣಿಸಬೇಕು. ಅವನು ಕೊಟ್ಟಷ್ಟು ನಾವು
ದೆದಷ್ಟು' ಎಂದು ಆಕಾಶದ ಕಡೆ ಕೈಮಾಡಿ ನುಡಿದರೂ
ಮ್ಮ ಪ್ರಯತ್ನವನ್ನು ಯಾವತ್ತೂ ನಿಲುಗಡೆ ಮಾಡುತ್ತಿರಲಿಲ್ಲ,
ಂದು ಹಸ್ತದ ಬೆರಳನ್ನು ಬಳಸಿ ಹೇಳಬಹುದಾದ ಸಂಖ್ಯೆಯ
ತಾನವನ್ನು ಸೂಚಿಸಿದರೆ 'ಅಯ್ಯೋ ಪಾಪ, ಆ ಹಾಳಾದ
ವರು ಇನ್ನೊಂದು ನಾಕು ಕುಡೀಸಾದರೂ
ಡಬಾರದಿತ್ತಾ' ಅನ್ನುವ ಸಂತಾಪಸೂಚಕ ಮಾತು
ಾರಡುತ್ತಿತ್ತು. ಹೀಗಾಗಿ ಬಹಳಷ್ಟು ಗೃಹಿಣಿಯರು ಇವಳು
ಾವಾಗ ಬಸುರಿಯಾದಳು ಯಾವಾಗ ಬಾಣಂತಿಯಾದಳು
ಬುದು ತಿಳಿಯದಂತೆ ಮನೆಯಲ್ಲಿ ಸದಾ ತೊಟ್ಟಿಲು
ಗುತ್ತಿತ್ತು. ಒಮ್ಮೊಮ್ಮೆ ತಾಯಿ-ಮಗಳ, ಅತ್ತೆ-ಸೊಸೆಯರ
ಣಂತನ ಒಟ್ಟಿಗೇ ಬರುತ್ತಿದ್ದ ಸಂದರ್ಭಗಳೂ ಇದ್ದವು.
ಹಿಳೆಯರು ನಿರಂತರ ವಾಗಿ ಮಕ್ಕಳ ಹೆರುವ ಯಂತ್ರದಂತೆ
ದ್ದರು. ಹಿಂದೂ ಧರ್ಮದ ಉಳಿವಿಗೆ
ವಣೀಭೂತರಾಗಿದ್ದರು. ಅಂತಹ ಸಮೃದ್ಧ ಮಕ್ಕಳ
ಹೋಗಿ 'ಒಂದು ಬೇಕು ಎರಡು ಸಾಕು', 'ಒಂದೇ
ಕು ಒಂದೇ ಸಾಕು' ಎಂಬ ಭೀಕರ ಬರದ ಕಾಲ
ದದ್ದು ಹಿಂದೂತ್ವವಾದಿಗಳ ಒಳಗುದಿಗೆ ಕಾರಣ ಆಗಿತ್ತು.

ಜನಸಂಖ್ಯಾ ಸ್ಫೋಟದ ನೆಪದಲ್ಲಿ ಈ ರೀತಿ ಸಂತಾನ
ಖ್ಯೆಯನ್ನು ನಿಯಂತ್ರಿಸುತ್ತಿರುವುದರ ಹಿಂದೆ ಹಿಂದೂ
ರ್ಮವಿನಾಶದ ಹುನ್ನಾರ ಗೋಚರಿಸಿತು. ಇದರ ವಿರುದ್ಧ
ೋರಾಡಲು ಸಾಧ್ವಿಗಳು ಸಂತರು ಮುಂದಾದರು. ಸಂಸದ
ಗೂ ಸಂತ ಸಾಕ್ಷಿ ಮಹಾರಾಜ್ 'ಹಿಂದೂ ಧರ್ಮ
ಳಿಸಲು ಹೆಂಗಸರು ನಾಲ್ಕು ಮಕ್ಕಳನ್ನು ಹೆರಬೇಕು'
ದು ಧರ್ಮಾಜ್ಞೆ ನೀಡಿದರು. ಸಂತರ ಮಾತಿಗೆ



Hindu women should have 10 children-Sankaracharya

ಸಾಧ್ವಿಪ್ರಾಚಿ 'ನಾಲ್ಕು ಮಕ್ಕಳು ಇರಲೇಬೇಕು' ಎಂದು ಒತ್ತು ನೀಡಿದರು. ಮಠದ ಪೀಠಾಧಿಕಾರಿಯೊಬ್ಬರು 'ನಾಲ್ಕು ಮಕ್ಕಳನ್ನು ಹೆತ್ತರೆ ಸಾಲದು. ಅದರಿಂದ ಹಿಂದೂ ಧರ್ಮವನ್ನು ಉಳಿಸಲು ಸಾಧ್ಯವಿಲ್ಲ, ಕನಿಷ್ಠ ಹತ್ತು ಮಕ್ಕಳನ್ನಾದರೂ ಹೆರಬೇಕು' ಎಂಬ ಅಪ್ಪಣೆ ಕೊಡಿಸಿದರು.

ಘನವಾದ ಸಲಹೆ. ಹಲವು ಸರ್ವಸಂಗಪರಿತ್ಯಾಗಿಗಳ ಮೇಲೆ ಅತ್ಯಾಚಾರ ಆರೋಪ ಕೇಳಿಬರುತ್ತಿದೆ. ಅವರು ಹೆಣ್ಣಿನೊಡನೆ ಲೈಂಗಿಕ ಕ್ರಿಯೆ ಅತ್ಯಾಚಾರ ಅಲ್ಲ. ಹಿಂದೂ ಧರ್ಮದ ಉಳಿವಿಗಾಗಿ ಎಸಗಿದ ಅಳಿಲುಸೇವೆ ಎಂದು ಪರಿಗಣಿಸಬೇಕಾಗಿ ವಾಚಕರಲ್ಲಿ ನಮ್ರ ವಿನಂತಿ.

ಒಂದು ಸಂಶಯ. ಇಷ್ಟು ಮಕ್ಕಳನ್ನು ಹೆರಲೇಬೇಕು ಎಂದು ಸಂತರು ಬಿಸಿಎಲ್ (below children line) ಎಳೆದಿದ್ದಾರೆ. ಈ ರೇಖೆಗಿಂತ ಮೇಲಿದ್ದವರಿಗೆ ತೊಂದರೆ ಇಲ್ಲ, ತಮ್ಮ ತನುಮನ ಅರ್ಪಿಸಿದ ಪ್ರಯತ್ನದ ನಂತರವೂ ಈ ರೇಖೆ ತಲುಪಲು ಸಾಧ್ಯವಾಗದೇ ಹೋದವರು ಏನು ಮಾಡುವುದು? ಹಿಂದೂ ಧರ್ಮ ಉಳಿಸಲು ತೊಡೆ ಬದಲಾಯಿಸಿ ಸಂತಾನ ಭಾಗ್ಯ ಪಡೆಯಬಹುದಾ.... ಏನಂದಿರಿ... ಬದಲಾಯಿಸಬಹುದು, ಅದು ಹಿಂದೂ ತೊಡೆಯಾಗಿರಬೇಕು ಅಂದಿರಾ....

ಸ್ಪೀಕರ್ ಧ್ವನಿ ನ್ಯಾಯ!

ಹಂಗೆ ಅಂದ್ರೆ ಏನು ಅಂತೀರ್ರಾ?

ಹಂಸ ಕ್ಷೀರ ನ್ಯಾಯ ಅನ್ನೋದನ್ನ ಕೇಳಿದ್ದೀರಲ್ವಾ. ಅದೇ ಹಂಸ ಅನ್ನೊ ಪಕ್ಷಿ ಮುಂದೆ ನೀರು ಬೆರೆಸಿದ ಹಾಲನ್ನ ಕುಡೀಲಿ ಅಂತ ಇಟ್ಟರೆ ಅದೇನು ಮಾಡುತ್ತಂತೆ ಅಂದ್ರೆ ನೀರನ್ನು ಹಾಲನ್ನು ಬೇರೆಬೇರೆ ಮಾಡುತ್ತಂತೆ. ಹಾಲನ್ನು ಮಾತ್ರ ಕುಡಿಯುತ್ತಂತೆ. ಹಂಗೇ ನಂ ಶಾಸನಸಭೆ ಸ್ಪೀಕರ್‌ಗಳು ಯಾನೆ ಸಭಾಧ್ಯಕ್ಷರು ಕಿವಿಗಡಚಿಕ್ಕುವ ಶಬ್ದದ ನಡುವೆಯೂ ಇದು ಪರವಾದ ಧ್ವನಿ, ಇದು ವಿರೋಧದ ಧ್ವನಿ ಅಂತ ಗುರುತಿಸುತ್ತಾರಂತೆ. ಅದರ ಆಧಾರದ ಮೇಲೆ ತೀರ್ಪು ನೀಡ್ತಾರಂತೆ. ಅದೇ ಸ್ಪೀಕರ್-ಧ್ವನಿ ನ್ಯಾಯ!

ನಮ್ದು ಸಂಸದೀಯ ಪ್ರಜಾಪ್ರಭುತ್ವ ತಾನೆ. ಅಂದಮೇಲೆ ಶಾಸನ ಸಭೆ ಇರಬೇಕು. ಇರುತ್ತೆ. ಚುನಾವಣೆ ನಡೆಯಬೇಕು. ನಡೆಯುತ್ತೆ. ಬಹುಮತಗಳಿಸಿದ ಪಕ್ಷ ಅಧಿಕಾರ ಹಿಡಿಯಬೇಕು. ಹಿಡಿಯುತ್ತೆ. ಸಮಸ್ಯೆ ಏನು ಅಂದ್ರೆ ಯಾವ ಪಕ್ಷ ಬಹುಮತಗಳಿಸದೆ ಇರುವಾಗ ಏನು ಮಾಡುವುದು ಅಂತ. ಕೆಲವು ಮುಖೇಡಿ ಪಕ್ಷಗಳು ಸರ್ಕಾರ ನಡೆಸೋಕೆ ಸಾಧ್ಯ ಇಲ್ಲ ಅಂತವೆ. ಇನ್ನು ಕೆಲವು ಭಂಡ ಕುಳಗಳು ಇರ್ತವೆ.

ಮಹಾರಾಷ್ಟ್ರದಲ್ಲೂ ನಡೆದದ್ದು ಅದೇ ನೋಡಿ. ಯಾವ ಪಕ್ಷಕ್ಕೂ ಬಹುಮತ ಬಂದಿರಲಿಲ್ಲ, ರಾಜ್ಯಪಾಲರು ಏನು ಮಾಡಿದ್ರು ಅತಿಹೆಚ್ಚು ಶಾಸಕರಿದ್ದದ್ದು ಭಾಜಪದಲ್ಲಿ ಅಲ್ವ, ಅದನ್ನ ಕರೆದ್ರು. ರಚಿಸಿ ಸರ್ಕಾರಾನ ಅಂದ್ರು. ರಚಿಸ್ತೀವಿ ಅಂದ್ರು. ಇಷ್ಟು ದಿವಸದಲ್ಲಿ ವಿಶ್ವಾಸಮತ ಕೋರಬೇಕು ಅಂದ್ರು. ಇವರು ಆಗಲಿ ಅಂದ್ರು.

ಅರೆರೆ ಇದೇನಯ್ಯ ಇದು. ಶಾಸಕರ ಸಂಖ್ಯೆ ಸಾಕಷ್ಟಿಲ್ಲ, ಅದೆಂಗೆ ವಿಶ್ವಾಸ ಮತ ಪಡೀತಾರಪ್ಪ ಇವ್ರು ಅಂತ ಜನ ಎಲ್ಲ ಜಾದೂಗಾರ ಇಲ್ಲದ ವಸ್ತು ಬರುಸ್ತಾನಲ್ಲ ಅದ್ನ ನೋಡೋ ಹಂಗೆ ಇದನೋಡ್ತ ಇದ್ರು. ಆ ದಿನಾನೂ ಬಂತು. ವಿಪಕ್ಷಗಳು ಸಾಕಷ್ಟು ಶಾಸಕರೇ ಇಲ್ಲ ಅದೆಂಗೆ ಬಹುಮತ ತೋರುಸ್ತೀಯಾ ಅಂತ ಗಲಾಟೆ ಶುರು ಹಚ್ಕೊಂಡೊ. ಮುಖ್ಯಮಂತ್ರಿ ಆ ಗೌಜಲು ಗದ್ದಲದ ನಡುವೇನೆ ವಿಶ್ವಾಸಮತ ಕೋರಿದ್ರು. ಸ್ಪೀಕರ್ ಇದ್ರಲ್ಲ ಅವರು ಸ್ಪೀಕರ್-ಧ್ವನಿ ನ್ಯಾಯ ಪ್ರಯೋಗಿಸಿದರು. ವಿಶ್ವಾಸ ಮತಗಳಿಸಿದ್ದೀರಿ ಅಂತ ಘೋಷಿಸಿದರು.

ವಿಪಕ್ಷಗಳು ಕೂಗಾಡ್ಲೊ ಹಾರಾಡ್ಲೊ. ಆರು ತಿಂಗಳ ತನಕ ಸರ್ಕಾರ ಅಳ್ಳಾಡಿಸೋಹಂಗಿಲ್ಲವಲ್ಲ, ಕೊನೆಗೆ ತೆಪ್ಪಗಾದೊ.

ಶಾಸನಸಭೆಗಳಿರೋದು ಶಾಸನ ರಚಿಸೋಕೆ. ಮಸೂದೆ ಮಂಡಿಸಿದಾಗ ಅದರ ಕುರಿತು ಆಳವಾದ ಅಧ್ಯಯನ ಮಾಡಬೇಕು. ಚರ್ಚೆ ಆಗಬೇಕು. ನಂತರ ಒಪ್ಪಿಗೆಯೋ ತಿರಸ್ಕಾರವೋ ಆಗಬೇಕು. ಇವೆಲ್ಲ ನಿಜ. ಅದರೇನು ಮಾಡ್ತೀರಿ. ವಿಪಕ್ಷಗಳು ಯಾವುದೋ ಕೆಲಸಕ್ಕೆ ಬಾರದ ವಿಷಯ ತಗೊಂಡು ಸದನ ನಡೆಯಲು ಅವಕಾಶ ನೀಡೋಲ್ಲ, ಅವರು ಹಂ... ದ್ದಾರೆ ಅಂತ ಮಸೂದೆ ಮಂಡಿಸದೇ ಇರಲಿಕ್ಕಾಗಲ್ಲ, ಗೋಜಲು ಗದ್ದಲದ ನಡುವೆ ಮಂಡಿಸ್ತಾರೆ. ಮಸೂದೆ ಯಾವುದು? ಅದರಲ್ಲಿ ಇರುವ ಹೂರಣ ಎಂತಹದ್ದು ಅಂತ ಯಾರಿಗೂ ತಿಳಿದಿರೋದಿಲ್ಲ, ಯಾರಿಗೂ ಅಂದರೆ ಯಾರಿಗೂ ಅಂತ ಅಲ್ಲ, ಸಭಾಧ್ಯಕ್ಷರಿಗೆ ಅರಿವಾಗುತ್ತೆ. ಸ್ಪೀಕರ್-ಧ್ವನಿ ನ್ಯಾಯ ಬಳಸಿ ಮಸೂದೆ ಅನುಮೋದಿಸಿದೆ ಅಂತ ರೂಲಿಂಗ್ ಕೊಡ್ತಾರೆ!

ಒಂದೊಂದು ಸಲ ಯಡವಟ್ಟಾಗಿಬಿಡುತ್ತೆ. ಒಂದು ಮನೆಯಲ್ಲಿ ಅಂಗೀಕಾರ ಆದರೂ ಇನ್ನೊಂದು ಮನೆಯಲ್ಲಿ ಆಗುವ ಸಾಧ್ಯತೆ ಇರಲ್ಲ. ಅಲ್ಲಿ ಸ್ಪೀಕರ್-ಧ್ವನಿನ್ಯಾಯ ವರ್ಕ್ ಔಟ್ ಆಗಲ್ಲ. ಯಾಕೆಂದರೆ ಆ ಮನೆ ಸಭಾಧ್ಯಕ್ಷ ಆಡಳಿತ ಪಕ್ಷದ ಗೋತ್ರದವನಲ್ಲ ಅರ್ಥಾತ್ ವಿಪಕ್ಷದವನು! ಅವನ ಧ್ವನಿ ಮತ ಗ್ರಹಣ ರೀತಿ ಬೇರೆಯದ್ದೇ ಆಗಿರುತ್ತೆ!

ಜನೋಪಕಾರಿಯೋ ಕಾರ್ಪೊರೇಟೋಪಕಾರಿಯೋ ಆಗಿರುವ ಮಸೂದೆ ಅಂಗೀಕಾರವಾಗದೆ ಹೋದರೆ ಆಡಳಿತ ಪಕ್ಷದ ಕಿಮ್ಮತ್ತೇನಾಗಬೇಕು? ಯಾರು ಯಾರಿಗೆ ಏನೇನು ಭರವಸೆ ನೀಡುತ್ತಾರೋ ಪಾಪ. ಅದಕ್ಕೇ ಏನು ಮಾಡ್ತಾರೆ ಸುಗ್ರೀವಾಜ್ಞೆ ಹೊರಡಿಸಿ ಫೇಲ್ ಆಗಬೇಕಿದ್ದ ಮಸೂದೆ ಪಾಸ್ ಮಾಡಿಸ್ತಾರೆ!

ಮೋದಿ ಮಾಡ್ತಿರೋ ಹಂಗೆ ಅನ್ನಿ!
ಪ್ರಜಾಪ್ರಭುತ್ವಕ್ಕೆ ಜಯವಾಗಲಿ!

● ಎಚ್ಚೆಲ್ಕೆ

ಕಳೆದ ತಿಂಗಳು ಮುಖ್ಯವಾಹಿನಿಗೆ ಹಿಂದಿರುಗಿದ ನಕ್ಸಲ್ ನಾಯಕ ನೂರ್ ಶ್ರೀಧರ್ 40 ದಿನಗಳನ್ನು ಜೈಲಿನಲ್ಲಿ ಕಳೆದು ಕಳೆದ ವಾರ ಜಾಮೀನು ಪಡೆದು ಹೊರಬಂದಿದ್ದಾರೆ. ನೂರ್ ಅವರಿಗೆ ಜೈಲಿನಲ್ಲಿ ಕಷ್ಟಗಳೇನಿರಲಿಲ್ಲ, ಆದರೆ ಜೈಲಿನಲ್ಲಿರುವ ಇತರ ಜನರ ಪರಿಸ್ಥಿತಿ ಅವರನ್ನು ಈ ಭಾವುಕ ಕವನವನ್ನು ಬರೆಯಲು ಪ್ರೇರೇಪಿಸಿದೆ.

ಸಜೀವ ಶವಾಗಾರ

ಲ್ಲಿನ ಗೋಡೆ
ಷ್ಣಾದ ವಾಡೆ
ಸಣದ ಚಪರೆ
ೂರು ಸುತ್ತಿನ ಪಹರೆ
ರಿಂದ ದೂರ
ಕದ ದಾರಿ
ರವರಿಂದ ಬಲುದೂರ
ಅಸ್ಪಶ್ಯರ ಈ ಕೇರಿ

ೀವ ಶವಾಗಾರದಲ್ಲಿ
ದಾಡುವ ಶವಗಳು..
ವುಗಳ 'ಪೋಸ್ಟ್‌ಮಾರ್ಟಂ' ಸಾಗಿದೆ
ಷ್ಪು ತಮ್ಮ ಡೇಟಿಗಾಗಿ ಕಾದಿವೆ
ಿ, ತಿಂಗಳು, ವರ್ಷಗಳುರುಳಿದರೂ
ೀಕ್ಷದ ದಿನಕ್ಕಾಗಿ ಕಾಯುತ್ತಲೇ ಇವೆ
ಬರಹದ ಡಾಕ್ಟರಿಗೆ ಟೈಂ ಸಿಗುತ್ತಿಲ್ಲ
ಿಲ್ಲದ ಕಳೇಬರಕ್ಕೆ ಬೇಲೂ ಸಿಗುವುದಿಲ್ಲ

ದೊಂದು ಶವದ್ದೂ ಒಂದೊಂದು ಕತೆ
ಂಕ್ಷಿತ ಆತ್ಮಹತ್ಯೆಯ ಕೇಸಿಲ್ಲಿ ಕಡಿಮೆ
ಂತರ ಕೆರೆಯಲ್ಲಿ
ಪೂಗಿಸಲು ಹೋಗಿ
ಲ್ಲಿ ಬಿದ್ದವರು
ಕದ 'ಆಗಾಪುತಕೆ'
ಂಡ ಕೊಟ್ಟವರು
ಕಾಡಸ್ಪ ಸಾಪಿಯ ಗುಗೆ
ಿಯ ಕೂಗಿಗಾದವರು
ರಿ' ಕಡೆದ 'ಬಾಕಿ'ಗಾಂದ
ಗಿಡಾಗಿ ಬಂದವರು



ಕಪ್ಪಿಟ್ಟ ಮುಖ, ಕಳೆಗಟ್ಟ ಕಣ್ಣು
ಸುಟ್ಟಿಹ ದೇಹ, ಸುಕ್ಕಾದ ಬಟ್ಟೆ
ಸಾರಿವೆ 'ಇವೆಲ್ಲಾ ಬಡನಾಡಿನ ಬಾಡಿಗಳು'
ಹೇಳ್ತಿವೆ 'ಪಾಪದೋನಿಜವು'
ಇಲ್ಲ ಪಾಪಗ್ರಸ್ತ ಹೂದ್ರ ಮುಂದೇವು

ಸತ್ತರೂ ಶಾಂತಿ ಎಂಬುದಿಲ್ಲ
ದೇಹ ಬಂಧಿಯಾದರೂ ಆತ್ಮ ಸೆರೆಯಲ್ಲಿಲ್ಲ
ಹಾಳಾದ್ದು ಪ್ರೇತಾತ್ಮಕ್ಕೆ ಇಹಲೋಕದ್ದೇ ಚಿಂತೆ

ಕಾಯುತ್ತಿರುವ ಕೂಸು
ಕಟ್ಟಿಕೊಂಡವಳ ಕಣ್ಣೀರು
ಹಣ್ಣಾಗುತ್ತಿರುವ ಹೆತ್ತವರು
ಧೂಳಿಡಿಯುತ್ತಿರುವ ಮನೆ
ಒಣಗುತ್ತಿರುವ ಪೈರು
ಬಡಕಲಾಗುತ್ತಿರುವ ದನ
ಬೆಳೆಯುತ್ತಿರುವ ಸಾಲ
ಚಿಂತೆ ಚಿಂತೆ ಚಿಂತೆ
ಪ್ರೇತಾತ್ಮಗಳನ್ನೇ ಹಿಂಡಿಸಿ ತಿನ್ನುವ ಚಿಂತೆ

ಒಳಗೆ, ಚಡಪಡಿಸುವ ಶವಗಳು
ಹೊರಗೆ, ಪರದಾಡುತ್ತಿರುವ ಸಂಸಾರಗಳು
ಏನು ಮಾಡಲಿ? ಯಾರ ಬೇಡಲಿ? ಎಲ್ಲಿ ಸಾಯಲಿ!
ಕಂಗಾಲಾದ ಬದುಕು, ಸೋಲುತ್ತಿರುವ ಕಾಲು
ಮೈಯೆಲ್ಲಾ ಸಾಲ, ಊರೆಲ್ಲಾ ಅವಮಾನ


ಕಾನೂನಿನ ಕಾಡಿನಲ್ಲಿ
ಅಭಯದ ಮುಖವಿಲ್ಲ, ಸಂತೈಕೆಯ ಕೈಯಿಲ್ಲ
ಕರುಣೆ ಇಲ್ಲದ ಲಾಠಿಯವರು
ಸಿಡುಕು ಮೋರೆಯ ಕೋಟಿನವರು
ಉಗ್ರ ರೂಪದ ತಕ್ಕಡಿಯವರು
ಭದ್ರ ವೇಷದ 'ಪಿಪಿ'ಯವರು
ಹೆಣ ತೋರಿಸಲೂ ಹಣ ಕೇಳುವ ಪಹರೆಯವರು

ಸರ್ಕಾರವೇನೂ ಸುಮ್ಮನಿಲ್ಲ
ಶವಾಗಾರಕ್ಕೆ ತಿಂಗಳು ತಿಂಗಳು
ನ್ಯಾಯಧಣಿಗಳ ಭೇಟಿ
ಶವಗಳ ಯೋಗಕ್ಷೇಮ ವಿಚಾರಣೆ
"ಊಟ ಚೆನ್ನಾಗಿದೆಯಾ? ಸಾಕಷ್ಟು ಕೊಡ್ತಾರ?"
ಶವದೊಳಗಿನ ಪ್ರೇತಾತ್ಮ
ಅವಮಾನದಿ ಕುದಿಯುತ್ತದೆ
ಬೇಕಿರುವುದು ದಂಡದ ಕೂಳಲ್ಲ, ದುಡಿಮೆಯ ಬಾಳು
ಬೇಲು ಕೊಡಿ, ಮುಕ್ತಿ ಕೊಡಿ, ಇಲ್ಲಾ ಗಲ್ಲೇ ಕೊಡಿ!
ಕಾಯಿಸಿ, ಸತಾಯಿಸಿ, ಅವಮಾನಿಸಿ ಕೊಲ್ಲದಿರಿ
ಪ್ರೇತಾತ್ಮದ ಮಾತು ಗಂಟಲಿಂದ ಹೊರಬೀಳುವುದಿಲ್ಲ
ಬಿದ್ದರೂ ಪಾಪಿಗಳ ಮಾತು
ಸಿರಿವಂತರಿಗೆ ಕೇಳಿಸುವುದಿಲ್ಲ

● ನೂರ್ ಶ್ರೀಧರ್

ಗಾಂಧೀಜಿ ದೇಹಾಂತ್ಯ: ನೆನಪು ಮತ್ತು ರೂಪಕ

ಗಾಂಧೀಜಿ ತನ್ನ ಜೀವವನ್ನೇ ಮುಡುಪಾಗಿಟ್ಟ ಒಂದು ಮೌಲ್ಯವಿದ್ದರೆ ಅದು ಕೋಮು ಸೌಹಾರ್ದ. ಆ ಕಾರಣಕ್ಕಾಗಿಯೇ ಅವರನ್ನು ಕೊಲೆ ಮಾಡಲಾಯಿತು. ಗಾಂಧೀಜಿಯ ಕೊಲೆಗಡುಕರನ್ನೂ ಆ ಕೊಲೆಯ ಸಂಚು ರೂಪಿಸಿದವರನ್ನೂ ಗೌರವಿಸುವವರು ಈಗ ಸರಕಾರ ನಡೆಸುತ್ತಿದ್ದಾರೆ. ಆ ಕಾರಣಕ್ಕಾದರೂ ಗಾಂಧೀಜಿ ಹತ್ಯೆಯ ಅರ್ಥವೇನು ಎಂದು ನಾವು ಯೋಚಿಸಬೇಕು. 1948ರ ಜನವರಿ ತಿಂಗಳಲ್ಲಿ, ತನ್ನ ಕೊಲೆಗೆ ಕೆಲವೇ ದಿನಗಳ ಮೊದಲು ಗಾಂಧೀಜಿ ಕೈಗೊಂಡ ಒಂದು ನಿರ್ಧಾರ, ಅವರನ್ನು ಮುಗಿಸಿ ಬಿಡಲು ಹಿಂದೂತ್ವವಾದಿಗಳಿಗೆ ನೇರ ಕಾರಣ ಒದಗಿಸಿತು.



ಈ ತಿಂಗಳ 30ಕ್ಕೆ ಗಾಂಧೀಜಿ ತೀರಿಕೊಂಡು 67 ವರ್ಷಗಳಾಗುತ್ತವೆ. 1948ರ ಜನವರಿ 30ರಂದು ಅವರ ಹತ್ಯೆಗೆ ಕೆಲವು ತಿಂಗಳ ಮೊದಲು, ದೇಶ ತನ್ನ ಮೊದಲ ಸ್ವಾತಂತ್ರ್ಯ ದಿನವನ್ನು ಆಚರಿಸಿತು. ಗಾಂಧೀಜಿ ಅದರಲ್ಲಿ ಭಾಗವಹಿಸಿರಲಿಲ್ಲ; ಅವರು ದೇಶದ ರಾಜಧಾನಿಯಲ್ಲೂ ಇರಲಿಲ್ಲ, ಕಲ್ಕತ್ತದ ಬೆಲಿಯಾಘಾಟ್ ಎಂಬಲ್ಲಿ ಅವರು ದೇಶಾದ್ಯಂತ ಹೆಚ್ಚುತ್ತಿರುವ ಹಿಂಸೆಯ ಬಗ್ಗೆ ವಿಷಾದ ಸೂಚಿಸಲು ಆ ದಿನ ಉಪವಾಸ ಸತ್ಯಾಗ್ರಹ ಮಾಡಿದ್ದರು. ಅದಕ್ಕೂ ಮುನ್ನ ಗಾಂಧೀಜಿ ಬಂಗಾಳದಲ್ಲಿ ಉಲ್ಬಣಗೊಂಡಿದ್ದ ಕೋಮುಹಿಂಸೆಯನ್ನು ನಿಲ್ಲಿಸಲು ಆ ಪ್ರಾಂತ್ಯದ ನವಾಖಾಲಿಯಲ್ಲಿ ಪಾದಯಾತ್ರೆ ನಡೆಸಿದ್ದರು. ಬಂಗಾಳ ಮಾತ್ರವಲ್ಲ ಉತ್ತರ ಭಾರತದ ಅನೇಕ ಪ್ರಾಂತ್ಯಗಳಲ್ಲಿ ಮುಖ್ಯವಾಗಿ ಪಂಜಾಬ್, ಸಿಂಧ್ ಮತ್ತು ರಾಜಧಾನಿ ದೆಹಲಿಯಲ್ಲಿ, ದೇಶ ವಿಭಜನೆಯ ಕಾರಣಕ್ಕೆ ಹಿಂದೂಗಳು, ಮುಸ್ಲಿಮರು ಮತ್ತು ಸಿಖ್ಖರು ಪರಸ್ಪರರ ಮೇಲೆ ಭಾರೀ ಪ್ರಮಾಣದ ಹಿಂಸಾಚಾರ ನಡೆಸಿದ್ದರು. ಅವು ಗಾಂಧೀಜಿ ಬದುಕಿನ ಅತ್ಯಂತ ದುಃಖದ ದಿನಗಳಾಗಿದ್ದವು. ಅಂತಹ ಒಂದು ದಿನ 1948ರ ಜನವರಿ 30, ಶುಕ್ರವಾರ ಮಹಾರಾಷ್ಟ್ರದ ಒಬ್ಬ ಚಿತ್ಪಾವನ ಬ್ರಾಹ್ಮಣ ತರುಣ ನತ್ತೂರಾಮ ಗೋಡ್ಸೆ (ಇದೇ ಆತನ ಸರಿಯಾದ ಹೆಸರು, ನಾಥೂರಾಮ್ ಅಲ್ಲ) ದೆಹಲಿಯಲ್ಲಿ ತನ್ನ ನಿತ್ಯದ ಪ್ರಾರ್ಥನಾಸಭೆಗೆ ಹೋಗುತ್ತಿದ್ದ ಗಾಂಧೀಜಿಯವರನ್ನು ಗುಂಡಿಟ್ಟು ಕೊಂದ.

ಗೋಡ್ಸೆ ಆರ್.ಎಸ್.ಎಸ್ ಕಾರ್ಯಕರ್ತನಾಗಿದ್ದು ಕೆಲವು ವರ್ಷ ಆ ಸಂಘಟನೆಯ ತತ್ವ ಪ್ರಸಾರಕ್ಕೆ ಮೀಸಲಾದ ಒಂದು ಪತ್ರಿಕೆಯನ್ನೂ ಪ್ರಕಟಿಸುತ್ತಿದ್ದ. ಕ್ರಮೇಣ, ಅವನಿಗೆ ಆರ್.ಎಸ್.ಎಸ್ ಧೋರಣೆ ತೀರ ಮೃದುವಾಯಿತು ಎನ್ನಿಸಿ, ಹಿಂದೂ ಮಹಾಸಭಾ ಎಂಬ ಉಗ್ರವಾದಿ ಸಂಘಟನೆಯನ್ನು ಸೇರಿಕೊಂಡ. ಗೋಡ್ಸೆಗೂ ಆರ್.ಎಸ್.ಎಸ್.ಗೂ ಸಂಬಂಧ ವಿಲ್ಲ ಎಂದು ಈಗ ಅದು ಹೇಳುತ್ತಿದೆ. ಆರ್.ಎಸ್.ಎಸ್ ನಿತ್ಯವೂ ಹೇಳುವ ಸಾವಿರಾರು ಸುಳ್ಳುಗಳಲ್ಲಿ ಅದೂ ಒಂದು. ಗಾಂಧೀಜಿಯವರನ್ನು ಗುಂಡಿಟ್ಟು ಕೊಂದ ದಿನ, ಗೋಡ್ಸೆ ಆರ್.ಎಸ್.ಎಸ್.ನ ನೋಂದಾಯಿತ ಸದಸ್ಯನಾಗಿದ್ದನೋ ಇಲ್ಲವೋ ಅದರ ಸಿದ್ಧಾಂತದ ಭಾಗವಾಗಿಯೇ ಅವನು ಗಾಂಧೀಜಿ ಹತ್ಯೆಯ ಯೋಜನೆಯನ್ನು ರೂಪಿಸಿ ಕಾರ್ಯಗತ ಗೊಳಿಸಿದ್ದ. ಹಿಂದೂತ್ವ ಸಿದ್ಧಾಂತವನ್ನು ಮೊದಲ ಬಾರಿಗೆ ಸ್ಪಷ್ಟವಾಗಿ ನಿರೂಪಿಸಿದ ವಿ.ಡಿ.ಸಾವರ್ಕರ್, ಗೋಡ್ಸೆಗೆ ಆಪ್ತ ಹಾಗೂ ಮಾರ್ಗದರ್ಶಕರಾಗಿದ್ದರು. ಅವರು ಆರ್.ಎಸ್.ಎಸ್‌ಗೂ ಆರಾಧ್ಯಮೂರ್ತಿ.

ಗೋಡ್ಸೆ ಆರ್.ಎಸ್.ಎಸ್ ಸಿದ್ಧಾಂತಕ್ಕೆ ಮಾತ್ರ ಬದ್ಧನಾದವನಲ್ಲ, ಅದರ ಗರಡಿಯಲ್ಲೂ ಪಳಗಿದವನು. ಸ್ವತಃ ಅವನೇ ಅದನ್ನು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ. ಉದಾ: ಗಾಂಧೀಜಿ ಕೊಲೆ ಮೊಕದ್ದಮೆಯನ್ನು ಆಲಿಸಿದ ಮುಖ್ಯ ನ್ಯಾಯಾಧೀಶರೆದುರು, ಆರೋಪಿಯಾಗಿ ಗೋಡ್ಸೆ ನೀಡಿದ ಸುವಿಖ್ಯಾತ ಹೇಳಿಕೆಯಲ್ಲಿ ಅವನ ಮಾತುಗಳು ಹೀಗಿವೆ: "1932ರ ಸುಮಾರಿಗೆ ನಾಗಪುರದ ಡಾ.ಹೆಡಗೆವಾರ್ ಮಹಾರಾಷ್ಟ್ರದಲ್ಲೂ ಆರ್.ಎಸ್.ಎಸ್ ಸ್ಥಾಪಿಸಿದರು. ಅವರ ಭಾಷಣಗಳು ನನ್ನ ಮೇಲೆ ತುಂಬ ಪ್ರಭಾವ ಮಾಡಿದವು; ನಾನೂ ಒಬ್ಬ ಸ್ವಯಂ ಸೇವಕನಾದೆ; ಮಹಾರಾಷ್ಟ್ರದಲ್ಲಿ ಸಂಘದ ಮೊದಲ ಸದಸ್ಯರಲ್ಲಿ ನಾನೂ ಒಬ್ಬ. ಪ್ರಾಂತ್ಯದ ಬೌದ್ಧಿಕ ವಿಭಾಗದಲ್ಲಿ ನಾನು ಕೆಲವು ವರ್ಷ ಕೆಲಸ ಮಾಡಿದೆ. ಹಿಂದೂಗಳ ಏಳಿಗೆಗಾಗಿ ದುಡಿದ ನನಗೆ, ಹಿಂದೂಗಳ ನ್ಯಾಯಬದ್ಧ ರಾಜಕೀಯ ಹಕ್ಕುಗಳ ರಕ್ಷಣೆಗಾಗಿ ರಾಜಕೀಯದಲ್ಲಿ ತೊಡಗಿಕೊಳ್ಳುವ ಆವಶ್ಯಕತೆ ಕಂಡಿತು. ಹಾಗಾಗಿ, ನಾನು ಆರ್.ಎಸ್.ಎಸ್ ತೊರೆದು ಹಿಂದೂ ಮಹಾಸಭಾ ಸೇರಿದೆ." ಗೋಡ್ಸೆಯ ಈ ಮಾತುಗಳಿಂದ, ಗಾಂಧೀಜಿ ಕೊಲೆ ಹಠಾತ್ತನೆ ಸಂಭವಿಸಿದ ಒಂದು ಕ್ರಿಮಿನಲ್ ಅಪರಾಧವಲ್ಲ; ಅದು ಒಂದು ರಾಜಕೀಯ ಕೊಲೆಯಾಗಿದ್ದು ಅದರ ಸ್ಫೂರ್ತಿ ಮತ್ತು ತಾತ್ವಿಕ ತಳಹದಿ ಆರ್.ಎಸ್.ಎಸ್ ಸಿದ್ಧಾಂತ ಎಂಬುದು ಸ್ಪಷ್ಟವಾಗುತ್ತದೆ.

ಅದೂ ಸಾಲದ್ದಕ್ಕೆ, ಗಾಂಧೀಜಿಯವರ ಬದುಕಿನ ಕೊನೆಯ ಕಾಲಘಟ್ಟದಲ್ಲಿ ಅವರನ್ನು ಕೊಲ್ಲಲು 6 ಬಾರಿ ಯತ್ನಿಸಲಾಗಿತ್ತು, ಈ 6 ಪ್ರಯತ್ನಗಳೂ ಹಿಂದೂತ್ವ ಸಿದ್ಧಾಂತದ ಪೂರ್ವಯೋಜಿತ ಕಾರ್ಯಾಚರಣೆಗಳಾಗಿದ್ದು 1948ರ ಜನವರಿ 30ರ ಕೊನೆಯ ಪ್ರಯತ್ನ ಯಶಸ್ವಿಯಾಯಿತು. ಈಗ 2015ರಲ್ಲಿ ದೇಶದ ಪ್ರಧಾನ ಮಂತ್ರಿ, ಗಾಂಧೀಜಿಯವರನ್ನು ಕೊಂದ ಆರ್.ಎಸ್.ಎಸ್ ಜೊತೆ ತಮಗಿರುವ ಬಾಂಧವ್ಯವನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅವರ ಮಂತ್ರಿಮಂಡಲದಲ್ಲೂ ಆಳುವ ಪಕ್ಷದ ಹಿರಿಯ ಸ್ಥಾನಗಳಲ್ಲೂ ಅನೇಕ ಆರ್.ಎಸ್.ಎಸ್. ಕಾರ್ಯಕರ್ತರಿದ್ದಾರೆ. ದೇಶದ ಮಂತ್ರಿಮಾಗಧರಿಗೆ ಜನವರಿ 30, ಇನ್ನು ಮುಂದೆ ಗಾಢ ವಿಷಾದದ ಒಂದು ನೆನಪಾಗಿರುತ್ತದೆಯೇ? ಅಥವಾ ಜನರೆದುರಿಗೆ ಶೋಕ ನಟಿಸಿ, ಗುಟ್ಟಾಗಿ ಆಚರಿಸುವ ವಿಜಯೋತ್ಸವವಾಗಿರುತ್ತದೆಯೆ?

ಅವರು ಆ ದಿನವನ್ನು ಹೇಗೂ ಆಚರಿಸಲಿ, ಗಾಂಧೀಜಿ ದೇಹಾಂತ್ಯದ ನೆನಪು ನಮಗೆ ಮಾನವಧರ್ಮ ಮತ್ತು ರಾಜಧರ್ಮಗಳೆರಡರ ಬಗೆಗೂ ಈಗ ಹೊಸ ಪಾಠಗಳನ್ನು ಕಲಿಸಬಹುದು. 1948 ಜನವರಿ 30ರ ಘಟನೆ ಚಾರಿತ್ರಿಕವಾಗಿರುವುದರ ಜೊತೆಗೆ ಒಂದು ಸಾರ್ವಕಾಲಿಕ ರೂಪಕವೂ ಆಗಿದೆ. ದೇಶದ ಹಾಲಿ ಪ್ರಧಾನಮಂತ್ರಿ ಮತ್ತು ಅವರ ಪಕ್ಷದ ಕರಾಳಕೃತ್ಯಗಳನ್ನು ವಿರೋಧಿಸುವವರಂತೂ ಈ ದಿನವನ್ನು ವಿಶೇಷವಾಗಿ ಸ್ಮರಿಸಿಕೊಳ್ಳಬೇಕಾಗಿದೆ. ಬಿ.ಜೆ.ಪಿ. ಗಾಂಧೀಜಿಯವರ ವ್ಯಕ್ತಿತ್ವವನ್ನು ಸಹ ತನ್ನ ಅಳತೆಗೆ ಸರಿಯಾಗಿ ಕತ್ತರಿಸಿ ಬಳಸಿ ಬಿಸಾಕುವ ನೀತಿಗೆಟ್ಟ ಪಕ್ಷ. ಅದಕ್ಕೆ ಒಂದು ಉದಾಹರಣೆ ಈಗಾಗಲೇ ನಮ್ಮೆದುರಿಗೆ ಇದೆ.

2014ರ ಅಕ್ಟೋಬರ್ 2 ಗಾಂಧೀಜಿ ಜನ್ಮದಿನದಂದು ಪ್ರಧಾನ ಮಂತ್ರಿಯವರು ಸಾಂಕೇತಿಕವಾಗಿ ಕಸಬರಿಕೆ ಹಿಡಿದು ಗಾಂಧೀಜಿಯನ್ನು ಲಯನ್ಸ್, ರೋಟರಿ ಕ್ಲಬ್ ಮಾದರಿಯ ಸಮಾಜಸೇವಕನ ಮಟ್ಟಕ್ಕೆ ಇಳಿಸಿದರು. ಸಾಮಾಜಿಕ ಸಮಾನತೆ, ಕೋಮು ಸೌಹಾರ್ದ, ಆರ್ಥಿಕ ಸ್ವಾವಲಂಬನೆ ಮೊದಲಾದ ಗಾಂಧೀಜಿಗೆ ಪ್ರಿಯವಾದ ಎಲ್ಲ ತತ್ವಗಳನ್ನೂ ಪ್ರಧಾನ ಮಂತ್ರಿ ತನ್ನ ಈ ನಡೆಯಿಂದ ಗುಡಿಸಿ ಹಾಕಿದರು!

ಬಿ.ಜೆ.ಪಿ ಹೇಳಿಕೇಳಿ ಆ ಎಲ್ಲ ತತ್ವಗಳನ್ನೂ ವಿರೋಧಿಸುವಂತಹ ಒಂದು ಬಲಪಂಥೀಯ ರಾಜಕೀಯ ಪಕ್ಷ! ಸಮಾನತೆ ಅದಕ್ಕೆ ಯಾವತ್ತೂ ಒಂದು ಮೌಲ್ಯವಾಗಿರಲಿಲ್ಲ, ಸ್ವಾವಲಂಬನೆಗಾಗಿ ಹೋರಾಟದ ಮಾತಿಗೆ ಬಂದರೆ ಬಿ.ಜೆ.ಪಿ, ಇಂಗ್ಲೆಂಡ್, ಅಮೆರಿಕಗಳ ಗುಲಾಮಗಿರಿ ನಡೆಸುವುದೇ ಒಂದು ಸೌಭಾಗ್ಯ ಎಂದು ಭಾವಿಸಿರುವ ಪಕ್ಷ.

ಗಾಂಧೀಜಿ ತನ್ನ ಜೀವವನ್ನೇ ಮುಡುಪಾಗಿಟ್ಟ ಒಂದು ಮೌಲ್ಯವಿದ್ದರೆ ಅದು ಕೋಮು ಸೌಹಾರ್ದ. ಆ ಕಾರಣಕ್ಕಾಗಿಯೇ ಅವರನ್ನು ಕೊಲೆ ಮಾಡಲಾಯಿತು. ಗಾಂಧೀಜಿಯ ಕೊಲೆಗಡುಕರನ್ನೂ ಆ ಕೊಲೆಯ ಸಂಚು ರೂಪಿಸಿದವರನ್ನೂ ಗೌರವಿಸುವವರು ಈಗ ಸರಕಾರ ನಡೆಸುತ್ತಿದ್ದಾರೆ. ಆ ಕಾರಣಕ್ಕಾದರೂ ಗಾಂಧೀಜಿ ಹತ್ಯೆಯ ಅರ್ಥವೇನು ಎಂದು ನಾವು ಯೋಚಿಸಬೇಕು. 1948ರ ಜನವರಿ ತಿಂಗಳಲ್ಲಿ, ತನ್ನ ಕೊಲೆಗೆ ಕೆಲವೇ ದಿನಗಳ ಮೊದಲು ಗಾಂಧೀಜಿ ಕೈಗೊಂಡ ಒಂದು ನಿರ್ಧಾರ, ಅವರನ್ನು ಮುಗಿಸಿ ಬಿಡಲು ಹಿಂದೂತ್ವವಾದಿಗಳಿಗೆ ನೇರ ಕಾರಣ ಒದಗಿಸಿತು. ಆ ದಿನಗಳಲ್ಲೂ ದೇಶ ವಿಭಜನೆಯ ಹಿಂಸೆ ತಣ್ಣಗಾಗಿರಲಿಲ್ಲ, ದೆಹಲಿ ನಿರಾಶ್ರಿತರಿಂದ ಕಿಕ್ಕಿರಿದು ತುಂಬಿತ್ತು, ಅವರಲ್ಲಿ ಹೆಚ್ಚಿನವರು ಪಂಜಾಬ್ ಮತ್ತು ಸಿಂಧ್‌ಗಳ ಮುಸ್ಲಿಮರಿಂದ ಹಿಂಸೆಗೊಳಗಾದ ಹಿಂದೂಗಳಾಗಿದ್ದರು. ದೆಹಲಿಯ ಬಹುಸಂಖ್ಯಾತ ಹಿಂದೂಗಳು ಕನಲಿಹೋಗಿದ್ದರು. ಅವರು ಸೇಡು ತೀರಿಸಿಕೊಳ್ಳಲು ಸಿಟ್ಟಿನಲ್ಲಿ ಕುದಿಯುತ್ತಿದ್ದರು. ತಮ್ಮ ಸಿಟ್ಟಿನಲ್ಲಿ ಹಿಂದೂಗಳಿಂದ ಇದೇ ಬಗೆಯ ಹಿಂಸಾಚಾರವನ್ನು ಅನುಭವಿಸಿದ ಮುಸ್ಲಿಮ್ ಅಸಹಾಯಕರು ದೇಶದ ಇತರ ಕಡೆಗಳಲ್ಲಿ ಇದ್ದಾರೆ ಎಂಬ ವಾಸ್ತವವನ್ನು ಮರೆತಿದ್ದರು. ಆ ಕ್ಷಣಕ್ಕೆ ಅವರ ವಿವೇಕಶೂನ್ಯ ಸಿಟ್ಟಿಗೆ ತುತ್ತಾದವರು ದೆಹಲಿಯ ಅಸಹಾಯಕ ಮುಸ್ಲಿಮರು.

ಪ್ರಾಯಶಃ ದೆಹಲಿಯಲ್ಲಿ ಯಾಕೆ, ಇಡೀ ದೇಶದಲ್ಲೇ ಸಮಚಿತ್ತ ಮತ್ತು ನ್ಯಾಯಪ್ರಜ್ಞೆಗಳನ್ನು ಕಳೆದುಕೊಳ್ಳದ ಏಕೈಕ ವ್ಯಕ್ತಿ ಗಾಂಧೀಜಿ. ಹಿಂಸೆ ಅವರನ್ನು ಕಂಗಾಲುಗೊಳಿಸಿತ್ತು, ತನ್ನ ಕೊನೆಗಾಲದಲ್ಲಿ ರಾತ್ರಿಯೆಲ್ಲ ನಿದ್ದೆಗೆಟ್ಟು, ತನ್ನ ಸುತ್ತ ಹಬ್ಬಿರುವ ಹಿಂಸೆಯಲ್ಲಿ ತನ್ನ ಜವಾಬ್ದಾರಿಯೂ ಇದೆಯೆ ಎಂದು ಅವರು ಯೋಚಿಸುತ್ತಿದ್ದರು. ಆ ಹಿನ್ನೆಲೆಯಲ್ಲಿ 1948ರ ಜನವರಿ 13ರಂದು ಗಾಂಧೀಜಿ ದೆಹಲಿಯಲ್ಲೂ ದೇಶದಲ್ಲೂ ಹೆಚ್ಚುತ್ತಿರುವ ಹಿಂಸಾಚಾರದ ವಿರುದ್ಧ ತನ್ನ ಕಟ್ಟಕಡೆಯ ಆಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಅದು ಸ್ವತಂತ್ರ ಭಾರತದ ಪ್ರಥಮ ಪ್ರಜಾಸತ್ತಾತ್ಮಕ ಪ್ರತಿಭಟನೆಯೂ ಹೌದು.

ಗಾಂಧೀಜಿಯವರ ಈ ನಡೆ ಅನಿರೀಕ್ಷಿತವಾಗಿತ್ತು. ಕಾಂಗ್ರೆಸ್ ಪಕ್ಷದಲ್ಲಿ ನೆಹರೂ, ವಲ್ಲಭಭಾಯಿ ಪಟೇಲ್ ಮುಂತಾದ ಹಿರಿಯ ನಾಯಕರೂ ಸೇರಿದಂತೆ ಹೆಚ್ಚಿನವರಿಗೆ ಅವರ ಸತ್ಯಾಗ್ರಹ ಅನವಶ್ಯ ಕಿರಿಕಿರಿ ಎನ್ನಿಸಿತ್ತು. ಪ್ರಜೆಗಳನ್ನು ರಕ್ಷಿಸಲು ಮತ್ತು ರಾಜತಾಂತ್ರಿಕ ಒಪ್ಪಂದಗಳನ್ನು ಕಾರ್ಯಗತಗೊಳಿಸಲು ಭಾರತ ಸರಕಾರ ವಿಫಲವಾದದ್ದರ ವಿರುದ್ಧ ಗಾಂಧೀಜಿ ಈ ಸತ್ಯಾಗ್ರಹ ಪ್ರಾರಂಭಿಸಿದ್ದರು. ದೆಹಲಿಯಲ್ಲಿ ಹಿಂಸೆಗೆ ಗುರಿಯಾದ ಪ್ರಜೆಗಳಲ್ಲಿ ಹೆಚ್ಚಿನವರು ಮುಸ್ಲಿಮರಾಗಿದ್ದರು ಎನ್ನುವ ಕಾರಣಕ್ಕೆ ಗಾಂಧೀಜಿಯವರ ಈ ಕ್ರಮ ಮುಸ್ಲಿಮರ ಪರ ಪಕ್ಷಪಾತ ಧೋರಣೆಯದ್ದು ಎಂದು ಎಲ್ಲರೂ ಭಾವಿಸಿದರು.

ಈ ಬಗ್ಗೆ ದೆಹಲಿಯ ಪತ್ರಕರ್ತರೇ ಗಾಂಧೀಜಿಯವರನ್ನು ಪ್ರಶ್ನಿಸಿದಾಗ ಅವರು "ಹೌದು ನನ್ನ ಉಪವಾಸ ಸತ್ಯಾಗ್ರಹ ಹಿಂಸೆಗೊಳಗಾದ ಮುಸ್ಲಿಮರ ಪರ" ಎಂದು ಚೂರೂ ಅಳುಕದೆ ಹೇಳಿದರು. "ಯಾರನ್ನು ಉದ್ದೇಶಿಸಿ ನಿಮ್ಮ ಈ ಸತ್ಯಾಗ್ರಹ?" ಎಂದು ಪತ್ರಕರ್ತರು ಪ್ರಶ್ನಿಸಿದಾಗ ಗಾಂಧೀಜಿ "ಭಾರತ ಮತ್ತು ಪಾಕಿಸ್ತಾನದ ಎಲ್ಲ ಪ್ರಜೆಗಳು" ಎಂದು ಉತ್ತರಿಸಿದರು. ಕೋಮುಹಿಂಸೆಗೆ ತುತ್ತಾದ ಪ್ರಜೆಗಳಲ್ಲಿ ಅವರು ಹಿಂದೂ, ಮುಸ್ಲಿಂ ಮತ್ತು ಸಿಖ್ ಎಂದು ಭೇದ ಕಲ್ಪಿಸಲಿಲ್ಲ. ತನ್ನ ಉಪವಾಸ ಸತ್ಯಾಗ್ರಹ ನಿಲ್ಲಿಸಲು ಗಾಂಧೀಜಿ ಹಾಕಿದ ಶರತ್ತುಗಳು ಸಾಮಾನ್ಯರಿಗೆ ಮಾನವ ಧರ್ಮದ ಒಂದು ನೈತಿಕ ಪಾಠದಂತೆಯೂ, ಆಳುವವರಿಗೆ ರಾಜಧರ್ಮದ ಕಟ್ಟುಪಾಡುಗಳ ಹಾಗೆಯೂ ಇವೆ. ಆ ಶರತ್ತುಗಳು ಹೀಗಿವೆ:

1. ದೆಹಲಿಯಿಂದ ಮುಸ್ಲಿಮರನ್ನು ಓಡಿಸಿಬಿಡಲು ಸಂಘಟಿತ ಪ್ರಯತ್ನಗಳನ್ನು ಕೆಲವರು ನಡೆಸಿದ್ದಾರೆ. ಅದು ತಕ್ಷಣ ನಿಲ್ಲಬೇಕು.
2. ಅಶಾಂತಿಯ ಕಾರಣಕ್ಕೆ ಮುಂದೂಡಲಾಗಿರುವ ದೆಹಲಿಯ ಖ್ವಾಜಾ ಕುತುಬುದ್ದೀನ್ ದರ್ಗದ ಉರೂಸ್ ಕೂಡಲೆ ನಡೆಯಬೇಕು.
3. ಗುರುದ್ವಾರ ಮತ್ತು ದೇವಸ್ಥಾನಗಳಾಗಿ ಬಲಾತ್ಕಾರದಲ್ಲಿ ಪರಿವರ್ತಿತವಾಗಿರುವ ಮಸೀದಿಗಳನ್ನು ಮುಸ್ಲಿಮ್ ಸಮುದಾಯಕ್ಕೆ ಮರಳಿಸಬೇಕು.
4. ಮುಸ್ಲಿಮ್ ಪ್ರಜೆಗಳಿಗೆ, ಅವರ ಮನೆಗಳಿಗೆ ರಕ್ಷಣೆ ಇರಬೇಕು.
5. ಮುಸ್ಲಿಮರ ಮೇಲೆ ದೆಹಲಿಯಲ್ಲಿ ವಿಧಿಸಲಾಗಿರುವ ಅಘೋಷಿತ ಆರ್ಥಿಕ ಬಹಿಷ್ಕಾರ ತಕ್ಷಣ ನಿಲ್ಲಬೇಕು.
6. ದೇಶ ವಿಭಜನೆಯ ಒಪ್ಪಂದದ ಪ್ರಕಾರ ಭಾರತ ಸರಕಾರ, ಪಾಕಿಸ್ತಾನಕ್ಕೆ 55 ಕೋಟಿ ರೂ. ಪಾವತಿಸಬೇಕಾಗಿತ್ತು, ಆದರೆ ಕಾಶ್ಮೀರದ ಗಡಿಯೊಳಗೆ ಪಾಕಿಸ್ತಾನದ ಸೈನ್ಯ ನುಗ್ಗಿ ಆಕ್ರಮಣ ನಡೆಸಿದ ಕಾರಣಕ್ಕೆ ಭಾರತ ಸರಕಾರ ಈ ಪಾವತಿಯನ್ನು ತಡೆಹಿಡಿದಿತ್ತು. ಗಾಂಧೀಜಿ ಪಾಕಿಸ್ತಾನದ ಆಕ್ರಮಣವನ್ನು ಖಂಡಿಸಿದರೂ, ಅದರ ಜೊತೆ ಮಾಡಿಕೊಂಡ ರಾಜತಾಂತ್ರಿಕ ಒಪ್ಪಂದವನ್ನು ಪಾಲಿಸಲೇಬೇಕು ಎಂದು ಹಠಹಿಡಿದರು.

ತನ್ನ ಉಪವಾಸ ಸತ್ಯಾಗ್ರಹ ನಿಲ್ಲಿಸಲು ಗಾಂಧೀಜಿ ವಿಧಿಸಿದ ಶರತ್ತುಗಳಲ್ಲಿ ಪಾಕಿಸ್ತಾನಕ್ಕೆ 55 ಕೋಟಿ ರೂ. ಪಾವತಿಸುವ ಒಂದು ಶರತ್ತನ್ನು ಮಾತ್ರ ಮತ್ತೆ ಮತ್ತೆ ಒತ್ತಿ ಹೇಳುತ್ತ ಗಾಂಧೀಜಿ ಪಾಕಿಸ್ತಾನದ ಬಗ್ಗೆ ಮೃದು ಧೋರಣೆ ತಳೆದಿದ್ದರು ಎಂದು ಈಗಲೂ ಅವರ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಭಾರತ ಸರಕಾರ ಹೆಚ್ಚು ತಡಮಾಡದೆ ಒಪ್ಪಂದದ ಪ್ರಕಾರ ಪಾಕಿಸ್ತಾನಕ್ಕೆ 55 ಕೋಟಿ ರೂ.ಗಳನ್ನು ಸಲ್ಲಿಸುವ ತೀರ್ಮಾನವನ್ನು ತೆಗೆದುಕೊಂಡಿತು. ಆದರೆ ಗಾಂಧೀಜಿಯವರ ಉಪವಾಸ ದೇಶದಲ್ಲಿ ಹಬ್ಬಿರುವ ಹಿಂಸೆಯ ವಿರುದ್ಧವಾಗಿತ್ತು.

ಹಾಗಾಗಿ ಬಡಪೆಟ್ಟಿಗೆ ತಮ್ಮ ಉಪವಾಸ ನಿಲ್ಲಿಸಲು ಅವರು ಸಮ್ಮತಿಸಲಿಲ್ಲ, ಎಲ್ಲ ರಾಜಕೀಯ ಪಕ್ಷಗಳ ನೇತಾರರು, ಸಾಮಾಜಿಕ ಸಂಘಟನೆಗಳ ಪದಾಧಿಕಾರಿಗಳು ಹಾಗು ಆರ್.ಎಸ್.ಎಸ್ ಮತ್ತು ಹಿಂದೂ ಮಹಾಸಭಾಗಳ ನಾಯಕರು ಒಟ್ಟಾಗಿ, ತಾವು ಗಾಂಧೀಜಿಯವರ ಶರತ್ತುಗಳನ್ನು ಕಾರ್ಯಗತಗೊಳಿಸುವೆವು ಎಂದು ಮಾತು ಕೊಟ್ಟ ಮೇಲೆ ಜನವರಿ 18ರಂದು ಗಾಂಧೀಜಿ ತನ್ನ ಸತ್ಯಾಗ್ರಹವನ್ನು ನಿಲ್ಲಿಸಿದರು. ತಮ್ಮನ್ನು ಭೇಟಿಮಾಡಲು ಬಂದ ಆರ್.ಎಸ್.ಎಸ್.ನವರಿಗೆ ಅವರು "ದೆಹಲಿಯಲ್ಲಿ ಮಾತ್ರ ಹಿಂಸಾಚಾರ ನಿಲ್ಲುವುದೋ? ದೇಶದ ಉಳಿದ ಕಡೆಗಳಲ್ಲಿ ಅದು ಮುಂದುವರಿಯುವುದಿಲ್ಲ ಎಂದು ಏನು ಭರವಸೆ? ಈಗ ಯಾರೂ ಹಿಂಸೆಯನ್ನು ನಿಲ್ಲಿಸುವುದರ ಬಗ್ಗೆ ತಾವು ಕೊಟ್ಟ ಮಾತು ಉಳಿಸಿಕೊಳ್ಳುವುದಿಲ್ಲ" ಎಂದು ಕುಟುಕಿದ್ದರು. ಆರ್.ಎಸ್.ಎಸ್ ಬಗ್ಗೆ ಅವರಿಗಿದ್ದ ಭಯ ಸಕಾರಣವಾಗಿತ್ತು, ಅದು ತನ್ನ ಮಾತು ಉಳಿಸಿಕೊಳ್ಳಲಿಲ್ಲ; ಹಿಂದೂ ಮಹಾಸಭಾ ತಾನು ಗಾಂಧೀಜಿಯವರಿಗೆ ನೀಡಿದ್ದ ಆಶ್ವಾಸನೆಗೆ ಬದ್ಧವಲ್ಲ ಎಂದು ಅಧಿಕೃತವಾಗಿಯೇ ಘೋಷಿಸಿತು.

ದೆಹಲಿಯ ಆಗಿನ ಹಿಂಸ್ರ ವಾತಾವರಣವನ್ನು ನೆನಪಿಸಿಕೊಂಡರೆ ಗಾಂಧೀಜಿಯವರ ಅಂತಿಮ ಸತ್ಯಾಗ್ರಹ ಧೀರೋದಾತ್ತವಷ್ಟೇ ಅಲ್ಲ, ಅದು ಒಂದು ಅದ್ಭುತ ರಮ್ಯಕತೆಯಂತೆಯೂ ಕಾಣಿಸುತ್ತದೆ. ದೆಹಲಿಯ ಹಿಂದೂಗಳು ಅವರಿಗೆ ತಿರುಗಿಬಿದ್ದಿದ್ದರು. ಕಾಂಗ್ರೆಸ್ ಪಕ್ಷದಲ್ಲೂ ಅವರು ಒಂಟಿಯಾಗಿದ್ದರು. ಅವರ ಈ ಸತ್ಯಾಗ್ರಹ ಯಾರಿಗೂ ಪಥ್ಯವಾಗಿರಲಿಲ್ಲ. ಆದರೆ ತನ್ನ ಉಪವಾಸ ನಿಲ್ಲಿಸಲು ಗಾಂಧೀಜಿ ವಿಧಿಸಿದ ಶರತ್ತುಗಳಲ್ಲಿ ಅಂತಹ ವಿಶೇಷವೇನಿದೆ? ಅವು ಯಾವುದೇ ಪ್ರಜಾಸತ್ತಾತ್ಮಕ ಸರಕಾರ ಮತ್ತು ಪ್ರಜೆಗಳು ಪಾಲಿಸಬೇಕಾದ ಕನಿಷ್ಠ ಕರ್ತವ್ಯಗಳಾಗಿವೆ.

1947ರ ನಂತರ ಸರಕಾರ ಕೋಮು ಹಿಂಸೆಯ ಯಾವ ಪ್ರಕರಣದಲ್ಲೂ ನ್ಯಾಯ ಮತ್ತು ಕಾನೂನುಗಳಿಗೆ ತಕ್ಕಂತೆ ನಡೆದುಕೊಂಡಿಲ್ಲ; ದೇಶದ ಹಿಂದೂಗಳಂತೂ, ಮುಸ್ಲಿಮರು ಹುಟ್ಟು ಅಪರಾಧಿಗಳಾಗಿರುವುದರಿಂದ ಅವರನ್ನು ಸಾರಾಸಗಟಾಗಿ ಹಿಂಸಿಸುವುದೇ ನ್ಯಾಯ ಎಂದು ಬಹುಮತದಿಂದ ತೀರ್ಮಾನಿಸಿದ ಹಾಗೆ ಕಾಣುತ್ತದೆ; ಈ ಸನ್ನಿವೇಶದಲ್ಲಿ ಗಾಂಧೀಜಿಯವರ ಅಂತಿಮ ಸತ್ಯಾಗ್ರಹ ಮತ್ತು ದೇಹಾಂತ್ಯವನ್ನು ಕೋಮುವಾದ ವಿರೋಧಿಸುವ ಎಲ್ಲರೂ ಗೌರವದಿಂದ ನೆನಪಿಸಿಕೊಳ್ಳಬೇಕಾಗಿದೆ.


■ ಜಿ.ರಾಜ

"ಬಾಳೆಕಾಯಿ ಗಣತಂತ್ರ"ವೂ ಮುಂದಿನ ಹಂತವೂ

ಾರ್ಪೋರೇಟು, ರಾಜಕಾರಣಿಗಳ ಕಪಿಮುಷ್ಟಿಯಲ್ಲಿ ವ ಆರ್ಥಿಕತೆಯನ್ನು ಹೊಂದಿರುವ, ಬಡ ಮತ್ತು ಂತ ವರ್ಗಗಳು ತೀವ್ರವಾಗಿ ಬೆಳೆಯುತ್ತಾ ಅವೆರಡರ ಮಗಳ ನಡುವೆ ಅಗಾಧ ಕಂದಕವಿರುವ, ಯವಾಗಿ ಅಸ್ಥಿರವಾಗಿರುವ ದೇಶವೊಂದನ್ನು ಕಾಯಿ ಗಣತಂತ್ರ"ಗಳಿಗೆ ಹೋಲಿಸಬಹುದು.

ಾರತದ ಇತ್ತೀಚಿನ ವಿದ್ಯಮಾನಗಳನ್ನು ಸ್ವಲ್ಪ ಗಮನ ನೋಡಿ. ಇಲ್ಲಿ ಪ್ರಭಾವಶಾಲಿಗಳು ಏನು ಬೇಕಾದರೂ ಏನು ಬೇಕಾದರೂ ಮಾಡಿ ಪಾರಾಗಬಹುದು ಗಿಲ್ಲವೇ? ಎಷ್ಟೇ ಭ್ರಷ್ಟರಾದವರಿಗೂ ಕಾನೂನಿನ ಯಿಂದ ತಪ್ಪಿಸಿಕೊಳ್ಳಲು ಇಲ್ಲಿ ಏನೇನೂ ಕಷ್ಟವಿಲ್ಲ. ವಿಐಪಿ ಅಪರಾಧಿಗಳಿಗೆ ಜೈಲು ಶಿಕ್ಷೆ ಎದುರಾದಾಗ ಸ್ತುತೆ ಆಸ್ಪತ್ರೆಗೆ ಅಡ್ಮಿಟ್ ಆಗುತ್ತಾರೆ. ಆದರೆ ನಿರಪರಾಧಿ ವರ್ಷಾನುಗಟ್ಟಲೆ ಜೈಲುಗಳಲ್ಲಿ ಕೊಳೆಯುತ್ತಾರೆ. ಜೈಲುಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಕಾಣಸಿಗುವವರು ು, ಅಲ್ಪಸಂಖ್ಯಾತರು ಮತ್ತು ಬಡವರು ಎಂದಾಗಿದೆ. ಮ್ಮ ದೇಶದಲ್ಲಿರುವಷ್ಟು ಜಾತಿಗಳು, ಜಾತಿಗಳ ಮತ್ತು ತಾರತಮ್ಯ ಇನ್ನೆಲ್ಲೂ ಕಾಣಸಿಗದು. ಇಲ್ಲಿನ ವ್ಯವಸ್ಥೆಯಲ್ಲಿ ುತೆ ಎಷ್ಟಿದೆಯೆಂದರೆ ದ್ವೇಷದ ಭಾಷಣಕಾರರ, ಉಗ್ರರ ಬಂಧನದ ವಿಷಯದಲ್ಲಿಯೂ ಮತೀಯ ಮ್ಯ ನಡೆಯುತ್ತದೆ. ಇಲ್ಲಿ ಕೋಮು ದಂಗೆಗಳಿಗೆ ಧಿಸಿದ ವಿಚಾರಣಾ ಆಯೋಗಗಳ ವರದಿಗಳಿರುವುದು ಾಗಳಲ್ಲಿ ಜೋಪಾನವಾಗಿಡಲು ಎಂದಾಗಿದೆ. ಇಲ್ಲಿನ ಸ್ ವ್ಯವಸ್ಥೆ ಭ್ರಷ್ಟಾಚಾರದಲ್ಲಿ ನಂಬರ್ ಒನ್ ಎನಿಸಿದೆ. ರಣಿಗಳ ಆಣತಿಯಂತೆ ಇಲ್ಲಿ ಎನ್ಕೌಂಟರ್‌ಗಳು ುತ್ತವೆ. ಇಲ್ಲಿ ನಿನ್ನೆ ಖಡಕ್ ಪೊಲೀಸ್ ಅಧಿಕಾರಿ ಹೊಗಳಿಸಿಕೊಂಡ ವ್ಯಕ್ತಿಗೆ ಇವತ್ತು ಚೋರ ಲರ ಮಧ್ಯೆ ಗುರುತಿಸಿಕೊಳ್ಳಲು ಸ್ವಲ್ಪವೂ ುಮೆನಿಸುವುದಿಲ್ಲ.

ಲ್ಲಿ ಜನಸಾಮಾನ್ಯರ ಸುಲಿಗೆ, ಶೋಷಣೆಗೆ ಮುಕ್ತ ತ್ರ್ಯ ಇದೆ. ಇಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಹೆಚ್ಚಿನ ಒತ್ತು ಸರ್ಕಾರಿ ಆಸ್ಪತ್ರೆಗಳನ್ನು ಕಡೆಗಣಿಸಲಾಗುತ್ತಿದೆ. ಶಿಕ್ಷಣ ಸಂಪೂರ್ಣ ಹಳ್ಳಹಿಡಿದಿದೆ. ಸರ್ಕಾರಿ ಶಾಲೆಗಳು ಒಂದಾಗಿ ಮುಚ್ಚುತ್ತಿರುವಾಗ ಖಾಸಗಿ ಶಾಲೆಗಳು ುಸುತ್ತಿವೆ. ಪರಿಣಾಮವಾಗಿ ಬಡವರ ಪಾಲಿಗೆ ಉತ್ತಮ ಆರೋಗ್ಯ ಸೇವೆಗಳು ಗಗನಕುಸುಮದಂತಾಗಿದೆ. ೇಶನ್, ಡೊನೇಶನ್‌ಗಳಿಗೇ ಹೆಸರು ಮಾಡಿರುವ ಶಿಕ್ಷಣದ ಮಟ್ಟವಂತೂ ಪಾತಾಳಕ್ಕಿಳಿದಿದೆ. ಇಲ್ಲಿ ಕಾರ್ಪೋರೇಟ್ ಉದ್ಯಮಿಗಳಿಗೆ ನೂರಾರು, ಿರು ಎಕರೆ ಭೂಮಿಯನ್ನು ತಟ್ಟೆಯ ಮೇಲಿಟ್ಟು ಮ್ಮಿ ಪುಕ್ಕಟೆಯಾಗಿ ನೀಡಲಾಗುತ್ತದೆ. ಪರಿಸರ ನಾಶದ ನಿತಾದರೂ ಕಾಳಜಿ ಇರದ ಉದ್ದಿಮೆಗಳು, ಗಳು ಇಲ್ಲಿವೆ. ಇಲ್ಲಿ ರೈತರ, ಕಾರ್ಮಿಕರ, ದಲಿತರ, ಯರ, ಅಲ್ಪಸಂಖ್ಯಾತರ ಹಕ್ಕುಗಳನ್ನು ದಮನ ುವ ಸರ್ಕಾರಗಳಿವೆ. ಮಾವೋವಾದ ಬೇಕೆನ್ನುವ ಗಳೂ ಇವೆ. ಒಂದೆಡೆ ಜುಜುಬಿ ಸಾಲ ತೀರಿಸಲಾಗದೆ ಆತ್ಮಹತ್ಯೆಗೆ ಶರಣಾಗುವ ರೈತರಿದ್ದರೆ ಇನ್ನೊಂದೆಡೆ ಉದ್ಯಮಿಗಳ ಲಕ್ಷಾಂತರ ಕೋಟಿ ಸಾಲಬಾಕಿಯನ್ನು ಮನ್ನಾ ಮಾಡುವ ಸರ್ಕಾರಗಳಿವೆ. ಸ್ವಾತಂತ್ರ್ಯ ಬಂದು 68 ವರ್ಷಗಳಾದರೂ ಇಲ್ಲಿ ಮಲಹೊರುವ ಪದ್ಧತಿ ಇನ್ನೂ ಜೀವಂತವಾಗಿದೆ. ಬಹುಕೋಟ್ಯಧೀಶರ ಸಂಖ್ಯೆ ಹೆಚ್ಚುತ್ತಿರುವ ಹೊತ್ತಿನಲ್ಲೇ ಎರಡು ಹೊತ್ತಿನ ಕೂಳಿಗೆ ಪರದಾಡುವವರ ಸಂಖ್ಯೆಯೂ ಗಗನಕ್ಕೇರಿದೆ. ಬಂಗಲೆ, ಕೊಳಗೇರಿಗಳು ಅಕ್ಕಪಕ್ಕದಲ್ಲಿ ಒಂದನ್ನೊಂದು ಅಣಕಿಸುತ್ತಿವೆ. ಇಲ್ಲಿ ಕಾರುಗಳ ಉತ್ಪಾದನೆಯೇ ಅಭಿವೃದ್ಧಿ ಎಂದಾಗಿದೆ. ಕಾರು, ಮಾಲ್‌ಗಳ ಸಂಖ್ಯೆ ಅನಿಯಂತ್ರಿತವಾಗಿ ಬೆಳೆಯುತ್ತಿದೆ. ಇಲ್ಲಿ ಕಾರು ಕೊಳ್ಳಲು ಬೇಸಾಯಕ್ಕಿಂತಲೂ ಕಡಿಮೆ ಬಡ್ಡಿಗೆ ಸಾಲ ಸಿಗುತ್ತದೆ. ರಸ್ತೆಗಳಲ್ಲಿ ಕಾರುಗಳಿಗೆ ಆಟ, ಮೇಲಾಟ ಪಾದಚಾರಿಗಳಿಗೆ ಪ್ರಾಣಸಂಕಟ ಎಂದಾಗಿದೆ. ಕಾರುಗಳಿಗಾಗಿ ರಸ್ತೆ ಅಗಲೀಕರಣ ಇಲ್ಲಿ ನಡೆಯುತ್ತದೆ.



ಇಲ್ಲಿನ ನ್ಯಾಯದಾನ ವ್ಯವಸ್ಥೆ ಆಮೆಗಿಂತಲೂ ನಿಧಾನ ಗತಿಯಲ್ಲಿ ಚಲಿಸುತ್ತಿದೆ. ಇತ್ಯರ್ಥಕ್ಕೆ ಕಾಯುತ್ತಿರುವ ಪ್ರಕರಣಗಳ ಸಂಖ್ಯೆ ಕೋಟಿ ದಾಟಿ ಮುನ್ನುಗ್ಗುತ್ತಿದೆ. ಹೀಗಿರುವಾಗ ಕೆಲವೊಂದು ಮಾಧ್ಯಮಗಳು ತಾವು ಪರ್ಯಾಯ ನ್ಯಾಯಾಲಯಗಳೋ ಎಂಬಂತೆ ವರ್ತಿಸುತ್ತಾ ತನಿಖೆಯಿಲ್ಲದೆ 'ತೀರ್ಪು' ನೀಡತೊಡಗಿವೆ. ಇನ್ನೊಂದೆಡೆ 'ಗುಂಪು ನ್ಯಾಯ'ದ ಮೂಲಕ ಕಂಬಿಯೊಳಗಿರುವ ತಮ್ಮವರನ್ನು ಬಿಡಿಸಿಕೊಳ್ಳುವ ಫ್ಯಾಸಿಸ್ಟ್ ಮಾದರಿಯ ಕಾರ್ಯಾಚರಣೆ ಆರಂಭವಾಗಿದೆ. ತಮಗಾಗದ ಪುಸ್ತಕಗಳು, ಚಿತ್ರಗಳು, ಸಿನಿಮಾಗಳು, ಪ್ರೇಮಿಗಳ ಮೇಲೆ ಗುಂಪುಗೂಡಿ ದಾಳಿ ನಡೆಸುವುದು ಅಥವಾ ನಿಷೇಧ ಹೇರುವುದಂತೂ ತೀರಾ ಸಾಮಾನ್ಯವಾಗಿಬಿಟ್ಟಿದೆ. ಇಲ್ಲಿ ಮನುಷ್ಯರಿಗಿಂತ ಗೋವುಗಳೇ ಮುಖ್ಯವೆಂದು ನಂಬಿ ಗೋವಿಗಾಗಿ ಮನುಷ್ಯರನ್ನೇ ಬಲಿಕೊಡಲು ಹಿಂಜರಿಯದವರೂ ಸಾಕಷ್ಟಿದ್ದಾರೆ.

ಇಲ್ಲಿ ಉಳ್ಳವರ ಕೇಸುಗಳಿಗೆ ಹೆಚ್ಚು ಆದ್ಯತೆ. ಅದೇ ವೇಳೆ ಜಾಮೀನು ಕೊಡಲಾರದೆ ಜೈಲೇ ಗತಿಯಾದ ಬಡಪಾಯಿಗಳ ಸಂಖ್ಯೆ ಗಣನೀಯವಾಗಿದೆ. ಇಲ್ಲಿ ಹೊಗಳುಭಟ ನ್ಯಾಯಮೂರ್ತಿಗಳಿಗೂ ಕೊರತೆಯಿಲ್ಲ. ನಿವೃತ್ತರಾದ ತಕ್ಷಣ ಸರ್ಕಾರಿ ಹುದ್ದೆಗೆ ಸೇರುವ ನ್ಯಾಯಮೂರ್ತಿಗಳೂ ಇದ್ದಾರೆ. ತಾನು ಭಾರತದ ಸರ್ವಾಧಿಕಾರಿ ಆಗಿದ್ದರೆ ಒಂದನೆ ತರಗತಿಯಿಂದಲೆ ಮಹಾಭಾರತ, ಗೀತೆಗಳ ಬೋಧನೆ ಪ್ರಾರಂಭವಾಗುವಂತೆ ನೋಡಿಕೊಳ್ಳುತ್ತಿದ್ದೆ ಎನ್ನುವ ನ್ಯಾಯಾಧೀಶರೂ ಕಾಣಸಿಗುತ್ತಾರೆ. ಸಾಲದ್ದಕ್ಕೆ ತೀವ್ರವಾಗಿರುವ ಭ್ರಷ್ಟಾಚಾರದ ವಾಸನೆ ನೇರವಾಗಿ ಮೂಗಿಗೆ ಬಡಿಯುತ್ತಿದೆ.


ಸರ್ವಧರ್ಮಗಳನ್ನು ಸಮಾನವಾಗಿ ಕಾಣುತ್ತಾ ಶಾಂತಿ ಸೌಹಾರ್ದ ಬೋಧಿಸುವ ಬದಲು 'ಅನ್ಯ' ಧರ್ಮಗಳ ಬಗ್ಗೆ ದ್ವೇಷಕಾರುವ ಸಾಧು, ಸಂತರು ಇಲ್ಲಿದ್ದಾರೆ. ಸಮುದಾಯದ ಗಾತ್ರವನ್ನು ಇನ್ನಷ್ಟು ದೊಡ್ಡದಾಗಿಸಲು ಸ್ತ್ರೀಯರು ಹೆರುವ ಯಂತ್ರಗಳಾಗಬೇಕೆಂದು ಕರೆಕೊಡುವ ಕಡುಮೂರ್ಖ ಯತಿವರೇಣ್ಯರು ಕೂಡ ಇದ್ದಾರೆ. ಇಲ್ಲಿನ ಕೆಲವು ಸಾಧ್ವಿ, ಸ್ವಾಮಿಗಳಂತೂ ಬಾಂಬ್ ಸ್ಫೋಟ ವಿದ್ಯೆಯಲ್ಲಿ ಪಾರಂಗತರು. ಇಲ್ಲಿ ಎಲ್ಲಾ ಬಗೆಯ ಲೌಕಿಕ ವಾಣಿಜ್ಯ ವ್ಯವಹಾರಗಳಲ್ಲಿ ಮುಳುಗಿರುವ ಮಠಮಾನ್ಯಗಳಿವೆ. ರಾಜಕಾರಣಿ, ಉದ್ಯಮಿಗಳ ಕಪ್ಪುಹಣಕ್ಕೆ ಭದ್ರತಾ ಕೊಠಡಿಗಳಂತಿರುವ ಮಠಗಳೂ ಇಲ್ಲಿವೆ. ಇಲ್ಲಿ ಕಪ್ಪುಹಣದ ಬಗ್ಗೆ ನಿರರ್ಗಳವಾಗಿ ಭಾಷಣ ಬಿಗಿಯುವ ಬಾಬಾಗಳು ಖುದ್ದು ಕಾಳಧನದ ತಿಜೋರಿಯ ಮೇಲೆ ಕುಳಿತಿರುತ್ತಾರೆ. ಇಲ್ಲಿ ಮಹಿಳೋದ್ಧಾರದ ಹೆಸರಿನಲ್ಲಿ ಬಡ್ಡಿ ದಂಧೆ ನಡೆಸುವ ಧರ್ಮಕೇಂದ್ರಗಳಿವೆ. ಮಕ್ಕಳನ್ನು, ಭಕ್ತೆಯರನ್ನು ರೇಪು ಮಾಡುವ ಮಠಾಧಿಪತಿಗಳಿದ್ದಾರೆ. ಹಾಗೇ ಬಹುಪತ್ನೀವಲ್ಲಭ ಮಠಾಧೀಶರ ಸಂಖ್ಯೆಯೂ ಕಡಿಮೆಯೇನಲ್ಲ. ರೇಪು ಭವಿಷ್ಯ ನುಡಿಯುವ, ಗೃಹಿಣಿಯರ ಬಳಿ ಒಂದು ರೂಪಾಯಿ ಭಿಕ್ಷೆ ಎತ್ತಿಸುವ ಆಲಾಲುಟೋಪಿ ಜ್ಯೋತಿಷಿಗಳು, ವಾಸ್ತು ಹೆಸರಲ್ಲಿ ಅಮಾಯಕರಿಗೆ ಇಂಗು ತಿನ್ನಿಸುವ ಅರ್ಧಕಸುಬಿ ವಾಸ್ತುತಜ್ಞರು ಇಲ್ಲಿ ಕಳೆಗಿಡಗಳ ಮಾದರಿಯಲ್ಲಿ ಬೆಳೆದಿದ್ದಾರೆ. ಇಂತಹ ಢೋಂಗಿಗಳ ಮೂಢನಂಬಿಕೆ ಕಾರ್ಯಕ್ರಮಗಳನ್ನು ಗಂಟೆಗಟ್ಟಲೆ ಪ್ರಸಾರ ಮಾಡುವ ಅಬ್ಬೇಪಾರಿ 24x7 ವಾಹಿನಿಗಳೂ ಇಲ್ಲಿವೆ. ವಾಕ್ ಸ್ವಾತಂತ್ರ್ಯದ ಹೆಸರಲ್ಲಿ ಎಂತೆಂಥದೋ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ, ನಿರ್ಭಿಡೆಯಾಗಿ ಶಂಕೆಗಳನ್ನು ಬಿತ್ತುವ, ಇಷ್ಟಬಂದಂತೆ ಮಾತಾಡುವ, ಆರೋಪಿಗಳನ್ನು ಅಪರಾಧಿಗಳಂತೆ ಬಿಂಬಿಸುವ, ಪಕ್ಷಪಾತೀಯವಾಗಿ ವರ್ತಿಸುವ ಈ ಕೆಲವು ಚಾನಲ್‌ಗಳಿಗೆ ಕಡಿವಾಣ ಹಾಕುವವರಿಲ್ಲದ ಪರಿಸ್ಥಿತಿ ಇಲ್ಲಿದೆ. ಇಲ್ಲಿ ಇಂದು ಪೂರ್ವಗ್ರಹಪೀಡಿತ ಪತ್ರಿಕೆಗಳ ಸಂಖ್ಯೆಯಲ್ಲೂ ಭಾರಿ ಹೆಚ್ಚಳವಾಗಿದೆ. ಒಟ್ಟಾರೆಯಾಗಿ ಪ್ರಜಾಪ್ರಭುತ್ವದ ನಾಲ್ಕನೆ ಆಧಾರಸ್ತಂಭಕ್ಕೆ ಇಲ್ಲಿ ಗೆದ್ದಲು ಹಿಡಿದಿದೆ.

ಇಲ್ಲಿ ಕ್ರಿಮಿನಲ್‌ಗಳು ಮತ್ತು ಕ್ರಿಮಿನಲ್ ಆರೋಪ ಹೊತ್ತವರು ಚುನಾವಣೆ ಗೆದ್ದು ಶಾಸನ ಮಾಡುವವರೆನಿಸಿಕೊಳ್ಳುತ್ತಾರೆ. ಇಂಥವರ ಸಂಖ್ಯೆ ಚುನಾವಣೆಯಿಂದ ಚುನಾವಣೆಗೆ ಏರುತ್ತಲೆ ಇದೆ. ಶಾಸನಸಭೆಯೊಳಗೆ ಬ್ಲೂಫಿಲಂ ವೀಕ್ಷಿಸುವಂಥಾ ಪಶ್ವೇತರ ಪ್ರವೀಣ ಶಾಸಕರೂ ಇಲ್ಲಿದ್ದಾರೆ. ಜೈಲು ಶಿಕ್ಷೆ ಆದರೂ ಮಂತ್ರಿಗಳಾಗಿ ಮುಂದುವರಿಯುವ ಪರಿದ್ದಾರೆ. ರಾಷ್ಟ್ರೀಯ ಸ್ಮಾರಕಗಳನ್ನು ಧ್ವಂಸಗೊಳಿಸುವ ರಾಜಕಾರಣಿಗಳು ಇಲ್ಲಿ ಹೀರೊಗಳು. ಇಲ್ಲಿ ಮಾರಣ ಹೋಮದ ಆರೋಪ ಎದುರಿಸುತ್ತಿರುವವರು ರಾಷ್ಟ್ರ ರಾಜ ಕಾರಣದ ಮುಂಚೂಣಿಯಲ್ಲಿ ವಿಜೃಂಭಿಸುತ್ತಾರೆ. ನಮ್ಮ ಪೂರ್ವಿಕರಿಗೆ ಪ್ಲಾಸ್ಟಿಕ್ ಸರ್ಜರಿ, ವಿಮಾನ, ಅಂತರ್‌ಗ್ರಹ ಪಯಣ, ಟಿವಿ, ಕಾರು, ಪ್ರಣಾಳ ಶಿಶು ತಂತ್ರಜ್ಞಾನ ಇತ್ಯಾದಿ ತಿಳಿದಿತ್ತೆಂದು ಬೂಸಿಬಿಡುವವರೂ, ಅದನ್ನು ಮಕ್ಕಳ ಮಿದುಳಿಗೆ ತುಂಬಹೊರಟ ಶತಮೂರ್ಖರೂ ಇಲ್ಲಿ ತಲೆದೋರಿದ್ದಾರೆ.


ಸಿದ್ಧಾಂತರಹಿತ ಪಕ್ಷಗಳ ಸಂಖ್ಯೆ ಹೆಚ್ಚಾಗಿರುವಂತೆ ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ಸರ್ಕಸ್ ರಾಜಕಾರಣಿಗಳ ಸಂತತಿಯೂ ಶರವೇಗದಲ್ಲಿ ಬೆಳೆದಿದೆ. ಇವತ್ತು ಯಾವ ರಾಜಕೀಯ ಪಕ್ಷದಲ್ಲಿ ಕಿಸೆ ಭರ್ತಿಗೆ ಅತ್ಯಧಿಕ ಅವಕಾಶ ಇದೆಯೋ ಆ ಪಕ್ಷಕ್ಕೆ ಹಾರುತ್ತಾರೆ. ಅಲ್ಲಿ ತೃಪ್ತಿಯಾಗದಿದ್ದಲ್ಲಿ ನಾಳೆ ಬೇರೊಂದು ಪಕ್ಷಕ್ಕೆ ಜಿಗಿಯುತ್ತಾರೆ. ಬಹಿರಂಗದಲ್ಲಿ 'ಸೆಕ್ಯೂಲರ್', ಅಂತರಂಗದಲ್ಲಿ 'ಮೃದು ಕೋಮುವಾದಿ' ಪಕ್ಷಗಳೂ ಇಲ್ಲಿವೆ. ಇಲ್ಲಿನ ಬಹುತೇಕ ರಾಜಕಾರಣಿಗಳಿಗೆ ಲೋಕಹಿತಕ್ಕಿಂತಲೂ ಸ್ವಧರ್ಮ, ಸ್ವಹಿತವೇ ಮುಖ್ಯವಾಗಿದೆ. ಇಲ್ಲಿ ಈಗ ರಾಜಕಾರಣ, ಧರ್ಮ ಮತ್ತು ಕಾರ್ಪೋರೇಟುಗಳ ಅಪಾಯಕಾರಿ ಮಿಶ್ರಣ ನಿರ್ಮಾಣವಾಗಿದೆ. ಈ ಕಡಾಯಿಯೊಳಗೆ ಅನೇಕ ಮಾಧ್ಯಮಗಳೂ ಬಿದ್ದಿವೆ. ಈ ವಿದ್ಯಮಾನಗಳೆಲ್ಲವೂ ನಾವಿಂದು ಹೆಚ್ಚೂಕಡಿಮೆ ಒಂದು "ಬಾಳೆಕಾಯಿ ಗಣತಂತ್ರ" ಎಂದು ಕರೆಸಿಕೊಳ್ಳುವ ಸ್ಥಿತಿಗೆ ಸಮೀಪಿಸುತ್ತಿರುವುದನ್ನು ಸೂಚಿಸುತ್ತಿಲ್ಲವೇ? ಇನ್ನು ಮುಂದಿನ ಹಂತ ಏನಿರಬಹುದೋ, ಹೇಗಿರಬಹುದೋ ಯೋಚಿಸಲೂ ಆಗುತ್ತಿಲ್ಲ.

● ಸುರೇಶ್ ಭಟ್ ಬಾಕ್ರಬೈಲ್

...ಾದಿ ಗ್ರಾಮೋದ್ಯೋಗ ನಿಗಮ ಬಾಬಾ ರಾಮದೇವನ ಉಡಿಗೆ?



ಮೋದಿ ಅಂಡ್ ಕಂಪೆನಿಯನ್ನು ಚುನಾವಣೆಗಳಲ್ಲಿ ವುದಕ್ಕೋಸ್ಕರ ಮತದಾರರನ್ನು ಧ್ರುವೀಕರಿಸಲು ಷ್ಟೆ ಶ್ರಮಿಸಿದ ಬಂಟರೆಲ್ಲಾ ಒಂದಲ್ಲ ಒಂದು ವಿಧದ ು ಪಡೆದುಕೊಳ್ಳುತ್ತಿದ್ದರೆ ಇತ್ತ ಚುನಾವಣೆಗಳ ವೆಚ್ಚ ಕಾರ್ಪೋರೇಟುಗಳಿಗೆ ಪ್ರತಿಫಲವಾಗಿ ಕೇಳಿದಷ್ಟು ನೀರು, ಸಕಲ ಸವಲತ್ತುಗಳು ಮತ್ತು ಧ್ವನಿಯಿಲ್ಲದ ಕವರ್ಗ ಸಿಗುತ್ತಿದೆ. ಇನ್ನು ಊರೂರು ಸುತ್ತಿ ಾಸನ ಹಾಕುತ್ತಾ ಮನಮೋಹನ ಸಿಂಗ್ ಸರ್ಕಾರದ ಾರದ ಬಗ್ಗೆ ಭಾಷಣ ಕುಟ್ಟುತ್ತಾ ಯುಪಿಎ ವನ್ನು ತರಾಟೆಗೆ ತೆಗೆದುಕೊಂಡ ರಾಮದೇವ ಗೆ ವಿಶೇಷ ಬಹುಮಾನವನ್ನು ದಯಪಾಲಿಸಲು ನಿರ್ಧರಿಸಿದ್ದಾರಂತೆ. ನೆನಪಿದೆಯಲ್ಲ, ಇವರಿಬ್ಬರೂ ದಿನಗಳೊಳಗೆ ಪ್ರತಿಯೊಬ್ಬ ಪ್ರಜೆಯ ಕಿಸೆಗೆ 5 ಲಕ್ಷ ಸುರಿಯಲಿದ್ದೇವೆ..... ತರದಿದ್ದಲ್ಲಿ ನೇಣಿಗೆ "ಕಾಳಧನ ವಾಪಾಸು ತರುವೆನೆಂದರೂ ಸರ್ಕಾರ ಲ್ಲ" ಎಂದೆಲ್ಲ ರಸವತ್ತಾಗಿ ಭಾಷಣ ಬಿಗಿದು ರರನ್ನು ಭಾವಪರವಶಗೊಳಿಸಿದವರು. ಇಂತಹ ಅಧಿಕ ಭಾಷಣಗಳು ಮತ್ತು ಟ್ವೀಟ್‌ಗಳ ಮೂಲಕ ಕಣ್ಣಿಗೆ ಮಂಕುಬೂದಿ ಎರಚಿದವರು. ಅಲ್ಲಾ, ನ ತಂದು ಪ್ರತಿಯೊಬ್ಬರಿಗೂ ಲಕ್ಷಲಕ್ಷ ಹಂಚುವಷ್ಟು ...ನದ ಅಂದಾಜು ಇತ್ತೊದಿಲ್ಲವೇ? ಹಾಗಂತ ಮುಗ್ಧ ...




ಇದೇ ಮೋದಿಯ ಹಣಕಾಸು ಸಚಿವಾಲಯ!

ಈಗ ಇನ್ನೋರ್ವ ಕಾಳಧನ ಯೋಧ ಬಾಬಾನ ಬಗ್ಗೆ ಸ್ವಲ್ಪ ನೋಡೋಣ. ಅದೆಂಥದೋ ಬೂದಿ, ಗೋಮೂತ್ರ, ಯೋಗಾಸನಗಳಿಂದ ಆರಂಭಿಸಿದ ಈ ಅಳಲೆಕಾಯಿ ಪಂಡಿತ ಇವತ್ತು ಬರೋಬ್ಬರಿ 2000 ಕೋಟಿ ಬೆಲೆಬಾಳುವ ಸಾಮ್ರಾಜ್ಯದ ಒಡೆಯ. ಅದರಲ್ಲಿ ಸಾವಿರಾರು ಹೌಂಡುಗಳಿಗೆ ಖರೀದಿಸಲಾದ ಸ್ಕಾಟ್ಲೆಂಡಿನ ಒಂದು ದ್ವೀಪವೂ ಸೇರಿದೆ. ಅಂತರ್ಜಾಲ ತಾಣವನ್ನೊಮ್ಮೆ ಸಂದರ್ಶಿಸಿದರೆ ಸಾಕು ಈತನ ಮಿದುಳಿಂದರೆ ಸುಶ್ರುತ, ಪತಂಜಲಿ, ವಾತ್ಸಾಯನ, ಕೌಟಿಲ್ಯ ಮತ್ತು ಸಿಗ್ಮಂಡ್ ಫ್ರಾಯ್ಡ್ ಮಿದುಳುಗಳ ಎರಕ ಎಂದೆನಿಸದಿರದು. ಈತನಲ್ಲಿ ಕ್ಯಾನ್ಸರ್, ಏಡ್ಸ್, ಸಲಿಂಗಕಾಮ, ಶೀಘ್ರಸ್ಖಲನ ಮೊದಲಾದ ಸಕಲ ರೋಗಗಳಿಗೂ ಮದ್ದಿದೆಯಂತೆ. ಹಲ್ಲುಗಳ ಬೀಡಾ ಕಲೆಯಿಂದ ಮುಕ್ತಿ ಪಡೆಯಲು ಈತನ ಸಿದ್ಧೌಷಧ? ಪೆಟ್ರೋಲು! ತಾನು ಕಾಳಧನ ವಿರೋಧಿ ಎಂದು ಕರೆದುಕೊಳ್ಳುವ ಈ ಬಾಬಾನ ಬಳಿ ಅದೆಷ್ಟು ಕಪ್ಪುಹಣವಿದೆಯೋ ಯಾರು ಬಲ್ಲರು? ಏಕೆಂದರೆ ಈತನ ಮದ್ದುಗಳಿಗೆ ಯಾವ ಔಷಧ ನಿಯಂತ್ರಣ ಕಾನೂನುಗಳೂ ಅನ್ವಯವಾಗುವುದಿಲ್ಲ. ಉದಾಹರಣೆಗೆ ಶೀಘ್ರಸ್ಖಲನದ ಔಷಧಿಯ ಬೆಲೆ ಎಷ್ಟು ಗೊತ್ತೇ? ಕೇವಲ 82 ಡಾಲರುಗಳು! ಆದಾಯಕರ ಇಲಾಖೆಯಂತೂ ಈತನ ಸಮೀಪಕ್ಕೂ ಸುಳಿಯುತ್ತಿಲ್ಲ. ಈ ಮಹಾನುಭಾವ 2014ರ ಚುನಾವಣಾ ಪ್ರಚಾರದ ವೇಳೆ ಒಮ್ಮೆ ರಾಜಸ್ತಾನದ ಅಲ್ವಾರ್ ಎಂಬಲ್ಲಿಗೆ ಹೋಗಿದ್ದ. ಅಲ್ಲಿನ ಸ್ಥಳೀಯ ಬಿಜೆಪಿ ಅಭ್ಯರ್ಥಿ ಮಹಾಂತ್ ಚಂದ್‌ನಾಥ ಎಂಬಾತನ ಪರವಾಗಿ ಪ್ರಚಾರ ಮಾಡಲು. ಅಲ್ಲಿ ಇವರಿಬ್ಬರೂ ಜಂಟಿ ಪತ್ರಿಕಾಗೋಷ್ಠಿಯೊಂದನ್ನು ನಡೆಸಿದರು. ವೇದಿಕೆಯಲ್ಲಿ ಚಂದ್‌ನಾಥ "ಕ್ಷೇತ್ರದೊಳಗೆ ದುಡ್ಡು ತರಲಾಗುತ್ತಿಲ್ಲ" ಎಂದು ಬಾಬಾನಲ್ಲಿ ಅಲವತ್ತುಕೊಂಡಾಗ ಇದೇ ಕಪ್ಪುಹಣ ವಿರೋಧಿ ಬಾಬಾ "ಮೂರ್ಖ! ಮೈಕ್ ಎದುರು ಹೀಗೆಲ್ಲ ಮಾತನಾಡಬೇಡ" ಎಂದು ಬೈದಿದ್ದ!

ಈಗ ಇಂಥಾ ಜೊತೆಗಾರನ ಉಡಿಗೆ ಹಾಕಲೆಂದು ತೆಗೆದಿರಿಸಲಾಗಿರುವ ಸ್ಪೆಷಲ್ ಬಹುಮಾನ ಯಾವುದು ಗೊತ್ತೇ? ಖಾದಿ ಗ್ರಾಮೋದ್ಯೋಗ ನಿಗಮ. ಬಾಬಾನ ಪತಂಜಲಿ ಯೋಗಪೀಠವನ್ನು ಖಾದಿ ನಿಗಮದ ಪಾರ್ಟನರ್ ಆಗಿಸಲು ಸ್ಟೇಜ್ ಸಿದ್ಧವಾಗಿರುವಂತಿದೆ. ಅಮಿತ್ ಶಾ ಮತ್ತು ನಿತಿನ್ ಗಡ್ಕರಿ ಈಗಾಗಲೆ ಬಾಬಾನನ್ನು ಭೇಟಿಯಾಗಿ ಮಾತುಕತೆ ನಡೆಸಿರುವುದಾಗಿ ತಿಳಿದುಬಂದಿದೆ. ಗಾಂಧಿ ಆದರ್ಶದನುಸಾರ ಲಾಭರಹಿತ ... ಉದ್ದೇಶದಿಂದ ಆರಂಭಿಸಲಾದ ಖಾದಿ ಗ್ರಾಮೋದ್ಯೋಗ ನಿಗಮವನ್ನು ಇದೀಗ ಒಂದು ಲಾಭಬಡುಕ ಸಂಸ್ಥೆಯಾಗಿ ಪರಿವರ್ತಿಸಲು ಮುಂದಾಗಿರುವ ಮೋದಿ ಸರ್ಕಾರಕ್ಕೆ ದುಡ್ಡೊಂದು ಬಿಟ್ಟು ಬೇರೇನಾದರೂ ಮೌಲ್ಯಗಳು ಇವೆಯೇ? ಇವರು ಖಾಸಗಿ-ಸರಕಾರಿ ಜಂಟಿ ಸಹಭಾಗಿತ್ವದ ಹೆಸರಲ್ಲಿ ನಿಗಮವನ್ನು ಬಾಬಾನ ಖಾಸಗಿ ಕಂಪೆನಿಯ ಕೈಗೊಪ್ಪಿಸಲು ಹೊರಟಿರುವುದು ಖಾದಿ ಕುರಿತ ಗಾಂಧೀಜಿ ಪರಿಕಲ್ಪನೆಯನ್ನೇ ಅಣಕಿಸಿದಂತಾಗಿದೆ. ಒಂದೆಡೆ ಗಾಂಧೀಜಿ ಹೆಸರೇಳಿಕೊಂಡು ಸ್ವಚ್ಛತಾ ಅಭಿಯಾನ ಕೈಗೊಳ್ಳುತ್ತಾ ಇನ್ನೊಂದೆಡೆ ಗಾಂಧೀಜಿಯ ಆಶಯಗಳನ್ನು ಮಣ್ಣುಗೂಡಿ... ಮೋದಿ ಸರ್ಕಾರದ ಧ್ವಂದ್ವ ನೀತಿಗಳಿಗೆ ... ●

ಬೆಳಕೆಂಬ ಕಾಲದ ಗಂಟೆ

ಅನುರಣನ



ಡಾ. ಟಿ.ಎಸ್. ಚನ್ನೇಶ್
channeshts@gmail.com

ದಿನ ಎನ್ನುವುದು ಹಗಲಿನ ಬೆಳಕು ಹಾಗೂ ರಾತ್ರಿಯ ಕತ್ತಲಿನ ನಿರಂತರವಾದ ಓಟ. ಈ ದಿನಗಳಲ್ಲಿ ಅನೇಕ ಚಟುವಟಿಕೆಗಳು ನಿರಂತರವಾಗಿ, ವೈವಿಧ್ಯಮಯವಾಗಿ, ಅದರಲ್ಲೂ ಜೈವಿಕ ಹಿನ್ನೆಲೆಯಲ್ಲಿ ಮತ್ತು ವಿಶೇಷವಾಗಿ ನಡೆಯುತ್ತಿರುತ್ತವೆ. ಇನ್ನು ಹೆಚ್ಚೆಂದರೆ ವಿವಿಧ ಋತುಮಾನದಲ್ಲಿ ಇವು ಮತ್ತೂ ವೈವಿಧ್ಯಮಯವಾಗಿರುತ್ತವೆ. ಇದಕ್ಕೆ ಒಂದೇ ಮಾತಿನಲ್ಲಿ ಕಾಲದ ಮಹಿಮೆ ಎಂದೋ ಮತ್ತೇನನ್ನೋ ಹೇಳಿ ಸಮಜಾಯಿಸಿ ಕೊಡುತ್ತೇವೆ. ಆದರೆ ಇದರ ನಿರಂತರತೆಗೆ ಇಲ್ಲಿನ ಎಲ್ಲ ನಿವಾಸಿಗಳೂ ಸ್ಪಂದಿಸಿ ವರ್ತಿಸುತ್ತಿರುವ ಜಾಣ್ಮೆ ಮಾತ್ರ ಅಚ್ಚರಿಯದು. ಏಕೆಂದರೆ ಇಡೀ ಭೂಮಿಯ ಹರಹಿನಲ್ಲೆಲ್ಲಾ ಒಂದೇ ಬಗೆಯ ಹಗಲು ರಾತ್ರಿಗಳಿರದು. ಅಂದರೆ ಅವುಗಳ ಒಟ್ಟಾರೆ ಸಂಭವಿಸುವ ಕಾಲದ ವ್ಯತ್ಯಾಸ ಇದ್ದೇ ಇರುವುದು. ಅದೇ ರೀತಿ ಒಂದೇ ಪ್ರದೇಶದ ವಿವಿಧ ಕಾಲಗಳಲ್ಲಿಯೂ ಹಗಲು-ರಾತ್ರಿಗಳ ಸಂಭವನೀಯವೂ ವ್ಯತ್ಯಾಸವನ್ನು ಹಂಚಿಕೊಂಡೇ ಇರುತ್ತವೆ. ಈ ಕಾಲದ ಸಮನಾದ ಹಂಚಿಕೆ ಮಾತ್ರ ಭೂಮಿಯ ಮಧ್ಯಭಾಗದಲ್ಲಿ ಮಾತ್ರವೇ ಅಂದರೆ ಭೂಮಧ್ಯರೇಖೆಯ ಆಸುಪಾಸಿನಲ್ಲಿ ಇದು 12:12 ಆಗಿರುತ್ತದೆ. ಮಾತ್ರವಲ್ಲ ವರ್ಷ ಪೂರ್ತಿ ಅಲ್ಲಿ ಹಗಲುರಾತ್ರಿಗಳು ಸಮನಾಗಿ ಹಂಚಿಕೆಯಾಗಿರುತ್ತವೆ.

ಭೂಮಿಯ ನಿವಾಸಿಗಳಾದ ಅನೇಕ ಜೀವಿಗಳು ಇಡೀ ಈ ಹಗಲು ಬೆಳಕಿನ ರಾತ್ರಿ ಕತ್ತಲಿನ ಕಾಲದ ಹಂಚಿಕೆ ಜತೆಯಲ್ಲೇ ವಿಕಾಸ ಹೊಂದಿ ಅವುಗಳನ್ನೇ ಅನುಸರಿಸಿ ತಮ್ಮೆಲ್ಲಾ ಚಟುವಟಿಕೆಗಳನ್ನು ಅಷ್ಟೇಕೆ ಇಡೀ ಜೀವಮಾನವನ್ನೇ ನಡೆಸುತ್ತಿರುತ್ತವೆ. ಬೆಳಕೆಂಬುದು ಜೀವಿಗಳಿಗೆ ಕಾಲದ ಗಂಟೆ. ಇದನ್ನು ಅನುಸರಿಸಿಯೇ ಅನೇಕ ಬಗೆಯ ಕಾರ್ಯವ್ಯಾಪ್ತಿಯು ವಿಸ್ತರಿಸಿರುತ್ತದೆ. ಬೆಳಕನ್ನು ಪ್ರಭಾವಿಸಿಯೇ ಎಲ್ಲಾ ಚಟುವಟಿಕೆಗಳು ಸಾಧ್ಯವಾಗಿವೆ. ಇದು ಕೇವಲ ಆಹಾರದ ಹುಡುಕಾಟ ಮಾತ್ರವೇ ಅಲ್ಲ! ಗರ್ಭ ಧರಿಸುವ, ಮೊಟ್ಟೆ ಇಡುವ, ಮರಿಹಾಕುವ, ಹೂ ಬಿಡುವ, ಹಣ್ಣು ಕಾಯಿಯಾಗುವ, ಎಲೆ ಉದುರಿಸುವ, ಮತ್ತೆ ಚಿಗುರಿಸುವ, ಪರಾಗ ಚೆಲ್ಲುವ, ಅವನ್ನೇ ಹಕ್ಕಿ ಹೂವಿಂದ ಹೂವಿಗೆ ತಲುಪಿಸುವ, ಬೇರಿನ ಕಾರ್ಯಗಳಿಂದ ಎಲೆಯಲ್ಲಿ ಆಹಾರ ತಯಾರಿಸುವ, ಹೀಗೆ ಎಷ್ಟೊಂದು ಕೆಲಸಗಳು ಬೆಳಕಿನ ಮತ್ತು ಕಾಲದ ಮಾಯಾಲೋಕದಲ್ಲಿ ಒಂದಾಗಿ ಮುಂದೋಡುತ್ತಿರುತ್ತವೆ. ಇದನ್ನೆ ತುಂಬಾ ಸರಳ ಮಾತಿನಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತಹ ಪರಿಸರದ ಹಿನ್ನೆಲೆಯಲ್ಲಿ ಜೀವಿಗಳ ಹೊಂದಾಣಿಕೆಯೆಂದೂ ಹೇಳುವರು. ಆದರೆ ಇದು ಅಷ್ಟು ಸುಲಭವಾಗಿ ಹೇಳಿ ಮುಗಿಸಬಹುದಾದ ಕಥನವಲ್ಲ, ಇದರ ಇಡಿಯಾದ ಇತಿಹಾಸ ಕಾಲದ ಉದ್ದಕ್ಕೂ ಬದುಕನ್ನು ಚಾಚಿ ದೊಡ್ಡ ಹರಹನ್ನಾಗಿಸಿದೆ. ಹೇಳಿದಷ್ಟು ಉಳಿವ ಉಪಕಥೆಗಳನ್ನು ತನ್ನ ಒಡಲಲ್ಲಿಟ್ಟು ಪೋಷಿಸಿದೆ. ಕಾಲದ ತೇರಿನ ಓಟದಲ್ಲಿ ಬೆಳಕಿನ ಆಟದ ಫಲಿತ ಮಾತ್ರವೇ ಜಗದ ಎಲ್ಲಾ ಜೀವಿಗಳನ್ನೂ ಇಲ್ಲಿಯವರೆಗೂ ಸಾಗಿಸಿಕೊಂಡು ಬಂದಿದೆ. ಈ ಬೆಳಕಿನ ಮತ್ತು ಜೈವಿಕ ಒಡನಾಟದ ಕಥನದ ಕಿರು ಟಿಪ್ಪಣಿಗಳು ಇಲ್ಲಿವೆ. ಅವುಗಳು ಹೊರಸೂಸುವ ಬಣ್ಣ, ಪರಿಮಳ, ಸೃಜಿಸುವ ಕುತೂಹಲಗಳ, ತಡಕಾಡಿಸುವ ಗೊಂದಲಗಳ, ಮತ್ತೊಂದಿಷ್ಟು ಹೊಂದಾಣಿಕೆಗಳ ಕುರಿತು ಹಂಚಿಕೊಳ್ಳುವ ಆಶಯ ಹೊಂದಿವೆ.

ಬೆಳಕಿನ ನಿರ್ದಿಷ್ಟ ಅವಧಿಯ ದಿನದ ಹುಡುಕಾಟ

ಪ್ರತಿದಿನವೂ ಒಂದೇ ಬಗೆಯ ಹಗಲು ರಾತ್ರಿಗಳ ಅವಧಿಯನ್ನು ಹೊಂದಿರುವುದಿಲ್ಲ, ಅವು ಬದಲಾಗುತ್ತಿರುತ್ತವೆ. ಉದ್ದನೆಯ ಹಗಲು, ಕಿರು ಅವಧಿಯ ಹಗಲು ಹಾಗೆಯೆ ರಾತ್ರಿಗಳೂ ಅವುಗಳ ಅವಧಿಯಲ್ಲಿ ಬದಲಾಗುತ್ತವೆ. ಅಂದರೆ ಆಯಾ ದಿನಗಳಲ್ಲಿ ಒಂದೇ ಬಗೆಯಲ್ಲಿಯೂ ಇರುತ್ತವೆ. ಉದಾಹರಣೆಗೆ ಮಾರ್ಚ್ 10ನೆ ತಾರೀಖಿನ ಅವಧಿಯು ಡಿಸೆಂಬರ್‌ನಂತಲ್ಲ, ಆದರೆ ಪ್ರತಿ ಮಾರ್ಚ್ 10 ಅಥವಾ ಡಿಸೆಂಬರ್ ದಿನದ ಅವಧಿಯು ನಿರ್ದಿಷ್ಟವಾಗಿಯೂ ಇರುತ್ತದೆ. ವರ್ಷದ ಜೂನ್ ತಿಂಗಳ 21ನೇ ತಾರೀಖಿನಂದು ದೀರ್ಘವಾದ ಹಗಲು ಇರುತ್ತದೆ. ಹಾಗೆಯೇ ಡಿಸೆಂಬರ್ 22 ರಂದು ದೀರ್ಘವಾದ ರಾತ್ರಿಯೂ ಇರುತ್ತವೆ. ವರ್ಷದ ಮಾರ್ಚ್ 21ರಂದು ಮತ್ತು ಸೆಪ್ಟೆಂಬರ್ 22ರಂದು ಭೂಮಿಯ ಎಲ್ಲಾ ಕಡೆಯೂ ಹಗಲುರಾತ್ರಿಗಳೆರಡೂ ಸಮನಾಗಿರುತ್ತವೆ. ಅವನ್ನೇ ಮೇಷ ಸಂಕ್ರಾಂತಿ ಮತ್ತು ತುಲಾ ಸಂಕ್ರಾಂತಿಯೆಂದು ಅನುಕ್ರಮವಾಗಿ ಕರೆಯಲಾಗುತ್ತದೆ. ಇಂತಹ ಸಂದರ್ಭಗಳನ್ನು ಅನುಸರಿಸಿಯೇ ಅನೇಕ ವೈವಿಧ್ಯಮಯ ಜೈವಿಕ ಚಟುವಟಿಕೆಗಳು ನಡೆಯುತ್ತವೆ. ಕೆಲವೊಂದು ನಿರ್ದಿಷ್ಟವಾದ ಬೆಳಕಿನ ದಿನಕ್ಕಾಗಿಯೇ ಕಾಯುತ್ತವೆ. ಆ ದಿನವೇ ಆಯಾ ಚಟುವಟಿಕೆಗಳು ನಡೆಯುತ್ತವೆ. ಈ ಎಲ್ಲಾ ದಿನಗಳಲ್ಲು ಒಂದೊಂದು ಬಗೆಯ ಹಗಲುರಾತ್ರಿಗಳಿದ್ದು ಸಸ್ಯಗಳ ಜೀವನಾವಧಿಯ ವೈವಿಧ್ಯಮಯ ಚಟುವಟಿಕೆಯನ್ನು ನಿರ್ಧರಿಸುತ್ತವೆ. ಹಾಗಾಗಿಯೇ ಒಂದೊಂದು ಗೊತ್ತಾದ ದಿನದಲ್ಲಿ ಬಿತ್ತನೆ, ಹೂಬಿಡುವ, ಕಾಳುಕಟ್ಟುವ, ಕೊಯಿಲು ನಡೆಸುವ ಇತ್ಯಾದಿ ಕೆಲಸಗಳು ನಡೆಯುತ್ತಿರುತ್ತವೆ.


ಎಲ್ಲಾ ಬಗೆಯ ಜೀವಿಗಳಿಗೂ ಗೊತ್ತಾದ ದಿನದಂದೇ ಕೆಲವು ಕಾರ್ಯಚಟುವಟಿಕೆಗಳ ಹಂತಗಳ ಬದಲಾವಣೆ ನಡೆಯುತ್ತದೆ. ನಿರ್ದಿಷ್ಟ ಉದ್ದದ ಹಗಲಿನಲ್ಲಿ, ನಿರ್ದಿಷ್ಟ ಬೆಳಕಿನ ಸಂದರ್ಭದಲ್ಲಿ ಇಂತಹ ಒಂದು ಗೊತ್ತಾದ ದಿನಗಳು ಅಂತಾ ಬಹುಪಾಲು ಜೀವಿಗಳು ಹೊಂದಿಸಿಕೊಂಡಿರುತ್ತವೆ. ಅದರಲ್ಲೂ ಸಾಮಾನ್ಯವಾಗಿ ಸಸ್ಯಗಳು ಅಂದೇ ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಅಂದರೆ ಬೆಳವಣಿಗೆಯ ಹಂತದಿಂದ ಹೂಬಿಡುವ ಹಂತಕ್ಕೆ ಬದಲಾಯಿಸುತ್ತವೆ. ಆ ಗೊತ್ತಾದ ದಿನಕ್ಕಾಗಿ ಅವು ಕಾಯುತ್ತವೆ. ಆ ದಿನವೆಂದರೆ ಸಾಮಾನ್ಯವಾಗಿ ಒಂದು ನಿರ್ದಿಷ್ಟ ಅವಧಿಯ ಹಗಲನ್ನು ಉಳ್ಳ ಒಂದು ದಿನ ಅಷ್ಟೇ. ಒಂದು ಪ್ರಭೇಧಕ್ಕೆ ಗೊತ್ತದ ಬೆಳಕಿನ ಅವಧಿಯುಳ್ಳ ದಿನವಿರುತ್ತದೆ. ಆ ದಿನದಂದೇ ಅದು ಹೂಬಿಡುವ ಹಂತಕ್ಕೆ ಬದಲಾಯಿಸುತ್ತದೆ. ಆದರೂ ವಿವಿಧ ಅಕ್ಷಂಶೀಯ ಪ್ರದೇಶದಲ್ಲಿ ಇದು ಬೇರೆಯದೆ ದಿನವಾಗಿಯೂ ಇರುತ್ತದೆ. ಪ್ರತಿ ಜೀವಿಗೂ ಒಂದೊಂದು ಹಂತಕ್ಕೂ ಇಂತಹ ನಿರ್ದಿಷ್ಟ ಅವಧಿಯುಳ್ಳ ದಿನವಿರುತ್ತದೆ. ಒಂದು ಜಾತಿಯ ಜೀವಿಗೆ ರೂಪಾಂತರದ ಹಂತಕ್ಕೂ ವಿವಿಧ ಅಕ್ಷಾಂಶೀಯ ಪ್ರದೇಶಗಳಲ್ಲಿ ವಿವಿಧ ದಿನಗಳಿರುತ್ತವೆ. ಹಾಗಾಗಿ ಈ ಬೆಳಕಿನ ಅವಧಿಯಲ್ಲಿ ವಾತಾವರಣದ ಹಿನ್ನೆಲೆಯಲ್ಲಿ ಬಿಸಿಲಿನ ವ್ಯತ್ಯಯವಾದರೆ ಆಯಾ ಹಂತಗಳ ಮೇಲೆ ಪ್ರಭಾವಿಸುತ್ತದೆ. ಹಾಗಾಗಿ ಮೋಡದ ವಾತಾವರಣದಲ್ಲಿ ಹೂಬಿಡುವ, ಕಾಯಿ ಕಟ್ಟುವ ಕಾರ್ಯಗಳಲ್ಲಿ ಅಷ್ಟೇಕೆ ಕೆಲವೊಮ್ಮೆ ಇದ್ದಕ್ಕಿದ್ದಂತೆ ಕೆಲವು ಕೀಟಗಳ ರೋಗಗಳ ಬಾಧೆ ಹೆಚ್ಚುವ ಸಾಧ್ಯತೆಗಳೂ ಇರುತ್ತವೆ. ಇಂತಹ ಬಹುಪಾಲು ಚಟುವಟಿಕೆಗಳು ಬೆಳಕಿನ ಅವಧಿಯ ದಿನವನ್ನೇ ಆರಿಸಿಕೊಂಡು ಆಯಾ ಚಟುವಟಿಕೆಯನ್ನು ನಡೆಸುತ್ತವೆ. ಕೆಲವು ಜೀವಿಗಳಲ್ಲಿ ಈ ಚಟುವಟಿಕೆಗಳ ಲಯ ಅಥವಾ ಗತಿಯು ಬೆಳಕನ್ನು ಅವಲಂಬಿಸದೆ, ಬದಲಾಗಿ ಉಷ್ಣವನ್ನು ಅವಲಂಬಿಸಿರುವುದೂ ಉಂಟು.

ಸಂತಾನೋತ್ಪತ್ತಿಯ ಮೇಲೆ ಬೆಳಕಿನ ದೃಷ್ಟಿ

ಬೆಳಕಿನ ಲಯದಿಂದ ಬಹುಮುಖ್ಯವಾದ ಚಟುವಟಿಕೆಗಳ ನಿರ್ಧಾರವಾಗುತ್ತದೆ. ಅವುಗಳಲ್ಲಿ ಬಹು ಪ್ರಧಾನವಾದದ್ದು ಜೀವಿಗಳ ಸಂತಾನೋತ್ಪತ್ತಿ. ಅನೇಕ ಜೀವಿಪ್ರಭೇದಗಳಲ್ಲಿ ಸಂತಾನೋತ್ಪತ್ತಿಯು ಕೆಲವೊಂದು ದಿನಗಳಲ್ಲೇ ನಡೆಯುತ್ತದೆ. ಅದಕ್ಕೆ ಬಹುಮುಖ್ಯ ಕಾರಣ ಆಯಾ ದಿನಗಳ ಹಗಲು/ರಾತ್ರಿಗಳ ಲಯ. ಗೊತ್ತಾದ ಬೆಳಕಿನ ಸಂದರ್ಭಗಳನ್ನೇ ಸಂತಾನೋತ್ಪತ್ತಿಗೂ ಅವಲಂಬನೆಯ ವಿಕಾಸವನ್ನು ಅಭಿವೃದ್ಧಿಗೊಳಿಸಿ ಉಳಿಸಿಕೊಂಡಿರುವುದು ಇದರ ಮುಖ್ಯ ಕಾರಣವಾಗಿದೆ. ಹಾಗಾಗಿ ಬೆಳಕಿನ ಪ್ರಭಾವವು ಸಂತಾನೋತ್ಪತ್ತಿಯಲ್ಲಿ ಅಧಿಕ. ಇದು ಸಸ್ಯಗಳಲ್ಲಂತೂ ಸರ್ವೇಸಾಮಾನ್ಯ. ವಸಂತದ ಸಮಯ ಸಸ್ಯಗಳ ಅತ್ಯಂತ ಚಟುವಟಿಕೆಯ ಕಾಲ. ವಸಂತದಲ್ಲೇ ಈ ಚಟುವಟಿಕೆ ಬೆಳಕು ಕಾರಣವೆ ಹೊರತು ಬೇರೇನಲ್ಲ.

ವಸಂತದಲ್ಲಿ ಚಿಗುರುವ- ಹೂಬಿಡುವ ಬಯಕೆ!

ಬಹುಪಾಲು ಸಸ್ಯವರ್ಗಗಳು ವಸಂತದ ಸಮಯದಲ್ಲಿ ಹೂಬಿಟ್ಟು ಹೊಸ ಚಿಗುರಿನಿಂದ ನಳನಳಿಸುತ್ತವೆ. ಅದಕ್ಕಾಗಿ ಹಿಂದಿನ ವರ್ಷವೇ ತಯಾರಿ ನಡೆಸಿರುತ್ತವೆ. ನೆಲದ ಮೇಲಿನ ಬಹುಪಾಲು ಎಲೆ ಉದುರಿಸುವ ಗಿಡಮರಗಳು ಈ ವಸಂತಕ್ಕಾಗಿ ಕಾಯುತ್ತವೆ. ಹೆಚ್ಚುಕಡಿಮೆ ಸುಮಾರು ಶೇ 70 ರಷ್ಟು ಗಿಡ-ಮರಗಳು ಈ ವಸಂತದಲ್ಲೇ ಚಿಗುರೆಲೆಗಳನ್ನೂ ಜೊತೆಗೆ ಹೂಗಳನ್ನೂ ಬಿಡಲು ಆರಂಭಿಸುತ್ತವೆ. ವಸಂತದ ಬದಲಾವಣೆಗೆ ಶರತ್ಕಾಲದಲ್ಲೇ ನಿರ್ಧಾರಗಳಾಗಿರುತ್ತವೆ. ಈ ನಿಸರ್ಗದ ಕ್ರಿಯೆಯನ್ನು ಸಸ್ಯಶಾಸ್ತ್ರಜ್ಞರು, ತತ್ವಶಾಸ್ತ್ರಜ್ಞರು ಹಾಗೂ ಗಣಿತಜ್ಞರು ತಮ್ಮೆಲ್ಲಾ ಬೌದ್ಧಿಕ ಕಸರತ್ತುಗಳಿಂದ ಅರ್ಥೈಸಲು ಹೆಣಗಾಡಿದ್ದಾರೆ. ನೆಲದ ಮೇಲಣ ಈ ಸಸ್ಯರಾಶಿಗೆ ಭವ್ಯವಾದ ಹಿನ್ನೆಲೆಯಿದೆ. ಈ ಭೂಮಿಯ ಮೇಲೆ ಸರಿಸುಮಾರು 3 ರಿಂದ 4 ಲಕ್ಷ ಹೂಬಿಡುವ ಸಸ್ಯಗಳಿರಬಹುದೆಂಬ ಅಂದಾಜಿದೆ. ಈಗಾಗಲೆ ಸುಮಾರು 2,81,820ರಷ್ಟನ್ನು ಹೆಸರಿಸಿಯೂ ಆಗಿದೆ. ಅವೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಇಂತಹ ಋತುಮಾನದ ತಯಾರಿ ನಡೆಸಿಯೇ ಇರುತ್ತವೆ. ವಸಂತ ಋತುವಿನ ಮುಂಚಿನ ವರ್ಷದ ಶರತ್ಕಾಲದಲ್ಲಿ ಚಳಿಯ ದಿನಗಳಲ್ಲಿ ಹಗಲಿನ ಅವಧಿ ಕಡಿಮೆ, ರಾತ್ರಿಗಳು ಉದ್ದವಾದವು. ಕಡಿಮೆ ಹಗಲಿನಲ್ಲಿ ಬಿಸಿಲನ್ನು ಬಳಸುವ ಎಲೆಗಳಿಗೂ ಕಡಿಮೆ ಕೆಲಸ, ಕಡಿಮೆ ಆಹಾರ ತಯಾರಿ. ಚಳಿಗಾಲದ ಈ ಸಮಯದಲ್ಲಿ ಉಷ್ಣತೆಯೂ ಕಡಿಮೆಯಾಗುತ್ತಾ ಚಳಿಯೂ ಆವರಿಸಿರುತ್ತದೆ. ಇದರ ಜತೆಗೇನೇ ನೆಲದ ಮಣ್ಣಿನ ತೇವಾಂಶವೂ ಕಡಿಮೆಯಾಗಿ, ವಾತಾವರಣದ ಒಣ ಹವೆಯನ್ನೂ ತಂದಿಟ್ಟು ಜೈವಿಕತೆಯಲ್ಲಿ ನಿಧಾನತೆಯನ್ನು ತರುತ್ತವೆ. ಹಾಗಾಗಿ ಮರಗಳು ಒಂದು ರೀತಿಯಲ್ಲಿ ನಿದ್ದೆಗೆ ಮೊದಲಾಗುತ್ತವೆ. ಅವುಗಳ ದೇಹದಲ್ಲಿನ ಚಟುವಟಿಕೆಗಳು ಕಡಿಮೆಯಾಗುತ್ತವೆ. ಎಲೆಗಳು ಹಣ್ಣಾಗುತ್ತಿರುತ್ತವೆ. ಸಸ್ಯಗಳ ನಿದ್ದೆಯಂತಹ ಸಂದರ್ಭದಿಂದ ಎಲೆಗಳಿಗೆ ಉದುರಬೇಕೆಂಬ ಸೂಚನೆ ಬರುತ್ತದೆ. ಗಿಡದಿಂದ ಹಣ್ಣೆಲೆಗಳು ಕಳಚಿಕೊಳ್ಳಲಾರಂಭಿಸುತ್ತವೆ. ಮುಂದೆ ವಸಂತದ ಸಮಯಕ್ಕೆ ಚಿಗುರುವ ಬಯಕೆಯನ್ನು ಬಿತ್ತುತ್ತವೆ. ಮುಂದಿನ ವಸಂತದ ಸಮಯದ ದೀರ್ಘಾವಧಿಯ ಹಗಲಿನಲ್ಲಿ ಗಿಡಕ್ಕೆ ಚೆನ್ನಾಗಿ ದುಡಿಮೆ ಮಾಡುವ ಎಲೆಗಳೇ ಬೇಕು. ಅದಕ್ಕಾಗಿ ಹೊಸ ಚಿಗುರನ್ನು ಅದು ಬಯಸಿ ಬಯಸಿ ಪಡೆಯುತ್ತದೆ. ಹಗಲಿನ ದುಡಿಮೆಯನ್ನು ಬಳಸಿ ಹೆಚ್ಚು ಹೆಚ್ಚು ಕಾಯಿ, ಬೀಜ ತಯಾರಿಸುವ ಆಶಯದಿಂದಲೇ ಆಗಲೇ ಹೂ ಗೊಂಚಲನ್ನೂ ಬಿಟ್ಟು ಆಹಾರೋತ್ಪಾದನೆಗೂ ನೆರವು ಪಡೆಯುತ್ತದೆ. ಸಂತಾನೋತ್ಪತ್ತಿಗೆ ವಸಂತ ಅಥವಾ ಬೇಸಿಗೆಯನ್ನೇ ಆಯ್ದುಕೊಳ್ಳುವ ಪ್ರಾಣಿಗಳು ಇವೆ. ಇವಕ್ಕೆ ಬಹುಮುಖ್ಯವಾದ ಕಾರಣವೆಂದರೆ ಆ ಸಮಯದ ಉಷ್ಣತೆ ಮತ್ತು ಬೆಳಕಿನ ಅವಧಿಯ ಅನುಕೂಲಗಳು. ಬೆಳಕಿನ ಅವಧಿಯು ಹೆಚ್ಚಾದಂತೆ ಜನನಾಂಗದ ಚಟುವಟಿಕೆಗಳು ಉತ್ತೇಜನಗೊಳ್ಳುತ್ತವೆ. ಸಹಜವಾಗಿ ಇಂತಹ ದಿನಗಳಲ್ಲಿ ಬೆಳಕಿನ ಅವಧಿಯು ಹನ್ನೆರಡು ಗಂಟೆಗಳಿಗೂ ಹೆಚ್ಚಾಗಿರುತ್ತದೆ. ಅಂತಹ ಸಂದರ್ಭದಲ್ಲಿ ದೈಹಿಕ ಕ್ರಿಯೆಗಳಲ್ಲಿನ ರಸಧೂತಗಳ ಬದಲಾವಣೆಗೆ ಹಗಲು ಬೆಳಕಿನ ಆ ಮೂಲಕ ಉಷ್ಣತೆಯ ಪರಿಣಾಮವನ್ನು ಅನುಭವಿಸುವ ನಿರ್ಧಾರಗಳನ್ನು ಪ್ರಾಣಿ ಪ್ರಪಂಚ ಮಾಡುತ್ತದೆ. ಇವುಗಳಲ್ಲಿ ಅನೇಕ ಬಗೆಯ ಲಯ ಅಥವಾ ಗತಿಯನ್ನು ಮಾರ್ಪಡಿಸಿಕೊಂಡಿರುತ್ತವೆ. ನಿದ್ದೆಯ ಸಮಯ, ದೈಹಿಕ ಚಟುವಟಿಕೆಯ ಅವಧಿ ಇತ್ಯಾದಿಗಳಿಂದ ಬದಲಾವಣೆಗಳನ್ನು ಬೆಳಕು ನಿರ್ಧರಿಸುತ್ತದೆ. ನಮ್ಮ ದಿನಗಳ ಅವಧಿಯನ್ನು 24 ಗಂಟೆಗಳ ಕಾಲವಾಗಿ ವಿಂಗಡಿಸಿದ್ದೇವಲ್ಲವೇ? ನಮ್ಮ ಕಣ್ಣುಗಳಲ್ಲಿನ ರೆಪ್ಪೆಯ ಬಡಿತವೂ ಸಾಮಾನ್ಯವಾಗಿ ನಿಮಿಷಕ್ಕೆ 24 ಬಾರಿ ಇರುತ್ತದೆ. ಹೀಗೆಯೇ ನಮ್ಮ ಅನೇಕ ಚಟುವಟಿಕೆಗಳು ಹಗಲುಬೆಳಕಿನ ರಾತ್ರಿಯ ಕತ್ತಲಿನ ಕಾಲಾವಧಿಯನ್ನೇ ಅವಲಂಬಿಸಿ ನಡೆಯುತ್ತವೆ. ನಾವು ನಮ್ಮೆಲ್ಲಾ ದೈನಂದಿನ ದುಡಿಮೆ, ಆದಾಯದ ಆಸೆಗಳಿಂದ ವ್ಯತ್ಯಾಸಗಳಾಗಿರುವುದುಂಟು. ಇದರಿಂದಾಗಿಯೇ ಆಧುನಿಕ ಜೀವನ ದೌಡು, ಜತೆಗೆ ಮತ್ತಿತರ ಆಕಾಂಕ್ಷೆಗಳಿಂದ ನಮ್ಮ ಆರೋಗ್ಯದ ಮೇಲೂ ಪರಿಣಾಮಗಳಾಗಿರುವುದನ್ನು ಕಾಣುತ್ತಿದ್ದೇವೆ.



ಮಾನವ ಚಟುವಟಿಕೆಗಳ ಜೈವಿಕ ಗಡಿಯಾರ

ಮಾನವ ಚಟುವಟಿಕೆಗಳ ಜೈವಿಕ ಗಡಿಯಾರ

ಮಾನವರ ಬಹುಪಾಲು ಚಟುವಟಿಕೆಗಳೂ ಬೆಳಕನ್ನೇ ಅವಲಂಬಿಸಿವೆ. ನಮ್ಮ ದೈನಂದಿನ ಚಟುವಟಿಕೆಗಳು ಕೂ... ಹಗಲಿನ ಬೆಳಕಿನ ಹಾಗೂ ರಾತ್ರಿಯ ಕತ್ತಲಿನ ಪ್ರಭಾವ... ಒಳಗಾಗಿವೆ. ಹಾಗಾಗಿ ನಾವು ಸಹಜವಾಗಿ ರಾತ್ರಿಯ... ನಿದ್ದೆಯನ್ನು ಮಾಡುತ್ತೇವೆ. ಹಗಲಲ್ಲಿ ಚುರುಕಾಗಿದ್ದು ಅತ್ಯಂ... ಕ್ರಿಯಾಶೀಲ ಸ್ಥಿತಿಯಲ್ಲಿರುತ್ತೇವೆ. ನಮ್ಮ ವಿವಿಧ ಶರೀರಕ್ರಿಯ... ಚಟುವಟಿಕೆಗಳು ಸಹ ಬೆಳಕನ್ನು ಅವಲಂಬಿಸಿ ಬದಲಾಗು... ಕ್ರಿಯಾಶೀಲವಾಗುವ, ಜಡವಾಗುವ ಸಂದರ್ಭಗಳನ... ಕಾಣುತ್ತೇವೆ. ಮಾನವ ಚಟುವಟಿಕೆಗಳ ಜೈವಿ... ಗಡಿಯಾರವನ್ನು ಚಿತ್ರದಲ್ಲಿ ಕಾಣಬಹುದು. ಮೆಲಟೋನಿ... ಅಂತಹ ಹಾರ್ಮೋನ್ ಕೂಡ ಬೆಳಕಿನ ಪ್ರಭಾವ... ಒಳಗಾಗಿಯೇ ಉತ್ಪತ್ತಿಯಾಗುತ್ತದೆ. ಈ ಹಾರ್ಮೋನಿಂದಲ... ನಮ್ಮ ವೈವಿಧ್ಯಮಯ ಚಟುವಟಿಕೆಗಳ... ಕಾರ್ಯಸಾಧುವಾಗುತ್ತವೆ. ಮುಖ್ಯವಾಗಿ ನಮ್ಮ ನಿದ್ದೆ... ಚಕ್ರವನ್ನು ಈ ಹಾರ್ಮೋನು ನಿರ್ಧರಿಸುತ್ತದೆ. ಚಿತ್ರ... ಮಾನವರ ಜೈವಿಕತೆಯ ವಿವರವನ್ನು ಸುಲಭವಾ... ಕೊಡಲಿದೆ. ಇದೇ ಮೆಲಟೋನಿನ್ ಸಸ್ಯಗಳಲ್ಲಿಯೂ ಬೆಳ... ಪ್ರತಿಕ್ರಯಿಸುವಿಕೆಯನ್ನು ನೋಡಿಕೊಳ್ಳುತ್ತದೆ. ಒಟ್ಟಾರೆ ಜೈವಿ... ಗಡಿಯಾರದ ಶಕ್ತಿಯಾಗಿ ಮೆಲಟೋನಿನ್ ವರ್ತಿಸುತ್ತ...

ಋತುಧರ್ಮದ ಅರಿವು

ಈ ಋತುಧರ್ಮದ ಅರ್ಥಾತ್ ಬೆಳಕಿನ ಪ್ರಭಾವವ... ಜೀವಿಗಳ ವರ್ತನೆಗಳಿಂದ ಅರ್ಥೈಸಿಕೊಳ್ಳುವ ಪ್ರಯತ್ನಗಳ... ನಿರಂತರವಾಗಿ ನಡೆದಿವೆ. ಜಗತ್ತಿನಾದ್ಯಂತ ಶೀತವಲಯ... ಉಷ್ಣವಲಯ ಮುಂತಾಗಿ ಎಲ್ಲೆಡೆಯಲ್ಲಿಯೂ ಇವ... ಗಣಿತೀಯ ಮಾನಗಳಲ್ಲಿ ನೋಡು... ತಾತ್ವಿಕವಾಗಿ ಅರ್ಥಮಾಡಿಕೊಳ್ಳು... ಬಗೆಗೂ ಸಾಕಷ್ಟು ಚಿಂತನೆಗಳು ಸಾಗಿ... ಏಕೆಂದರೆ ಈ ಕಾಲದಿಂದಲೇ ನಿಸರ್ಗ... ಅನೇಕ ಚಟುವಟಿಕೆಗಳಿ... ನಾಂದಿಯಾಗುತ್ತದೆ. ನಿಸರ್ಗದಲ್ಲಿ... ಮಳೆಯು ಬೀಜಗಟ್ಟುವಿಕೆಗ... ವಸಂತಕಾಲಕ್ಕೂ ಸಂಬಂಧವಿದೆ. ... ಸಂಬಂಧವನ್ನೇ ಚಿಗುರು... ಬಯಕೆಯಲ್ಲೂ ಗಿಡ ಬಳಸಿಕೊಳ್ಳುತ್ತ... ಮಳೆಯ ಬೀಜಗಟ್ಟುವಿಕೆ ಆರಂಭವಾ... ಮುಂದೆ ಬೀಳುವ ಮಳೆಯನ... ಉತ್ತಮವಾಗಿ ಬಳಸಿಕೊಳ್ಳು... ಜಾಣ್ಮೆಯೂ ಇಲ್ಲಿ ಸೇರಿದೆ. ನಮಗಂತು... ಯುಗಯುಗಗಳಿಂದ, ಮತ್ತೆ ಮ... ಹೊಂಗೆ, ಮಾವು ಮುಂತಾದ ತಳಿರಿನ... ಹೊಸತನ ವನ್ನೆಲ್ಲಾ ತುಂಬಿ ತರುತ್ತಿರುವ ಈ ವಸಂತ... ಆಗಮನವು ನವಯುಗಕ್ಕೆ ಮೊದಲ ಹೆಜ್ಜೆಗಳನ್ನು ಇರಿಸುತ್ತ... ಹಾಗೆಯೇ ಅನೇಕಾನೇಕ ಜೀವಚರಗಳಿಗ... ಬಹುಮುಖ್ಯವಾಗಿ ಕೀಟ ಪ್ರಪಂಚಕ್ಕೂ ಮೊದಲ ಮ... ಬೀಳುವಷ್ಟರಲ್ಲಿ ಅವುಗಳ ಬದುಕಿನ ಹೊಸ ಪವ... ಆರಂಭಗೊಂಡು ಬ್ಯುಸಿಯಾಗಲು ಆರಂಭವಾಗುತ್ತವೆ.

ಮನುಷ್ಯರ ಮೆದುಳಿನ ಬಹುಪಾಲು ಚಟುವಟಿಕೆಗ... ಬೆಳಕಿನ ಪ್ರಭಾವಕ್ಕೆ ಒಳಗಾಗಿವೆ. ನಾವಂತೂ 24 ಗಂಟೆಗ... ದಿನದ ವಹಿವಾಟಿಗೆ ಒಡ್ಡಿಕೊಂಡಿದ್ದೇವೆ. ದಿನದ ಹಗಲ... ರಾತ್ರಿಗಳ ನಿರಂತರತೆಯಲ್ಲಿ ನಮ್ಮೆಲ್ಲಾ ಶರೀರಕ್ರಿಯೆಗಳ... ನಡೆಯುತ್ತಾ ನಮ್ಮ ದೈಹಿಕ ನಿರ್ವಹಣೆಯಾಗುತ್ತಿದೆ. ಹಾಗಾ... ಕೆಲವರಿಗೆ ನಿದ್ರಾಹೀನತೆಯು ಕೆಲವು ಸಾಂದರ್ಭ... ಸಮಸ್ಯೆಯಾಗಿಯೂ ಇರುವುದುಂಟು. ನಮ್ಮ ಕೇವ... ದೃಷ್ಟಿಸಲಾಗುವ ಚಟುವಟಿಕೆಗಳು ಮಾತ್ರವೇ ಬೆಳಕಿನಿಂ... ಪ್ರಭಾವಿಸುವುದಿಲ್ಲ, ಬದಲಾಗಿ ಬೆಳಕಿನಾಟದ ನಿರ್ಧಾರವಾ... ನಿದ್ದೆ ಮತ್ತು ಎಚ್ಚರದ ಕ್ಷಣಗಳು ಉಳಿದ ಎಲ... ಚಟುವಟಿಕೆಗಳ ಮೇಲೂ ಪ್ರಭಾವಿಸುತ್ತವೆ. ಇನ್ನು ಸಾಗ... ಗಳಲ್ಲಂತೂ ಮಾಯಾಲೋಕವೇ ಸೃಷ್ಟಿಯಾಗಿದೆ. ಸಾಗರ... ಆಳಕ್ಕಿಳಿದಂತೆ ಬೆಳಕು ತಲುಪುವುದು ಕಡಿಮೆಯಾಗುತ್ತ... ಹಾಗಾಗಿ ಜೈವಿಕ ಚಟುವಟಿಕೆಯು ಕಡಿಮೆಯಾಗು... ಸಾಗುತ್ತದೆ. ಹೆಚ್ಚಿನ ಬೆಳಕಿನ ಮೇಲ್ಪದರಗಳಲ್ಲಿ ಜೈವಿ... ಚಟುವಟಿಕೆಗಳು ಅಧಿಕ. ಬೆಳಕಿನ ಪ್ರಭಾವದ ಕಥ... ಸುಲಭದಲ್ಲಿ ಮುಗಿಯದು. ಅದೊಂದು ನಿರಂತರವಾ... ಚಲನಶೀಲವಾದ ಕ್ರಿಯೆಯ ಬಹು ದೊಡ್ಡ ವಿವರ.

ಮಳೆಯಾದಾಗ, ನೆಲದ ಮೇಲಣ ಹಸಿರುರಾಶಿ... ಬದುಕಿನ ಬಯಕೆಯು ಗರಿಗೆದರುತ್ತದೆ. ನೆಲದ ಹಸಿ... ಗಿಡಮರಗಳು ಋತುಧರ್ಮದಂತೆ ಹೊಸ ಚಿಗುರ... ಪಡೆಯತೊಡಗುತ್ತವೆ. ಕಾಲಧರ್ಮದ ಕ್ರಿಯೆಗಳು. ಜೀವ... ಅನಂತ ಬಯಕೆಗಳಿಗೆ ಅನಂತ ಕಾರಣಗಳು. ಜೀವಿಗಳೆಲ್ಲಾ... ಋತುಧರ್ಮದ ಜೊತೆಗೆ ಬದುಕಿನ ಬಯಕೆಗಳ ಕಟ್ಟುತ್ತ... ತಮ್ಮ ಜೀವನವನ್ನು ಸಾಗಿಸುವ ಪರಿಯಿದು. ನಿಸರ್ಗ... ಆಗುಹೋಗುಗಳ ಮುಂಜಾಗರೂಕತೆಯ ಅಂದಾಜ... ಹೊಸ ಬದುಕನ್ನು ಬೆಳಕೆಂಬ ಕಾಲದೊಂದಿಗ... ಅನುಸಂಧಾನದಿಂದ ಬದುಕಿನ ಅನಂತ ಬಯಕೆಗಳ... ಜೀವಪರವಾಗಿಸಿರುವ ಪರಿ ನಿಜಕ್ಕೂ ಅನನ್ಯ.

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸಾವಿರಾರು ವರ್ಷಗಳ ಆಯಸ್ಸಿನ ರೇಣುಕರು

ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಪಂಚಪೀಠಗಳಲ್ಲಿ ಒಂದಾದ ...ಾರ ಪೀಠದ ಭೀಮಾಶಂಕರ ಶಿವಾಚಾರ್ಯ ಸ್ವಾಮೀಜಿ ...ುವವರು "ವೀರಶೈವ ಧರ್ಮವು ಸುಮಾರು ಐದು ...ರ ವರ್ಷಗಳಿಂದಲೂ ಆಚರಣೆಯಲ್ಲಿದೆ. ಇದರಲ್ಲಿ ...ವು ಉಪ ಪಂಗಡಗಳು ಇವೆ. ಅದರಲ್ಲಿ ಲಿಂಗಾಯತವೂ ...ದು ಉಪಪಂಗಡ. ಬಸವಣ್ಣ ಬ್ರಾಹ್ಮಣರಾಗಿ ಹುಟ್ಟಿ ...ಶೈವ ದೀಕ್ಷೆ ಪಡೆದು ಧರ್ಮಪ್ರಸಾರ ಮಾಡಿದ್ದಾರೆ. ...ಲತಃ ಸಿದ್ಧಾಂತ ಶಿಖಾಮಣಿಯಲ್ಲಿರುವುದನ್ನೇ ಸರಳವಾಗಿ ...ಳಿದ್ದಾರೆ ಅಷ್ಟೇ. ಅವರನ್ನು ಗುರು ಎಂದು ಒಪ್ಪಿಕೊಳ್ಳಲು ...ದು. ಪಂಚಪೀಠಗಳ ಮೂಲ ಮಠಾಧೀಶರೇ ವೀರಶೈವ ...ರ್ಮದ ಗುರುಗಳು. ಲಿಂಗಾಯತರು ಪ್ರತ್ಯೇಕ ಧರ್ಮ ...ುವುದರಲ್ಲಿ ಅರ್ಥವಿಲ್ಲ" ಎಂದು ಪತ್ರಿಕಾಗೋಷ್ಠಿಯಲ್ಲಿ ...ಳಿದ್ದಾರೆಂದು ಪತ್ರಿಕಾ ವರದಿಗಳು ತಿಳಿಸಿವೆ.

ಇದಕ್ಕೆ ಮುಕುಟಪ್ರಾಯವಾಗಿ "ವೀರಶೈವ ಧರ್ಮವು ...ತ್ರ ಸ್ಥಾನಮಾನ ಪಡೆದರೂ ಹಿಂದೂ ಧರ್ಮದ ...ಾಗಿಯೇ ಮುಂದುವರೆಯಲಿದೆ" ಎಂದು ಹೇಳಿ ...ಶದ ಪರಂಪರೆ ಉಳಿಸುವಲ್ಲಿ ಮಠಾಧೀಶರ ಪಾತ್ರ ...ುಖ. ಎಲ್ಲವೂ ಸೂತ್ರಬದ್ಧವಾಗಿಯೇ ನಡೆಯಬೇಕು" ...ಬ ಆಶಯ ಮತ್ತು ಆದೇಶವನ್ನು ಕೂಡ ...ರ್ಪಡಿಸಿಕೊಂಡಿದ್ದಾರೆ.

'ಅಕ್ಷರವಂ ಕಲಿಸಿದಾತನೆ ಗುರು' ಎಂದು ಅರಿಯದ ...ಾರ್ಯರು 'ಕುಲವಂ ನಾಲಗೆ ತುಬ್ಬುವ್ರೊಲ್' ಎಂಬುದನ್ನು ...ೀತುಪಡಿಸಿದ್ದಾರೆ.

ಅವರ ಹೇಳಿಕೆಗಳನ್ನೆಲ್ಲಾ ಗಮನಿಸಿದರೆ ಬ್ರಾಹ್ಮಣ್ಯದಂತೆ ...ಜಮಾನಿಕೆಯನ್ನು ಬಿಟ್ಟುಕೊಡದಂತಹ ಮನಸ್ಥಿತಿ, ...ಮೂತ್ವಭಾವದ ಕೋಮುವಾದ, ಶರಣರ ಸಂಸ್ಕೃತಿ ಮತ್ತು ...ನಗಳ ಬಗ್ಗೆ ಅಸಹನೆ, ವೈದಿಕರಂತೆ ಹಳತರ ಮತ್ತು ...ಷ್ಠತೆಯ ಗೀಳು, ಕನ್ನಡದಲ್ಲಿ ರಚಿತವಾಗಿರುವ ವಚನಗಳ ... ಉದಾಸೀನ; ಹೀಗೆ ಹಲವು ರೀತಿಗಳಲ್ಲಿ ತಮ್ಮತನವನ್ನು ...ರ್ಶಿಸುತ್ತಾರೆ.

...ತಾಯಿಯೆಂಬ ಸಹಜತೆಯನ್ನೂ, ಗುರುವೆಂಬ ...ತೆಯನ್ನೂ ರೇಣುಕಾಚಾರ್ಯರಿಗೆ ಹೊಂದಿಸಲಾಗದ ...ಚಪೀಠದವರಿಗೆ ತಮ್ಮನ್ನಷ್ಟೇ ಧರ್ಮದ ಗುರುಗಳೆಂದು ...ುಕೊಂಡು, ಬಸವಣ್ಣ ಗುರುವಲ್ಲ ಬರಿಯ ಅನುಯಾಯಿ ...ೇ ಅನ್ನುವುದು ಏನೂ ಆಶ್ಚರ್ಯವಿಲ್ಲ. ಎನಗಿಂತ ...ುರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎನ್ನುವ ...ವಣ್ಣನವರೂ ತನ್ನನ್ನು ಗುರುವೆನ್ನಲಿಲ್ಲ ಎಂದು ...ಡಿಸಿಕೊಳ್ಳುವುದಿಲ್ಲ, ಬಸವನೆಂಬ ಗುರುವಿನ ಬಳ್ಳಿಯಲ್ಲಿ ...ಎಲೆ, ಹೂಗಳು ತಾವು ಎಂದು ಅಭಿಮಾನ ಪಡುವ ...ಾರೂ ಕೇಸ್ ಹಾಕುವುದಿಲ್ಲ ಬಿಡಿ. ಆದರೆ, ಈ ...ಾರ್ಯರ ಧೋರಣೆಗಳನ್ನು, ಕುಲಮೋಹಗಳನ್ನು, ...ವಾದಗಳನ್ನು ಅವರ ನಾಲಗೆಗಳು ತಬ್ಬುತ್ತಿರುತ್ತವೆ.

ಬಸವಾದಿ ಶರಣರ ಸರಳತೆ, ನಿರಾಡಂಬರತೆ, ಮುಕ್ತತೆ ...ಗಳನ್ನು ಅನುಸರಿಸಿದರೆ, ಹಿಂದೂ ಧರ್ಮದ ನೆರಳಾಗಿ ...ಯಲಾಗುವುದಿಲ್ಲ, ದೇಶದ ಶ್ರೇಷ್ಠತೆಯ ಮತ್ತು ಹಳತರ ...ನ ಪರಂಪರೆಯನ್ನು ಮುಂದುವರೆಸಲಾಗುವುದಿಲ್ಲ.

ಶೃಂಗೇರಿ ಮಠವೂ ಮತ್ತು ರೇಣುಕಾಚಾರ್ಯರು

ಡಾ.ಟಿ.ಜಿ.ಸಿದ್ಧಪ್ಪಾರಾಧ್ಯರು ತಮ್ಮ ...ಕದಲ್ಲಿ ಶೃಂಗೇರಿಯ ಮಠಕ್ಕೆ ...ಚಪೀಠದ ಮೇಲಿರುವ ಗೌರವವನ್ನು ...ಿಸುತ್ತಾರೆ. ಅವರು ಹೇಳುವಂತೆ ...ಗೇರಿಯ ಮಠಕ್ಕೆ ಏಕಿಷ್ಟು ...ವೆಂದರೆ, "ರೇವಣಸಿದ್ಧ ಸಂಪ್ರಾಪ್ತ ...ದ್ರಮೌಳೀಶ್ವರವಂಪ್ರದಾತ್। ...ಾಚಾರ್ಯೇನ ಲಿಂಗೇನ ...ಭೀಷ್ಟಸಿದ್ಧಯೇ॥" ಕಲಿಯುಗದ ...ಯಲ್ಲಿ ಅವತರಿಸಿರುವ ಶ್ರೀ ...ದ್ಗುರು ರೇವಣ ಸಿದ್ಧ ಭಗವತ್ಪಾದರು ...00 ವರ್ಷಗಳ ಅನಂತರ ...ಶಂಕರಾಚಾರ್ಯರಿಗೆ ಚಂದ್ರ...ಳೀಶ್ವರ ಲಿಂಗವನ್ನು ಅನುಗ್ರಹಿಸಿ ದರೆಂಬ ಬಗ್ಗೆ ಯಾವ ...ದು ಸಂಶಯಕ್ಕೂ ಅವಕಾಶವಿಲ್ಲ, ಶೃಂಗೇರಿ ಪೀಠದ ... ಸಚ್ಚಿದಾನಂದ ಭಾರತೀ ಸ್ವಾಮಿಗಳು ಆ ಕಾಲದಲ್ಲಿದ್ದ ...ಶಾಸ್ತ್ರಿಗಳಿಂದ ಗುರುವಂಶಕಾವ್ಯದಲ್ಲಿ ಈ ಬಗ್ಗೆ ...ವಾಗಿ ಬರೆಸಿದ್ದಾರೆ. ಅದರಲ್ಲಿ ರೇವಣಸಿದ್ಧರು ...ರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ...ಗ್ರಹಿಸಿದ್ದರೆಂಬುದು ಸ್ಪಷ್ಟವಾಗಿದೆ. "ಸುಸಿದ್ಧಮಸ್ತು" ಎಂಬ ...ಕ, ಗ್ರಂಥಕಾರರೇ "ಸುಸಿದ್ಧೇನ ರೇವಣಸಿದ್ಧ ...ಯೋಗಿನಾ ದತ್ತಂ ಚಂದ್ರಮೌಳೀಶ್ವರಂ ಲಿಂಗಂ" ಎಂದು ವ್ಯಾಖ್ಯಾನ ಮಾಡಿದ್ದಾರೆ. ಆದ್ದರಿಂದ ಈ ಹೇಳಿಕೆ ಪರಮಪ್ರಮಾಣವೆನಿಸಿದೆ.

ಸಚ್ಚಿದಾನಂದ ಭಾರತಿ ಸ್ವಾಮಿಗಳು ತಮ್ಮ ಗುರುಮಠದ ಪರಂಪರೆಯನ್ನು ಕಟ್ಟಿಕೊಡಲು ಶಾಸ್ತ್ರಿಯೊಬ್ಬರಿಂದ ಬರೆಯಿಸಿದ ಗುರುವಂಶವನ್ನು ಪರಮಪ್ರಮಾಣವೆಂದು ಹೇಳುತ್ತಾರೆ. ಆದರೆ ಸಚ್ಚಿದಾನಂದ ಭಾರತಿಗಳು ಯಾವ ಪ್ರಮಾಣಗಳನ್ನು ಕೊಡುತ್ತಾರೆಂದು ಸಿದ್ಧಪ್ಪರಾಧ್ಯರು ತಲೆ ಕೆಡಿಸಿಕೊಳ್ಳುವುದಿಲ್ಲ, ಹೇಳಿಕೇಳಿ ಶೃಂಗೇರಿ ಮಠವೇ ಗೊಂದಲಗಳ ಬೀಡು.

ಶೃಂಗೇರಿ ಮಠದ ಮೇಲೆ ಮರಾಠಿ ಸೈನ್ಯದ ದಾಳಿ

1791ರಲ್ಲಿ ಮರಾಠಿ ಸೈನ್ಯವು ಧಾರ್ಮಿಕ ಸಂಸ್ಥೆಯಾದ ಶೃಂಗೇರಿ ಮಠದ ಮೇಲೆ ದಾಳಿ ಮಾಡಿ ಅಮೂಲ್ಯವಾದ ವಸ್ತುಗಳನ್ನು, ಸಂಪತ್ತನ್ನು ದೋಚಿತ್ತು, ಕಳಸದ ದೊರೆ ಬೈರರಸನೂ ಕೂಡಾ ಈ ಮಠದ ಮೇಲೆ ದಾಳಿ ಮಾಡಿದ್ದ. ಮಠವೊಂದರಲ್ಲಿ ಅಷ್ಟೆಲ್ಲಾ ಸಂಪತ್ತು ಹೇಗೆ ಸಂಗ್ರಹವಾಗಿತ್ತು ಎನ್ನುವುದು ಅಲ್ಲಿನ ರಹಸ್ಯ. ಇರಲಿ, ಮರಾಠಿ ಸೈನ್ಯದಿಂದ ದಾಳಿಗೊಳಗಾಗಿ ಮತ್ತು ಹಲವು ಹತ್ಯೆಗಳಾದ ಮೇಲೆ ಶತ್ರುವಿನ ಶತ್ರು ನನಗೆ ಮಿತ್ರ ಎಂಬ ಪಂಚತಂತ್ರದ ಸೂತ್ರವೊಂದರಂತೆ ಮಠದ ಪೀಠಾಧಿಪತಿ ಟಿಪ್ಪು ಸುಲ್ತಾನ್‌ಗೆ ವಿಷಯ ಮುಟ್ಟಿಸಿ ನೆರವು ಯಾಚಿಸಿದರು. ಟಿಪ್ಪು ಬಿದನೂರಿನ ಅಸಾಫ್‌ಗೆ ಆದೇಶ ನೀಡಿ ಮಠಕ್ಕೆ ಸಹಾಯ ಮಾಡಿದ್ದ.

ಶೃಂಗೇರಿಯ ಶಾರದೆಯೆಂದು ಸಾಮಾನ್ಯ ಜನರು ಪೂಜಿಸುವ ಆ ಮೂರ್ತಿ ಶಂಕರಾಚಾರ್ಯನೊಂದಿಗೆ ವಾದಿಸಿದ ಸುರೇಶಾಚಾರ್ಯನ ಹೆಂಡತಿ ಉಭಯ ಭಾರತಿ ಎಂದು ಹೇಳಲಾಗುತ್ತದೆ. ಈ ಇಬ್ಬರು ಆಚಾರ್ಯರ ವಾದಗಳಿಗೆ ನಿರ್ಣಾಯಕಳಾಗಿದ್ದವಳು ಸ್ವಯಂ ಸುರೇಶಾಚಾರ್ಯನ ಹೆಂಡತಿ ಭಾರತಿ. ಶಂಕರಾಚಾರ್ಯನಿಂದ ಅಪಾರವಾಗಿ ಗೌರವಕ್ಕೆ ಪಾತ್ರವಾಗಿದ್ದ ಭಾರತಿಯೇ ಶೃಂಗೇರಿ ಶಾರದೆ ಎನ್ನುತ್ತಾರೆ. ಆದರೆ ಸಾಮಾನ್ಯ ಜನರು ಆಕೆಯನ್ನು ಸರಸ್ವತಿಯೆಂದೂ ವೀಣಾಪಾಣಿ, ವಾಣಿ, ಬ್ರಹ್ಮನರಾಣಿ ಎಂದೂ ಭಾವಿಸುತ್ತಾರೆ. ಹೀಗೆ ಹಲವು ವಿಷಯಗಳು ಶೃಂಗೇರಿಯ ಮಠದ ಬಗ್ಗೆ ತಿಳಿದುಕೊಳ್ಳಬೇಕಿದೆ.

ಚಾರಿತ್ರಿಕ ಅಂಶಗಳು ಯಾವಾಗಲೂ ಶ್ರದ್ಧಾ ನಂಬುಗೆಯ ವಿಷಯಗಳಿಗೆ ವಿಷ ಸಮಾನ.

ಕಲಿಯುಗದ ಆದಿಯಲ್ಲಿ ಜಗದ್ಗುರು ರೇವಣ ಸಿದ್ಧರು ಅವತರಿಸಿದ್ದರು ಎಂದು **5600** ವರ್ಷಗಳ ಹಿಂದಕ್ಕೆ ರೇಣುಕಾಚಾರ್ಯರನ್ನು ಒಯ್ಯುವ ಇವರು ಶಂಕರಾಚಾರ್ಯನನ್ನು ಹೇಗೆ ಸಂಧಿಸಿದರು? ಶಂಕರಾಚಾರ್ಯನು ಐದುಸಾವಿರದ ಆರುನೂರು ವರ್ಷಗಳ ಹಿಂದೆ ಇದ್ದನೇ? ಎಂದೆಲ್ಲಾ ಪ್ರಶ್ನಿಸಿ ತಲೆಕೆಡಿಸಿಕೊಳ್ಳಬೇಡಿ. ಅದಕ್ಕೂ ಲೇಖಕರು ಉತ್ತರಿಸುತ್ತಾರೆ.

"ಕಲಿಯುಗದ ಆದಿಯಲ್ಲಿ ಅವತರಿಸಿದ ಜಗದ್ಗುರು ರೇವಣ ಸಿದ್ಧರು ಏಳುನೂರು ವರ್ಷ ಗುಪ್ತವಾಗಿ ತಪ್ಪೋಯೋಗದಲ್ಲಿದ್ದು ಏಳುನೂರು ವರ್ಷ ತತ್ತ್ವೋಪದೇಶ ಮಾಡುತ್ತಿದ್ದರೆಂದು ಹಿಂದೆಯೇ ತಿಳಿಸಿದೆ. ಇವರು ತಮ್ಮ ಅವತಾರ ಸಮಾಪ್ತಿ ಕಾಲದಲ್ಲಿ ಆದಿಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಸನ್ನಿವೇಶವು ಸಂಭವಿಸಿತೆಂಬುದು ಸ್ಪಷ್ಟವಾಗುತ್ತದೆ. ಈಗ್ಗೆ ಸುಮಾರು ಮೂರೂವರೆ ಸಾವಿರ ವರ್ಷಗಳ ಕಾಲ ಭಕ್ತಾನುಗ್ರಹಲೀಲೆಯನ್ನು ನಡೆಸಿದ ರೇವಣಸಿದ್ಧರು ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದರೆಂಬಲ್ಲಿ ಯಾವ ಅನೌಚಿತ್ಯಕ್ಕೂ ಅವಕಾಶವಿಲ್ಲ. ಕಲಿಯುಗದಲ್ಲಿ ಈಗ್ಗೆ ಐದುಸಾವಿರದ ಆರುನೂರುವರ್ಷಗಳು ಕಳೆದಿವೆ. ಇದರಲ್ಲಿ ಒಂದುಸಾವಿರದ ನಾಲ್ಕುನೂರು ವರ್ಷಗಳು ಕಳೆದ ಮೇಲೆ ಮೂರೂವರೆ ಸಾವಿರದಿಂದ ನಾಲ್ಕುಸಾವಿರ ವರ್ಷಗಳೊಳಗೆ ಈ ಸಂಘಟನೆ ನಡೆದದ್ದು ಸಮಂಜಸವೂ ಸಹಜವೂ ಆಗಿದೆ.

ಕ್ರಿಸ್ತಶಕ ಎಂಟನೇ ಶತಮಾನದಲ್ಲಿದ್ದ ಭಾಷ್ಯಕರ್ತ ಶಂಕರಾಚಾರ್ಯರು ಆದಿಶಂಕರರಿಂದ ಮೂವತ್ತೆಂಟನೆಯವರೆಂದು ಇತಿಹಾಸವು ತಿಳಿಸಿರುವುದರಿಂದ ಕ್ರಿಸ್ತಶಕ 8ನೇ ಶತಮಾನದಲ್ಲಿದ್ದ ಭಾಷ್ಯಕರ್ತ ಶಂಕರಾಚಾರ್ಯನಿಗೂ ಕ್ರಿಸ್ತಪೂರ್ವದಲ್ಲಿದ್ದ ರೇವಣಸಿದ್ಧರಿಗೂ ಸಂಬಂಧವಿಲ್ಲವೆಂಬುದು ಸ್ಪಷ್ಟವಾಯಿತು. ಆದ್ದರಿಂದ ಅವರು ಇವರಿಗೆ ಹೇಗೆ ಲಿಂಗ ಕೊಟ್ಟರು ಎಂಬ ಸಂಶಯಕ್ಕೆ ಯಾವ ಅವಕಾಶವೂ ಸಂಭವಿಸುವಂತಿಲ್ಲ, ಭಾಷ್ಯಕರ್ತ ಶಂಕರಾಚಾರ್ಯರ ಹಿಂದೆ ಮೂವತ್ತೆಂಟನೆಯವರಾದ ಅವರಿಗೆ ಮೂರು ಸಾವಿರ ವರ್ಷಗಳ ಹಿಂದೆ ಇದ್ದ ಆದಿಶಂಕರಾಚಾರ್ಯರಿಗೂ ಕಲಿಯುಗದಲ್ಲಿ **1400** ವರ್ಷಗಳ ಕಾಲ ಇದ್ದ ಜಗದ್ಗುರು ರೇವಣ ಸಿದ್ಧರಿಗೂ ಸಮಾವೇಶಕ್ಕೆ ಪೂರ್ಣಾವಕಾಶವಿತ್ತು. ಆದ್ದರಿಂದ ಕಲಿಯುಗದ ಜಗದ್ಗುರು ರೇವಣಸಿದ್ಧರು ಈಗ್ಗೆ ಮೂರುವರೆ ಸಾವಿರ ವರ್ಷಗಳಿಂದ ನಾಲ್ಕು ಸಾವಿರ ವರ್ಷಗಳ ಮಧ್ಯ ಕಾಲದಲ್ಲಿ ಲೋಕಕಲ್ಯಾಣವನ್ನು ಸಾಧಿಸಿ ಲಿಂಗದಲ್ಲಿ ಐಕ್ಯರಾದರೆಂದು ಹೇಳಲಿಕ್ಕೆ ಯಾವ ಆತಂಕವೂ ಇರಲಾರದು."

ಇದನ್ನು ಓದುತ್ತಿದ್ದರೆ ಗಣೇಶನ ತಲೆ ಕಡಿದ ಕಥೆ ನಮ್ಮ ದೇಶದಲ್ಲಿ ಪ್ಲಾಸ್ಟಿಕ್ ಸರ್ಜರಿ ಇತ್ತು, ಪುಷ್ಪಕ ವಿಮಾನವೇ ಇಂದಿನ ಏರೋಪ್ಲೇನ್‌ಗಳಿಗೆ ಮೂಲವಾಗಿತ್ತು, ಗಾಂಧಾರಿಯು ತನ್ನ ಪಿಂಡವನ್ನು ಕೊಡಗಳಲ್ಲಿ ಇಟ್ಟದ್ದು ಟೆಸ್ಟ್‌ಟ್ಯೂಬ್ ಬೇಬಿಗಳ ಆವಿಷ್ಕಾರ ಇತ್ಯಾದಿಗಳು ನೆನಪಿಗೆ ಬಂದರೆ ಆಶ್ಚರ್ಯವೇನೂ ಇಲ್ಲ. ಅದೇ ಧಾಟಿಯ ಐತಿಹಾಸಿಕ ಪುರಾಣ ಸತ್ಯಗಳು ಇವು.

ಶೃಂಗೇರಿ ಮಠವು ಎಂದಿನಿಂದ ಇತ್ತು ಎಂಬ ಇತಿಹಾಸಕ್ಕೆ ಹೋದರೆ, ಅಲ್ಲಿ ಶಾರದಾ ಪೀಠವನ್ನು ಸ್ಥಾಪಿಸಿದ ಶಂಕರಾಚಾರ್ಯರ ಸಂಧಿಸಿದ ರೇಣುಕಾಚಾರ್ಯರ ಸಮಯ ಸುಳ್ಳಾಗಿರಬೇಕು ಅಥವಾ ಶಂಕರಾಚಾರ್ಯ ಶಾರದಾ ಪೀಠವನ್ನು ಸ್ಥಾಪಿಸಿದ್ದು ತಪ್ಪಾಗಬೇಕು. ಈ ಎರಡನ್ನೂ ಒಮ್ಮೆಲೇ ನಿಜ ಮಾಡಲು ಸಾಧ್ಯವಿಲ್ಲ.

ಇವರು ರೇಣುಕಾಚಾರ್ಯರನ್ನು ಎರ್ರಾಬಿರ್ರಿ ಯಾವುದ್ಯಾವುದೋ ಕಾಲಕ್ಕೆ ಎಳೆದಾಡುವ ರೀತಿಯನ್ನು ನೋಡುತ್ತಾ ಹೋದರೆ, ಐತಿಹಾಸಿಕವಾಗಿ ರೇಣುಕರಿದ್ದರೇ ಎಂಬ ಅನುಮಾನ ಮೂಡುತ್ತದೆ.

ರೇಣುಕರು ತ್ರೇತಾಯುಗದ ರಾಮನ ಕಾಲದಲ್ಲಿ ಕೂಡ ಇದ್ದರು. ಹೇಗೆಂದರೆ, ದ್ರಾವಿಡ ದೇಶದ ವಿಭೀಷಣನಿಗೆ ಮೂರು ಕೋಟಿ ಶಿವಲಿಂಗಗಳ ಸ್ಥಾಪನೆಗೆ ಸಹಾಯ ಮಾಡಿದ್ದು ಜಗದ್ಗುರು ರೇಣುಕಾಚಾರ್ಯ ಎಂದೂ ಹೇಳುತ್ತಾರೆ. ಇಲ್ಲಿ ರೇಣುಕರ ದ್ರಾವಿಡಾಭಿಮಾನವನ್ನು ಪ್ರದರ್ಶಿಸುತ್ತಾರೆ.

ಹಿಂದೂತ್ವದ ಪಂಡಿತರದ್ದೊಂದು ದೊಡ್ಡ ರೋಗವೆಂದರೆ ಎಲ್ಲವನ್ನೂ ಸಾವಿರ ವರ್ಷಗಳಲ್ಲಿಯೇ ಮಾತಾಡುವುದು. ಅದೆಲ್ಲವನ್ನೂ ಆಗಿನ ಕಾಲದ ಜನರು ತಮ್ಮ ಮೌಖಿಕ ಪರಂಪರೆಯಲ್ಲಿ ಉತ್ಪ್ರೇಕ್ಷೆಗಳಲ್ಲೋ ಅಥವಾ ರೂಪಕಗಳಲ್ಲೋ ಹೇಳಿದ್ದಾರೆ ಎಂದು ನಾವಂದುಕೊಂಡರೆ ಅಥವಾ ಒಗಟುಗಳನ್ನು ಬಿಡಿಸಲು ಯತ್ನಿಸಿದರೆ ಈ ಪಂಡಿತರು ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ, ಅದು ಐತಿಹಾಸಿಕ ಸತ್ಯವೆಂದು ಸಾಧಿಸಲು ನಿಲ್ಲುತ್ತಾರೆ. ಮಂಟೇಸ್ವಾಮಿ, ಮಾದೇಶ್ವರ ಇತ್ಯಾದಿ ಮಹಿಮರ ಕುರಿತಾದ ಮೌಖಿಕ ಪರಂಪರೆಯ ಕಥೆಗಳ ಒಗಟುಗಳನ್ನು ಬಿಡಿಸುವಂತಹ ಅಧ್ಯಯನಗಳು ಜಾನಪದ ಕ್ಷೇತ್ರದಲ್ಲಿ, ದೇಶೀಯ ಅಧ್ಯಯನದಲ್ಲಿ ಶಾಸ್ತ್ರೀಯವಾಗಿಯೇ ಆಗುತ್ತದೆ. ಆಗ ಅವರು ಹೇಳುವಂತಹ ಐತಿಹ್ಯಗಳ ರೂಪಕಗಳನ್ನು, ಒಗಟುಗಳನ್ನು ಬಿಡಿಸಲು ಸಾಧ್ಯವಾಗುವುದಲ್ಲದೇ, ಆ ಪರಿಕಲ್ಪನೆಗಳನ್ನು ಗೌರವಿಸಲೂ ಸಾಧ್ಯವಾಗುತ್ತದೆ. ಆದರೆ, ಅಂತಹ ಅಧ್ಯಯನಗಳನ್ನು ಮಾಡದೇ, ಅಂಥವಕ್ಕೆ ಅವಕಾಶವನ್ನೇ ಕೊಡದೇ ಐತಿಹ್ಯಗಳನ್ನೇ ಐತಿಹಾಸಿಕ ಸತ್ಯಗಳೆಂದು ಸಾಧಿಸುವ ಹುಂಬರಿಗೆ ಏನೂ ಹೇಳಲು ಸಾಧ್ಯವೇ ಇಲ್ಲ, ಪರಿಕಲ್ಪನೆಗಳ ಬಗ್ಗೆ ಗೌರವ ತಳೆಯಲೂ ಬಿಡದಂತೆ ವಸ್ತುವನ್ನು ಹಾಸ್ಯಾಸ್ಪದವನ್ನಾಗಿಸಿಬಿಡುತ್ತಾರೆ.











ಶೃಂಗೇರಿ ಶ್ರೀ ಶಾರದಾಂಬ

ರೊಟ್ಟಿಯಲ್ಲಿ ಸಾಯಿಬಾಬ

ಕೆಲವು ತಿಂಗಳುಗಳ ಹಿಂದೆ ರೊಟ್ಟಿಯ ಮೇಲೆ ಶಿರಡಿ ಸಾಯಿಬಾಬನ ಚಿತ್ರ ಮೂಡಿತ್ತೆಂದು ಖಾಸಗಿ ಚಾನೆಲ್‌ಗಳು ಪ್ರಸಾರ ಮಾಡುತ್ತಿದ್ದವು. ಶಿರಡಿ ಸಾಯಿಬಾಬನ ಚಿತ್ರ ಮೂಡಿದ ಆ ರೊಟ್ಟಿಯನ್ನು ಪೂಜಿಸುತ್ತಿದ್ದರು. ಅದು ತನ್ನ ಮನೆಯಲ್ಲಿ ಉಂಟಾಯಿತೆಂದು ಪವಾಡದ ಹಕ್ಕು ಸಾಧಿಸುತ್ತಿದ್ದ ಹೆಂಗಸೊಬ್ಬಳಿಗೆ ಎದುರಾಗಿ, ಅದರ ಮೌಢ್ಯತೆಯನ್ನು ಪ್ರಶ್ನಿಸಲು ಜಿ.ಕೆ.ಗೋವಿಂದ ರಾವ್‌ರವರನ್ನು ಕರೆಯಿಸಿದ್ದರು. ಆಕೆ ರೊಟ್ಟಿಯೂ ಸತ್ಯ ಮತ್ತು ಅದರಲ್ಲಿ ಸಾಯಿಬಾಬನ ಚಿತ್ರ ಮೂಡಿದ್ದೂ ಸತ್ಯ, ಜೊತೆಗೆ ಸಾಯಿಬಾಬನ ಸತ್ವದಿಂದಾಗಿ ರೊಟ್ಟಿಯು ಬೆಳೆಯುತ್ತಿದೆ ಎಂದು ವಾದಿಸಿ ಜಿ.ಕೆ.ಗೋವಿಂದ ರಾವ್‌ರವರ ಬಾಯಿ ಕಟ್ಟಿದ್ದಳು. ಅವರು ವೈಚಾರಿಕವಾಗಿ ಏನನ್ನು ಹೇಳಲು ಹೋದರೂ ಆಕೆ ತನ್ನ ಹುಂಬವಾದವನ್ನು ಬಿಟ್ಟುಕೊಡಲು ಸಿದ್ಧಳಿರಲಿಲ್ಲ, ಆಕೆ ಅಷ್ಟು ಮುಗ್ಧೆಯೋ, ಸರಳಳೋ ಆಗಿರಲಿಲ್ಲ, ಇತರರಿಗೆ ನಂಬಿಸಲು, ಸ್ವಲ್ಪ ಲೌಕಿಕ ಲಾಭಕ್ಕಾಗಿ, ಹೆಚ್ಚುಗಾರಿಕೆಗಾಗಿ ತಾನು ಒಮ್ಮೆ ಹೇಳಿದ ಮೂರ್ಖತನದ ಸುಳ್ಳನ್ನು ನಿರಾಕರಿಸಲು ಸಾಧ್ಯವಿಲ್ಲದೇ ಅದನ್ನೇ ಸಮರ್ಥಿಸುತ್ತಿದ್ದಳು.

ವಿಷಯವೇನಿತ್ತೆಂದರೆ, ಆಕೆ ರೊಟ್ಟಿಯೆಂದು ಏನನ್ನು ಕರೆಯುತ್ತಿದ್ದಳೋ ಅದನ್ನು ಕರ್ಗೋಸ್ ಎಂಬ ಯೀಸ್ಟ್ ಆಗಿತ್ತು, ಕರ್ಗೋಸ್ ಎಂಬ ಚೀನಾದ ಹಳ್ಳಿಯೊಂದರಲ್ಲಿ ಈ ಯೀಸ್ಟ್‌ನ ಬಳಕೆಯನ್ನು ಕಂಡುಕೊಂಡಿದ್ದರು. ಅದನ್ನು ಹಾಲಿಲ್ಲದೇ ಚಹಾದ ಡಿಕಾಕ್ಷನ್‌ನಲ್ಲಿ ಇಟ್ಟದ್ದರೆ, ಆ ಯೀಸ್ಟ್ ಬೆಳೆಯುತ್ತಿತ್ತು, ಪದರಪದರವಾಗಿ ಹರಡಿಕೊಳ್ಳುತ್ತಿತ್ತು, ಅದನ್ನು ಇರಿಸಿದ್ದ ಡಿಕಾಕ್ಷನ್‌ನ್ನು ಮಧುಮೇಹಿಗಳು ಬಳಸಿದರೆ ಒಳ್ಳೆಯದು, ಸಕ್ಕರೆ ಖಾಯಿಲೆ ನಿಯಂತ್ರಣಕ್ಕೆ ಬರುತ್ತದೆ ಹಾಗೆಯೇ ಇತರ ರೋಗಗಳಿಗೂ ಒಳ್ಳೆಯದು ಎಂಬ ವಿಷಯವಿದ್ದುದರಿಂದ ಅದನ್ನು ಬಳಸುತ್ತಿದ್ದರು. ವಾಸ್ತವವಾಗಿ ಚೀನಾದ ಕರ್ಗೋಸ್ ಹಳ್ಳಿಯಲ್ಲಿ ಈ ಯೀಸ್ಟನ್ನು ಯಥೇಚ್ಛವಾಗಿ ಬಳಸುತ್ತಿದ್ದರಿಂದ ಅಲ್ಲಿನ ಹೆಂಗಸರಿಗೆ ಮುಟ್ಟಿನ ಸಮಸ್ಯೆಗಳಾಗಲಿ, ಇತರ ಸ್ತ್ರೀ ಸಹಜವಾದಂತಹ ಸಮಸ್ಯೆಗಳಾಗಲಿ ಇರದೇ, ಎಪ್ಪತ್ತು ಎಂಭತ್ತರ ವಯಸ್ಸಲ್ಲೂ ಹೆರಲು ಸಾಧ್ಯವಾಗುವಂತಹ ಫಲವತ್ತತೆ ಅಲ್ಲಿನ ಮಹಿಳೆಯರಲ್ಲಿ ಇರುತ್ತಿತ್ತು ಎನ್ನುತ್ತಿದ್ದರು ಹಾಗೂ ಎಲ್ಲರೂ ಆ ಊರಿನಲ್ಲಿ ಸಾಮಾನ್ಯವಾಗಿಯೇ ದೀರ್ಘಾಯುವಾಗಿರುತ್ತಿದ್ದರು. ಇಂತಹ ಯೀಸ್ಟನ್ನು ಸಾಯಿಬಾಬನ ರೊಟ್ಟಿ ಎಂದು ವಾದಿಸುತ್ತಿದ್ದ ಹೆಂಗಸಿಗೂ ಮತ್ತು ಪುರಾಣಗಳನ್ನು ಇತಿಹಾಸವೆಂದೇ ಬಿಂಬಿಸಲು ಹೋಗುವ ಪಂಡಿತರಿಗೂ ಏನು ವ್ಯತ್ಯಾಸವೆಂದು ಹಲವಾರು ಬಾರಿ ಯೋಚಿಸುತ್ತೇನೆ.





ಸಚ್ಚಿದಾನಂದ ಭಾರತೀ ಸ್ವಾಮಿ

ಸೀರೆ ಭಾರತದ್ದೇ ಅಥವಾ ಬೇರೆ ದೇಶದ ಗಂಡಸರದ್ದೇ?

ಹೊಗಳಿಕೆ ತೆಗಳಿಕೆ

'ಹಿಂದೂತ್ವ ಇತಿಹಾಸದ ಮಿಥ್ಯಗಳು' ಎಂಬ ಲೇಖನ ಓದುವಾಗ ನಮ್ಮ ಶಿಲ್ಪಕಲೆ ಶೈಲಿಯ ಬಗ್ಗೆ ಈ ಕೆಲವು ಸಂದೇಹಗಳು ನನ್ನ ಮನದಲ್ಲಿ ಮೂಡಿದವು. ಈಗ ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಗೊಮ್ಮಟೇಶ್ವರನ ಮಹಾ ಮಸ್ತಕಾಭಿಷೇಕ ನಡೆಯುತ್ತಿದೆ. ಬಾಹುಬಲಿ ಗೊಮ್ಮಟೇಶ್ವರ, ಗೌತಮ ಬುದ್ಧ, ಮಹಾವೀರ ಮತ್ತು ಇತರ ತೀರ್ಥಂಕರರೆಲ್ಲರೂ ಉತ್ತರ ಭಾರತೀಯರಾಗಿದ್ದು ಅವರ ತಲೆಯಲ್ಲಿ ನೇರವಾದ (ಸ್ಟ್ರೈಟ್) ಕೂದಲು ಇದ್ದಿರುವ ಸಾಧ್ಯತೆಯೇ ಹೆಚ್ಚು, ಆದರೂ ಸಾವಿರಾರು ವರ್ಷ ಹಳೆಯ ಅವರ ಮೂರ್ತಿಗಳನ್ನು ಆಫ್ರಿಕಾದ ಜನರ ತರಹ ತಲೆಗೆ ಹತ್ತಿಕೊಂಡಂತಹ ಗುಂಗುರು ಕೂದಲು ಹೊಂದಿರುವಂತೆ ಕಡೆದಿರಲು ಕಾರಣವೇನು? ಎಲ್ಲೆಡೆ ಗೌತಮ ಬುದ್ಧ ಬಲದಿಂದ ಎಡಗಡೆಗೆ ಹೊದ್ದಿರುವ ಸೆರಗು ಸಹಿತ ಉತ್ತರೀಯವುಳ್ಳ ಮೂರ್ತಿಗಳೇ ಭಾರತದಲ್ಲಿ ಏಕಿವೆ? ಆಗಿನ ಕಾಲದಲ್ಲಿ ಭಾರತೀಯ ಗಂಡಸರು ಸೊಂಟದ ಮೇಲೆ ಬಟ್ಟೆ ಉಡುತ್ತಿದ್ದದ್ದು ಕಡಿಮೆ ಎಂಬುದು ಹಳೆಯ ಹಿಂದೂ ದೇವಸ್ಥಾನಗಳ ಮೂರ್ತಿಗಳಿಂದ ಅಥವಾ ಗುಹಾ ದೇವಾಲಯಗಳ ಪೇಂಟಿಂಗುಗಳಿಂದ ತಿಳಿದು ಬರುತ್ತದೆ. ಹಳೆಯ ಗ್ರೀಕ ಹಾಗೂ ರೋಮನ್ ದೇವತೆಗಳ ಹಾಗೂ ದಾರ್ಶನಿಕರ ಮೂರ್ತಿಗಳಲ್ಲಿ ಸಹ ತಲೆ ಕೂದಲು ಇದೇ ತರಹ ಗುಂಗುರು ಆಗಿರುವಂತೆ ಮತ್ತು ಉತ್ತರೀಯ ಇದೇ ರೀತಿ ಹೊದ್ದಿರುವಂತೆ ಕೆತ್ತಲಾಗುತ್ತಿತ್ತು, ಹಾಗೆ ನೋಡಿದರೆ ಗ್ರೀಕ್ ಹಾಗೂ ರೋಮನ್ ಜನರ ತಲೆ ಕೂದಲು ಸಹ ಗುಂಗುರು ಆಗಿರಲಿಲ್ಲ. ಆದರೂ ಈ ಶಿಲ್ಪ ಶೈಲಿ ಅವರು ಯಾಕೆ ಉಪಯೋಗಿಸುತ್ತಿದ್ದರು? ಈ ಶೈಲಿ ಭಾರತದಿಂದ ಗ್ರೀಸ್-ರೋಮಿಗೆ ಹೋಯಿತೆ ಅಥವಾ ಅಲ್ಲಿಂದ ಅದು ಭಾರತಕ್ಕೆ ಬಂದಿತೇ ಎಂಬ ಬಗ್ಗೆ ಸಂಶೋಧನೆ ಅಗತ್ಯ. ಬಲದಿಂದ ಎಡಕ್ಕೆ ಸೆರಗುಳ್ಳ ಉತ್ತರೀಯ ಹೊದ್ದುಕೊಳ್ಳುವ ರೀತಿ ರೋಮ್-ಗ್ರೀಸ್‌ನಲ್ಲಿ ಶುರುವಾಗಿ ಭಾರತಕ್ಕೆ ಬಂತೆ ಅಥವಾ ಭಾರತದಲ್ಲಿ ಶುರುವಾಗಿ ರೋಮ್-ಗ್ರೀಸಿಗೆ ಹೋಯಿತೆ? ಭಾರತೀಯ ನಾರಿಯರು ಉಡುವ ಸೀರೆಯ ಶೈಲಿ ಮೂಲತಃ ಭಾರತದ್ದೇ ಅಥವಾ ಬೇರೆ ದೇಶದ ಗಂಡಸರದ್ದೇ? ಈ ಶೈಲಿಯ ಸೀರೆ ಉಟ್ಟಿರುವ ಪುರಾತನ ಶಿಲ್ಪಗಳು ಭಾರತದಲ್ಲಿ ಏಕಿಲ್ಲ ಎಂಬ ಬಗ್ಗೆ ಇತಿಹಾಸಕಾರರು ಬೆಳಕು ಚೆಲ್ಲಿದರೆ ಒಳಿತು. ಇಂಗ್ಲಿಷ್ ಚಲನಚಿತ್ರಗಳಲ್ಲಿ ರೋಮನ್ ರಾಜನ ಆಸ್ಥಾನದಲ್ಲಿರುವ ಗಣ್ಯರು ಉಡುತ್ತಿದ್ದ ಬಟ್ಟೆಯ ಶೈಲಿ ಭಾರತೀಯ ಸೀರೆಯ ಶೈಲಿ ಹೋಲುತ್ತಿರುವುದನ್ನು ಗಮನಿಸಬಹುದು. ಅಲೆಕ್ಸಾಂಡರ್ ಭಾರತಕ್ಕೆ ಬಂದು ಹೋದ ಮೇಲೆ ಎರಡೂ ಸಂಸ್ಕೃತಿಯ ಮಿಲನದಿಂದ ಈ ಶಿಲ್ಪಾ ಶೈಲಿ ಹಾಗೂ ಬಟ್ಟೆ ಉಡುವ ಶೈಲಿ ಹುಟ್ಟಿಕೊಂಡಿರಬಹುದೇ? ಈ ಪ್ರಶ್ನೆಗಳು ಸನಾತನವಾದಿಗಳಿಗೆ ಅಪಥ್ಯವಾಗಬಹುದು!

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ದ್ರಾವಿಡರ ಮೂತಿಗೆ ಬೆಲ್ಲ ಹಚ್ಚಿ ನಕ್ಕ ಪೇಜಾವರ ಸ್ವಾಮಿ

ಶ್ರೀಯುತ ಪ್ರವೀಣ್ ಎಸ್ ಶೆಟ್ಟರ 'ಪೇಜಾವರರ ಅಸಂಬದ್ಧ ಸಂಶೋಧನೆ'(ಲಂಕೇಶ್, ಸಂಚಿಕೆ ಜ. 21)ಯ ಹೊಡೆತ ಮುಟ್ಟಿ ಮುಟ್ಟಿ ನೋಡಿಕೊಳ್ಳುವಂತಿತ್ತು, ಜಾತಿ ಭೇದದ ಹುಟ್ಟಿಗೆ ದ್ರಾವಿಡರೇ ಕಾರಣಕರ್ತರು ಏನಹ ಪಾಪದ ಆರ್ಯ ಬ್ರಾಹ್ಮಣರ ಪಾಲು ಇಲ್ಲವೇ ಇಲ್ಲ ಎಂಬ ಪೇಜಾವರರ ಹೊಸ ಕನವರಿಕೆಯನ್ನು ನೋಡಿದರೆ ಅಯ್ಯೋ ಪಾಪ ಎನ್ನಿಸುತಿದೆ. ಯಾಕೆಂದರೆ ಅವರ ಬೆಂಬಲಿಗರೇ ಇದನ್ನು ಬೆಂಬಲಿಸುವ ಧೈರ್ಯ ತೋರದೇ ಜಾಣಕಿವುಡರಂತೆ ವರ್ತಿಸುತ್ತಿದ್ದಾರೆ.

ಜಾತಿ-ವರ್ಗಗಳು ಸರ್ವವ್ಯಾಪಿಯಾದದ್ದು. ಬಹುತೇಕ ಎಲ್ಲೆಡೆ ಎಲ್ಲಾ ಧರ್ಮ-ಪಂಗಡಗಳಲ್ಲೂ ಇದು ಇದ್ದೇ ಇದೆ. ಇಲ್ಲಿ ಜಾತಿ- ಪಂಗಡ ತಪ್ಪಲ್ಲ, ಆದರೆ ಹುಟ್ಟಿದ ಜಾತಿಯ ಹೆಸರಲ್ಲಿ ಒಬ್ಬ ದೇವರ ಪ್ರತಿರೂಪದಂತೆ ಉಚ್ಛ ಎನಿಸಲ್ಪಟ್ಟರೆ ಇನ್ನೊಬ್ಬ ಪ್ರಾಣಿಗಿಂತಲೂ ನೀಚ ನಿಕೃಷ್ಟ ಎಂಬ ಭೇದದ ಸೃಷ್ಟಿ ಇದೆಯಲ್ಲ ಅದು ಅಮಾನುಷವಾದುದು. ವೈದಿಕರು ತಮ್ಮ ಸ್ವಾರ್ಥಕ್ಕಾಗಿ ಸಮಾಜದಲ್ಲಿ ಹುಟ್ಟು ಹಾಕಿ ಬಿತ್ತಿದ ಈ ಕರಾಳ ಅಸ್ಪೃಶ್ಯತೆ, ಜಾತಿ ಭೇದವನ್ನು ಅಭ್ಯಸಿಸಲು ತೀರಾ ಹಿಂದಿನ ಯುಗಕ್ಕೋ ಇಲ್ಲಾ ಯಾವುದೋ ನಿರ್ದಿಷ್ಟ ಪ್ರದೇಶಕ್ಕೋ ಹೋಗುವ ಅಗತ್ಯವೇನಿಲ್ಲ, ನಮ್ಮ ಸುತ್ತಮುತ್ತಲ ಪರಿಸರದಲ್ಲೇ ಪ್ರತಿನಿತ್ಯ ನಡೆಯುವಂತಹ ಸಾಮಾನ್ಯ ಪ್ರಕ್ರಿಯೆಗಳಲ್ಲೇ ಇದನ್ನು ಗುರುತಿಸಬಹುದು. ಕ್ರಾಂತಿಕಾರಿ. ಸಮಾಜಮುಖಿ ಎಂದು ಪೋಸು ಕೊಡುತ್ತಾ ತನ್ನ ಬುಡದಲ್ಲೇ ಆಚರಿಸಲ್ಪಡುತ್ತಿರುವ ಮನುಷ್ಯತ್ವ ವಿರೋಧಿ ಪಂಕ್ತಿ ಭೇದ, ಮಡೆಸ್ನಾನಗಳಂತಹ ನೀಚ ಆಚರಣೆಗಳನ್ನು ಎದುರಿಸಲಾಗದೇ ಬಾಯಿ ಮುಚ್ಚಿಕೊಂಡು ಬೆಂಬಲಿಸುವ ಪೇಜಾವರರು ಈಗ ಅಪರಾತ್ರಿಯ ದುಃಸ್ವಪ್ನದಿಂದ ಎಚ್ಚೆತ್ತವರಂತೆ "ಜಾತಿ ಭೇದದ ಹುಟ್ಟಿಗೆ ಕಾರಣರು ನಾವಲ್ಲ, ನಾವಲ್ಲ ದ್ರಾವಿಡರು" ಎಂದು ಚೀರುತ್ತಿರುವುದು ಬೆಟ್ಟದ ತುದಿಯಲ್ಲಿ ಒಂಟಿ ನರಿಯೊಂದು ಊಳಿಡುವಂತೆ ತೋರುತ್ತಿದೆಯೇ ವಿನಹ ಬೇರೇನಲ್ಲ. ಅದೇನೋ ಹೇಳ್ತಾರಲ್ಲ ಕೋತಿ ತಾನು ತಿಂದು ಮೇಕೆ ಮೂತಿಗೆ ಒರೆಸಿಹೋಯಿತು ಅಂತ ಹಾಗಿದೆ ಈ ಕೇಸು. ದೇವದಾಸಿ, ಸತಿಪದ್ಧತಿ, ಮುಂತಾದ ಅನಿಷ್ಟಗಳೆಲ್ಲ ಇಲ್ಲಿಗೆ ದಾಳಿಯಿಟ್ಟ ಬ್ರಿಟಿಷರ-ಮೊಗಲರ ಕಾರಣಕ್ಕೆ ಬಂದಂತವು ಎಂದು ಉತ್ತರಿಸಲು ಅವರಿಲ್ಲದ ಈಗಿನ ಕಾಲದಲ್ಲಿ ಕೆಲ ವ್ಯಕ್ತಿಗಳು ತಮ್ಮಿಂದಾದ ತಪ್ಪನ್ನು ಅನ್ಯರ ಮೇಲೆ ಹೊರಿಸುತ್ತಿರುವುದು ಇತ್ತೀಚೆಗೆ ಹೆಚ್ಚತೊಡಗಿದೆ (ಅಸಲಿಯತ್ತೆಂದರೆ ಬ್ರಿಟಿಷರು ಬಾರದೇ ಇರುತ್ತಿದ್ದರೆ, ಬೆಂಟಿಕ್‌ನಂತಹ ದೃಢ ಮನಸ್ಸಿನ 'ಪರದೇಸಿಗ' ಇಲ್ಲದಿರುತ್ತಿದ್ದರೆ ಸತಿ ಪದ್ಧತಿ ತರಹದ ಅನಿಷ್ಟಗಳು ಇವತ್ತಿಗೂ ಸಾವಯಾನ್ಯ ರೀತಿಯಲ್ಲೇ ಇಲ್ಲಿ ಪ್ರಚಲಿತದಲ್ಲಿರುತ್ತಿತ್ತು).



ಅದೇ ರೀತಿ ಕಳೆದ ಸಂಚಿಕೆಯಲ್ಲಿ ಶ್ರೀಯುತ ಶೆಟ್ಟರು ನಮ್ಮ ಪುರಾತನರ ಸಂಶೋಧನೆಗಳನ್ನು ಕೊಂಡಾಡಿದ ರೀತಿಯಿದೆಯಲ್ಲ ಅದನ್ನು ಓದಿ ನಕ್ಕೂ ನಕ್ಕೂ ಸುಸ್ತಾಯ್ತು, ಅವರ ಪಟ್ಟಿ ನೋಡಿ ಇದೀಗ ನಂದೂ ಒಂದು ಆಸೆ ಚಿಗುರಿದೆ. ಹೇಗೂ ಇದು ಸ್ಪರ್ಧಾತ್ಮಕ ಯುಗ. ನಮ್ಮ ಮಕ್ಕಳು ರ್‍ಯಾಂಕ್- ಟಾಪರ್ಸ್ ಲಿಸ್ಟಲ್ಲೇ ಇರಬೇಕೆಂದು ಹೆತ್ತವರು ಕನವರಿಸಿ ಮಕ್ಕಳ ಬಾಲ್ಯವನ್ನು ಕೊಂದು ಅವರನ್ನ ಇನ್ನಿಲ್ಲದಂತೆ ಹಿಂಸಿಸುವ ಕಾಲ ಇದು. ಹುಟ್ಟುವ ಮೊದಲೇ ಹುಟ್ಟಲ್ಲದ ಮಗುವಿನ ಸ್ಕೂಲ್ ಅಡ್ಮಿಷನ್‌ಗಾಗಿ ಹೆತ್ತವರು ತಲೆಕೆಡಿಸಿಕೊಂಡು ಲಕ್ಷಗಟ್ಟಲೆ ಡೊನೇಷನ್ ಸುರಿದು ಸರಿಯಾಗಿ ಮಾತಾಡಲು ಬಾರದ ಮಕ್ಕಳನ್ನ ಶಾಲೆಗೆ ನೂಕಿ ಚಿಂತಿಸುವ ಇವತ್ತಿನ ಕಾಲದಲ್ಲಿ ಅಭಿಮನ್ಯು ಹೊಟ್ಟೆಯಲ್ಲಿದ್ದಾಗಲೇ ಕೃಷ್ಣ ಒಂದೇ ಗುಟುಕಿಗೆ ಆತನ ಮಂಡೆಯೊಳಕ್ಕೆ ಪರ್ಮನೆಂಟಾಗಿ ಉಳಿಯುವಂತೆ ಹೇಳಿದಂತಹ ಟೆಕ್ನಿಕನ್ನು ಕಲಿತುಕೊಂಡರೆ ಸಮಯ, ಹಣ ಹಾಗು ಹೊರೆಹೊರುವುದೇ ಮೊದಲಾದ ಮಕ್ಕಳ ಪೀಡನೆ ಎಲ್ಲಕ್ಕೂ ಮುಕ್ತಿ ತಾನೆ? ಯಾರಾದರೂ ಈ ರೀತಿ ಕಲಿಸುವವರಿದ್ದಾರೆಯೇ??

ಅದೇರೀತಿ ಕೀಳು ಲೋಹಗಳನ್ನು ಚಿನ್ನವನ್ನಾಗಿಸುವ 'ಪರುಷ ಮಣಿ'ಯನ್ನು ಹುಡುಕಿಸಿದರೆ ಊರೂರಲ್ಲಿರುವ ಯಾವುದೋ ಕಬ್ಬಿಣದ ಗುಜರಿ ರಾಶಿಯೊಂದಕ್ಕೆ ಅದನ್ನು ಮುಟ್ಟಿಸಿದರೆ ದೇಶದ ಬಡತನವನ್ನೇ ಆ ಮೂಲಕ ನಿವಾರಿಸಬಹುದಲ್ಲವೇ? ಈ ಬಗ್ಗೆ ಸರಕಾರ ಗಮನ ಹರಿಸಲಿ.

- ಶಶಿ ಪುತ್ತೂರು, ದಕ

ಗಂಡಸರೇ ಗರ್ಭ ಧರಿಸಿ ಮಹಿಳೆಯರಿಗೆ ಕಷ್ಟ ತಪ್ಪಿಸಲಿ!

ಹಿಂದೂ ಮಹಿಳೆಯರು ನಾಲ್ಕೈದು ಮಕ್ಕಳನ್ನು ಹೆತ್ತು ಹಿಂದೂ ಧರ್ಮ ಉಳಿಸಬೇಕು ಎಂದು ಬಿಜೆಪಿ ಹಾಗೂ ಹಿಂದೂ ಸಂಘಟನೆಗಳ ನೇತಾರರು ಹಲವೆಡೆ ಬಹಿರಂಗ ಹೇಳಿಕೆ ಕೊಟ್ಟಿದ್ದಾರೆ. ಗೃಹಸ್ಥಾಶ್ರಮ ಅಂದರೆ ಏನೆಂದು ಗೊತ್ತೇ ಇಲ್ಲದ ಸಾಧು ಬಾಬಾಗಳು ಸಹ ಇಂತಹ ಹೇಳಿಕೆ ಕೊಟ್ಟಿರುವುದು ಆಶ್ಚರ್ಯ.

ಆದಿ ಶಂಕರಾಚಾರ್ಯರಂತೆ ಇವರುಗಳೂ ಗಂಡಸಿನ ಶವದೊಳಗೆ ಪರಕಾಯ ಪ್ರವೇಶ ಮಾಡುವ ಮೂಲಕ ಗೃಹಸ್ಥಾಶ್ರಮದ ಸುಖ ಅನುಭವಿಸಿದ್ದರೋ ಏನೋ! ಆದರೆ ಹಿಂದೂ ನೇತಾರರ ಈ ಬೇಜವಾಬ್ದಾರಿ ಹೇಳಿಕೆಗಳ ವಿರುದ್ಧ ಮಹಿಳಾ ಸಂಘಟನೆಗಳೇಕೆ ಸುಮ್ಮನಿವೆ?

ಹೇಗೂ ನಮ್ಮ ಬಿಜೆಪಿ ಮತ್ತು ಆರೆಸ್ಸೆಸ್ ನೇತಾರರು ಆಡಿಗಡಿಗೆ ನಮ್ಮ ಪೂರ್ವಜರಿಗೆ ಜೆನೆಟಿಕ್ಸ್ ಇಂಜಿನಿಯರಿಂಗ್ ಗೊತ್ತಿತ್ತು ಹಾಗೂ ಪ್ರನಾಳ ಶಿಶು ಹುಟ್ಟಿಸುವ ವಿಜ್ಞಾನ ಗೊತ್ತಿತ್ತು ಎಂದು ಪುರಾಣ ಕಥೆಗಳ ದೃಷ್ಟಾಂತ ಕೊಡುತ್ತಿದ್ದಾರಲ್ಲವೇ. ಹಾಗಿದ್ದರೆ ಅದೇ ಪುರಾತನ ವಿಜ್ಞಾನ ಉಪಯೋಗಿಸಿ ಗಂಡಸರೂ ಗರ್ಭ ಧರಿಸುವಂತೆ ಮಾಡಿ ಹಿಂದೂ ಧರ್ಮ ಉದ್ಧರಿಸಬಹುದಲ್ಲವೇ? ಉದಾಹರಣೆಗೆ ಶ್ರೀ ಕೃಷ್ಣನ ಮಗ ಸಾಂಬ ಗಂಡಾದರೂ ಒನಕೆ ಹೆತ್ತನು. ಭಸ್ಮಾಸುರನನ್ನು ಮೋಸದಿಂದ ಕೊಲ್ಲಲು ಗಂಡು ದೇವರಾದ ವಿಷ್ಣುವೇ ಹೆಣ್ಣಿನಂತೆ ಬಟ್ಟೆ ಧರಿಸಿದ್ದರೂ ನಂತರ ಅದೇ ವಿಷ್ಣು (ಮೋಹಿನಿ) ಒಬ್ಬ ಹೊಸ ದೇವರಿಗೆ ಜನ್ಮ ಕೊಟ್ಟನು. ವೇದವ್ಯಾಸನಂತೂ ಗಾಂಧಾರಿಯ ಒಂದೇ ಒಂದು ಅಂಡಾಣುವನ್ನು ಚೂರು ಚೂರು ಮಾಡಿ ಒಂದು ಮಡಕೆಯೊಳಗೆ ತುಪ್ಪದಲ್ಲಿ ಅದ್ದಿ ಇಟ್ಟು ನೂರಾ-ಒಂದು ಪ್ರನಾಳ ಶಿಶುಗಳಿಗೆ ಜನ್ಮ ಕೊಟ್ಟನು. ಇಂತಹದ್ದೇ ಸನಾತನ ವಿಜ್ಞಾನ ಉಪಯೋಗಿಸಿ ಈಗಲೂ ನಮ್ಮ ಕೇಸರಿ ಸಂಘಟನೆಯವರು ಹಿಂದೂ ಮಕ್ಕಳ ಸಂಖ್ಯೆ ಒಂಬತ್ತೇ ತಿಂಗಳಲ್ಲಿ ಕೋಟಿಗಟ್ಟಲೆ ಹೆಚ್ಚಿಸಬಹುದು. ಅದಕ್ಕೆ ಯಾರದೂ ತಕರಾರು ಬರಲಾರದು. ಸುಮ್ಮನೆ ಪಾಪ ನಮ್ಮ ಹಿಂದೂ ಮಹಿಳೆಯರಿಗೆ ತೊಂದರೆ ಕೊಡುವ ಅವಶ್ಯಕತೆಯೇ ಇಲ್ಲ!

- ಅಭಿಷೇಕ್ ಎ ಪಡಿವಾಳ್, ಸುಳ್ಯ

ಜನವರಿ 28 ರ ಸಂಚಿಕೆಯಲ್ಲಿ ಪುರಾಣಕಾಲದ ವೈಜ್ಞಾನಿಕ ಆವಿಷ್ಕಾರಗಳ ಕುರಿತು ಬರೆದ ಲಘು ಲೇಖನಗಳಾದ 'ಸರಕಾರವೇ ಅಥವಾ ಹಾಸ್ಯ ನಾಟಕ ಕಂಪನಿಯೇ?' 'ಸಂಸ್ಕೃತ ಕೋಡ್ ವರ್ಡ್‌ಗಳು', 'ಕತ್ತೆ ಉಚ್ಚೆಯ ಮಹಿಮೆ', 'ಪರಶುರಾಮನ ಜೆಸಿಬಿ', 'ಗಾಳಿಯಿಂದ ಆಹಾರ ತಯಾರಿಸುವ ಇಸ್ರಾನಿನ ಅಕ್ಷಯಪಾತ್ರೆ' ಇವೆಲ್ಲವುಗಳನ್ನು ಓದಿ ಹೊಟ್ಟೆ ಹುಣ್ಣಾಗುವಂತೆ ನಾವು ನಕ್ಕು ಬಿಟ್ಟೆವು. 'ಹಿಂದೂತ್ವ ಇತಿಹಾಸದ ಐದು ಮಿಥ್ಯಗಳು' ಎಲ್ಲರ ಕಣ್ಣು ತೆರೆಸುವಂತಹದ್ದು.

ಘಜನಿ ಮಹಮ್ಮದ್ ಕೇವಲ ಎಂಟು ಸಾವಿರ ಸೈನಿಕರೊಂದಿಗೆ ಅತ್ತೆ ಮನೆಗೆ ಹೋಗಿ ಬಂದಷ್ಟೂ ಸಲೀಸಾಗಿ ಘಜನಿಯಿಂದ ಸಾವಿರಾರು ಮೈಲು ದೂರದ ಸೋಮನಾಥ ಪುರಕ್ಕೆ ಹಲವಾರು ಸಾರಿ ದಂಡೆತ್ತಿ ಬಂದು ಎಂಬತ್ತು ಸಾವಿರ ಜನಸಂಖ್ಯೆ ಇದ್ದ ಸೋಮನಾಥಪುರವನ್ನು ಯಾವ ವಿರೋಧವೂ ಇಲ್ಲದೆ ಲೂಟಿ ಮಾಡಿದ್ದು ಹೇಗೆ ಹಾಗೂ ಅಫಘಾನಿಸ್ತಾನದಿಂದ ಗುಜರಾತಿನ ನಡುವೆ ಹಲವಾರು ಹಿಂದೂ ಅರಸರ ರಾಜ್ಯಗಳಿದ್ದು ಅವರಲ್ಲಿ ಲಕ್ಷಾಂತರ ಸಂಖ್ಯೆಯ ಸೈನ್ಯವಿದ್ದರೂ ಅವರೇಕೆ ಈ ಘಜನಿಯ ಕೇವಲ ಎಂಟು ಸಾವಿರ ಸೈನ್ಯವನ್ನು ಒಮ್ಮೆಯೂ ತಡೆಯದ ಹೇಡಿಗಳಾಗಿದ್ದರು ಎಂಬ ಪ್ರಶ್ನೆಗಳೊಂದಿಗೆ ಘಜನಿಯ ಐತಿಹಾಸಿಕ ಕತೆಯಲ್ಲಿರುವ ಮಿಥ್ಯೆಯನ್ನೂ ಒಡೆಯಬೇಕಿದೆ.

ಮೂಲತಃ ಭಾರತೀಯರಿಗೆ ತಮ್ಮ ದೇಶದ ಇತಿಹಾಸದ ಜ್ಞಾನವಿರಲಿಲ್ಲ, ಅಶೋಕ ಯಾರು ಚಂದ್ರಗುಪ್ತ ಯಾರು ಇದೂ ಗೊತ್ತಿರಲಿಲ್ಲ. ಬ್ರಿಟಿಷರು ಬಂದ ನಂತರ ಅವರು ಸಂಶೋಧಿಸಿಕೊಟ್ಟ ಭಾರತದ ನೈಜ ಇತಿಹಾಸಕ್ಕೆ ನಂತರ 19-20 ನೇ ಶತಮಾನದಲ್ಲಿ ನಮ್ಮ ಪಂಡಿತರು ಮಿಥ್ಯೆಗಳನ್ನು ಜೋಡಿಸಿದ್ದು ಅಷ್ಟೇ.

- ವೀರಪ್ಪ ದಿ ಎನ್, ಮಡಿಕೇರಿ

ಸದ್ದಿಲ್ಲದೇ ಭಾವನೆಗಳನ್ನು ಸುಡುವ ಸುಡೊ ಇತಿಹಾಸಗಳು

ಇತಿಹಾಸ ಅಂದರೆ 'ಇತಿ- ಹ- ಆಸ' ಅಂದರೆ ಹೀಗಿತ್ತು ಎಂದರ್ಥವಂತೆ. ಇಲ್ಲದ್ದನ್ನು ಹೀಗಿತ್ತು ಎಂದು ನಮಗೆ ಬೇಕಾದವರನ್ನು ಮುಖ್ಯವಾಗಿಟ್ಟುಕೊಂಡು ತಮ್ಮ ಮೂಗಿನ ನೇರಕ್ಕೆ ತಿರುಚಿ ಉತ್ಪ್ರೇಕ್ಷಿಸಿ ಬರೆಯುವ ವೃತ್ತಿಪರ ಹೊಗಳುಭಟ್ಟರ ಕಥನವೇ ನಮಗೆ ನಮ್ಮವರ ಇತಿಹಾಸ ತಿಳಿಯಲು ಮಾರ್ಗದರ್ಶಿಯೆನಿಸುತ್ತಿರುವುದು ಇತಿಹಾಸದ ಮೂಲ ವ್ಯಾಖ್ಯಾನಕ್ಕೆ ದೊಡ್ಡ ಅಪಚಾರ. ಕಳೆದ ಸಂಚಿಕೆಯಲ್ಲಿ ಪ್ರಕಟಗೊಂಡ ಹಿಂದೂ ಇತಿಹಾಸದ 5 ಮಿಥ್ಯಗಳು ಕುತೂಹಲಕರವಾಗಿದ್ದರೂ ಇದು ಕೇವಲ ಐದಕ್ಕಷ್ಟೇ ಸೀಮಿತವಿರದೇ ನೂರಾರು ಇಂತಹ ಐತಿಹಾಸಿಕ (!!?) ಮಿಥ್ಯಗಳು ನಮ್ಮಯ 'ಇತಿಹಾಸ'ದಲ್ಲಿ ಎಲ್ಲೆಂದರಲ್ಲಿ ಕಾಣಸಿಗುತ್ತವೆ.

ನಮ್ಮ ಕರ್ನಾಟಕವನ್ನೇ ತೆಗೆದುಕೊಂಡರೆ, ಮುಸ್ಲಿಮ್ ದೊರೆಗಳು ದೇಶವನ್ನಾಳುತ್ತಿದ್ದ ಕಾಲದಲ್ಲಿ ತನ್ನ ಪ್ರಭಾವವನ್ನುಳಿಸಿಕೊಂಡ ಹಿಂದೂಗಳ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಕತೆಯಲ್ಲೂ ಇಂತಹದನ್ನು ಕಾಣಬಹುದು. ವಿದ್ಯಾರಣ್ಯರು ಹಿಂದೂ ಸಾಮ್ರಾಜ್ಯ ಸ್ಥಾಪನೆಗೆ ಹೊರಟಾಗ ಪ್ರದೇಶವನ್ನು ಆಯ್ದಂತಹ ಪ್ರಸಿದ್ಧ ಕಥೆ ಇದು. ಹಕ್ಕ ಬುಕ್ಕ ಗುರು ವಿದ್ಯಾರಣ್ಯರು ಒಂದೆಡೆ ಹೋಗುತ್ತಿರುವಾಗ ನಾಯಿಗಳು ಮೊಲವೊಂದನ್ನು ಅಟ್ಟಿಸಿಬರುತ್ತಿದ್ದವಂತೆ. ಆದರೆ ಯಾವುದೋ ಒಂದು ಸ್ಥಳಕ್ಕೆ ಕಾಲಿಟ್ಟಾಗ ಓಡುತ್ತಿದ್ದ ಮೊಲವೇ ನಾಯಿಗೆ ತಿರುಗಿ ನಿಂತು ಓಡಿಸಿತಂತೆ. ಆ ದೈವಿಕ ಸ್ಥಳದಲ್ಲೇ ಹಿಂದೂ ರಾಜ್ಯ ಸ್ಥಾಪನೆಗೊಂಡಿತಂತೆ. ಇದು ನಾವು ನಂಬಬೇಕಾದ ಇತಿಹಾಸ.

ಇನ್ನೊಬ್ಬ ಹಿಂದೂ ಕಣ್ಮಣಿ ಶಿವಾಜಿ ಮಹಾರಾಜ ಮುಸಲ್ಮಾನರ ವಿರುದ್ಧ ಸೆಣಸಲು ಬಳಸಿದ ಖಡ್ಗದ ಕಥೆಯೂ ಇದೇ ತರಹದ ಫ್ಯಾಂಟಸಿ ಕಥೆಯೇ ಆಗಿದೆ. ಜಗನ್ಮಾತೆ ದೇವಿ ಭವಾನಿ ಸ್ವಯಂ ಪ್ರತ್ಯಕ್ಷಗೊಂಡು ಶಿವಾಜಿಯ ಧರ್ಮಕಾರ್ಯಕ್ಕಾಗಿ ಕೈಯ್ಯಾರೆ ಕೊಟ್ಟಂತಹ ಖಡ್ಗವಂತೆ ಇದು. ನಿಜ ಇತಿಹಾಸದ ಪ್ರಕಾರ ಶಿವಾಜಿಯಾಗಲೀ ವಿಜಯನಗರದ ಹೆಸರುವಾಸಿ ದೊರೆ ಕೃಷ್ಣದೇವರಾಯನಾಗಲೀ ವೈಯಕ್ತಿಕ ದೃಷ್ಟಿಯಲ್ಲಿ ಮುಸ್ಲಿಮರ ವಿರೋಧಿಯಾಗಿರಲಿಲ್ಲ, ಯಾಕೆಂದರೆ ಅವರ ಸೈನ್ಯದಲ್ಲಿಯೇ ಮುಸಲ್ಮಾನರಿದ್ದರು. ಅವರು ಆ ಕಾಲದಲ್ಲಿ ಪ್ರಭಾವಿಗಳಾಗಿದ್ದ ಪ್ರತಿಸ್ಪರ್ಧಿ ಮುಸ್ಲಿಮ್ ದೊರೆಗಳೊಂದಿಗೆ ಸಂಘರ್ಷ ನಡೆಸಿದರೆಂದ ಮಾತ್ರಕ್ಕೆ ಹಿಂದೂ ಧರ್ಮೋದ್ಧಾರಕರ ರೀತಿ ಬಿಂಬಿಸುವವರಿಗೆ ಇವೆಲ್ಲ ಬೇಕಾಗಿಯೂ ಇಲ್ಲ.

ಜನರೂ ಕೂಡ ಇಂತಹ ಫ್ಯಾಂಟಸಿ ಕಥೆಗಳಲ್ಲೇ ಹೆಚ್ಚು ಆಸಕ್ತರಾಗಿರುವ ಕಾರಣ ಈ ರೀತಿಯ ಕಥೆಕಟ್ಟುವವರೂ ನಮ್ಮೀ ಇತಿಹಾಸವನ್ನು ಅಪಹಾಸ್ಯಕ್ಕೆಡೆಮಾಡುವ ರೀತಿಯಲ್ಲಿ ತಮ್ಮ ಶಕ್ತ್ಯಾನುಸಾರ ಅದಕ್ಕೆ ಬಣ್ಣಗಳನ್ನು ನೀಡುತ್ತಾ ಹೋಗುತ್ತಾರೆ. (ರಾಜಾಸ್ಥಾನದ ನನ್ನ ಗೆಳೆಯನೊಬ್ಬ ಅಲ್ಲಿ ಪ್ರತೀತಿಯಿರುವ ಕಥೆಯ ಆಧಾರದಲ್ಲಿ ನನಗೊಂದು ವಿಚಾರ ಹೇಳಿದ್ದ- ಸುರಸುಂದರಿ ರಾಣಿ ಪದ್ಮಿನಿ ಎಷ್ಟು ಬೆಳ್ಳಗಿದ್ದಳೆಂದರೆ, ಆಕೆ ನೀರು ಕುಡಿಯುವಾಗ ಗಂಟಲಲ್ಲಿಳಿಯುವ ಆ ನೀರು ಕೂಡ ಹೊರಗೆ ಕಾಣಿಸುತ್ತಿತ್ತಂತೆ. ಇದು ಬೆಳ್ಳಗೋ, ಪಾರದರ್ಶಕವೋ, ಚರ್ಮರೋಗವೋ ಒಟ್ಟಾರೆ ಕಥೆಗೆ ಬಣ್ಣ ಕೊಡುವ ಆವೇಶದಲ್ಲಿ ಎಂಥಾ ವರ್ಣನೆ.. ಅಬ್ಬಾ..!!) ಎಷ್ಟರ ಮಟ್ಟಿಗೆ ಅಂದರೆ ಈ ವರ್ಣನೆಯ ಭರದಲ್ಲಿ ನೈಜ ಇತಿಹಾಸ ಬಹು ಮಟ್ಟಿಗೆ ಕಳೆದೇ ಹೋಗಿರುತ್ತದೆ.

- ಅವಿನಾಶ್ ಎಮ್.ಎಸ್, ನೆಲ್ಲಿಕಾರ್


ನಗು ಮೂಡಿಸಿದ ಲೇಖನಗಳು

'ಬಾಸ್ ಮಗಳ ಮದುವೆ' ಓದಿ ನಗು ಮತ್ತು ಮೆಚ್ಚುಗೆ ಎರಡೂ ಒಟ್ಟಿಗೆ ಮೂಡಿದವು. ಹ್ಯಾಟ್ಸ್ ಆಫ್ ಟು ಬಿ.ಚಂದ್ರೇಗೌಡ. ಅವರು ನಿಮ್ಮನ್ನು ಕ್ಷಮಿಸಿದ್ದಾರೆ. ಹೋಗಲಿ ಬಿಡಿ, ನಿಮ್ಮ ಹಿಂದೆ ಸಾವಿರಾರು ಪ್ರಜ್ಞಾವಂತ ಮನಸ್ಸುಗಳಿವೆ. ಇಂತಹ ಸಾವಿರಾರು ಅಂತರಜಾತಿ ವಿವಾಹ ಮಾಡಿಸಿ ಇತರರಿಗೆ ನೀವು ಮಾದರಿ ಆದರೆ ಅದಕ್ಕಿಂತ ಬೇರೆ ಪ್ರಶಸ್ತಿ ಯಾವುದಿದೆ?

ಹಾಗೆಯೇ ಸೂಲಿಬೆಲೆಯ ಅಣಿಮುತ್ತುಗಳನ್ನು ಓದಿ ನಗು ಬಂತು. ಗಂಡ ಹೆಂಡತಿನೇ ಏಳು ಬಾರಿ ಕೂಡಲ್ಲ ಅನ್ನೊ ಅನುಭವ ಈ ಸ್ವಘೋಷಿತ ಬ್ರಹ್ಮಚಾರಿಗೆ ಹೇಗೆ ಗೊತ್ತಾಯಿತು? ಇಂತಹ ನಾಲಾಯಕ್ ಸೂಲಿಬೆಲೆಯ ಲೇಖನ, ಪುಸ್ತಕ ಓದುವ, ಭಾಷಣವನ್ನು ಕೇಳುವ ಅಂಧಾಭಿಮಾನಿಗಳನ್ನು ಕಾಪಾಡುವವರು ಯಾರು? ಇವನನ್ನು ಅನುಸರಿಸುವವರ ಬುದ್ಧಿ ಮಟ್ಟ ಎಂತಹದ್ದಿರಬಹುದು? ಇವರು ದೇಶದ ಸಂಸ್ಕೃತಿಯ ವಾರಸುದಾರರು. ಭಲೆ!

- ಅಭಿನಂದನ, ಸುರಪುರ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು



ಡಬಲ್ ಮೀನಿಂಗ್ ಸಾಹಿತ್ಯವಿದ್ದಲ್ಲಿ ನಾನು ಹಾಡುವುದಿಲ್ಲ: ಶ್ರೇಯಾ ಘೋಶಾಲ್

ಕನ್ನಡದ 'ಇವನು ಗೆಳೆಯನಲ್ಲ', 'ಸವಿಯೋ ಸವಿಯೋ', 'ಮಳೆ ನಿಂತು ಹೋದ ಮೇಲೆ', 'ಮದರಂಗಿಯಲ್ಲಿ', 'ಏನೋ ಒಂಥರಾ', 'ಅದೇ ಭೂಮಿ ಅದೇ ಬಾನು', 'ಉಲ್ಲಾಸದ ಹೂಮಳೆ', 'ನಿನ್ನ ನೋಡಲೆಂತೋ', 'ನಾ ನಗುವ ಮೊದಲೇನೆ', 'ಸಂಜು ಮತ್ತು ಗೀತ' ಹಾಡುಗಳು ಸೇರಿದಂತೆ ಹಿಂದಿ, ತಮಿಳು, ತೆಲುಗು, ಮರಾಠಿ ಚಿತ್ರಗಳಲ್ಲಿ ಹಾಡಿ ಅಸಂಖ್ಯಾತ ಅಭಿಮಾನಿಗಳನ್ನು ಹೊಂದಿರುವ ಗಾಯಕಿ ಶ್ರೇಯಾ ಘೋಶಾಲ್ ಮಾತುಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ...



ಪ್ರಶ್ನೆ: ನಿಮ್ಮ ತಂದೆ ನಿಮ್ಮ ಪ್ರತಿ ಪ್ರವಾಸದಲ್ಲೂ ...ಟ್ಟಿಗೇ ಇರುತ್ತಾರೆ. ಹೆತ್ತವರೆಂದರೆ ಅಷ್ಟೊಂದು ಪ್ರೀತಿಯೇ?

ಶ್ರೇಯಾ ಘೋಶಾಲ್: ನನ್ನ ಸಂಗೀತಕ್ಕೆ ನನ್ನ ಹೆತ್ತವರೇ ಪ್ರಮುಖ ಶಕ್ತಿ, ಅದರಲ್ಲೂ ನನ್ನ ತಂದೆ. ಇವತ್ತು ನಾನು ...ಏನೇ ಸಾಧಿಸಿದ್ದರೂ ಅದಕ್ಕೆಲ್ಲ ನನ್ನ ಹೆತ್ತವರೇ ಕಾರಣ.

ಪ್ರಶ್ನೆ: ನೀವು ಯಾವಾಗಲೂ ಪ್ರವಾಸ, ಸುತ್ತಾಟದಲ್ಲೇ ...ಇರಲು ಬಯಸುತ್ತೀರಿ. ಇಷ್ಟಕ್ಕೂ ನಿಮ್ಮ ಆರೋಗ್ಯದ ...ಗುಟ್ಟೇನು?

ಶ್ರೇಯಾ ಘೋಶಾಲ್: ಅದರಲ್ಲಿ ವಿಶೇಷವಾದುದೇನು ...ಇಲ್ಲ. ನಾನು ಪ್ರವಾಸದಲ್ಲಿದ್ದ ಸಂದರ್ಭದಲ್ಲಿ ವ್ಯಾಯಾಮ ಮಾಡುವುದಿಲ್ಲ. ಆದರೆ ಡಯಟ್ ವಿಷಯದಲ್ಲಿ ನಾನು ಬಹಳ ಸ್ಟ್ರಿಕ್ಟ್.

ಪ್ರಶ್ನೆ: ನೀವು ಬಾಲಿವುಡ್ಡಿನ ಅದೆಷ್ಟೋ ಪ್ರಖ್ಯಾತ ನಾಯಕಿಯರಿಗೆ ಹಾಡಿದ್ದೀರಿ. ಯಾವೊಬ್ಬ ನಾಯಕಿಗೆ ಹಾಡಲು ನಿಮಗೆ ಹೆಚ್ಚು ಇಷ್ಟ?

ಶ್ರೇಯಾ ಘೋಶಾಲ್: ನಾನು ಒಬ್ಬೊಬ್ಬ ನಾಯಕಿಗೆ ಹಾಡುವಾಗಲೂ ಎಂಜಾಯ್ ಮಾಡಿದ್ದೇನೆ. ವಿದ್ಯಾ ಬಾಲನ್ ಹಾಗೂ ಕರೀನಾ ಕಪೂರ್‌ಗೆ ಹಾಡುವಾಗ ವಿಶೇಷವಾದ ಖುಷಿ ಅನುಭವಿಸಿದ್ದೇನೆ.

ಪ್ರಶ್ನೆ: ನಿಮ್ಮನ್ನು ಮದುವೆಯಾಗುವ ಹುಡುಗ ...ಹೇಗಿರಬೇಕು?

ಶ್ರೇಯಾ ಘೋಶಾಲ್: ಪ್ರತಿಯೊಬ್ಬ ಹೆಣ್ಣು ...ಬಯಸುವಂತೆ ನನ್ನ ಗಂಡ ನನ್ನನ್ನು ತುಂಬಾ ಪ್ರೀತಿಸುವ ವ್ಯಕ್ತಿಯಾಗಿರಬೇಕು. ಆತ ನನ್ನಂತೆಯೇ ಬದುಕಿನ ಬಗ್ಗೆ ಹೆಚ್ಚು ಕುತೂಹಲ ಹೊಂದಿರಬೇಕು ಕೂಡ.

ಪ್ರಶ್ನೆ: ಬಿಡುವಿನ ಸಂದರ್ಭದಲ್ಲಿ ಏನು ಮಾಡುತ್ತೀರಿ?

ಶ್ರೇಯಾ ಘೋಶಾಲ್: ಪುಸ್ತಕಗಳನ್ನು ಓದುತ್ತೇನೆ, ...ಅಡುಗೆ ಮಾಡುತ್ತೇನೆ ಹಾಗೆಯೇ ಸಿನಿಮಾಗಳನ್ನು ...ನೋಡುವುದೆಂದರೆ ನನಗೆ ಅಚ್ಚುಮೆಚ್ಚು.

ಪ್ರಶ್ನೆ: ನೀವು ಬದಲಾಗಬೇಕೆಂದಿದ್ದರೆ ಯಾವ ...ವಿಚಾರದಲ್ಲಿ ಬದಲಾಗಬಯಸುತ್ತೀರಿ?

ಶ್ರೇಯಾ ಘೋಶಾಲ್: ಅಂತಹ ಆಲೋಚನೆ ಇಲ್ಲ.

ಪ್ರಶ್ನೆ: ನೀವು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದೀರಿ. ಆ ...ಪೈಕಿ ನಿಮಗೆ ಹೆಚ್ಚು ಹೆಮ್ಮೆ ತಂದ ಪ್ರಶಸ್ತಿ ಯಾವುದು?

ಶ್ರೇಯಾ ಘೋಶಾಲ್: ನನ್ನ ಅಭಿಮಾನಿಗಳ ಮುಂದೆ ಹಾಡುವುದೇ ನನ್ನ ಪಾಲಿಗೆ ದೊಡ್ಡ ಪ್ರಶಸ್ತಿ, ಅವರ ಪ್ರೀತಿಯೇ ಪುರಸ್ಕಾರ. ನಾನು ಸ್ಟೇಜ್ ಮೇಲೆ ...ಪರ್ಫಾರ್ಮ್ ಮಾಡುವಾಗ ಅವರು ವ್ಯಕ್ತಪಡಿಸುವ ಪ್ರೀತಿಯನ್ನು ಕಂಡು ನಾನು ಎಷ್ಟೋ ಸಲ ಭಾವುಕಳಾಗಿದ್ದೇನೆ.

ಪ್ರಶ್ನೆ: ತೀರಾ ಸಣ್ಣ ವಯಸ್ಸಿನಲ್ಲೇ ದೊಡ್ಡ ...ಹೆಸರು ಗಳಿಸುವ ಮೂಲಕ ಯುವಜನರ ಪ್ರೀತಿ ...ಗಳಿಸಿದ್ದೀರಿ. ಯುವಜನರಿಗೆ ಏನನ್ನು ಹೇಳಲು ...ಬಯಸುತ್ತೀರಿ?

ಶ್ರೇಯಾ ಘೋಶಾಲ್: ನನ್ನ ನಾಲ್ಕನೇ ...ವಯಸ್ಸಿನಿಂದ ಹಾಡಲು ಆರಂಭಿಸಿದ ನಾನು ...ಹೇಳುವುದಿಷ್ಟೇ... ನೀವು ಮಾಡುವ ಕೆಲಸದ ...ಬಗ್ಗೆ ಪ್ಯಾಷನ್ ಇರಲಿ. ಶ್ರಮವಹಿಸಿ ಕೆಲಸ ಮಾಡಿರಿ. ಹಾಗೆಯೇ ನೀವು ಸಾಧಿಸಲು ...ಹೊರಟಿರುವ ಕೆಲಸಕ್ಕೆ ಸಂಬಂಧಿಸಿದಂತೆ ...ಬುನಾದಿ ಭದ್ರವಾಗಿರಲಿ. ಬದುಕಿನಲ್ಲಿ ...ಕಲಿಯಲು ಸಾಕಷ್ಟು ಸಂಗತಿಗಳಿವೆ. ...ಯಾವುದೇ ಕಾರಣಕ್ಕೂ ಕಲಿಕೆ ನಿಲ್ಲಬಾರದು.

ಪ್ರಶ್ನೆ: ನೀವು ಸ್ಟೇಜ್ ಮೇಲೆ ...ಪರ್ಫಾರ್ಮ್ ಮಾಡುವ ಸಂದರ್ಭದಲ್ಲಿ ...ಆಕರ್ಷಕ ಉಡುಗೆ ಧರಿಸುವ ಮೂಲಕ ...ಸುಂದರವಾಗಿ ಕಾಣುತ್ತೀರಿ. ಈ ಡ್ರೆಸ್ ಸೆನ್ಸ್ ಹಿಂದೆ ಯಾರಾದರು ಡಿಸೈನರ್ಸ್ ಕೈವಾಡ ಇದೆಯಾ?

ಶ್ರೇಯಾ ಘೋಶಾಲ್: ನನಗೆ ಡ್ರೆಸ್ಸಿಂಗ್ ಬಗ್ಗೆ ತುಂಬಾ ಪ್ರೀತಿ. ನನ್ನ ಪ್ರಕಾರ ಉಡುಪುಗಳನ್ನು ಡಿಸೈನ್ ಮಾಡುವುದೂ ಒಂದು ಕಲೆ. ನಾನು ಯಾವ ಬಗೆಯ ಉಡುಪುಗಳನ್ನು ಧರಿಸಬೇಕು ಎಂಬ ತೀರ್ಮಾನ ನನ್ನ ತಾಯಿಗೆ ಬಿಟ್ಟಿದ್ದು.

ಪ್ರಶ್ನೆ: ರಿಯಾಲಿಟಿ ಶೋಗಳಲ್ಲಿ ತೀರ್ಪುಗಾರರಾಗಿ ಕೆಲಸ ಮಾಡುವ ಅನುಭವದ ಬಗ್ಗೆ ಹೇಳಿ. ಅದರಲ್ಲೂ ಪುಟ್ಟ ಪುಟ್ಟ ಮಕ್ಕಳು ಸ್ಪರ್ಧೆಯಲ್ಲಿದ್ದಾಗ...

ಶ್ರೇಯಾ ಘೋಶಾಲ್: ಅಷ್ಟೂ ಮಕ್ಕಳ ಪೈಕಿ ಒಂದು ಮಗುವನ್ನು ಆಯ್ಕೆ ಮಾಡುವುದು ತೀರಾ ಕಷ್ಟದ ಕೆಲಸ. ಎಷ್ಟೋ ಸಲ ಕಣ್ಣುಮುಚ್ಚಿ ಕೂತು, ಆ ಮಕ್ಕಳ ಕ್ಯೂಟ್‌ನೆಸ್, ಮುಗ್ಧತೆ ಮುಂತಾದವುಗಳನ್ನು ಮರೆಯಲೆತ್ನಿಸಿ ಪರ್ಫಾರ್ಮೆನ್ಸ್ ಬಗ್ಗೆ ಮಾತ್ರ ಏಕಾಗ್ರತೆ ವಹಿಸಲು ಪ್ರಯತ್ನಿಸುತ್ತೇನೆ. ಪ್ರತಿಯೊಂದು ಮಗುವೂ ಚೆನ್ನಾಗಿ ತಯಾರಿ ನಡೆಸಿಕೊಂಡು ಬರುವುದಲ್ಲದೆ ಅಷ್ಟೇ ಉತ್ಸಾಹದಿಂದ ಪರ್ಫಾರ್ಮ್ ಮಾಡಿರುತ್ತೆ, ಆದ್ದರಿಂದ ಆಡಿಶನ್ಸ್ ಸಂದರ್ಭದಲ್ಲಿ ನಮಗೆ ಕಷ್ಟವಾಗುತ್ತದೆ. ಬಹುಪಾಲು ಮಕ್ಕಳು ತಮ್ಮ ಪರ್ಫಾರ್ಮೆನ್ಸ್‌ಗೆ ಸಂಬಂಧಿಸಿದ ನಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಸ್ವೀಕರಿಸುತ್ತಾರೆ. ಅವರಲ್ಲಿ ಭರವಸೆ ತುಂಬಬೇಕಾದುದು ನಮ್ಮ ಕರ್ತವ್ಯ.

ಪ್ರಶ್ನೆ: ಇತ್ತೀಚಿನ ದಿನಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ರಿಯಾಲಿಟಿ ಶೋಗಳು ಬರುತ್ತಿವೆ ಅಂತ ಅನ್ನಿಸುತ್ತಿಲ್ಲವೇ?

ಶ್ರೇಯಾ ಘೋಶಾಲ್: ನಿಮ್ಮ ಮಾತು ನಿಜ. ಈಚಿನ ದಿನಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ರಿಯಾಲಿಟಿ ಶೋಗಳು ಆರಂಭವಾಗುತ್ತಿವೆ. ಅವೆಲ್ಲವೂ ಎದುರಿಸುತ್ತಿರುವ ಒಂದೇ ಸಮಸ್ಯೆ ಎಂದರೆ ಏಕತಾನತೆ ಹಾಗೂ ಸಿದ್ಧಸೂತ್ರಗಳನ್ನು ಅನುಸರಿಸುತ್ತಿರುವುದು. ನಾನು ಮೊದಲಿಗೆ 'ಸಾ ರೆ ಗ ಮ'ದ ಭಾಗವಾಗಿದ್ದಾಗ ಆ ಕಾರ್ಯಕ್ರಮದ ಕಾನ್ಸೆಪ್ಟ್ ತಾಜಾತನದಿಂದ ಕೂಡಿತ್ತು, ಆ ಮೂಲಕ ಒಂದಿಷ್ಟು ಒಳ್ಳೊಳ್ಳೆಯ ಪ್ರತಿಭಾವಂತ ಗಾಯಕರು ಬೆಳಕಿಗೆ ಬಂದರು.



ಪ್ರಶ್ನೆ: ಹನ್ನೆರಡು ವರ್ಷಗಳ ಹಿಂದೆ ನೀವು 'ದೇವದಾಸ್' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದಿರಿ. ಈ ಪ್ರಯಾಣ ಹೇಗಿತ್ತು?

ಶ್ರೇಯಾ ಘೋಶಾಲ್: ನಾನು ತುಂಬಾ ಖುಷಿಯಾಗಿದ್ದೇನೆ. ಈ ಅವಧಿಯಲ್ಲಿ ನಾನು ಹಾಡುವುದರ ಜೊತೆಗೆ ಪಿಯಾನೋ ಕಲಿಯಲು, ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಸಂಗೀತ ಕೇಳಲು ಇಷ್ಟ ಪಟ್ಟಿದ್ದೇನೆ. ನನ್ನ ಅದೃಷ್ಟವೋ ಏನೋ ಸಾಕಷ್ಟು ಒಳ್ಳೊಳ್ಳೆಯ ಹಾಡುಗಳು ನನಗೆ ಹಾಡಲು ಸಿಕ್ಕವು. ಬಂಗಾಳಿಯಲ್ಲೂ ಹಾಡುವ ಯೋಜನೆ ಇದೆ. ಅದೇ ರೀತಿ ನಾನು ಹಾಡಲಿರುವ ಒಂದು ಗಜಲ್ ಆಲ್ಬಮ್ ಹೊರತರುವ ಸಿದ್ಧತೆಯೂ ನಡೆಯುತ್ತಿದೆ. ಈ ನಡುವೆ ಒಂದಿಷ್ಟು ಹಾಡುಗಳನ್ನು ಹಾಡಲು ನಿರಾಕರಿಸಿದ್ದೂ ಉಂಟು. ಯಾಕೆಂದರೆ ನನಗೆ ಮೊದಲು ಲಿರಿಕ್ಸ್ ಇಷ್ಟವಾಗಬೇಕು. ದಕ್ಷಿಣ ಭಾರತದ ಚಿತ್ರಗಳಲ್ಲಿ ಹಾಡಲು ನನಗೆ ಎಲ್ಲಿಲ್ಲದ ಉತ್ಸಾಹ. ಅಲ್ಲಿಯ ಸಂಗೀತ ನಿರ್ದೇಶಕರು, ನಿರ್ದೇಶಕರು ನನ್ನನ್ನು ಬಹಳ ಗೌರವದಿಂದ ಕಾಣುತ್ತಾರೆ.

ಪ್ರಶ್ನೆ: ಹಿಂದಿ ಹೊರತಾಗಿ ಬೇರೆ ಯಾವ ಯಾವ ಭಾಷೆಗಳಲ್ಲಿ ಹಾಡಿದ್ದೀರಿ?

ಶ್ರೇಯಾ ಘೋಶಾಲ್: ಕನ್ನಡ, ತಮಿಳು, ತೆಲುಗು, ಬಂಗಾಳಿ ಮತ್ತು ಮರಾಠಿ ಭಾಷೆಗಳಲ್ಲಿ ಹಾಡಿದ್ದೀನಿ.

ಪ್ರಶ್ನೆ: ಕೆಲವು ಸಂಗೀತ ನಿರ್ದೇಶಕರು ಮೊದಲು ತಮ್ಮಿಂದ ಹಾಡಿಸಿ ನಂತರ ಅದೇ ಹಾಡನ್ನು ಬೇರೊಬ್ಬರಿಂದ ಹಾಡಿಸಿ ತಮ್ಮ ವಾಯ್ಸನ್ನು ಕೈ ಬಿಡುತ್ತಾರೆ ಅನ್ನುವ ಆರೋಪವನ್ನು ಕೆಲವು ಹೊಸತಲೆಮಾರಿನ ಹಾಡುಗಾರರು ಮಾಡುತ್ತಿದ್ದಾರೆ. ನಿಮಗೂ ಇಂತಹ ಕಹಿ ಅನುಭವ ಆಗಿದ್ದುಂಟಾ?

ಶ್ರೇಯಾ ಘೋಶಾಲ್: ಇಂಥದ್ದೆಲ್ಲಾ ನಡೆಯುತ್ತದೆ. ಕೆಲವೊಬ್ಬ ಸಂಗೀತ ನಿರ್ದೇಶಕರು ಒಂದೇ ಹಾಡಿಗೆ ನಾಲ್ಕಾರು ಮಂದಿಯಿಂದ ಹಾಡಿಸಿ ಕಡೆಗೆ ತಮಗೆ ಯಾರ ಧ್ವನಿ ಬೇಕೋ ಅದನ್ನು ಮಾತ್ರ ಉಳಿಸಿಕೊಂಡು ಉಳಿದದ್ದನ್ನೆಲ್ಲ ಕೈ ಬಿಡುತ್ತಾರೆ. ನನಗೂ ಇಂತಹ ಅನುಭವವಾಗಿದೆ. ಮೊದಲು ನನ್ನಿಂದ ಹಾಡಿಸಿ ಆಮೇಲೆ ಅದೇ ಹಾಡಿಗೆ ನಾಲ್ಕು ಬೇರೆ ಬೇರೆ ಗಾಯಕಿಯರಿಂದಲೂ ಹಾಡಿಸಿದ್ದರು. ಅಂತಹ ಸಂದರ್ಭಗಳಲ್ಲಿ ನಾನು ನೇರವಾಗಿ ಪ್ರತಿಕ್ರಿಯಿಸಿದ್ದೂ ಉಂಟು. ಇಂತಹ ಬೆಳವಣಿಗೆ ಇತ್ತೀಚಿನ ವರ್ಷಗಳಲ್ಲಿ ಕಂಡುಬರುತ್ತಿರುವಂಥದ್ದು. ಒಬ್ಬ ಗಾಯಕ/ಗಾಯಕಿ ತಮ್ಮ ಧ್ವನಿಯನ್ನು ಉಳಿಸಿಕೊಂಡಿದ್ದಾರೋ, ಕೈ ಬಿಟ್ಟಿದ್ದಾರೋ ಎಂಬುದು ಗೊತ್ತಾಗಬೇಕಾದರೆ ಆಡಿಯೋ ಬಿಡುಗಡೆ ಅಥವಾ ಸಿನಿಮಾ ಬಿಡುಗಡೆ ಆಗುವವರೆಗೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಬೇಕಿದೆ. ಈ ಬೆಳವಣಿಗೆಯನ್ನು ನಾನು ಖಡಾಖಂಡಿತವಾಗಿ ವಿರೋಧಿಸುತ್ತೇನೆ.

ಪ್ರಶ್ನೆ: ಇವತ್ತಿನ ಟ್ರೆಂಡ್ ಎಂಥದ್ದು?

ಶ್ರೇಯಾ ಘೋಶಾಲ್: ಮನರಂಜನೆ ವಾಪಸಾಗಿದೆ! ದಕ್ಷಿಣ ಭಾರತದ ರಿದಂ, ಅಲ್ಲಿಯ ದೇಸಿತನ ಬಾಲಿವುಡ್ಡಿಗೆ ಬಂದಿದೆ. ಭಾರತದ ನೆಲದ ಸಂಗೀತವನ್ನು ನಾವು ಯಾವತ್ತೂ ಗೌರವಿಸಬೇಕು. ಆ ಬೇರುಗಳು ಯಾವತ್ತಿಗೂ ಮುಖ್ಯ. 6-8 ಬೀಟ್ಸ್ ಯಾವತ್ತಿಗೂ ಜನಪ್ರಿಯ. ಡ್ಯಾನ್ಸ್‌ನಲ್ಲಿ ಅದನ್ನು ಬೀಟ್ ಮಾಡಲು ಯಾರಿಂದಲೂ ಸಾಧ್ಯವಿಲ್ಲ.

ಪ್ರಶ್ನೆ: ಸಾಹಿತ್ಯ ಸರಿಯಿಲ್ಲ ಎನ್ನುವ ಕಾರಣಕ್ಕೆ ನೀವು ಒಂದಿಷ್ಟು ಹಾಡುಗಳನ್ನು ಹಾಡಲು ನಿರಾಕರಿಸಿದ್ದು ನಿಜಾನಾ?

ಶ್ರೇಯಾ ಘೋಶಾಲ್: ಕೆಟ್ಟ ಲಿರಿಕ್ಸ್ ಹಾಡಲು ನನಗೆ ಯಾವುದೇ ಸಮಸ್ಯೆ ಇಲ್ಲ. ಆದರೆ ಡಬಲ್ ಮೀನಿಂಗ್ ಲಿರಿಕ್ಸ್ ನನಗೆ ಇಷ್ಟವಾಗುವುದಿಲ್ಲ. ಅಂತಹ ಹಾಡುಗಳನ್ನು ನಾನು ಹಾಡುವುದಿಲ್ಲ. ಇದು ಬಹಳ ಸಿಂಪಲ್! ನಾವಿನ್ನೂ ಸಂಪೂರ್ಣ ಪಾಶ್ಚಾತ್ಯ ಸಂಸ್ಕೃತಿಗೆ ಬಲಿಯಾಗಿಲ್ಲ. ಪ್ರತಿಯೊಬ್ಬ ಕಲಾವಿದರಿಗೂ ಇರುವಂತೆ ನನಗೂ ಕೂಡ ಒಂದಿಷ್ಟು ಸಾಮಾಜಿಕ ಹೊಣೆ ಇದ್ದೇ ಇದೆ. ಭಾರತೀಯರಾದ ನಾವು ನಮ್ಮ ಸಂಸ್ಕೃತಿ, ಧೋರಣೆ, ಸಿದ್ಧಾಂತಗಳಿಂದ ವಿಶ್ವದೆಲ್ಲೆಡೆ ಗೌರವಕ್ಕೆ ಪಾತ್ರರಾಗಿದ್ದೇವೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ನಾನು ಹಾಡುತ್ತೇನೆ.

ಪ್ರಶ್ನೆ: ನೀವು ಬದುಕಿನಲ್ಲಿ ಕಂಡ ಅತ್ಯಂತ ಸಂತಸದ ಘಳಿಗೆ ಯಾವುದು?

ಶ್ರೇಯಾ ಘೋಶಾಲ್: ನಾನು ಯಾವಾಗಲೂ ಸಂತೋಷದಿಂದಿರಲು ಬಯಸುತ್ತೇನೆ. ಇದ್ದೇನೆ ಕೂಡ. ಒಮ್ಮೆ ಅಮೆರಿಕಾಗೆ ಹೊರಟಿದ್ದಾಗ ವಿಮಾನದಲ್ಲಿ ನನ್ನ ಲಗೇಜ್ ಬ್ಯಾಗ್ ಮಿಸ್ ಆಗಿತ್ತು, ಅವರೇ ಕಾಲ್ ಮಾಡಿ ಅದನ್ನು ನನಗೆ ತಲುಪಿಸಿದಾಗ ನನಗೆ ಲಾಟರಿ ಹೊಡೆದಷ್ಟು ಖುಷಿಯಾಗಿತ್ತು, ನನ್ನ ಸಂತಸವನ್ನು ನೋಡಿ ನನ್ನ ಸುತ್ತಮುತ್ತ ಇದ್ದವರು ಅಚ್ಚರಿಯಿಂದ ನೋಡುತ್ತಿದ್ದದ್ದು ನನಗೆ ಈಗಲೂ ನೆನಪಿದೆ.

ಪ್ರಶ್ನೆ: ನಿಮ್ಮ ಬದುಕಿನಲ್ಲಿ ಹತಾಶೆ, ಚಿಂತೆ... ಈ ಬಗೆಯ ಅನುಭವಗಳೇನಾದರೂ ಆಗಿವೆಯಾ?

ಶ್ರೇಯಾ ಘೋಶಾಲ್: ಇಲ್ಲ, ನಾನು ಅದೃಷ್ಟವಂತೆ. ಯಾವಾಗಲೂ ಸಂತೋಷದಿಂದಲೇ ಇದ್ದೇನೆ.

ಪ್ರಶ್ನೆ: ನಿಮ್ಮ ಫೇವರಿಟ್ ಕಂಪೋಸರ್ ಯಾರು?

ಶ್ರೇಯಾ ಘೋಶಾಲ್: ಮದನ್ ಮೋಹನ್

ಪ್ರಶ್ನೆ: ನೆಚ್ಚಿನ ಹಾಡು ಯಾವುದು?

ಶ್ರೇಯಾ ಘೋಶಾಲ್: ಲಾಗ್ ಜಾ ಗಲೇ, ಫಿರ್ ಯೇ ಹಸೀನ್ ರಾತ್ ಹೋ ನಾ ಹೋ...

ಪ್ರಶ್ನೆ: ಇಷ್ಟದ ಪುಸ್ತಕ ಯಾವುದು?

ಶ್ರೇಯಾ ಘೋಶಾಲ್: ನೇಮ್ ಸೇಕ್... ಹಾಗೆಯೇ ಜುಂಪಾ ಲಹಿರಿ ಪುಸ್ತಕಗಳೂ ನನಗಿಷ್ಟ.

ಪ್ರಶ್ನೆ: ನೀವು ಇಷ್ಟಪಡುವ ಪ್ರವಾಸಿ ತಾಣ ಯಾವುದು?

ಶ್ರೇಯಾ ಘೋಶಾಲ್: ಸ್ವಿಟ್ಜರ್‌ಲ್ಯಾಂಡಿನ ಜಂಗ್ ಫ್ರಾವ್ರೋ ಪರ್ವತ.

ಪ್ರಶ್ನೆ: ನೀವು ಅತಿಯಾಗಿ ಇಷ್ಟಪಡುವ ಭಾರತೀಯ ಗಾಯಕಿ ಯಾರು?

ಶ್ರೇಯಾ ಘೋಶಾಲ್: ಲತಾ ಮಂಗೇಶ್ಕರ್.

ಪ್ರಶ್ನೆ: ನಿಮ್ಮ ನೆಚ್ಚಿನ ಅಂತಾರಾಷ್ಟ್ರೀಯ ಗಾಯಕಿ ಯಾರು?

ಶ್ರೇಯಾ ಘೋಶಾಲ್: ಬಿಯಾನ್ಸ್.

● ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 04-02-2015 RNI No. KARKAN2005/14648



ಮೈತ್ರಿ ಹಾಡು ಬಿಡುಗಡೆ

'ಜಟ್ಟ' ಎಂಬ ಚಿತ್ರದ ಮೂಲಕ ಭರವಸೆ ಮೂಡಿಸಿದ್ದ ನಿರ್ದೇಶಕ ಬಿ.ಎಂ.ಗಿರಿರಾಜ್ 'ಮೈತ್ರಿ' ಎಂಬುದೊಂದು ಚಿತ್ರವನ್ನು ನಿರ್ದೇಶಿಸುತ್ತಿರುವ ವಿಷಯ ನಿಮಗೆ ಗೊತ್ತಿದೆ. ಈ 'ಮೈತ್ರಿ' ಚಿತ್ರ ಹಲವಾರು ವಿಶೇಷತೆಗಳಿಂದ ಕೂಡಿದೆ... ಮಲಯಾಳಂ ಭಾಷೆಯ ಪ್ರಖ್ಯಾತ ನಟ ಮೋಹನ್‌ಲಾಲ್ ಹಾಗೂ ಕನ್ನಡದ ಪ್ರಮುಖ ನಟರಲ್ಲಿ ಒಬ್ಬರಾದ ಪುನೀತ್ ರಾಜ್‌ಕುಮಾರ್ ಈ ಚಿತ್ರದಲ್ಲಿ ಒಟ್ಟಿಗೆ ನಟಿಸುತ್ತಿರುವುದು ಒಂದು ವಿಶೇಷತೆಯಾದರೆ, ದಕ್ಷಿಣ ಭಾರತದ ಪ್ರಸಿದ್ಧ ಸಂಗೀತ ನಿರ್ದೇಶಕ ಇಳಯರಾಜಾ ಅವರು ಈ ಚಿತ್ರಕ್ಕೆ ತಮ್ಮ ಟ್ಯೂನುಗಳನ್ನು ಮಾಡಿಕೊಟ್ಟಿರುವುದು ಮತ್ತೊಂದು ವಿಶೇಷ.



ಈ ಪೀಠಿಕೆ ಯಾಕೆ ಬರೆಯಬೇಕಾಯಿತು ಅಂದರೆ 'ಮೈತ್ರಿ' ಚಿತ್ರದ ಹಾಡುಗಳು ಮೊನ್ನೆಯಷ್ಟೇ ಬಿಡುಗಡೆಯಾಗಿರುವ ವಿಷಯುವನ್ನು ನಿಮಗೆ ತಿಳಿಸಬೇಕಿರುವುದರಿಂದ. ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ಇಳಯರಾಜಾ, ಪುನೀತ್ ರಾಜ್‌ಕುಮಾರ್, ಗಿರಿರಾಜ್ ಮುಂತಾದವರು ನೆರೆದಿದ್ದರು. ಇಷ್ಟಕ್ಕೂ ಈ ಆಡಿಯೋ ಬಿಡುಗಡೆ ಮಾಡಿದ್ದು ಯಾರು ಅಂತೀರಾ? ಬೇರೆ ಯಾರೂ ಅಲ್ಲ... ಪುನೀತ್ ರಾಜ್‌ಕುಮಾರ್ ಮಕ್ಕಳಾದ ಧೃತಿ ಮತ್ತು ವಂದಿತಾ.

ಗಾಂಧಿನಗರದ ಸಿದ್ಧಸೂತ್ರಗಳನ್ನೆಲ್ಲಾ ಗಾಳಿಗೆ ತೂರಿ ತಮ್ಮದೇ ವಿಶಿಷ್ಟ ಶೈಲಿಯನ್ನು ಕಂಡುಕೊಂಡು 'ಜಟ್ಟ'ದಂತಹ ಚಿತ್ರವನ್ನು ನೀಡಿದ ಗಿರಿರಾಜ್ 'ಮೈತ್ರಿ' ಮೂಲಕ ಏನನ್ನು ಹೇಳಲು ಹೊರಟಿದ್ದಾರೆ ಅನ್ನೋದು ಸದ್ಯದ ಕುತೂಹಲ.

ಬಾಹುಬಲಿ ಟೈಟಲ್ ವಿವಾದ



ನಿರ್ದೇಶಕ ಲಕ್ಕಿ ಶಂಕರ್ ಒಂದು ವಿವಾದದಲ್ಲಿ ಸಿಲುಕಿದ್ದಾರೆ. ಅದೇನೆಂದರೆ ತಮ್ಮ ಬ್ಯಾನರಿನಲ್ಲಿ 'ಬಾಹುಬಲಿ' ಎಂಬ ಶೀರ್ಷಿಕೆಯನ್ನು ತಿಂಗಳ ಹಿಂದೆಯಷ್ಟೇ ನೋಂದಾಯಿಸಿದ್ದಾರೆ. ಈಗ ಉಂಟಾಗಿರುವ ವಿವಾದವೆಂದರೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಈ ಶೀರ್ಷಿಕೆಯಡಿ ಸಿನಿಮಾ ಮಾಡಬಾರದು ಅಂತ ಶಂಕರ್ ಅವರಿಗೆ ಹೇಳಿರುವುದು. 'ಬಾಹುಬಲಿ' ಎಂಬ ಹೆಸರಿನ ಹಿಂದೆ ದೊಡ್ಡ ಇತಿಹಾಸವಿದ್ದು, ಗೌರವವಿದ್ದು ಆ ಹೆಸರಿನಡಿ ಸಿನಿಮಾ ಮಾಡಿದರೆ ಜೈನ ಧರ್ಮೀಯರ ನಂಬಿಕೆಗೆ ಕುಂದು ಉಂಟಾಗುತ್ತದೆ ಎಂಬುದು ಅವರು ಕೊಡುವ ಕಾರಣ.

ಒಂದು ವೇಳೆ ಇದೇ ಶೀರ್ಷಿಕೆ ಇಟ್ಟುಕೊಂಡು ಸಿನಿಮ ಮಾಡಲೇಬೇಕು ಅನ್ನುವ ಉದ್ದೇಶವಿದ್ದಲ್ಲಿ ಚಿತ್ರದ ಕಥಾ ಸಾರಾಂಶವನ್ನು ವಾಣಿಜ್ಯ ಮಂಡಳಿಗೆ ಒಪ್ಪಿಸಬೇಕು. ಆ ಕಥಾ ಸಾರಾಂಶಕ್ಕೂ, ಬಾಹುಬಲಿಗೂ ಯಾವ ರೀತಿಯ ಸಂಬಂಧವಿದೆ ಅನ್ನುವುದನ್ನು ಪರಿಶೀಲಿಸಿದ ನಂತರ ಹಾಗೂ ಕಥೆಯಲ್ಲಿ ಬಾಹುಬಲಿಯ ಇಮೇಜಿಗೆ ಯಾವುದೇ ಧಕ್ಕೆ ಉಂಟಾಗುವುದಿಲ್ಲ ಎಂಬುದು ತಿಳಿದುಬಂದಲ್ಲಿ ಶೀರ್ಷಿಕೆಯನ್ನು ಓಕೆ ಮಾಡಬಹುದು ಎಂಬುದಾಗಿ ಚೇಂಬರ್ ಹೇಳಿದೆ.

ಚೇಂಬರ್ ಮಾತಿಗೆ ಅಸ್ತು ಅಂದಿರುವ ನಿರ್ದೇಶಕ ಲಕ್ಕಿ ಶಂಕರ್ ತಮ್ಮ 'ಬಾಹುಬಲಿ' ಚಿತ್ರದ ಕಥಾ ಸಾರಾಂಶವನ್ನು ಕೊಡುವುದಾಗಿ ಒಪ್ಪಿಕೊಂಡಿದ್ದಾರೆ. ಇಷ್ಟಕ್ಕೂ ಕಥೆಗೂ ಬಾಹುಬಲಿಗೂ ಸಂಬಂಧವಿರುವುದಾಗಿ ಇವರು ಹೇಳುತ್ತಾರೆ. ಹಾಗೊಂದು ವೇಳೆ ಬಾಹುಬಲಿಯ ಬದುಕನ್ನು ಇಟ್ಟುಕೊಂಡು ಇವರು ಸಿನಿಮಾ ಮಾಡಿದರೆ ಪ್ರತಿಯೊಬ್ಬ ಕನ್ನಡಿಗ ಖುಷಿ ಪಡುತ್ತಾನೆ. ಈ ವಿವಾದ ಎಲ್ಲಿಗೆ ಬಂದು ನಿಲ್ಲುತ್ತದೆ ಅನ್ನುವುದನ್ನು ಕಾದುನೋಡಬೇಕು.

ಇಲ್ಲೊಂದು ಹಿಟ್ಲರ್ ಧೋರಣೆ

'ಹುಚ್ಚುಡುಗ್ರು' ಎಂಬ ಚಿತ್ರಕ್ಕೆ ಹಣ ಹಾಕಿದ್ದ ರಘು ಹಾಸನ್ ಅಲ್ಲಿ ಬರೋಬ್ಬರಿ ಒಂದೂವರೆ ಕೋಟಿ ಲಾಸ್ ಮಾಡಿಕೊಂಡು ಈಗ ಮತ್ತೊಂದು ಸಿನಿಮಾಗೆ ಕೈ ಹಾಕಲು ಆಲೋಚಿಸಿದ್ದಾರೆ. ಈ ಬಾರಿ ಹಣ ಹಾಕುವುದರ ಜೊತೆಗೆ ನಿರ್ದೇಶನವನ್ನೂ ಮಾಡಿಬಿಡೋಣ ಅನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಅಂದಹಾಗೆ ರಘು ಹಾಸನ್ ಮಾಡಲು ಹೊರಟಿರುವ ಚಿತ್ರದ ಹೆಸರು 'ಪ್ರೇಮ್ ಹಿಟ್ಲರ್'.





ಹಿಟ್ಲರ್ ಗೊತ್ತು, ಇದ್ಯಾವುದ... ಪ್ರೇಮ್ ಹಿಟ್ಲರ್ ಅಂ... ಯೋಚಿಸುತ್ತಿದ್ದೀರಾ? ಇಲ್ಲೇ ಮಜ... ಇರೋದು ಕೇಳಿ...


ಈ ಹಿಂದೆ ಟೇಶಿ ವೆಂಕಟೇಶ... ಎಂಬ ನಿರ್ದೇಶಕ 'ಹಿಟ್ಲರ್' ಎಂಬ... ಟೈಟಲ್ ಅನ್ನು ಕರ್ನಾಟಕ ಚಲನಚಿ... ವಾಣಿಜ್ಯ ಮಂಡಳಿಯಲಿ... ನೋಂದಾಯಿಸಿದ್ದರು. ... ಶೀರ್ಷಿಕೆಯಡಿ ಸುದೀಪ... ಹಾಕಿಕೊಂಡು ಒಂದು ಸಿನಿಮ ಮಾಡೋಣ ಅಂತ ಪ್ಲಾನ್ ಮಾಡಿದ್ದರು... ಇತ್ತೀಚಿಗೆ ರಘು ಹಾಸನ್ 'ಹಿಟ್ಲರ್' ಶೀರ್ಷಿಕೆಯನ್ನು ನೋಂದಾಯಿಸಲು... ಚೇಂಬರಿಗೆ ಹೋದಾಗ ಈಗಾಗಲೇ ಈ ಟೈಟಲ್ ನೋಂದಾಯಿಸಲಾಗಿದ... ಎಂಬ ಸತ್ಯಾಂಶ ಗೊತ್ತಾಗಿದ್ದೇ ತಡ 'ಪ್ರೇಮ್ ಹಿಟ್ಲರ್' ಎಂಬ ಟೈಟಲ... ನೋಂದಾಯಿಸಿಬಿಟ್ಟರು. ಯಾಕೆಂದರೆ ಈ ಚಿತ್ರದ ಹೀರೋ ಪ್ರೇಮ್ ಅಲಿಯಾಸ... ಜೋಗಿ ಪ್ರೇಮ್. ಈ ವಿಷಯ ಕಿವಿಗೆ ಬಿದ್ದಿದ್ದೇ ತಡ ಟೇಶಿ ವೆಂಕಟೇಶ... ಹೌಹಾರಿಬಿಟ್ಟರು. ಯಾವುದೇ ಕಾರಣಕ್ಕೂ 'ಹಿಟ್ಲರ್' ಟೈಟಲನ್ನು ಬಿಟ್ಟು... ಕೊಡಲು ಸಾಧ್ಯವಿಲ್ಲ ಎಂದು ಪರಿತಪಿಸಿಬಿಟ್ಟರು. ಇಷ್ಟಕ್ಕೂ ರಘು ಹಾಸನ್... ಹೇಳುವ ಮಾತೆಂದರೆ "ಲೀಡರ್ ಶೀರ್ಷಿಕೆ ಇದ್ದಾಗ್ಯೂ 'ಶಿವರಾಜಕುಮಾರ್... ದಿ ಲೀಡರ್' ಎಂಬ ಟೈಟಲನ್ನು ಅದ್ಯಾರೋ ನೋಂದಾಯಿಸಿ ಸಿನಿಮಾ... ಮಾಡಲು ಹೊರಟಿಲ್ಲವೇ? ನಮ್ಮದೂ ಹಾಗೇನೆ, 'ಪ್ರೇಮ್ ಹಿಟ್ಲರ್' ಟೈಟಲ್... ಇಟ್ಟುಕೊಂಡು ಸಿನಿಮಾ ಮಾಡ್ತಿವಿ" ಅಂದುಬಿಡೋದೇ!

ಮತ್ತೊಮ್ಮೆ 'ಶ್' ಆರಂಭ

'ಉಲ್ಲಾಸ', 'ಹೌಸ್ ಫುಲ್', 'ಧಡ್ ಧಡ್', 'ನಂಬಿ ಹುಳಿ' ಎಂಬ... ಚಿತ್ರಗಳನ್ನು ಈ ಹಿಂದೆ ಕೊಟ್ಟಿರುವ ಹೇಮಂತ್ ಹೆಗಡೆ ಈ ಬಾರಿ 'ಮತ್ತೊಮ್ಮೆ ಶ್' ಎನ್ನುವ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಈಗಾಗಲೇ ಚಿತ್ರೀಕರಣ... ಆರಂಭವಾಗಿರುವ ಈ ಚಿತ್ರವು ಹಾರರ್ ಸಿನಿಮಾ ಎನ್ನುವಂತೆ ಮೇಲ್ನೋಟದ... ಊಹೆಗೆ ಸಿಕ್ಕಿದರೂ ಇದೊಂದು ಪಕ್ಕಾ ಥ್ರಿಲ್ಲರ್ ಸಿನಿಮಾ ಅನ್ನೋದು... ಹೇಮಂತ್ ಹೆಗಡೆ ಮಾತು.

ಪ್ರಮುಖವಾಗಿ ನಾಲ್ಕು ಪಾತ್ರಗಳ ನಡುವೆ ಹೆಣೆದಿರುವ ಈ ಸಿನಿಮಾದಲ್ಲಿ ಸಾಕಷ್ಟು ಥ್ರಿಲ್ ಮತ್ತು ಸಸ್ಪೆನ್ಸ್ ಇರುವುದಾಗಿ ಹೇಮಂತ್ ಹೆಗಡೆ ಹೇಳುತ್ತಾರೆ. ನಾಯಕಿಯಾಗಿ ಸಂಯುಕ್ತ ಹೊರನಾಡು ಆಯ್ಕೆಯಾಗಿದ್ದು, ಉಳಿದಂತೆ ಜೆ.ಕೆ., ವಿಜಯ್ ಸೂರ್ಯ ಹಾಗೂ ಹೇಮಂತ್ ಹೆಗಡೆ ಇತರ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಬೆಂಗಳೂರು, ಸಕಲೇಶಪುರ ಹಾಗೂ ಕೊಡಗಿನಲ್ಲಿ ಒಟ್ಟು ನಲವತ್ತು ದಿನಗಳ ಕಾಲ ಶೂಟಿಂಗ್ ನಡೆಯಲಿದೆ.

ಈ ಚಿತ್ರದ ಟೈಟಲ್ ವಿವಾದಕ್ಕೆ ಗುರಿಯಾಗಿದ್ದನ್ನು ನಾವಿಲ್ಲಿ ನೆನೆಯಬಹುದು. ಇಪ್ಪತ್ತು ವರ್ಷಗಳ ಹಿಂದೆ ಉಪೇಂದ್ರ ಮಾಡಿದ್ದ 'ಶ್' ಚಿತ್ರ ಹಿಟ್ ಆಗಿತ್ತಲ್ಲದೆ ಉಪೇಂದ್ರ ಒಬ್ಬ ಡೈರೆಕ್ಟರ್ ರೂಪದಲ್ಲಿ, ಕುಮಾರ್ ಗೋವಿಂದ್ ಒಬ್ಬ ನಾಯಕನಟನ ರೂಪದಲ್ಲಿ ಗಾಂಧಿನಗರದಲ್ಲಿ ಹೆಜ್ಜೆಯೂರಲು ದಾರಿ ಮಾಡಿಕೊಟ್ಟಿತ್ತು. ಇಷ್ಟಕ್ಕೂ ಹೇಮಂತ್ ಹೆಗಡೆಯವರ 'ಮತ್ತೊಮ್ಮೆ ಶ್' ವಿವಾದಕ್ಕೆ ಎಡೆಮಾಡಿಕೊಡಲು ಮೂಲ ಕಾರಣ ಕುಮಾರ್ ಗೋವಿಂದ 'ಶ್-2' ಮಾಡುವ ಆಲೋಚನೆಯಲ್ಲಿದ್ದದ್ದು. ಕಡೆಗೆ 'ಮತ್ತೊಮ್ಮೆ ಶ್' ಎಂಬ ಟೈಟಲ್ ಇಟ್ಟುಕೊಂಡು ಹೇಮಂತ್ ಹೆಗಡೆ ಸಿನಿಮಾ ಶುರು ಮಾಡಿದ್ದಾರೆ.



ಒಂದು ಚಿತ್ರಕ್ಕೆ ಟೈಟಲ್ ಎಷ್ಟು ಮುಖ್ಯವೋ ಆ ಚಿತ್ರದ ಸ್ಕ್ರಿಪ್ಟ್ ಕೂಡ ಅಷ್ಟೇ ಮುಖ್ಯ ಎಂಬುದು ಸತ್ಯ. ಈ ಸತ್ಯವನ್ನು ಕುಮಾರ್ ಗೋವಿಂದ್ ಹಾಗೂ ಹೇಮಂತ್ ಹೆಗಡೆ ಇಬ್ಬರೂ ಅರಿತರೆ ಒಳ್ಳೆದೇ ಅಲ್ಲವೇ?



ಲಂಕೇಶ್ ಮೀಡಿಯಾದ
ಗೈಡ್ ಮಾಸಿಕ
ಜನವರಿ 2015ರ ಸಂಚಿಕೆ
ಜಾಬ್ ನ್ಯೂಸ್
ಹೊಸ ಸಂಚಿಕೆ 2015
ಜನವರಿ 25-ಫೆಬ್ರವರಿ 10
ಗೈಡ್ ಪ್ರಕಾಶನ ಕೊಡುಗೆ
ಈಗ ಎಲ್ಲೆಡೆ ಲಭ್ಯ
ಪ್ರತಿಗಳಿಗಾಗಿ
080-26676427 / 9880302817



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com